# ಜೀವನಕ್ಕಾಗಿ ಮಾದರಿಗಳು

## ಹಳೆ ಒಡಂಬಡಿಕೆಯಿಂದ

ಎ.ಎಲ್. ಮತ್ತು ಜಾಯ್ಸ್ ಗಿಲ್

# ಜೀವನಕ್ಕಾಗಿ ಮಾದರಿಗಳು

## ಹಳೆ ಒಡಂಬಡಿಕೆಯಿಂದ

ಎ.ಎಲ್. ಮತ್ತು ಜಾಯ್ಸ್ ಗಿಲ್

www.gillministries.com

## ಎ.ಎಲ್. ಮತ್ತು ಜಾಯ್ಸ್ ಗಿಲ್ ರವರ ಪುಸ್ತಕಗಳು

**ನಿಮ್ಮ ಪ್ರತಿಯೊಂದು ಅಗತ್ಯಕ್ಕೂ ದೇವರ ವಾಗ್ದಾನಗಳು**

**ನಿಮಗೆ ದೇವರ ಒಡಂಬಡಿಕೆಯ ಆಶೀರ್ವಾದಗಳು**

**ಆಧಿಪತ್ಯಕ್ಕೆ ನಿಯಾಮಕ ಮಾಡಲಾಗಿದೆ**

**ಇಗೋ! ಯೇಸುವಿನ ಹೆಸರಿನಲ್ಲಿ**

**ವಂಚನೆಯ ಮೇಲೆ ಜಯ!**

## ಈ ಸರಣಿಮಾಲೆಯ ಕೈಪಿಡಿಗಳು

**ವಿಶ್ವಾಸಿಗಳ ಅಧಿಕಾರ**

ಸೋಲುವುದನ್ನು ನಿಲ್ಲಿಸುವುದು ಮತ್ತು ಜಯಿಸಲು ಪ್ರಾರಂಭಿಸುವುದು ಹೇಗೆ

**ಸಭೆಯ ವಿಜಯೋತ್ಸವ**

ಅಪೊಸ್ತಲರ ಕೃತ್ಯಗಳ ಪುಸ್ತಕದಾದ್ಯಂತ

**ಸ್ವಸ್ಥತೆಗೆ ದೇವರ ಒದಗಿಸುವಿಕೆ**

ದೇವರ ಗುಣಪಡಿಸುವ ಶಕ್ತಿಯನ್ನು ಹೊಂದಿಕೊಳ್ಳುವುದು ಮತ್ತು ಅದರಿಂದ ಸೇವೆಯನ್ನು ಮಾಡುವುದು

**ಸೇವೆಯ ವರಗಳು**

ಅಪೊಸ್ತಲ, ಪ್ರವಾದಿ, ಸೌವಾರ್ತಿಕ, ಸಭಾಪಾಲಕ, ಬೋಧಕ

**ಅದ್ಭುತಕರವಾದ ಸುವಾರ್ತಾಬೋಧನೆ**

ಲೋಕವನ್ನು ತಲುಪುವ ದೇವರ ಯೋಜನೆ

**ನೂತನ ಸೃಷ್ಟಿಯ ಸ್ವರೂಪ**

ನೀವು ಕ್ರಿಸ್ತನಲ್ಲಿ ಯಾರೆಂದು ತಿಳಿದುಕೊಳ್ಳುವುದು

**ಜೀವನದ ಮಾದರಿಗಳು**

ಹಳೆಯ ಒಡಂಬಡಿಕೆಯಿಂದ

**ಸ್ತುತಿ ಮತ್ತು ಆರಾಧನೆ**

ದೇವರ ಆರಾಧಕರಾಗುವುದು

**ಪ್ರಾರ್ಥನೆ**

ಸ್ವರ್ಗವನ್ನು ಭೂಮಿಗೆ ತರುವುದು

**ಅತಿಮಾನುಷ ಜೀವನ**

ಪವಿತ್ರಾತ್ಮನ ವರಗಳ ಮೂಲಕ

## ಬೋಧಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾತು

ನಾವು ಕ್ರಿಸ್ತನನ್ನು ಅಂಗೀಕರಿಸಿದಾಗ, ನಾವು ಹೊಸ ಜೀವನವನ್ನು ಪ್ರಾರಂಭಿಸುತ್ತೇವೆ - ನಮ್ಮಲ್ಲಿ ಹಲವರಿಗೆ ಅದು ಸಂಪೂರ್ಣವಾಗಿ ಹೊಸ ಜೀವನ ರೀತಿಯಾಗಿರುತ್ತದೆ. ನಾವು ನಮ್ಮ ಬೈಬಲ್‌ಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸುತ್ತೇವೆ ಮತ್ತು ಅನೇಕ ಬೋಧಕರಿಂದ ಕಲಿಯುತ್ತೇವೆ. ಹೊಸ ಕ್ರೈಸ್ತರಿಗೆ ಹೊಸ ಒಡಂಬಡಿಕೆಯನ್ನು ಕಲಿಯಲು ಹೆಚ್ಚಾಗಿ ಪ್ರೋತ್ಸಾಹಿಸಲಾಗುತ್ತದೆ, ಹೊಸ ಕ್ರೈಸ್ತರಿಗೆ ಅದು ಒಳ್ಳೆಯ ಸಲಹೆ ಕೂಡ ಆಗಿರುತ್ತದೆ. ಆದರೆ, ಬೈಬಲ್ ಅನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಏಕೆಂದರೆ ಪ್ರತಿಯೊಂದು ಭಾಗವು ಇತರ ಭಾಗಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ.

ನಾವು ಬೈಬಲ್ ಅನ್ನು ಗೂಢ ವಿಷಯವಾಗಿ ಕಾಣುತ್ತೇವೆ. ನಮಗೆ ದೊರಕಿರುವ ಬೋಧನೆಗಳು ಅದ್ಭುತವಾದವುಗಳು, ಆದರೆ ಅವುಗಳು ಒಟ್ಟಾಗಿ ಪೋಣಿಸಿರುವ ಗುಂಪುಗಳಂತೆ ಇರುತ್ತವೆ, ಆದರೆ ಇಡೀ ಚಿತ್ರಣಕ್ಕೆ ಹೊಂದಿಕೆಯಾಗುವುದಿಲ್ಲ. ನಾವು ಚಿಕ್ಕ ಭಾಗವಾಗಿ ಪ್ರಕಟಣೆಗಳನ್ನು ಹೊಂದಿಕೊಳ್ಳುತ್ತೇವೆ, ಆದರೆ ಅವು ಕೂಡ ಇಡೀ ಚಿತ್ರಣದ ಒಂದು ಭಾಗ ಮಾತ್ರವಾಗಿರುತ್ತದೆ.

ಅನೇಕ ಕ್ರೈಸ್ತರಿಗೆ ಹೊಸ ಒಡಂಬಡಿಕೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಏಕೆಂದರೆ ಹಳೆ ಒಡಂಬಡಿಕೆಯಲ್ಲಿ ಹಾಕಲಾಗಿರುವ ಅಸ್ತಿವಾರಗಳ ಕುರಿತಾದ ಬೋಧನೆಯನ್ನು ಅವರು ಕಲಿತಿಲ್ಲ. ಹೊಸ ಒಡಂಬಡಿಕೆಯಲ್ಲಿರುವ ಒಂದು ವಾಕ್ಯದ ಸಣ್ಣ ಭಾಗವು ಹಳೆಯ ಒಡಂಬಡಿಕೆಯಲ್ಲಿರುವ ಪೂರ್ತಿ ಒಂದು ಬೋಧನೆಯನ್ನೇ ಸೂಚಿಸಬಹುದು.

ಉದಾಹರಣೆಗೆ, ಹಳೆ ಒಡಂಬಡಿಕೆಯ ಯಾಜಕರ ಕರ್ತವ್ಯಗಳು ಏನೆಂದು ಅಥವಾ ಮೆಲ್ಕಿಜೆದೇಕನು ಯಾರೆಂದು ನಮಗೆ ಗೊತ್ತಿರದಿದ್ದರೆ, ಮೆಲ್ಕಿಜೆದೇಕನು ತರಹ ನಾವು ಶಾಶ್ವತವಾದ ರಾಜರು ಮತ್ತು ಯಾಜಕರು ಎಂದು ಪೌಲನು ಬರೆದಾಗ, ಅವನು ಏನನ್ನು ಉದ್ದೇಶಿಸಿ ಹೇಳಿದನು ಎಂದು ನಾವು ಹೇಗೆ ತಾನೇ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯ? ಒಡಂಬಡಿಕೆ ಎಂದರೇನು ಎಂದು ನಮಗೆ ಗೊತ್ತಿಲ್ಲದಿದ್ದರೆ, ದೇವರ ಒಡಂಬಡಿಕೆಯ ಮಕ್ಕಳಾಗಿ ನಮಗಿರುವ ಹಕ್ಕುಗಳನ್ನೂ ಸೌಭಾಗ್ಯಗಳನ್ನೂ ನಾವು ಹೇಗೆ ತಾನೇ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯ?

ಹಳೆ ಒಡಂಬಡಿಕೆಯಿಂದ ತೆಗೆದುಕೊಂಡಿರುವ ಜೀವನಕ್ಕಾಗಿರುವ ಮಾದರಿಗಳು ಹಳೆ ಒಡಂಬಡಿಕೆಯ ಕುರಿತಾದ ಪೂರ್ಣ ಅಧ್ಯಯನವಲ್ಲ. ಇದು ಹಳೆ ಒಡಂಬಡಿಕೆಯಲ್ಲಿರುವ ಯಾವುದೇ ಘಟನೆ ಅಥವಾ ವಿಷಯದ ಕುರಿತಾದ ಪೂರ್ಣ ಅಧ್ಯಯನವಲ್ಲ. ಇದು ಮುಖ್ಯ ಘಟನೆಗಳ ಮತ್ತು ವಿಷಯಗಳ ಕುರಿತಾದ ಪರಿಚಯವಷ್ಟೇ ಅಥವಾ ಪಕ್ಷಿ ನೋಟವಷ್ಟೇ.

ಹಳೆ ಒಡಂಬಡಿಕೆಯ ಸಮಯ ಮತ್ತು ಬೋಧನೆಯ ಕುರಿತಾದ ಮುಖ್ಯವಾದ ವಿಷಯಗಳನ್ನು ನಾವು ತಿಳಿದುಕೊಂಡ ನಂತರ, ನಾವು ಓದುವ ಅಥವಾ ಕೇಳುವ ಎಲ್ಲದರ ಮೂಲಭೂತ ವಿಷಯಗಳನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ ಮತ್ತು ದೇವರು ನಮಗೆ ಕೊಟ್ಟಿರುವ ಚಿತ್ರಣವು ಹೆಚ್ಚೆಚ್ಚು ಸ್ಪಷ್ಟವಾಗುತ್ತಾ ಹೋಗುತ್ತದೆ.

ವೈಯಕ್ತಿಕ ಅಥವಾ ಗುಂಪು ಅಧ್ಯಯನಗಳಿಗೆ, ಸತ್ಯವೇದ ಅಧ್ಯಯನ ಶಾಲೆಗಳಿಗೆ, ಭಾನುವಾರ ಶಾಲೆಗಳಿಗೆ ಮತ್ತು ಮನೆ ಗುಂಪುಗಳಿಗೆ ಈ ಅಧ್ಯಯನವು ಅತ್ಯುತ್ತಮವಾಗಿದೆ. ಅಧ್ಯಯನದ ಸಮಯದಲ್ಲಿ ಬೋಧಕ ಮತ್ತು ವಿದ್ಯಾರ್ಥಿ ಇಬ್ಬರೂ ಈ ಕೈಪಿಡಿಯ ಪ್ರತಿಗಳನ್ನು ಹೊಂದಿರುವುದು ಬಹಳ ಮುಖ್ಯವಾಗಿರುತ್ತದೆ.

ಅತ್ಯುತ್ತಮ ಪುಸ್ತಕಗಳಲ್ಲಿ ಬರೆಯಲಾಗುತ್ತದೆ, ಅವುಗಳಿಗೆ ಅಡಿಗೆರೆ ಹಾಕಲಾಗುತ್ತದೆ, ಧ್ಯಾನಿಸಲಾಗುತ್ತದೆ ಮತ್ತು ಮನನ ಮಾಡಲಾಗುತ್ತದೆ. ನಿಮ್ಮ ಟಿಪ್ಪಣಿಗಳಿಗಾಗಿ ಮತ್ತು ಟೀಕೆಗಳಿಗಾಗಿ ನಾವು ಜಾಗವನ್ನು ಬಿಟ್ಟಿದ್ದೇವೆ. ಪರಾಮರ್ಶೆಗಾಗಿ ಮತ್ತು ವಿಷಯಗಳನ್ನು ಪುನಃ ಕಂಡುಕೊಳ್ಳುವುದಕ್ಕಾಗಿ ನಿಮಗೆ ಸಹಾಯ ಮಾಡಲು ತ್ವರಿತವಾಗಿ ಉಲ್ಲೇಖಿಸುವ ವ್ಯವಸ್ಥೆಯೊಂದಿಗೆ ಪುಸ್ತಕದರೂಪವನ್ನು ವಿನ್ಯಾಸಗೊಳಿಸಲಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಈ ವಿಷಯವನ್ನು ಅಧ್ಯಯನ ಮಾಡಿದ ನಂತರ ಇತರರಿಗೆ ವಿಷಯಗಳನ್ನು ಬೋಧಿಸಲು ಈ ವಿಶೇಷ ಪುಸ್ತಕದರೂಪವು ಸಾಧ್ಯವಾಗಿಸುತ್ತದೆ.

ಪೌಲನು ತಿಮೊಥೆಯನಿಗೆ ಹೀಗೆ ಬರೆದನು:

**ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು 2 ತಿಮೊಥೆ 2:2**

ಈ ಕೋರ್ಸ್ ಅನ್ನು ಮೈಂಡ್ಸ್ (ಮಿನಿಸ್ಟ್ರಿ ಡೆವೆಲಾಪ್‌ಮೆಂಟ್‌ಸಿಸ್ಟಮ್ MINDS) ವಿನ್ಯಾಸದಲ್ಲಿ ಪ್ರಾಯೋಗಿಕ ಭಾಗವಹಿಸುವಿಕೆಯ ಬೈಬಲ್ ಕೋರ್ಸ್ ಆಗಿ ವಿನ್ಯಾಸಗೊಳಿಸಲಾಗಿದೆ, ಇದು ವಿಷಯಕ್ರಮವಾದ ಕಲಿಕೆಗಾಗಿ ವಿಶೇಷವಾಗಿ ಅಭಿವೃದ್ಧಿಪಡಿಸಿದ ವಿಧಾನವಾಗಿದೆ. ಈ ಪರಿಕಲ್ಪನೆಯನ್ನು ಜೀವನದಲ್ಲಿ ವೃದ್ಧಿಗಾಗಿ, ಸೇವೆಗಾಗಿ ಮತ್ತು ವಿದ್ಯಾರ್ಥಿಗಳ ಭವಿಷ್ಯದ ಬೋಧನೆಗಾಗಿ ವಿನ್ಯಾಸಗೊಳಿಸಲಾಗಿದೆ. ಮಾಜಿ ವಿದ್ಯಾರ್ಥಿಗಳು, ಈ ಕೈಪಿಡಿಯನ್ನು ಬಳಸುವ ಮೂಲಕ, ಈ ಕೋರ್ಸ್ ಅನ್ನು ಇತರರಿಗೆ ಸುಲಭವಾಗಿ ಕಲಿಸಬಹುದು.

ಡಾ. ಎ.ಎಲ್. ಮತ್ತು ಜಾಯ್ಸ್ ಗಿಲ್ ರವರು ಯೇಸುವಿನ ಕ್ರಿಯೆಗಳನ್ನು ಮಾಡಲು ವಿಶ್ವಾಸಿಗಳನ್ನು ಸಜ್ಜುಗೊಳಿಸುವುದಕ್ಕಾಗಿ ಪ್ರಾಯೋಗಿಕ ಸಾಧನಗಳನ್ನು ತಯಾರಿಸಲು ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ.

ಕ್ರಿಸ್ತೀಯ ಪರಿಪಕ್ವತೆಯ ಒಂದೊಂದು ಹಂತಗಳಲ್ಲಿರುವ ಪ್ರತಿಯೊಬ್ಬ ವಿಶ್ವಾಸಿಯು ಜಯಶಾಲಿಯಾದ, ಅಸಾಧಾರಣವಾದ ಜೀವನವನ್ನು ನಡಿಸುವಂತೆ ಅವರನ್ನು ಉತ್ತೇಜಿಸುವುದು ಅವರ ಆಸೆಯಾಗಿದೆ.

# ವಿಷಯಾನುಕ್ರಮ


| | | |
|---|---|---|
| ಪಾಠ ಒಂದು | ಇಂದು ನಮಗಾಗಿ ದೇವರ ವಾಕ್ಯ | 8 |
| ಪಾಠ ಎರಡು | ಹಳೆ ಒಡಂಬಡಿಕೆ ಕಾಲದ ಮುಖ್ಯ ಘಟನೆಗಳು | 21 |
| ಪಾಠ ಮೂರು | ದೇವರ ಒಡಂಬಡಿಕೆಯ ಮಕ್ಕಳು | 39 |
| ಪಾಠ ನಾಲ್ಕು | ಹಳೆ ಒಡಂಬಡಿಕೆಯಲ್ಲಿ ಕ್ರಿಸ್ತನ ಕುರಿತಾದ ಪ್ರಕಟನೆ | 56 |
| ಪಾಠ ಐದು | ಆರಾಧನೆ ಮತ್ತು ಸೇವೆಗಾಗಿ ಮಾದರಿಗಳು | 70 |
| ಪಾಠ ಆರು | ಹಬ್ಬಗಳು, ರಾಜರುಗಳು ಮತ್ತು ಪುರೋಹಿತರುಗಳು | 86 |
| ಪಾಠ ಏಳು | ಹಳೆ ಒಡಂಬಡಿಕೆಯ ನಾಯಕರುಗಳು | 106 |
| ಪಾಠ ಎಂಟು | ಸೃಷ್ಟಿ ಮತ್ತು ನ್ಯಾಯತೀರ್ಪಿನ ಅದ್ಭುತಗಳು | 129 |
| ಪಾಠ ಒಂಭತ್ತು | ಒದಗಿಸುವಿಕೆಯ ಅದ್ಭುತಗಳು | 140 |
| ಪಾಠ ಹತ್ತು | ನಮ್ಮ ಬಾಧ್ಯತೆಯನ್ನು ಸ್ವಾಧೀನಪಡಿಸಿಕೊಳ್ಳುವುದು | 157 |


## Charts


| | |
|---|---|
| ಹಳೆ ಒಡಬಂಡಿಕೆಯ ಪುಸ್ತಕಗಳು | 7 |
| ಮೆಸ್ಸೀಯನ ಕುರಿತಾದ ಮುಖ್ಯ ಪ್ರವಾದನೆಗಳು | 54 |
| ಮೋಶೆಯ ದೇವದರ್ಶನ ಗುಡಾರ | 68 |
| ಪಸ್ಕಹಬ್ಬ ಮತ್ತು ಯೇಸುವಿನ ತ್ಯಾಗದ ನಡುವೆ ಇರುವ ಸಮಾನತೆಗಳು | 85 |
| ಹಳೆ ಒಡಬಂಡಿಕೆಯ ಅದ್ಭುತಗಳು (ಒಂದು ಭಾಗಶಃ ಪಟ್ಟಿ) | 127 |



*ಪ್ರಶಂಸೆ*

*ಡಾ. ಜ್ಯಾಕ್ ಟುಲ್ಸ್, ರವರ ಶಕ್ತಿಯುತವಾದ*

*ಪರಿಣಾಮಕಾರಿಯಾದ ಸಲಹೆಗಳಿಲ್ಲದೆ "ಜೀವನಕ್ಕಾಗಿರುವ*

*ಮಾದರಿಗಳು ಹಳೆ ಒಡಂಬಡಿಕೆಯಿಂದ" ಎಂಬ ಕೈಪಿಡಿಯನ್ನು*

*ಬರೆಯಲಾಗುತ್ತಿರಲಿಲ್ಲ.*

*ಅವರ ಕೊಡುಗೆಗಳನ್ನು ನಾವು ಕೃತಜ್ಞತೆಯಿಂದ ಸ್ಮರಿಸುತ್ತೇವೆ.*

## ಹಳೆ ಒಡಬಂಡಿಕೆಯ ಪುಸ್ತಕಗಳು

**I. ಧರ್ಮಶಾಸ್ತ್ರ**

ಆದಿಕಾಂಡ

ವಿಮೋಚನಕಾಂಡ

ಯಾಜಕಕಾಂಡ

ಅರಣ್ಯಕಾಂಡ

ಧರ್ಮೋಪದೇಶ

**II. ಇತಿಹಾಸ**

ಯೆಹೋಶುವ

ನ್ಯಾಯಸ್ಥಾಪಕರು

ರೂತಳು

1 ಮತ್ತು 2 ಸಮುವೇಲ

1 ಮತ್ತು 2 ಅರಸುಗಳು

1 ಮತ್ತು 2 ಪೂರ್ವಕಾಲ

ಎಜ್ರ

ನೆಹೆಮೀಯ

ಎಸ್ತೆರಳು

**III. ಪದ್ಯಭಾಗ**

ಯೋಬ

ಕೀರ್ತನೆಗಳು

ಜ್ಞಾನೋಕ್ತಿ

ಪ್ರಸಂಗಿ

ಪರಮಗೀತ

**IV. ಪ್ರವಾದಿಗಳು (17)**

**ಹಿರಿಯ ಪ್ರವಾದಿಗಳು (5)**

ಯೆಶಾಯ

ಯೆರೆಮೀಯ

ಪ್ರಲಾಪಗಳು

ಯೆಹೆಜ್ಕೇಲ

ದಾನಿಯೇಲ

**ಕಿರಿಯ ಪ್ರವಾದಿಗಳು (12)**

ಹೋಶೆಯ

ಯೋವೇಲ

ಆಮೋಸ

ಒಬದ್ಯ

ಯೋನ

ಮೀಕ

ನಹೂಮ

ಹಬಕ್ಕೂಕ

ಚೆಫನ್ಯ

ಹಗ್ಗಾಯ್

ಜೆಕರ್ಯ

ಮಲಾಕಿ

### ಪಾಠ ಒಂದು

# *ಇಂದು ನಮಗಾಗಿರುವ ದೇವರ ವಾಕ್ಯ*

## ಸತ್ಯವೇದ – ದೇವರ ವಾಕ್ಯ

**ವಿವರಣೆ**

ಸತ್ಯವೇದವು ತನ್ನ ಜನರಿಗೆ ದೇವರು ನೀಡಿರುವ ತನ್ನ ವಾಕ್ಯವಾಗಿದೆ. ಈ ವಾಕ್ಯಗಳ ಮೂಲಕ, ದೇವರು ಯಾರು ಮತ್ತು ಮಾನವಕುಲಕ್ಕಾಗಿ ಆತನು ಹೊಂದಿರುವ ಶಾಶ್ವತವಾದ ಉದ್ದೇಶವೇನು ಎಂಬುದರ ಬಗ್ಗೆ ನಮಗೆ ಪ್ರಕಟನೆ ದೊರೆತಿದೆ. ಮೊದಲ ಪುಟದಿಂದ ಕೊನೆಯವರೆಗೆ ದೇವರು ತನ್ನ ಜನರೊಂದಿಗೆ ವ್ಯವಹರಿಸುವ ಬಗ್ಗೆ ಅದು ಹೇಳುತ್ತದೆ.

**ವಿಷಯಾಂಶ**

ನಾವು ಸತ್ಯವೇದದಲ್ಲಿ, ದೇವರ ಚಿತ್ತವನ್ನು, ದೇವರ ಮಾರ್ಗಗಳನ್ನು, ನಿರ್ದೇಶನಗಳನ್ನು ಮತ್ತು ಸೂಚನೆಗಳನ್ನು ಕಾಣುತ್ತೇವೆ. ನಮ್ಮ ಜೀವನದಲ್ಲಿ ಬರುವ ಪ್ರತಿಯೊಂದು ಸಮಸ್ಯೆಗೆ ಉತ್ತರಗಳನ್ನು ನಾವು ಕಂಡುಕೊಳ್ಳುತ್ತೇವೆ. ಅದು ನಮಗೆ ಬೆಳಕಾಗಿದೆ, ನಮ್ಮ ರೊಟ್ಟಿಯಾಗಿದೆ ಮತ್ತು ನಮ್ಮ ಜೀವವಾಗಿದೆ.

**ಹೊಂದಿಕೆ**

ಇಡೀ ಸತ್ಯವೇದದಲ್ಲಿ ಯಾವುದೇ ವಿಷಯದ ಬಗ್ಗೆ ಆಗಲಿ ಒಂದು ಹೊಂದಾಣಿಕೆ ಇದೆ. ಬರಲಿರುವ ಮೆಸ್ಸೀಯನ ಪ್ರವಾದನೆಗಳು ಮತ್ತು ಅದರ ನೆರವೇರುವಿಕೆಗಳು ಇದಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ. ಹಳೆ ಒಡಂಬಡಿಕೆಯಲ್ಲಿರುವ ಬರಲಿರುವ ಮೆಸ್ಸೀಯನ ಕುರಿತಾದ 330 ಪ್ರವಾದನೆಗಳು ಹೊಸ ಒಡಂಬಡಿಕೆಯಲ್ಲಿ ನೆರವೇರಿವೆ.

**ಧೃಢೀಕರಣ**

ಪುರಾತನ ವಸ್ತುಶಾಸ್ತ್ರವು ಸತ್ಯವೇದವನ್ನು ಅನೇಕ ವಿವರಗಳಲ್ಲಿ ಸತ್ಯವೆಂದು ಧೃಢೀಕರಿಸಿದೆ. ಅದು ನಿಜವಾದ ವಿಜ್ಞಾನದೊಂದಿಗೆ ಹೊಂದಾಣಿಕೆಯಾಗುತ್ತದೆ.

**ಅವಿನಾಶತೆ**

ಸತ್ಯವೇದವನ್ನು ಸಾರ್ವಜನಿಕವಾಗಿ ಸುಟ್ಟುಹಾಕಲಾಗಿದೆ - ಕಾನೂನುಬಾಹಿರವಾಗಿದೆ - ಅದನ್ನು ಇಟ್ಟುಕೊಳ್ಳುವವರನ್ನು ಮರಣಕ್ಕೆ ಗುರಿಪಡಿಸಲಾಗಿದೆ - ಆದರೂ ಅದನ್ನು ಸಂಪೂರ್ಣವಾಗಿ ಸಂರಕ್ಷಿಸಿಡಲಾಗಿದೆ. ಮಾನವಕುಲದ ಇತಿಹಾಸದ ಕರಾಳ ಯುಗಗಳ ಕಾಲದಲ್ಲಿ ಪುರೋಹಿತರನ್ನು ಹೊರತುಪಡಿಸಿ ಎಲ್ಲರಿಗೂ ಕಾನೂನುಬಾಹಿರವಾಗಿದ್ದ ಈ ಪುಸ್ತಕವು ಪ್ರಪಂಚದ ಮೊದಲ

ಮುದ್ರಣಾಲಯದಲ್ಲಿ ಮುದ್ರಿತವಾದ ಮೊದಲ ವಸ್ತುವಾಗಿದೆ. ಈ ಗುಟೆನ್‌ಬರ್ಗ್ ಬೈಬಲ್‌ಗಳಲ್ಲಿ ಐದು ಪ್ರತಿಗಳು ಇನ್ನೂ ಅಸ್ತಿತ್ವದಲ್ಲಿವೆ.

ಪ್ರಸರಣ

ಸತ್ಯವೇದವನ್ನು 1,000 ಕ್ಕೂ ಹೆಚ್ಚು ಭಾಷೆಗಳಿಗೆ ಭಾಷಾಂತರಿಸಲಾಗಿದೆ ಮತ್ತು ಪ್ರತಿವರ್ಷ 30 ದಶಲಕ್ಷಕ್ಕೂ ಹೆಚ್ಚು ಪ್ರತಿಗಳನ್ನು ಮುದ್ರಿಸಲಾಗುತ್ತಿದೆ. ಇದು ವಿಶ್ವದಲ್ಲೇ ಅತ್ಯಂತ ಹೆಚ್ಚು ಮಾರಾಟವಾಗುವ ಪುಸ್ತಕವಾಗಿದೆ.

ಪ್ರಸ್ತುತತೆ

ಸತ್ಯವೇದವನ್ನು ಓದುವವರ ಜೀವನವನ್ನು ಅದು ಇಂದಿಗೂ ಬದಲಾಯಿಸುತ್ತಿದೆ ಮತ್ತು ಅದನ್ನು ನಂಬುವವರ ಜೀವನದಲ್ಲಿ ಅದು ಇಂದಿಗೂ ಅದ್ಭುತಗಳನ್ನು ಉಂಟುಮಾಡುತ್ತಿದೆ.

ದಾವೀದನು ದೇವರ ವಾಕ್ಯದ ಬಗ್ಗೆ ಹೀಗೆ ಬರೆದನು,

**ಕೀರ್ತನೆ 119:105 ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ, ನನ್ನ ದಾರಿಗೆ ಬೆಳಕೂ ಆಗಿದೆ.**

ಯೆಶಾಯನು ಹೀಗೆ ಬರೆದನು,

**ಯೆಶಾಯ 55:10,11 ಮಳೆಯೂ, ಹಿಮವೂ ಆಕಾಶದಿಂದ ಬಿದ್ದು, ಭೂಮಿಯನ್ನು ತೋಯಿಸಿ, ಹಸುರುಗೊಳಿಸಿ ಫಲಿಸುವಂತೆ ಮಾಡಿ, ಬಿತ್ತುವವನಿಗೆ ಬೀಜವನ್ನು, ಉಣ್ಣುವವನಿಗೆ ಆಹಾರವನ್ನು ಒದಗಿಸಿದ ಹೊರತು ಹೇಗೆ ಆಕಾಶಕ್ಕೆ ಸುಮ್ಮನೆ ಹಿಂದಿರುಗುವುದಿಲ್ಲವೋ, ಹಾಗೆಯೇ ನನ್ನ ಬಾಯಿಂದ ಹೊರಟ ಮಾತು, ನನ್ನ ಇಷ್ಟಾರ್ಥವನ್ನು ನೆರವೇರಿಸಿ, ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವುದಿಲ್ಲ.**

ಯೇಸು ಹೀಗೆ ಹೇಳಿದರು,

**ಮತ್ತಾಯ 4:4 "'ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವುದಿಲ್ಲ, ಆದರೆ ದೇವರ ಬಾಯಿಂದ ಬರುವ ಪ್ರತಿಯೊಂದು ನುಡಿಯಿಂದಲೂ ಬದುಕುವನು' ಎಂದು ಬರೆದಿದೆ"**

ಪ್ರಯೋಜನಕರವಾದದ್ದು

ದೇವರ ವಾಕ್ಯವೆಲ್ಲವೂ ನಮ್ಮ ಜೀವನಕ್ಕೆ ಉಪಯುಕ್ತವಾದದ್ದು ಎಂದು ಪೌಲನು ತಿಮೊಥಿಗೆ ಬರೆಯುತ್ತಾನೆ.

**2 ತಿಮೊಥಿ 3:16,17 ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು.**

ದೇವರ ವಾಕ್ಯವು ಇವುಗಳಿಗೆ ಉಪಯುಕ್ತವಾದದ್ದು:

- ಉಪದೇಶಕ್ಕೆ

* ಖಂಡನೆಗೆ (ಪಾಪವನ್ನು ಗುರುತಿಸುತ್ತದೆ - ನಾವು ಎಲ್ಲಿ ತಪ್ಪಿದೆವು ಎಂಬುದನ್ನು ತೋರಿಸುತ್ತದೆ)
* ತಿದ್ದುಪಾಟಿಗೆ (ನಮ್ಮ ಮಾರ್ಗಗಳನ್ನು ಹೇಗೆ ಸರಿಪಡಿಸಿಕೊಳ್ಳಬೇಕೆಂದು ತೋರಿಸಿಕೊಡುತ್ತದೆ)
* ನೀತಿಶಿಕ್ಷೆಗೆ
* ನಮ್ಮ ಪ್ರವೀಣತೆಗೆ
* ಸಕಲ ಸತ್ಕಾರ್ಯವನ್ನು ಮಾಡಲು ನಮ್ಮನ್ನು ಸಜ್ಜುಗೊಳಿಸುವುದಕ್ಕಾಗಿ

## ಸತ್ಯವೇದ – ದೇವರಿಂದ ಪ್ರೇರಿತವಾದದ್ದು

ನಲವತ್ತು ಪುರುಷರು, ಹಳೆಯ ಒಡಂಬಡಿಕೆಯಲ್ಲಿ ಮೂವತ್ತೊಂದು ಮತ್ತು ಹೊಸದರಲ್ಲಿ ಒಂಬತ್ತು ಮಂದಿ 1,500 ವರ್ಷಗಳ ಅವಧಿಯಲ್ಲಿ ಸತ್ಯವೇದದ ವಚನಗಳನ್ನು ಬರೆದಿದ್ದಾರೆ. ನಿಸ್ಸಂದೇಹವಾಗಿ, ಅವರಲ್ಲಿ ಹೆಚ್ಚಿನವರು ಒಬ್ಬರನ್ನೊಬ್ಬರು ತಿಳಿದಿರಲಿಲ್ಲ ಮತ್ತು ವ್ಯತ್ಯಾಸವಾದ ಐತಿಹಾಸಿಕ ಕಾಲದಿಂದ ಬಂದವರಾಗಿದ್ದರು, ಆದಾಗ್ಯೂ ಅಲ್ಲಿ ಯಾವುದೇ ಸಂಘರ್ಷವಿಲ್ಲ. ಸತ್ಯವೇದವನ್ನು ಜನರು ಪರಿಶುದ್ಧಾತ್ಮನ ಪ್ರೇರಣೆಯ ಅಡಿಯಲ್ಲಿ ಬರೆದದ್ದರಿಂದ ಮಾತ್ರ ಹೀಗೆ ಸಂಭವಿಸಲು ಸಾಧ್ಯವಾಯಿತು.

## ದೇವರಿಂದ ಉಸಿರಿಸಲ್ಪಟ್ಟಿದ್ದು

ದೇವರ ವಾಕ್ಯವು ದೇವಪ್ರೇರಿತವಾದದ್ದು ಎಂದು ಅಪೋಸ್ತಲನಾದ ಪೌಲನು ಬರೆಯುತ್ತಾನೆ.

**2 ತಿಮೊಥಿ 3:16A ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ...**

"ದೇವಪ್ರೇರಿತವಾದದ್ದು" ಎಂಬುದಕ್ಕೆ ಗ್ರೀಕ್ ಪದವು "ದೈವಿಕವಾಗಿ ಉಸಿರಿಸಲ್ಪಟ್ಟಿದ್ದು" ಎಂಬ ಅರ್ಥವನ್ನು ಹೊಂದಿದೆ. ಸತ್ಯವೇದದಲ್ಲಿ ಇಲ್ಲಿ ಮಾತ್ರ ಈ ಪದವನ್ನು ಬಳಸಲಾಗಿದೆ.

ದೇವರು ಹೇಗೆ ಆದಾನೊಳಗೆ ತನ್ನ ಜೀವಶ್ವಾಸವನ್ನು ಊದಿದರೋ ಹಾಗೆಯೇ ದೇವರ ಮಗನಾದ ಜೀವವುಳ್ಳ ವಾಕ್ಯವಾದವನು ದೇವರ ವಾಕ್ಯದೊಳಗೆ ತನ್ನ ಜೀವಶ್ವಾಸವನ್ನು ಊದಿದನು. ವಾಕ್ಯವು ಜೀವವುಳ್ಳದ್ದು ಯಾಕೆಂದರೆ ಅದು ದೇವರ ಜೀವಶ್ವಾಸವನ್ನೇ ಹೊಂದಿದೆ.

ಅಪೋಸ್ತಲನಾದ ಯೋಹಾನನು ಇದನ್ನು ವಿವರಿಸಿದನು.

**ಯೋಹಾನ 1:1 ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರೊಂದಿಗಿತ್ತು; ಆ ವಾಕ್ಯವು ದೇವರಾಗಿತ್ತು.**

**ಇವರಿಂದ ಧೃಢೀಕರಿಸಲ್ಪಟ್ಟಿದೆ**

ಸತ್ಯವೇದದ ವಿಷಯವಸ್ತು ಮಾತ್ರ ದೇವಪ್ರೇರಿತವಾದದ್ದಲ್ಲ, ಅದರ ಪ್ರತಿಯೊಂದು ಪದವೂ - ಪ್ರತಿಯೊಂದು ಸೊನ್ನೆಯೂ ಪ್ರತಿಯೊಂದೂ ಗುಡುಸೂ - ದೇವಪ್ರೇರಿತವಾದದ್ದು. ಇದನ್ನು ಪ್ರವಾದಿಯಾದ ಯೆರೆಮೀಯನು ಮತ್ತು ಅಪೋಸ್ತಲರಾದ ಮತ್ತಾಯ ಮತ್ತು ಯೋಹಾನರು ಧೃಢೀಕರಿಸಿದ್ದಾರೆ.

* *ಯೆರೆಮೀಯ*

ಯೆರೆಮೀಯನು ದೇವರಿಂದ ಬಂದ ಸೂಚನೆಗಳ ಬಗ್ಗೆ ಬರೆದಾಗ ದೈವಪ್ರೇರಣೆಯ ಕೆಲವು ಪ್ರಕ್ರಿಯೆಯನ್ನು ಬಹಿರಂಗಪಡಿಸುತ್ತಾನೆ.

**ಯೆರೆಮೀಯ 36:2 ನೀನು ಗ್ರಂಥ ಬರೆಯತಕ್ಕ ಸುರುಳಿಯನ್ನು ತೆಗೆದುಕೊಂಡು, ನಾನು ಯೋಷೀಯನ ಕಾಲದಲ್ಲಿ ನಿನ್ನ ಸಂಗಡ ಮಾತನಾಡಿದ ದಿನದಿಂದ ಇಂದಿನವರೆಗೂ ಇಸ್ರಾಯೇಲು, ಯೆಹೂದ, ಸಕಲ ಜನಾಂಗಗಳು ಇವುಗಳ ವಿಷಯವಾಗಿ ನಿನಗೆ ನುಡಿಯುತ್ತಾ ಬಂದಿರುವ ಮಾತುಗಳನ್ನೆಲ್ಲಾ ಬರೆ.**

ದೇವರವಾಕ್ಯವನ್ನು ಬರೆಯುವವರು ದೇವರು ಪರಿಶುದ್ಧಾತ್ಮನ ಮೂಲಕ ಅವರೊಂದಿಗೆ ಮಾತನಾಡಿದ ಎಲ್ಲಾ ಪದಗಳನ್ನು ಪುಸ್ತಕದ ಸುರುಳಿಯ ಮೇಲೆ ಬರೆಯಬೇಕಾಗಿತ್ತು. ಆದ್ದರಿಂದ, ಮೂಲ ಗ್ರಂಥಗಳಲ್ಲಿನ ಪ್ರತಿಯೊಂದು ಪದವೂ ನೇರವಾಗಿ ದೇವರಿಂದ ಪ್ರೇರಿತವಾಗಿತ್ತು

* *ಮತ್ತಾಯ*

ಅಪೋಸ್ತಲನಾದ ಮತ್ತಾಯನು ಹೀಗೆ ಬರೆದನು,

**ಮತ್ತಾಯ 5:18 ನಿಮಗೆ ಸತ್ಯವಾಗಿ ಹೇಳುತ್ತೇನೆ, ಆಕಾಶವೂ ಭೂಮಿಯೂ ಅಳಿದುಹೋಗುವ ತನಕ ಧರ್ಮನಿಯಮವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಚುಕ್ಕೆಯಾಗಲಿ, ಒಂದು ಅಕ್ಷರವಾಗಲಿ ಅಳಿದುಹೋಗುವುದಿಲ್ಲ.**

* *ಯೋಹಾನ*

ಅಪೋಸ್ತಲನಾದ ಯೋಹಾನನು ಹೀಗೆ ಬರೆದನು,

**ಪ್ರಕಟನೆ 1:19 ಆದ್ದರಿಂದ ನೀನು ಕಂಡವುಗಳನ್ನೂ ಈಗ ನಡೆಯುತ್ತಿರುವವುಗಳನ್ನೂ ಮುಂದೆ ಆಗಬೇಕಾದವುಗಳನ್ನೂ ಬರೆ.**

ದೇವರ ವಾಕ್ಯವನ್ನು ಬರೆಯುವವರು ಪರಿಶುದ್ಧಾತ್ಮನಿಂದ ಅವರಿಗೆ ಬಹಿರಂಗವಾದ ಸತ್ಯಗಳನ್ನು ಬರೆಯಬೇಕಾಗಿತ್ತು. ಅವರು ಆತ್ಮನಲ್ಲಿ ನೋಡಿದ ವಿಷಯಗಳ ಬಗ್ಗೆ, ಬರೆಯುತ್ತಿದ್ದ ಸಮಯದಲ್ಲಿ ಅಸ್ತಿತ್ವದಲ್ಲಿದ್ದ ವಿಷಯಗಳ ಬಗ್ಗೆ ಮತ್ತು ಭವಿಷ್ಯದಲ್ಲಿ ನಡೆಯಲಿರುವ ವಿಷಯಗಳ ಬಗ್ಗೆ ಪ್ರತಿಯೊಂದು ಪದವನ್ನು ಬರೆಯುವಂತೆ ಆತನು ಅವರನ್ನು ಪ್ರೇರೇಪಿಸಿದನು.

ದೈವಪ್ರೇರಣೆಯ ಪ್ರಕ್ರಿಯೆಯು ಅಲೌಕಿಕ ದರ್ಶನಗಳ ಮತ್ತು ಪ್ರಕಟನೆಗಳ ಮೂಲಕ ನೀಡಲಾದ ನಿಖರವಾದ ಪದಗಳಲ್ಲಿ

ವ್ಯಕ್ತಪಡಿಸಿದ ಆಲೋಚನೆಗಳಾಗಿ ಬಂದಿತು. ಮಾನವ ಲೇಖಕರ ವ್ಯಕ್ತಿತ್ವಗಳನ್ನು ಬಳಸುವಾಗಲೂ, ದೇವರ ವಾಕ್ಯದ ಮೂಲ ಪ್ರತಿಗಳ ಪ್ರತಿಯೊಂದು ಪದವು ಪರಿಶುದ್ಧಾತ್ಮನ ಅಲೌಕಿಕ ಕ್ರಿಯೆಯ ಮೂಲಕ ಪ್ರೇರಿತವಾಗಿತ್ತು (ಅಥವಾ ಉಸಿರಿಸಲ್ಪಟ್ಟಿತು).

## ಸತ್ಯವೇದದ ದೋಷರಹಿತತೆ

ಪರಿಶುದ್ಧ ಗ್ರಂಥದ ವಿಶ್ವಾಸಾರ್ಹತೆಯನ್ನು ಉಲ್ಲೇಖಿಸುವುದರ ಮೂಲಕ ಸತ್ಯವೇದದ ದೋಷರಹಿತತೆಯನ್ನು ದೇವರ ವಾಕ್ಯದಲ್ಲಿ ಪ್ರಕಟಿಸಲಾಗಿದೆ.

### ಅಪೋಸ್ತಲನಾದ ಪೇತ್ರನು

ಯೇಸುವಿನೊಂದಿಗೆ ರೂಪಾಂತರದ ಪರ್ವತದಲ್ಲಿದ್ದಾಗ ಪೇತ್ರನು ಅನುಭವಿಸಿದ ದೊಡ್ಡ ಅನುಭವಕ್ಕಿಂತಲೂ ದೇವರ ವಾಕ್ಯವನ್ನು "ಮತ್ತೂ ದೃಢವಾಗಿದೆ" ಎಂದು ಕರೆಯಲಾಗುತ್ತದೆ. ಈ ದೊಡ್ಡ ಅನುಭವವನ್ನು ವಿವರಿಸಿದ ನಂತರ ಪೇತ್ರನು ಹೀಗೆ ಬರೆದನು,

**2 ಪೇತ್ರ 1:19 ಇದಲ್ಲದೆ ಪ್ರವಾದನವಾಕ್ಯವು ನಮಗೆ ಬಹುದೃಢವಾಗಿ ದೊರೆತಿದೆ. ಆ ದಿನವು ಅರುಣೋದಯವಾಗುವರೆಗೆ ಮತ್ತು ಉದಯ ನಕ್ಷತ್ರವು ನಿಮ್ಮ ಹೃದಯಗಳಲ್ಲಿ ಮೂಡುವ ತನಕ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಟ್ಟರೆ ಒಳ್ಳೆಯದು.**

### ಡಾ. ಲೂಕನು

ಪರಿಶುದ್ಧ ಗ್ರಂಥದ ನಿಶ್ಚಿತತೆಯನ್ನು ಲೂಕನು ಸಹ ದೃಢಪಡಿಸುತ್ತಾನೆ. ಅವನು ತನಗೆ ತಿಳಿಸಲ್ಪಟ್ಟ ವಾಕ್ಯದ ಬಗ್ಗೆ ಬರೆಯುವುದರ ಮೂಲಕ ತನ್ನ ಸುವಾರ್ತೆಯ ದಾಖಲೆಯನ್ನು ಆರಂಭಿಸುತ್ತಾನೆ. ನಂತರ *ನಿನಗೆ ಉಪದೇಶಿಸಿರುವ ವಿಷಯಗಳು ಯಥಾರ್ಥವಾದವುಗಳೆಂದು ಇದರಿಂದ ನೀನು ಗೊತ್ತುಮಾಡಿಕೊಳ್ಳುವುದಕ್ಕಾಗಿ* ಈ ವಿಷಯಗಳು ಬರೆಯಲ್ಪಟ್ಟವು ಎಂದು ಮುಂದುವರೆಸುತ್ತಾನೆ (ಲೂಕ 1 :4).

### ಅಪೋಸ್ತಲನಾದ ಯೋಹಾನನು

ಪರಿಶುದ್ಧ ಗ್ರಂಥದ ಪರಿಪೂರ್ಣ ಸತ್ಯದ ಬಗ್ಗೆ ಯೋಹಾನನು ಹೀಗೆ ಬರೆದನು.

**ಯೋಹಾನ 19:35 ಅದನ್ನು ಕಂಡವನೇ ಸಾಕ್ಷಿ ಹೇಳಿದ್ದಾನೆ. ಅವನ ಸಾಕ್ಷಿಯು ಸತ್ಯವೇ; ತಾನು ಹೇಳುವುದು ಸತ್ಯವೆಂದು ಅವನು ಬಲ್ಲನು. ನೀವು ಸಹ ನಂಬಬೇಕೆಂದು ಇದನ್ನು ಹೇಳಿದ್ದಾನೆ.**

### ಅಪೋಸ್ತಲನಾದ ಪೌಲನು

ಪರಿಶುದ್ಧ ಗ್ರಂಥವೆಲ್ಲವೂ ನಮ್ಮ ಸ್ವೀಕಾರಕ್ಕೆ ಯೋಗ್ಯವಾದುದ್ದಾಗಿದೆ.

**1 ತಿಮೊಥಿ 4:9 ಈ ವಾಕ್ಯವು ನಂಬತಕ್ಕದ್ದಾಗಿಯೂ ಸರ್ವಾಂಗೀಕಾರಕ್ಕೆ ಯೋಗ್ಯವಾದದ್ದಾಗಿಯೂ ಇದೆ.**

### ತಪ್ಪು ಮತ್ತು ಸರಿಯನ್ನು ತಿಳಿದುಕೊಳ್ಳುವುದು

ಆಧುನಿಕ ತತ್ತ್ವಶಾಸ್ತ್ರದ ಬೋಧನೆಗೆ ವಿರುದ್ಧವಾಗಿ, ವಿಶ್ವದಲ್ಲಿ ಸಂಪೂರ್ಣ ಸತ್ಯಗಳು, ಮೌಲ್ಯಗಳು, ನೀತಿಶಾಸ್ತ್ರ ಮತ್ತು ಅಧಿಕಾರವಿದೆ. ಈ ನಿರಂಕುಶಗಳು ದೇವರ ವಾಕ್ಯದಲ್ಲಿ ಪ್ರಕಟಿಸಲಾಗಿವೆ.

ಈ ನಿರಪೇಕ್ಷತೆಗಳ ಮೂಲಕವೇ ನಾವು ತಪ್ಪನ್ನು ಮತ್ತು ಸರಿಯನ್ನು ತಿಳಿದುಕೊಳ್ಳಬಹುದು. ನಮ್ಮ ಜೀವನಕ್ಕೆ ಸತ್ಯವೇದವು ಮಾತ್ರ ಸಂಪೂರ್ಣ ಅಧಿಕಾರವುಳ್ಳದ್ದಾಗಿದೆ.

**ಕೀರ್ತನೆ 119:11 ನಿನಗೆ ವಿರುದ್ಧವಾಗಿ ಪಾಪಮಾಡದಂತೆ, ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿ ಇಟ್ಟುಕೊಂಡಿದ್ದೇನೆ.**

### ಒಂದೇ ನಿಜವಾದ ಸುವಾರ್ತೆ

ದೇವರ ವಾಕ್ಯದಲ್ಲಿ ಪ್ರಕಟಿಸಲಾದ ಸುವಾರ್ತೆಯನ್ನು ಹೊರತುಪಡಿಸಿ ಬೇರೆ ನಿಜವಾದ ಸುವಾರ್ತೆ ಇಲ್ಲ.

**ಗಲಾತ್ಯ 1:8 ಆದರೂ ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದದ್ದನ್ನು, ನಾವೇ ಆಗಲಿ ಅಥವಾ ಪರಲೋಕದಿಂದ ಬಂದ ದೇವದೂತನೇ ಆಗಲಿ, ನಿಮಗೆ ಸಾರಿದರೆ ಅವನು ಶಾಪಗ್ರಸ್ತನಾಗಲಿ.**

### ಸಂಪೂರ್ಣ ಅಧಿಕಾರ

ದೇವರ ವಾಕ್ಯವು ಸಂಪೂರ್ಣವಾದ ಅಧಿಕಾರವುಳ್ಳದ್ದು ಯಾಕೆಂದರೆ ಅದು ಸಂಪೂರ್ಣವಾಗಿ ಸತ್ಯವಾದದ್ದು.

ಯೇಸು ಹೀಗೆ ಹೇಳಿದರು,

**ಯೋಹಾನ 17:17 ನೀನು ಸತ್ಯದಿಂದ ಇವರನ್ನು ಪ್ರತಿಷ್ಠೆಪಡಿಸು, ನಿನ್ನ ವಾಕ್ಯವೇ ಸತ್ಯ.**

### ವಿಧೇಯತೆಯನ್ನು ಕೋರುತ್ತದೆ

ದೇವರ ವಾಕ್ಯದ ಸಂಪೂರ್ಣವಾದ ಅಧಿಕಾರವು ನಮ್ಮ ವಿಧೇಯತೆಯನ್ನು ಕೋರುತ್ತದೆ.

**2 ಥೆಸಲೋನಿಕ 3:14 ಈ ಪತ್ರಿಕೆಯ ಮೂಲಕವಾಗಿ ಹೇಳಿರುವ ನಮ್ಮ ಮಾತಿಗೆ ಯಾವನಾದರೂ ಒಳಗಾಗದಿದ್ದರೆ ಅವನನ್ನು ಗುರುತಿಸಿ ಅವನಿಗೆ ನಾಚಿಕೆಯಾಗುವಂತೆ ಅವನ ಸಹವಾಸದಲ್ಲಿ ಸೇರಬೇಡಿರಿ.**

ದೇವರ ವಾಕ್ಯಕ್ಕೆ ಸಂಪೂರ್ಣವಾದ ಅಧಿಕಾರವಿರುವುದರಿಂದ ನಾವು ಅದರ ಸತ್ಯಗಳನ್ನು ಓದುವಾಗ, ಕೇಳಿಸಿಕೊಳ್ಳುವಾಗ ಮತ್ತು ಪಾಲಿಸುವಾಗ ಆಶೀರ್ವಾದವನ್ನೇ ಹೊಂದಿಕೊಳ್ಳುತ್ತೇವೆ.

**ಯೆಹೋಶುವ 1:8 ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವುದನ್ನೆಲ್ಲಾ ಕೈಕೊಂಡು ನಡೆ. ಆಗ ನಿನ್ನ ಕಾರ್ಯವೆಲ್ಲವೂ, ನೀನು ಹೋಗುವ ಮಾರ್ಗಗಳು ಸಫಲವಾಗುವುದು.**

## ಪರಿಶುದ್ಧ ಗ್ರಂಥದ ಅಂಗೀಕೃತ ಪುಸ್ತಕಗಳು

"ಪರಿಶುದ್ಧ ಗ್ರಂಥದ ಅಂಗೀಕೃತ ಪುಸ್ತಕಗಳು" ಎಂಬುದು ಪಂಡಿತರಿಂದ ಆರಿಸಲ್ಪಟ್ಟಂತಹ ಪುಸ್ತಕಗಳನ್ನು ಉಲ್ಲೇಖಿಸುತ್ತದೆ, ಅವರು ಪರಿಶುದ್ಧಾತ್ಮನಿಂದ ನಡೆಸಲ್ಪಟ್ಟು ಬಹಳ ಪ್ರಾರ್ಥನೆ ಮತ್ತು ಅಧ್ಯಯನ ಮಾಡಿದ ನಂತರ ನಿರ್ಧಾರ ತೆಗೆದುಕೊಂಡರು, ಏನೆಂದರೆ ದೇವಜನರಿಗೆ ದೇವರ ಸಂಪೂರ್ಣವಾದ ಮತ್ತು ಪೂರ್ಣವಾದ ಲಿಖಿತ ಪ್ರಕಟನೆಯು ಅರವತ್ತಾರು ಪುಸ್ತಕಗಳಲ್ಲಿ ಒಳಗೊಂಡಿದೆ ಮತ್ತು ಆ ಅರವತ್ತಾರು ಪುಸ್ತಕಗಳಿಗೆ ಮಾತ್ರ ಅದನ್ನು ಸೀಮಿತಗೊಳಿಸಲ್ಪಟ್ಟಿದೆ.

ಯಾವ ಪುಸ್ತಕವು ಹೊಸ ಒಡಂಬಡಿಕೆಯ ಭಾಗವಾಗಬೇಕೆಂದು ನಿರ್ಧರಿಸಲು ಅವರು ಹಲವಾರು ಪರೀಕ್ಷೆಗಳನ್ನು ಬಳಸಿದರು.

- ✳ ಒಬ್ಬ ಅಪೋಸ್ತಲನಿಂದ ಅಥವಾ ಒಬ್ಬ ಅಪೋಸ್ತಲನಿಗೆ ನಿಕಟವಾದ ವ್ಯಕ್ತಿಯಿಂದ ಬರೆಯಲ್ಪಟ್ಟಿರಬೇಕು
- ✳ ವ್ಯಾಪಕವಾಗಿ ಓದಲ್ಪಟ್ಟಿರಬೇಕು
- ✳ ಜೀವನಕ್ಕಾಗಿ ಮತ್ತು ಬೋಧನೆಗಾಗಿ ಅಂಗೀಕೃತವಾಗಿರಬೇಕು
- ✳ ಸಾರ್ವಜನಿಕ ಆರಾಧನೆಯಲ್ಲಿ ಉಪಯೋಗಿಸಲ್ಪಟ್ಟಿರಬೇಕು
- ✳ ಸಭೆಗಳಾದ್ಯಂತ ಅಂಗೀಕೃತವಾಗಿರಬೇಕು
- ✳ ಇಡೀ ಸಭೆಯ ನಿರ್ಧಾರದಿಂದ ಅನುಮೋದಿಸಲ್ಪಟ್ಟಿರಬೇಕು

1,500 ವರ್ಷಗಳ ಅವಧಿಯಲ್ಲಿ, ನಲವತ್ತು ಪುರುಷರು ಸತ್ಯವೇದವನ್ನು ಬರೆದರು. ಪರಿಶುದ್ಧಾತ್ಮನೆಂಬ ಒಬ್ಬನೇ ಮೂಲ ಇದ್ದದ್ದರಿಂದ ಯಾವುದೇ ವಿರೋಧಾಭಾಸಗಳಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ಒಬ್ಬನೇ ಪರಿಶುದ್ಧಾತ್ಮನಿಂದ ಪ್ರೇರೇಪಿಸಲ್ಪಟ್ಟು ಬರೆದರು.

ಕೆಲವರು ಕೇಳಬಹುದು, "ಇತರೆ ಪುಸ್ತಕಗಳನ್ನು ಪರಿಶುದ್ಧಗ್ರಂಥಗಳ ಭಾಗವಾಗಿ ಸೇರಿಸಬಾರದು ಎಂದು ನಮಗೆ ಹೇಗೆ ಗೊತ್ತು?"

ಎಲ್ಲಾ ಪರಿಶುದ್ಧಗ್ರಂಥಗಳಲ್ಲಿ ಒಂದು ಪ್ರಧಾನ ವಿಷಯವಿದೆ ಎಂಬ ಅಂಶದಲ್ಲಿ ಉತ್ತರವು ಕಂಡುಬರುತ್ತದೆ – ಪಾಪದಿಂದ ತುಂಬಿದ ಮಾನವಕುಲಕ್ಕೆ ರಕ್ಷಕನ ರೂಪದಲ್ಲಿ ಯೇಸುಕ್ರಿಸ್ತನು ಪ್ರಕಟವಾಗುವುದು.

ಹಳೆ ಒಡಂಬಡಿಕೆಯ ಪ್ರವಾದನೆಗಳು, ವಾಗ್ದಾನಗಳು, ತ್ಯಾಗಬಲಿಗಳು ಮತ್ತು ಆರಾಧನೆಗಳು ಎಲ್ಲವೂ ಯೇಸುವಿನ ಕಡೆಗೆ ಮುಂದಕ್ಕೆ ಬೆರಳು ಮಾಡಿ ತೋರಿಸುತ್ತದೆ. ಹೊಸ ಒಡಂಬಡಿಕೆಯು ಯೇಸುವಿನ ಇಹಲೋಕ ಜೀವನದ ಕಥೆಯನ್ನು ನಮಗೆ ನೀಡುತ್ತದೆ, ಮತ್ತು ಶಿಲುಬೆಯ ಮೇಲೆ ತನ್ನ ಮರಣದ ಮೂಲಕ ನಮಗಾಗಿ

ಕೊಂಡುಕೊಂಡದ್ದರ ಕಡೆಗೆ ಹಿಂದಕ್ಕೆ ಬೆರಳು ಮಾಡಿ ತೋರಿಸುತ್ತದೆ ಮತ್ತು ನಾವು ಭವಿಷ್ಯದಲ್ಲಿ ಏನನ್ನು ನಿರೀಕ್ಷಿಸಬೇಕೆಂದು ನಮಗೆ ಹೇಳುತ್ತದೆ.

ಯೇಸು ತನ್ನ ಬೋಧನೆಯಲ್ಲಿ ಹಳೆ ಒಡಂಬಡಿಕೆಯ ಇಪ್ಪತ್ತೂಮ್ರು ಪುಸ್ತಕಗಳನ್ನು ಅನುಮೋದಿಸಿದರು.

**ಅಪೋಕ್ರಿಫ**

ನಮ್ಮ ಹಳೆ ಒಡಂಬಡಿಕೆಯ ಅವಧಿಯಲ್ಲಿ ಬರೆದ ಇತರ ಪುಸ್ತಕಗಳಿವೆ. ಮೊದಲ ಶತಮಾನದಲ್ಲಿ, ಸತ್ಯವೇದ ವಿದ್ವಾಂಸರು ಈ ಕೃತಿಗಳನ್ನು ಅಧ್ಯಯನ ಮಾಡಿದರು ಮತ್ತು ಈ ಪುಸ್ತಕಗಳಲ್ಲಿ ಹೆಚ್ಚಿನವು ದೇವರಿಂದ ಪ್ರೇರಿತವಾಗಿಲ್ಲ ಎಂದು ಅವರು ಒಪ್ಪಿಕೊಂಡರು.

ಈ ಕೆಲವು ಪುಸ್ತಕಗಳನ್ನು ನಂತರ ಕ್ಯಾಥೊಲಿಕ್ ಚರ್ಚ್ ಆಫ್ ರೋಮ್ ಅಂಗೀಕರಿಸಿತು ಮತ್ತು ಅವರ ಸತ್ಯವೇದದ ಭಾಗವಾಯಿತು. ಈ ಪುಸ್ತಕಗಳನ್ನು ಅಪೋಕ್ರಿಫಾ ಎಂದು ಕರೆಯಲಾಗುತ್ತದೆ.

ಗ್ರೀಕ್ ಭಾಷೆಯಲ್ಲಿ *ಅಪೋಕ್ರಿಫಾ* ಎಂದರೆ "ಗುಪ್ತ" ಅಥವಾ "ರಹಸ್ಯ". ಈ ಪುಸ್ತಕಗಳ ಲೇಖಕನಾಗಲಿ, ಬರೆಯಲ್ಪಟ್ಟ ದಿನಾಂಕವಾಗಲಿ ಮತ್ತು ಮೂಲವಾಗಲಿ ಬಹಳ ಅನುಮಾನಾಸ್ಪದವಾಗಿರುವುದರಿಂದ ಈ ಹೆಸರನ್ನು ಇಟ್ಟಿರಬಹುದು. ಈ ಪುಸ್ತಕಗಳಲ್ಲಿ ಕೆಲವು ದೇವಪ್ರೇರಿತವಾದದ್ದೆಂದು ಸೂಕ್ಷವಾಗಿ ಆರಿಸಲ್ಪಟ್ಟ ಪುಸ್ತಕಗಳಿಗೆ ವಿರುದ್ಧವಾದ ದಾಖಲೆಗಳನ್ನು ಮತ್ತು ಬೋದನೆಗಳನ್ನು ನೀಡುತ್ತವೆ.

ಹೆಚ್ಚಿನವು ತಿರಸ್ಕರಿಸಲ್ಪಟ್ಟವು ಏಕೆಂದರೆ ಅವು ವಿಭಿನ್ನ ಮನೋಭಾವ, ವಿಭಿನ್ನ ಅಭಿಷೇಕ ಮತ್ತು ಇತರ ಧರ್ಮಗ್ರಂಥಗಳಿಗೆ ಹೋಲಿಸಿದರೆ ದೋಷವೆಂದು ಪರಿಗಣಿಸಲ್ಪಟ್ಟ ಅಂಶಗಳನ್ನು ಒಳಗೊಂಡಿವೆ.

ಅವುಗಳಲ್ಲಿ ಹೆಚ್ಚಿನವು ತಿರಸ್ಕರಿಸಲ್ಪಡಲು ಕಾರಣವೆಂದರೆ ಅವು ವ್ಯತ್ಯಾಸವಾದ ಮನೋಭಾವ, ವ್ಯತ್ಯಾಸವಾದ ಅಭಿಷೇಕವನ್ನು ಹೊಂದಿದ್ದವು ಮತ್ತು ಇತರ ಪರಿಶುದ್ಧಗ್ರಂಥಗಳಿಗೆ ಹೋಲಿಸಿದಾಗ ದೋಷವೆಂದು ಪರಿಗಣಿಸಲ್ಪಟ್ಟ ಅಂಶಗಳನ್ನು ಅವು ಒಳಗೊಂಡಿದ್ದವು.

ಈ ಪುಸ್ತಕಗಳು ಆಸಕ್ತಿಕರವಾದ ಐತಿಹಾಸಿಕ ಮಾಹಿತಿಯನ್ನು ಹೊಂದಿದ್ದರೂ, ನಾವು ಮಾನ್ಯತೆ ಪಡೆದ ಪರಿಶುದ್ಧಗ್ರಂಥಗಳ ಸಂಪೂರ್ಣ ಅಧಿಕಾರವನ್ನು ಸ್ವೀಕರಿಸುವಂತೆ ಅವುಗಳನ್ನು ಸ್ವೀಕರಿಸದ ಹಾಗೆ ನಾವು ಜಾಗರೂಕರಾಗಿರಬೇಕು.

ಗಮನಿಸಿ: ಈ ವಿಷಯದ ಕುರಿತು ಹೆಚ್ಚಿನ ಮಾಹಿತಿಗಾಗಿ ಫ್ಲೆಮಿಂಗ್ ಹೆಚ್. ರೆವೆಲ್ ಪ್ರಕಟಿಸಿದ ಸಿಡ್ನಿ ಕೊಲೆಟ್ ಬರೆದ ***ಆಲ್ ಅಬೌಟ್ ಬೈಬಲ್*** ಪುಸ್ತಕವನ್ನು ಓದಬೇಕೆಂದು ನಾವು ಸೂಚಿಸುತ್ತೇವೆ.

## ಸತ್ಯವೇದ ಹೊರತಾದ ಪ್ರಕಟನೆಗಳು

**ಐತಿಹಾಸಿಕ**

*1 & 2 ಎಸ್ ದ್ರಸ್*
*1 & 2 ಮಕ್ಕಬೀಯರು*
*ದಾನಿಯೇಲ ಹೆಚ್ಚುವರಿ ಭಾಗ*
*ಎಸ್ತೇರಳು ಹೆಚ್ಚುವರಿ ಭಾಗ*
*ಯೆರೆಮಿಯನ ಪತ್ರಿಕೆ*
*ಮನಸ್ಸೆಯ ಪ್ರಾರ್ಥನೆ*

**ಪೌರಾಣಿಕ**

*ಬಾರುಕ್*
*ತೋಬಿತ್*
*ಜೂಡಿತ್*

**ಅಂತ್ಯಕಾಲ**

*ನಾಲ್ಕನೇ ಎಸ್-ದ್ರಸ್*

**ನೀತಿಬೋಧಕ**

*ಸೊಲೊಮೊನನ ಜ್ಞಾನ*
*ಸಿರಾಕ್(ಪ್ರಸಂಗಿ)*

ಕನಸುಗಳು, ದರ್ಶನಗಳು, ಪ್ರವಾದನೆಗಳು ಮತ್ತು ದೇವದೂತರ ಕಾಣಿಸುವಿಕೆಗಳು ಇಂದು ಮಾನ್ಯತೆಯುಳ್ಳದ್ದಾಗಿವೆ. ಆದಾಗ್ಯೂ, ಅವುಗಳಲ್ಲಿ ಯಾವುದಕ್ಕೂ ದೇವರ ವಾಕ್ಯಕ್ಕೆ ಕೊಟ್ಟಿರುವ ಅಧಿಕಾರವನ್ನು ಕೊಡಲಾಗುವುದಿಲ್ಲ. ಸತ್ಯವೇದವು ಬೋಧಿಸುವಂತದಕ್ಕೆ ನಾವು ಯಾವುದನ್ನೂ ಸೇರಿಸಬಾರದು ಅಥವಾ ಬದಲಾಯಿಸಬಾರದು ಎಂದು ನಮಗೆ ಪರಿಶುದ್ಧಗ್ರಂಥದಲ್ಲಿ ಎಚ್ಚರಿಸಲಾಗಿದೆ. ಪ್ರವಾದನೆಯ, ದರ್ಶನಗಳ ಅಥವಾ ಇನ್ನಾವುದೇ ಮೂಲಕ ದೇವರ ವಾಕ್ಯಕ್ಕೆ ಯಾರಾದರೂ "ವಿವರಗಳನ್ನು" ಸೇರಿಸುವದರಲ್ಲಿ ದೊಡ್ಡ ಅಪಾಯವಿದೆ.

**ಪ್ರಕಟನೆ 22:18,19 ಈ ಪುಸ್ತಕದ ಪ್ರವಾದನಾ ವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನೆಂದರೆ, ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ಕೂಡಿಸಿದರೆ, ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ಕೊಡುವನು. ಯಾವನಾದರೂ ಈ ಪ್ರವಾದನಾ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದುಬಿಡುವನು.**

ಬಹುತೇಕ ವಂಚನೆಗಳು, ಸುಳ್ಳು ಬೋಧನೆಗಳು, ಸುಳ್ಳು ಪಂಥ ಮತ್ತು ಸುಳ್ಳು ಧರ್ಮಗಳು ಸತ್ಯದ ಹೆಚ್ಚು ಅಂಶಗಳನ್ನು ಒಳಗೊಂಡಿರುತ್ತವೆ. ಸತ್ಯದ ಈ ಅಂಶಗಳನ್ನು ನಂತರ ಸೈತಾನನ ವಂಚನೆಯ ಜೊತೆಗೆ ಬೆರೆಸಲಾಗುತ್ತದೆ. ಆತ್ಮಗಳನ್ನು ವಿವೇಚಿಸುವ ವರದ ಮೂಲಕ, ನಾವು ಸತ್ಯ ಯಾವುದು ಹಾಗೂ ಸುಳ್ಳು ಯಾವುದು ಎಂಬುದನ್ನು ಕಂಡುಹಿಡಿಯಬಹುದು.

## ಮೂಲ ಭಾಷೆಗಳು

ಸತ್ಯವೇದವು ಮೂಲತಃವಾಗಿ ಮೂರು ಭಾಷೆಗಳಲ್ಲಿ ಬರೆಯಲ್ಪಟ್ಟಿತು. ಹಳೆಯ ಒಡಂಬಡಿಕೆಯು ಮುಖ್ಯವಾಗಿ ಹಿಬ್ರೂ ಭಾಷೆಯಲ್ಲಿ ಬರೆಯಲ್ಪಟ್ಟಿತು. ದಾನಿಯೇಲನ ಹಾಗೂ ನೆಹೆಮೀಯನ ಗ್ರಂಥಗಳ

ಕೆಲವು ಭಾಗಗಳು ಅರಾಮಿಕ್ ಭಾಷೆಯಲ್ಲಿ ಬರೆಯಲ್ಪಟ್ಟವು. ಹೊಸ ಒಡಂಬಡಿಕೆಯು ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತು.

**ಭಾಷಾಂತರಗಳು**

ವರ್ಷಗಳು ಕಳೆದಂತೆ ಸತ್ಯವೇದವನ್ನು ಅನೇಕ ಭಾಷೆಗಳಿಗೆ ಭಾಷಾಂತರಿಸಲಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಸತ್ಯವೇದದ ಅನೇಕ ವಿಭಿನ್ನ ಭಾಷಾಂತರಗಳಿವೆ. ಒಂದು ಮೂಲಭೂತ ಭಾಷಾಂತರದಲ್ಲಿ, ವಿದ್ವಾಂಸರು ಮೂಲ ಭಾಷೆಗಳಿಗೆ ಹಿಂದಿರುಗಿ ಪ್ರಾಚೀನ ಪತ್ರಗಳ ಪ್ರತಿಯೊಂದು ಪದದ ಅರ್ಥವನ್ನು ವ್ಯಕ್ತಪಡಿಸಿದ್ದಾರೆ. ಮೂಲ ಹೀಬ್ರೂ ಮತ್ತು ಗ್ರೀಕ್ ಭಾಷೆಗಳ ಪ್ರತಿಯೊಂದು ಪದಕ್ಕೂ ನಿಖರವಾದ ಮತ್ತು ವಿಭಿನ್ನವಾದ ಅರ್ಥಗಳಿರುವುದರಿಂದ, ಆ ಮೂಲ ಪದದ ಅರ್ಥವನ್ನು ನಮ್ಮ ಇಂಗ್ಲಿಷ್ ಭಾಷೆಯಲ್ಲಿ ಅತ್ಯುತ್ತಮವಾಗಿ ವ್ಯಕ್ತಪಡಿಸಬಲ್ಲ ಸೂಕ್ತ ಪದವನ್ನು ಎಚ್ಚರಿಕೆಯಿಂದ ಆರಿಸುವುದು ಭಾಷಾಂತರಕಾರನ ಕೆಲಸವಾಗಿದೆ. ಆದಾಗ್ಯೂ, ಇಂಗ್ಲಿಷ್ ಭಾಷೆಯು ಆ ಮೂಲ ಭಾಷಗಳಂತೆ ನಿಖರವಾದ ಭಾಷೆಯಾಗಿಲ್ಲದ ಕಾರಣ, ಮೂಲ ಪದದ ಕೆಲವು ಸುಂದರವಾದ ಅರ್ಥಗಳು ತಪ್ಪಿಹೋಗಿವೆ.

.

**ಭಾವಾರ್ಥ**

ಕೆಲವೊಮ್ಮೆ, ವಿದ್ವಾಂಸರು ಸತ್ಯವೇದದ ಪ್ರತಿಯೊಂದು ಪದವನ್ನು ಭಾಷಾಂತರಿಸಲು ಪ್ರಯತ್ನಿಸಲಿಲ್ಲ; ಬದಲಾಗಿ, ಅವರು ಅದರ ಭಾವಾರ್ಥವನ್ನು ಬರೆದರು. ಈ ಆವೃತ್ತಿಗಳನ್ನು ಅರ್ಥಮಾಡಿಕೊಳ್ಳುವುದು ಸುಲಭ ಏಕೆಂದರೆ ಅವುಗಳನ್ನು ನಮ್ಮ ಭಾಷೆಯಲ್ಲಿ ಸರಾಗವಾಗಿ ಓದಬಹುದು ಮತ್ತು ಅವುಗಳು ಭಕ್ತಿವೃದ್ಧಿಗಾಗಿ ಓದಲು ಉತ್ತಮವಾಗಿವೆ.

ಸತ್ಯವೇದದ ಅಧ್ಯಯನಕ್ಕಾಗಿ, ಹೆಚ್ಚು ನಿಖರವಾಗಿರುವ ಮೂಲ ಅನುವಾದವನ್ನು ಬಳಸುವುದು ಉತ್ತಮ. ನಾವು ಈ ಅಧ್ಯಯನಕ್ಕಾಗಿ, ನ್ಯೂ ಕಿಂಗ್ ಜೇಮ್ಸ್ ವರ್ಷನ್ ಬಳಸುತ್ತಿದ್ದೇವೆ.

**ಒಡಂಬಡಿಕೆಗಳ ಪುಸ್ತಕ**

ಹಳೆಯ ಒಡಂಬಡಿಕೆಯ ಕೆಲವು ಪ್ರಧಾನ ವಿಷಯಗಳ ಅಧ್ಯಯನವನ್ನು ನಾವು ಪ್ರವೇಶಿಸುವ ಮೊದಲು, ಇಡೀ ಸತ್ಯವೇದದ ಬಗ್ಗೆ ಕೆಲವು ಮೂಲಭೂತ ಸತ್ಯಗಳನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. “ಬೈಬಲ್” ಎಂಬ ಪದದ ಅರ್ಥ “ಪುಸ್ತಕಗಳು”.

ಸತ್ಯವೇದವನ್ನು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಲಾಗಿದೆ, ಮತ್ತು ಇವುಗಳನ್ನು ಹಳೆಯ ಮತ್ತು ಹೊಸ ಒಡಂಬಡಿಕೆಗಳು ಎಂದು ಕರೆಯಲಾಗುತ್ತದೆ.

**ವ್ಯಾಖ್ಯಾನ**

ಒಡಂಬಡಿಕೆಯು ಎರಡು ಅಥವಾ ಹೆಚ್ಚಿನ ವ್ಯಕ್ತಿಗಳ ನಡುವಿನ ಗಂಭೀರವಾದ ಒಪ್ಪಂದವಾಗಿದೆ. ದೇವರು ತನ್ನ ಜನರೊಂದಿಗೆ ಮಾಡಿದ ಒಪ್ಪಂದಗಳನ್ನು ಸತ್ಯವೇದವು ಒಳಗೊಂಡಿದೆ.

ಹಳೆಯ ಒಡಂಬಡಿಕೆಯು ಕ್ರಿಸ್ತನ ಬರುವಿಕೆಯ ಮೊದಲು ದೇವರು ಮಾನವಕುಲದೊಂದಿಗೆ ಮಾಡಿದ ಹಳೆಯ ಒಡಂಬಡಿಕೆಗಳನ್ನು ಒಳಗೊಂಡಿದೆ. ಅದು ಕ್ರಿಸ್ತನ ಪೂರ್ಣಗೊಂಡ ಕೆಲಸವನ್ನು ಎದುರು ನೋಡುತ್ತದೆ. ಹೊಸ ಒಡಂಬಡಿಕೆಯು ನೂತನ ಒಡಂಬಡಿಕೆಯನ್ನು ಒಳಗೊಂಡಿದೆ, ಅದು ಈ ಭೂಮಿಯ ಮೇಲೆ ಪೂರ್ಣಗೊಂಡ ಕ್ರಿಸ್ತನ ಕೆಲಸವನ್ನು ಆಧರಿಸಿದೆ.

**ಹಳೆಯ ಒಡಂಬಡಿಕೆ**

✳ *ಪ್ರವಾದಿಗಳು*

ಹಳೆಯ ಒಡಂಬಡಿಕೆಯ ಹದಿನಾರು ಪುಸ್ತಕಗಳನ್ನು ಪ್ರವಾದಿಗಳು ಬರೆದಿರುವುದರಿಂದ ಪ್ರವಾದಿಯ ಕಾರ್ಯವನ್ನು ಅರ್ಥಮಾಡಿಕೊಳ್ಳುವುದು ಪ್ರಾಮುಖ್ಯವಾದದ್ದು.

- ✳ ಅವರು ಜನರಿಗೆ ದೇವರ ವಾಕ್ಯವನ್ನು ಹೇಳಿದರು.
- ✳ ಅವರು ಇಸ್ರಾಯೇಲ್ ಮತ್ತು ಯೆಹೂದದ ರಾಜರುಗಳಿಗೆ ಮತ್ತು ಜನರಿಗೆ ದೇವರ ವಕ್ತಾರರಾಗಿದ್ದರು.
- ✳ ಅವರು ಪಾಪ ಮಾಡದಂತೆ ಎಚ್ಚರಿಸಿದರು ಮತ್ತು ನ್ಯಾಯತೀರ್ಪನ್ನು ಪ್ರವಾದಿಸಿದರು.
- ✳ ಅವರನ್ನು ಆಮೋಸನ ಗ್ರಂಥದಲ್ಲಿ ತಿಳಿಸಲಾಗಿರುವ ಲಂಬಕ ಸೂತ್ರಕ್ಕೆ ಹೋಲಿಸಬಹುದು. ಕಟ್ಟಡದ ಮೂಲೆ ಗೋಡೆಗಳ ಲಂಬವನ್ನು ಅಳೆಯುವುದಕ್ಕಾಗಿ ಅದನ್ನು ಉಪಯೋಗಿಸಲಾಗುತ್ತದೆ.

ಪ್ರವಾದಿಗಳು ಪುರೋಹಿತರುಗಳಿಗಿಂತ ವಿಭಿನ್ನವಾಗಿದ್ದರು ಯಾಕೆಂದರೆ ಅವರು ದೇವರ ಪರವಾಗಿ ಮಾನವರೊಂದಿಗೆ ಮಾತನಾಡಿದರು. ಆದರೆ ಪುರೋಹಿತರುಗಳು ಮಾನವರ ಪರವಾಗಿ ದೇವರೊಂದಿಗೆ ಮಾತನಾಡಿದರು.

✳ *ಮೂವತ್ತೊಂಬತ್ತು ಪುಸ್ತಕಗಳು*

ಹಳೆಯ ಒಡಂಬಡಿಕೆಯಲ್ಲಿ ಮೂವತ್ತೊಂಬತ್ತು ಪುಸ್ತಕಗಳಿವೆ.

ಹಳೆಯ ಒಡಂಬಡಿಕೆಯ ಪುಸ್ತಕಗಳು ಕಾಲಾನುಕ್ರಮವಾಗಿ ಜೋಡಿಸಲ್ಪಟ್ಟಿಲ್ಲ. ಬದಲಾಗಿ ಅವುಗಳು ಅನುಸಾರವಾಗಿ ಜೋಡಿಸಲ್ಪಟ್ಟಿವೆ. ಉದಾಹರಣೆಗೆ, ಬಹುತೇಕ ವಿದ್ವಾಂಸರು ಯೋಬನ ಪುಸ್ತಕವು ಅತ್ಯಂತ ಹಳೆಯ ಗ್ರಂಥವಾಗಿದೆ ಎಂದು ಒಪ್ಪಿದಾಗ್ಯೂ ಅದನ್ನು ಪದ್ಯದ ಪುಸ್ತಕಗಳೊಂದಿಗೆ ಜೋಡಿಸಲಾಗಿದೆ.

* *ಪ್ರಾಮುಖ್ಯತೆ*

ಹಳೆಯ ಒಡಂಬಡಿಕೆಯನ್ನು ಅಧ್ಯಯನ ಮಾಡುವುದು ಅಷ್ಟೊಂದು ಪ್ರಾಮುಖ್ಯವಲ್ಲ ಎನ್ನುವ ಜನರಿದ್ದಾರೆ. ಆದರೆ ನಾವು ಅದನ್ನು ಅಲಕ್ಷ್ಯ ಮಾಡಿದರೆ, ದೇವರು ನಮಗೆ ಹೇಳಿದ ವಿಷಯಗಳಲ್ಲಿ ಮೂರರಲ್ಲಿ ಒಂದು ಭಾಗವನ್ನು ಅಲಕ್ಷ್ಯ ಮಾಡುತ್ತಿದ್ದೇವೆ! ಹಳೆಯ ಒಡಂಬಡಿಕೆಯು “ಕೇವಲ ಯೆಹೂದ್ಯ ಕುಲದವರ ಇತಿಹಾಸ ಮಾತ್ರವಲ್ಲ”, ಅದು ನಮ್ಮ ಜೀವಿತಗಳಿಗೆ ಮತ್ತು ನಮ್ಮ ಸೇವೆಗಳಿಗೆ ಒಂದು ಮಾದರಿಯಾಗಿದೆ.

ಇದು ನಮ್ಮ ಜೀವನಕ್ಕಾಗಿ ದೇವರ ಸೃಜನಶೀಲ ಉದ್ದೇಶವನ್ನು ಅರ್ಥಮಾಡಿಕೊಳ್ಳಲು ಅಡಿಪಾಯವನ್ನು ಒದಗಿಸುತ್ತದೆ. ಇದು ವಿಮೋಚನೆಯ ದೇವರ ಮಹಾ ಪ್ರೀತಿಯಳ್ಳ ಯೋಜನೆಯನ್ನು ಅರ್ಥಮಾಡಿಕೊಳ್ಳಲು ಅಡಿಪಾಯವನ್ನು ಒದಗಿಸುತ್ತದೆ. ದೇವರು ತನ್ನ ಸ್ವರೂಪದಲ್ಲಿ ನಮ್ಮನ್ನು ಸೃಷ್ಟಿಸಿದಾಗ ಆತನ ಹೃದಯದಲ್ಲಿ ಏನಿತ್ತೋ ಅದನ್ನು ನಾವು ಹೊಂದಿಕೊಳ್ಳಲು, ಅದರಂತೆ ಜೀವಿಸಲು ಮತ್ತು ಕ್ರಿಯೆ ಮಾಡಲು ನಮ್ಮನ್ನು ಪುನಃಸ್ಥಾಪಿಸುವಂತಹ ದೇವರ ಯೋಜನೆ ಮತ್ತು ಉದ್ದೇಶವನ್ನು ಅದು ಬಹಿರಂಗಪಡಿಸುತ್ತದೆ.

ಈ ಅಧ್ಯಯನದಲ್ಲಿ, ನಾವು ಹಳೆಯ ಒಡಂಬಡಿಕೆಯಲ್ಲಿ ಪ್ರಕಟವಾಗಿರುವ ಕೆಲವು ಪ್ರಮುಖ ಸತ್ಯಗಳ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಲಿದ್ದೇವೆ. ದೇವರು ತನ್ನ ಜನರಿಗೆ ಮಾಡಿದ ಎಲ್ಲಾ ಅದ್ಭುತವಾದ ಕ್ರಿಯೆಗಳನ್ನು, ಅವರು ಬೋಧಿಸಿದ ಎಲ್ಲಾ ಅದ್ಭುತವಾದ ವಿಷಯಗಳನ್ನು ಅಥವಾ ಸತ್ಯವೇದದ ಪುಟಗಳಲ್ಲಿ ಆತನು ನಮಗೆ ವಾಗ್ದಾನ ಮಾಡಿದ ಎಲ್ಲಾ ಅದ್ಭುತವಾದ ವಿಷಯಗಳನ್ನು ಈ ಒಂದೇ ಒಂದು ಕೈಪಿಡಿಯಲ್ಲಿ ಅಧ್ಯಯನ ಮಾಡುವುದು ಅಸಾಧ್ಯವಾದದ್ದು.

ಈ ಅಧ್ಯಯನವು ಒಂದು ಆರಂಭ ಮಾತ್ರ. ಇದು ಹಳೆಯ ಒಡಂಬಡಿಕೆಯ ಪರಿಚಯವಾಗಿದೆ, ಇದು ಒಂದು ಸಂಕ್ಷಿಪ್ತವಾದ ರೂಪುರೇಖೆಯಾಗಿದೆ. ನೀವು ಜೀವನಪರ್ಯಂತ ಕಲಿಯುವ ದೇವರ ಪ್ರಕಟನೆಗಳನ್ನು ಇದರೊಂದಿಗೆ ಸೇರಿಸಿಕೊಳ್ಳುತ್ತಾ ಹೋಗುವಿರಿ.

ದೇವರು ಆದಾಮ ಮತ್ತು ಹವ್ವರಿಗೆ ಹೇಳಿದ್ದು ಇನ್ನೂ ಜಾರಿಯಲ್ಲಿದೆ. ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದು ಇನ್ನೂ ಜಾರಿಯಲ್ಲಿದೆ. ಹಳೆಯ ಒಡಂಬಡಿಕೆಯ ಕಾಲದ ಜನರು ಮೆಸ್ಸೀಯನು ತಮಗಾಗಿ ಏನನ್ನು ಸ್ಥಾಪಿಸಲಿದ್ದಾನೆಂದು ಎದುರು ನೋಡುತ್ತಾ, ನಂಬಿಕೆಯಿಂದ ತಮ್ಮ ಅಗತ್ಯತೆಗಳನ್ನು ಹೊಂದಿಕೊಂಡರು. ಇಂದು ವಿಶ್ವಾಸಿಗಳಾದ ನಾವು ಕ್ರಿಸ್ತನು ನಮಗಾಗಿ ಮಾಡಿರುವ ಸಂಗತಿಯನ್ನು ನಂಬಿಕೆಯಿಂದ ಹಿಂತಿರುಗಿ ನೋಡುತ್ತೇವೆ.

**ವಿಮರ್ಶೆಗಾಗಿ ಪ್ರಶ್ನೆಗಳು**

1. “ಪರಿಶುದ್ಧಗ್ರಂಥವೆಲ್ಲವೂ ದೇವಪ್ರೇರಿತವಾದದ್ದು” - 2 ತಿಮೊಥಿ 3:16 ರಲ್ಲಿ ತಿಳಿಸಲಾಗಿರುವ ಈ ವಾಕ್ಯದ ಅರ್ಥವೇನು? ಸತ್ಯವೇದದ ಪ್ರೇರಣೆಯ ಪ್ರಕ್ರಿಯೆಯನ್ನು ವರ್ಣಿಸಿರಿ.

2. “ಪರಿಶುದ್ಧಗ್ರಂಥವೆಲ್ಲವೂ ದೋಷರಹಿತವಾದದ್ದು” ಮತ್ತು “ಪರಿಶುದ್ಧಗ್ರಂಥದ ಪರಿಪೂರ್ಣ ಅಧಿಕಾರ” ಎಂಬ ಪದಗಳ ಅರ್ಥವೇನು? ಈ ಸತ್ಯಗಳಿಗೆ ಆಧಾರವನ್ನು ಒದಗಿಸುವ ವಚನಗಳನ್ನು ನೀಡಿರಿ.

3. “ಪರಿಶುದ್ಧ ಗ್ರಂಥದ ಅಂಗೀಕೃತ ಪುಸ್ತಕಗಳು” ಎಂಬ ಪದದ ಅರ್ಥವೇನು? ಯಾಕೆ ಪರಿಶುದ್ಧಗ್ರಂಥವನ್ನು ಅರವತ್ತಾರು ಪುಸ್ತಕಗಳಿಗೆ ಸೀಮಿತಗೊಳಿಸಲಾಗಿದೆ ಎಂಬುದನ್ನು ವಿವರಿಸಿರಿ.

**ಪಾಠ ಎರಡು**

# *ಹಳೆ ಒಡಂಬಡಿಕೆ ಕಾಲದ ಮುಖ್ಯ ಘಟನೆಗಳು*

ಈ ಪಾಠದಲ್ಲಿ, ನಾವು 3,600 ವರ್ಷಗಳ ಇತಿಹಾಸವನ್ನು ನೋಡಲಿದ್ದೇವೆ. ಕೆಲವು ಅತ್ಯಂತ ಆಳವಾದ ಘಟನೆಗಳನ್ನು ಅನಿವಾರ್ಯವಾಗಿ ಒಂದು ಅಥವಾ ಎರಡು ಪ್ಯಾರಾಗಳಲ್ಲಿ ಮುಗಿಸಬೇಕಾಗಿದೆ. ಇದು ಒಂದು ರೂಪುರೇಖೆಯನ್ನು ನಮಗೆ ಕೊಡೂತ್ತದೆ. ಇದರಲ್ಲಿ ಎಲ್ಲಾ ಇತರ ಪಾಠಗಳು ಹೊಂದಿಕೊಳ್ಳುತ್ತವೆ.

ಒಂದು ವಿಶಾಲವಾದ ಮಾಹಿತಿಯನ್ನು ನಿಭಾಯಿಸುವಾಗ, ನಾವು ಅದನ್ನು "ಜೀರ್ಣವಾಗುವ" ವಿಭಾಗಗಳಾಗಿ ವಿಂಗಡಿಸಿದರೆ ಅದನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ. ಹಳೆಯ ಒಡಂಬಡಿಕೆಯು ಸುಮಾರು 3,600 ವರ್ಷಗಳನ್ನು ಒಳಗೊಂಡಿದೆ, ಮತ್ತು ಇದನ್ನು ಒಂಬತ್ತು ಕಾಲಗಳಾಗಿ ವಿಂಗಡಿಸಬಹುದು.

- ಸೃಷ್ಟಿಯಿಂದ ಪ್ರವಾಹದವರೆಗೆ - ಕ್ರಿ.ಪೂ. 4,000 ರಿಂದ 2,350
- ಮೂಲಪಿತೃಗಳ ಯುಗ - ಕ್ರಿ.ಪೂ. 1,840 ರಿಂದ 1,440
- ಈಜಿಪ್ಟಿನಿಂದ ಕಾನಾನ್ ವರೆಗೆ - ಕ್ರಿ.ಪೂ. 1,440 ರಿಂದ 1,400
- ನ್ಯಾಯಸ್ಥಾಪಕರ ಕಾಲ - ಕ್ರಿ.ಪೂ. 1,400 ರಿಂದ 1,051
- ಇಸ್ರಾಯೇಲ್ ರಾಜ್ಯದ ಸ್ಥಾಪನೆ - ಕ್ರಿ.ಪೂ. 1,051 ರಿಂದ 931
- ರಾಜ್ಯದ ವಿಭಜನೆ - ಸೆರೆವಾಸ - ಕ್ರಿ.ಪೂ. 931 ರಿಂದ 586
- ಬಾಬಿಲೋನ್ ಸೆರೆವಾಸ - ಕ್ರಿ.ಪೂ. 605 ರಿಂದ 535
- ಪುನಃಸ್ಥಾಪನೆ - ಕ್ರಿ.ಪೂ. 535 ರಿಂದ 400

## ಸೃಷ್ಟಿಯಿಂದ ಪ್ರವಾಹದವರೆಗೆ

*ಕ್ರಿ.ಪೂ. 4,000 ರಿಂದ 2,350*

### ಸೃಷ್ಟಿ

ಆದಿಕಾಂಡವು ಆರಂಭಗಳ ಪುಸ್ತಕವಾಗಿದೆ. ಈ ಕೆಳಗಿನ ಸಂಗತಿಗಳ ಆರಂಭಗಳನ್ನು ನಮಗೆ ತಿಳಿಸಲಾಗಿದೆ:

- ಜಗತ್ತು
- ಮಾನವಕುಲ
- ಮಾನವನೊಂದಿಗೆ ದೇವರ ಸಂಬಂಧ
- ಪಾಪ
- ಬರಲಿರುವ ವಿಮೋಚಕನ ವಾಗ್ದಾನಗಳು
- ಮರಣ
- ವಿವಿಧ ಭಾಷೆಗಳು
- ಯೆಹೂದ್ಯ ರಾಷ್ಟ್ರ

* ದೇವರು ತನ್ನನ್ನು ಪ್ರಕಟಪಡಿಸಿಕೊಂಡಿದ್ದು

**ಪಾಪವು ಮಾನವ ಕುಲವನ್ನು ಪ್ರವೇಶಿಸಿತು**

ದೇವರು ಭೂಮಿಯನ್ನೂ ಮತ್ತು ಅದರಲ್ಲಿರುವ ಸಮಸ್ತವನ್ನೂ ಸೃಷ್ಟಿಸಿದರು. ನಂತರ ಅವರು ಆದಾಮನನ್ನು ಮತ್ತು ಹವ್ವರನ್ನು ಸೃಷ್ಟಿಸಿದರು. ಅವರು ದೇವರ ಸೃಷ್ಟಿಯ ..

ಅವರು :

* ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟರು
* ಎಲ್ಲಾ ಸೃಷ್ಟಿಗಳ ಮೇಲೆ ದೊರೆತನ ಮಾಡಲು ಸೃಷ್ಟಿಸಲ್ಪಟ್ಟರು
* ಒಂದು ಮಹಿಮೆಯುಳ್ಳ ನಿಯತಿಯನ್ನು ಹೊಂದಲು ಸೃಷ್ಟಿಸಲ್ಪಟ್ಟರು
* ದೇವರೊಂದಿಗೆ ಒಂದು ಸಂಬಂಧವನ್ನು ಹೊಂದಲು ಸೃಷ್ಟಿಸಲ್ಪಟ್ಟರು
* ದೇವರೊಂದಿಗೆ ಅನ್ಯೋನತೆಯನ್ನು ಹೊಂದಲು ಸೃಷ್ಟಿಸಲ್ಪಟ್ಟರು

ದೇವರು ಅವರನ್ನು ಏದೆನ್ ತೋಟದಲ್ಲಿರಿಸಿ ತೋಟದಲ್ಲಿರುವ ಒಂದು ಮರದ ಹಣ್ಣನ್ನು ಹೊರತುಪಡಿಸಿ ಯಾವ ಮರದ ಹಣ್ಣನ್ನಾದರೂ ತಿನ್ನಿರಿ ಎಂದು ಹೇಳಿದರು. ಮಾನವನು ಒಂದು ವಿಧೇಯತೆಯ ಸಂಬಂಧದಲ್ಲಿ ತನ್ನೊಂದಿಗಿರಬೇಕೆಂದು ಸ್ಥಾಪಿಸಿದರು.

ನಂತರ ನಡೆದ ಘಟನೆಯು ನಮ್ಮೆಲ್ಲರಿಗೂ ಗೊತ್ತಿದೆ. ಹವ್ವಳು ಮತ್ತು ನಂತರ ಆದಾಮನು ದೇವರು ಹೇಳಿದ್ದಕ್ಕೆ ವಿರುದ್ಧವಾಗಿ ದಂಗೆ ಎದ್ದರು. ಅವರು ತಿನ್ನಬಾರದು ಎಂದು ಹೇಳಿದ್ದ ಮರದ ಹಣ್ಣನ್ನು ತಿಂದರು ಮತ್ತು ಅವರ ದಂಗೆಯು:

* ದೇವರಿಂದ ಬೇರ್ಪಡುವಿಕೆಯನ್ನು ತಂದಿತು
* ದೇವರ ಪ್ರಸನ್ನತೆಯ ಭಯವನ್ನು ತಂದಿತು
* ಇತರರನ್ನು ದೂರುವುದನ್ನು ತಂದಿತು
* ಸೃಷ್ಟಿಯ ಮೇಲೆ ದೊರೆತನವನ್ನು ಕಳೆದುಕೊಂಡಿತು
* ದೇವರ ಸ್ವರೂಪ ಮತ್ತು ಮಹಿಮೆಯನ್ನು ಕಳೆದುಕೊಂಡಿತು
* ಕಠಿಣ ಪರಿಶ್ರಮವನ್ನು ತಂದಿತು
* ಮರಣವನ್ನು ತಂದಿತು

**ಮೊದಲ ಯಜ್ಞಬಲಿ**

ದೇವರು ಆದಾಮ ಮತ್ತು ಹವ್ವರಿಗೆ ಹೊದಿಸುವುದಕ್ಕಾಗಿ ಚರ್ಮದ ಅಂಗಿಯನ್ನು ಮಾಡಿದರು ಮತ್ತು ಇದು ಪ್ರಾಣಿಗಳಲ್ಲಿ ಮೊದಲ ಮರಣವಾಗಿತ್ತು - ಮಾನವಕುಲದ ಪರವಾಗಿ ಮಾಡಲಾದ ಮೊಟ್ಟಮೊದಲ ಯಜ್ಞಬಲಿ.

**ವಿಮೋಚಕನ ಬಗ್ಗೆ ಮಾಡಲಾದ ಮೊದಲ ವಾಗ್ದಾನ**

ದೇವರು ಮಾನವರ ಪಾಪದ ನಿಮಿತ್ತ ಬಂದ ಶಾಪಗಳನ್ನು ಹೇಳುತ್ತಿರುವಾಗ ಅವರನ್ನು ನಿರೀಕ್ಷೆಯಿಲ್ಲದವರಾಗಿ ಬಿಡಲಿಲ್ಲ. ದೇವರು

ಸ್ತ್ರೀಯ ಸಂತಾನದ ಬಗ್ಗೆ ಅವರಿಗೆ ಒಂದು ಅದ್ಭುತವಾದ ವಾಗ್ದಾನವನ್ನು ಮಾಡಿದರು.

**ಆದಿಕಾಂಡ 3:15 ನಿನಗೂ, ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು. ನೀನು ಅವನ ಹಿಮ್ಮಡಿಯನ್ನು ಕಚ್ಚುವಿ.**

**ಮೊದಲ ಕೊಲೆ**

ಆದಿಕಾಂಡ 4ರಲ್ಲಿ, ನಾವು ಕಾಯಿನ ಮತ್ತು ಹೇಬೆಲರ ಜನನದ ಬಗ್ಗೆ ಓದುತ್ತೇವೆ, ಅವರು ಅರ್ಪಿಸಿದ ಕಾಣಿಕೆಗಳ ಮತ್ತು ಮೊದಲ ನರಹತ್ಯೆಯ ಬಗ್ಗೆ ಅಲ್ಲಿ ಕಾಣುತ್ತೇವೆ. ಕಾಯಿನನು ಹೇಬೇಲನನ್ನು ಹೊಡೆದು ಕೊಲೆ ಮಾಡಿದನು.

ಆದಾಮ ಮತ್ತು ಹವ್ವರ ಕಾಲದಿಂದ ಸನ್ನಿವೇಶವು ಇನ್ನೂ ಹದೆಗೆಡುತ್ತಾ ಮಾನವಕುಲದ ಆಲೋಚನೆಗಳೆಲ್ಲವೂ ಕೆಟ್ಟದ್ದಾಯಿತು.

**ಆದಿಕಾಂಡ 6:5 ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನೂ, ಅವರು ತಮ್ಮ ಹೃದಯದಲ್ಲಿ ಯೋಚಿಸುವುದೆಲ್ಲವು ಯಾವಾಗಲೂ ಕೆಟ್ಟ ಆಲೋಚನೆಗಳನ್ನೇ ಮಾಡುತ್ತಿರುವುದನ್ನು ಯೆಹೋವನು ನೋಡಿದನು.**

**ಜಲಪ್ರಳಯ**

ಪ್ರತಿಯೊಂದು ಯುಗದಲ್ಲೂ ದೇವರು ವಿಶ್ವಾಸಿಗಳ ಒಂದು ಜನಶೇಷವನ್ನು ಹೊಂದಿದ್ದಾರೆ. ಜಲಪ್ರಳಯಕ್ಕೂ ಮುಂಚಿನ ಭಯಂಕರವಾದ ದುಷ್ಟಕಾಲದಲ್ಲೂ ಸಹ, *ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ಇರುವಾಗ ದೇವರು ಅವನನ್ನು ಕರೆದುಕೊಂಡದ್ದರಿಂದ ಅವನು ಕಾಣದೆ ಹೋದನು.*

ನೋಹನು ಒಬ್ಬ ನೀತಿವಂತ ಮನುಷ್ಯನಾಗಿದ್ದನು. ಮಾನವಕುಲದ, ಪ್ರಾಣಿ ಮತ್ತು ಪಕ್ಷಿ ಜಾತಿಯ ಸಂರಕ್ಷಣೆಗಾಗಿ ದೇವರು ಅವನಿಗೆ ಒಂದು ನಾವೆಯನ್ನು ಕಟ್ಟಲು ಹೇಳಿದರು.

ಭೂಮಿಯ ಮೇಲಿದ್ದ ಎಲ್ಲವನ್ನೂ ದೇವರು ನ್ಯಾಯತೀರಿಸಿ ನಾಶಪಡಿಸಿದಾಗ್ಯೂ ಸ್ತ್ರೀ ಪುರುಷರು ಆತನಿಗೆ ವಿಧೇಯರಾಗಲಿಲ್ಲ.

**ಬಾಬೆಲ್ ಗೋಪುರ**

ದೇವರು ಜನರಿಗೆ ಬಹುಸಂತಾನವುಳ್ಳವರಾಗಿ ಹೆಚ್ಚಿರಿ, ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ ಎಂದು ಹೇಳಿದರು. ಆದರೆ ಅದಕ್ಕೆ ಬದಲಾಗಿ ಅವರು ಶಿನಾರ್ ದೇಶದಲ್ಲಿ ಒಟ್ಟಾಗಿ ಕೂಡಿಕೊಂಡರು. ಅವರು ನಾವು ಇಲ್ಲೇ ವಾಸಮಾಡೋಣ ಮತ್ತು ಭೂಮಿಯ ಮೇಲೆ ಚದುರುವದು ಬೇಡ ಎಂದು ನಿರ್ಧರಿಸಿಕೊಂಡರು - ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಪಡಿಸಿಕೊಳ್ಳಲು ನಿರ್ಧರಿಸಲಿಲ್ಲ.

**ಆದಿಕಾಂಡ 11:4 ಅವರು, "ಬನ್ನಿರಿ, ಒಂದು ಪಟ್ಟಣವನ್ನು ಕಟ್ಟೋಣ, ಆಕಾಶವನ್ನು ಮುಟ್ಟುವ ಒಂದು ಗೋಪುರವನ್ನೂ ಕಟ್ಟಿ ದೊಡ್ಡ ಹೆಸರನ್ನು ಸಂಪಾದಿಸಿಕೊಳ್ಳೋಣ; ಹೀಗೆ ಮಾಡಿದರೆ ಭೂಮಿಯ ಮೇಲೆಲ್ಲಾ ಚದರಿಹೋಗುವುದಕ್ಕೆ ಆಸ್ಪದವಾಗುವುದಿಲ್ಲ" ಎಂದು ತಮ್ಮತಮ್ಮೊಳಗೆ ಮಾತನಾಡಿಕೊಂಡರು.**

ಅವರು ದೇವರ ವಿರುದ್ಧ ದಂಗೆ ಎದ್ದರು.

**ಆದಿಕಾಂಡ 11:6-8 ಯೆಹೋವನು, "ಇವರು ಒಂದೇ ಜನಾಂಗ; ಇವರೆಲ್ಲರಿಗೂ ಒಂದೇ ಭಾಷೆ. ಪ್ರಾರಂಭದಲ್ಲೇ ಇವರು ಇಷ್ಟು ದೊಡ್ಡ ಯೋಜನೆಯೊಂದಿಗೆ ಒಟ್ಟಾಗಿ ಕೆಲಸ ಮಾಡಲಾರಂಭಿಸಿದ್ದಾರೆ. ಇನ್ನು ಮುಂದೆ ಇವರು ಏನು ಮಾಡಲು ಉದ್ದೇಶಿಸಿದರೂ ಇವರಿಗೆ ಯಾವುದೂ ಅಸಾಧ್ಯವಾಗುವುದಿಲ್ಲ. ಇವರಲ್ಲಿ ಒಬ್ಬರ ಮಾತು ಒಬ್ಬರಿಗೆ ತಿಳಿಯದಂತೆ ಇವರ ಭಾಷೆಯನ್ನು ಗಲಿಬಿಲಿ ಮಾಡೋಣ ಬನ್ನಿ" ಎಂದನು.**

**ಯೆಹೋವನು ಅದೇ ಪ್ರಕಾರ ಅವರನ್ನು ಭೂಲೋಕದಲ್ಲೆಲ್ಲಾ ಚದರಿಸಿ ಬಿಟ್ಟನು. ಅವರು ಆ ಪಟ್ಟಣ ಕಟ್ಟುವುದನ್ನು ನಿಲ್ಲಿಸಿಬಿಟ್ಟರು.**

ಮಾನವರು ಒಂದೇ ಭಾಷೆ ಮತ್ತು ಒಂದೇ ಉದ್ದೇಶವುಳ್ಳವರಾದರೆ ಏನು ಬೇಕಾದರೂ ಮಾಡಬಲ್ಲರು ಎಂದು ದೇವರು ಹೇಳಿದ್ದನ್ನು ಗಮನಿಸಬೇಕು.

## ಮೂಲಪಿತೃಗಳ ಯುಗ

*ಕ್ರಿ.ಪೂ 2,350 ರಿಂದ 1,840*

ಮೋಶೆಯ ಕಾಲಕ್ಕಿಂತ ಮುಂಚೆ ಹಿಬ್ರೂ ಜನಾಂಗವನ್ನು ಮತ್ತು ರಾಷ್ಟ್ರವನ್ನು ಸ್ಥಾಪಿಸಿದವರಿಗೆ ಮೂಲಪಿತೃಗಳೆಂಬ ಶೀರ್ಷಿಕೆಯನ್ನು ಹೊಸ ಒಡಂಬಡಿಕೆಯಲ್ಲಿ ಕೊಡಲಾಗಿದೆ. ಮೂಲಪಿತೃಗಳ ಯುಗದಲ್ಲಿ ಒಂದು ಗೋತ್ರದ ನಾಯಕನು ಅದರ ಎಲ್ಲರಿಗಿಂತ ಹಿರಿಯವನಾದ ಪುರುಷನಾಗಿದ್ದನು. ಅವನು ತನ್ನ ಮನೆತನದ ಪುರೋಹಿತನೂ ಸಹ ಆಗಿದ್ದನು.

### ಯೋಬನು

ಯೋಬನ ಗ್ರಂಥವು ಸತ್ಯವೇದದಲ್ಲಿರುವ ಅತ್ಯಂತ ಹಳೆಯ ಪುಸ್ತಕವಾಗಿದೆ ಮತ್ತು ಒಬ್ಬ ಮೂಲಪಿತೃವಿನ ಮೊದಲ ಉದಾಹರಣೆಯಾಗಿದ್ದಾನೆ. ಒಬ್ಬ ತಂದೆಯ ಪ್ರೀತಿ ಮತ್ತು  ಕುಟುಂಬದ ಯಜಮಾನನ ಪುರೋಹಿತ ಕಾರ್ಯವನ್ನು ನಾವು ಸ್ಪಷ್ಟವಾಗಿ ಈ ವಚನದಲ್ಲಿ ಕಾಣಬಹುದು:

**ಯೋಬ 1:5 ಔತಣದ ಸರದಿ ತೀರಿದ ನಂತರ ಯೋಬನು, "ನನ್ನ ಮಕ್ಕಳು ಒಂದು ವೇಳೆ ಹೃದಯದಲ್ಲಿ ದೇವರನ್ನು ದೂಷಿಸಿ ಪಾಪ ಮಾಡಿರಬಹುದು" ಎಂದು ಅವರನ್ನು ಕರೆಯಿಸಿ ಶುದ್ಧಿಪಡಿಸಿ, ಬೆಳಿಗ್ಗೆ ಎದ್ದು ಅವರ ಸಂಖ್ಯೆಗೆ ತಕ್ಕಂತೆ ಹೋಮಗಳನ್ನು ಅರ್ಪಿಸುತ್ತಿದ್ದನು. ಹೀಗೆ ಯೋಬನು ಕ್ರಮವಾಗಿ ಮಾಡುವುದು ದೈನಂದಿನ ಕ್ರಮವಾಗಿತ್ತು.**

ಯೋಬನ ಗ್ರಂಥವು ಅವನು ತನ್ನ ಕುಟುಂಬವನ್ನು ಮತ್ತು ಆರೋಗ್ಯವನ್ನು ಕಳೆದುಕೊಳ್ಳುವುದರ ಬಗ್ಗೆ ಹೇಳುತ್ತದೆ. ಆದರೆ ಅದೆಲ್ಲಾ ನಡೆಯುವಾಗಲ ಅವನು ಹೀಗೆ ಘೋಷಿಸಿದನು :

**ಯೋಬ 19:23-26 ಆಹಾ, ನನ್ನ ಮಾತುಗಳನ್ನು ಬರೆದಿಟ್ಟರೆ ಎಷ್ಟೋ ಲೇಸು! ಪುಸ್ತಕದಲ್ಲಿ ದಾಖಲಿಸಿದರೆ ಎಷ್ಟೋ ಒಳ್ಳೆಯದು!**

**ಕಬ್ಬಿಣದ ಉಳಿಯಿಂದ ಬಂಡೆಯ ಮೇಲೆ ಕೆತ್ತಿ, ಸೀಸ ಎರೆದು, ಶಾಶ್ವತ ಶಾಸನವಾಗಿ ಮಾಡಿದರೆ ನನಗೆ ಎಷ್ಟೋ ಉಪಕಾರ!**

**ನಾನಂತು ನನ್ನ ನ್ಯಾಯಸ್ಥಾಪಕನು ಜೀವಸ್ವರೂಪನೆಂದು ಬಲ್ಲೆನು, ಕೊನೆಯಲ್ಲಿ ಆತನು ಭೂಮಿಗೆ ಇಳಿದು ಬರುವನು. ನನ್ನ ಚರ್ಮವು ಹೀಗೆ ಬಿರಿದು ಹಾಳಾದ ಬಳಿಕ, ದೇಹಧಾರಿಯಾಗಿ ದೇವರನ್ನು ನೋಡುವೆನು…**

**ಅಬ್ರಹಾಮ ಮತ್ತು ಇಸಾಕ**

ಮೂಲಪಿತೃಗಳಿಗೆ ಮುಂದಿನ ಉದಾಹರಣೆಯು ಅಬ್ರಹಾಮನಾಗಿದ್ದಾನೆ. ದೇವರು ಮಾನವಕುಲದೊಂದಿಗೆ ಹೊಂದಿದ್ದ ಶಾಶ್ವತವಾದ ಒಡಂಬಡಿಕೆಯನ್ನು ಪುನಃಸ್ಥಾಪಿಸಲು ಮತ್ತು ಇಸ್ರಾಯೇಲ್ ರಾಷ್ಟ್ರವನ್ನು ಸ್ಥಾಪಿಸಲು ಅವನನ್ನು ಊರ್ ಪಟ್ಟಣವನ್ನು ಬಿಟ್ಟು ಬರಬೇಕೆಂದು ಕರೆದರು.

ಇಸಾಕನು ಅಬ್ರಹಾಮನ ವಾಗ್ದಾನ ಪುತ್ರ. ಇಸಾಕ್ ಅಂದರೆ ನಗುವವನು ಎಂದರ್ಥ, ಮತ್ತು ಅವನ ಜನನವು ಅಬ್ರಹಾಮ್ ಮತ್ತು ಸಾರಾಳ ಬಾಳಲ್ಲಿ ನಗುವನ್ನು ತಂದಿತು.

ಇಸಾಕನಿಗೆ ಇಬ್ಬರು ಮಕ್ಕಳಿದ್ದರು, ಏಸಾವ ಮತ್ತು ಯಾಕೋಬ. ಏಸಾವನು ಜೇಷ್ಠಪುತ್ರನಾಗಿದ್ದರೂ ತನ್ನ ಜನ್ಮಸಿದ್ಧಹಕ್ಕನ್ನು ಯಾಕೋಬನಿಗೆ ಮಾರಿದನು. ಅವನು ತನ್ನ ಜನ್ಮಸಿದ್ಧಹಕ್ಕನ್ನು ಅಥವಾ ಜೇಷ್ಠಪುತ್ರನ ಸ್ಥಾನವನ್ನು ಕಡೆಗಣಿಸಿದನು ಎಂದು ಸತ್ಯವೇದವು ಹೇಳುತ್ತದೆ. ವಾಸ್ತವದಲ್ಲಿ, ಏಸಾವನು ತನ್ನ ಕುಟುಂಬದ ಯಜಮಾನನಾಗುವ ಅಥವಾ ಪುರೋಹಿತನಾಗುವ ಸೌಭಾಗ್ಯಕ್ಕಿಂತ ಇಹಲೋಕದ ವಿಷಯಗಳ ಬಗ್ಗೆ ಹೆಚ್ಚು ಯೋಚಿಸಿದನು.

**ಯಾಕೋಬ (ಇಸ್ರಾಯೇಲ)**

ಯಾಕೋಬನು ಇಸಾಕನ ಕಿರಿಯ ಮಗನಾಗಿದ್ದನು. ಅವನು ವಂಚನೆಯ ಮೂಲಕ ಜೇಷ್ಠಪುತ್ರನ ಸ್ಥಾನವನ್ನು ಪಡೆದು ವಾಗ್ದಾನ ಸಾಲಿನ ಭಾಗವಾದನು. ಅವನ ಜೀವನವು ವಂಚನೆಯಿಂದ ಆರಂಭಗೊಂಡಿತು ಆದರೆ ಅವನು ದೇವರನ್ನು ಸಂಧಿಸಿದನು ಮತ್ತು ಅವನ ಜೀವನವು ಬದಲಾಯಿತು. ದೇವರು ಅವನ ಹೆಸರನ್ನು ಇಸ್ರಾಯೇಲ್ ಎಂದು ಬದಲಾಯಿಸಿದನು. ಇಸ್ರಾಯೇಲ್ ಅಂದರೆ ದೇವರಂತೆ ಅಧಿಪತಿ. ಇಸ್ರಾಯೇಲನಿಗೆ ಹನ್ನೆರಡು ಜನ ಗಂಡುಮಕ್ಕಳಿದ್ದರು ಮತ್ತು ಈ ಮಕ್ಕಳ ಸಂತಾನಗಳೇ ಇಸ್ರಾಯೇಲ್ ದೇಶದ ಹನ್ನೆರಡು ಗೋತ್ರಗಳಾದರು.

**ಯೋಸೇಫ**

ಯೋಸೇಫನು ಯಾಕೋಬನ ನೆಚ್ಚಿನ ಮಗನಾಗಿದ್ದನು. ಆದರೆ ಅವನ ಅಣ್ಣಂದಿರು ಅವನನ್ನು ಗುಲಾಮನನ್ನಾಗಿ ಮಾರಿದರು. ಅವನು ಗುಲಾಮನಾಗಿದ್ದಾಗ ಸುಳ್ಳು ಆರೋಪದ ಮೇಲೆ ಸೆರೆಮನೆಗೆ ಹಾಕಲ್ಪಟ್ಟನು. ಆದರೆ ದೇವರು ಅವನನ್ನು ಅಲ್ಲಿಂದ ಮಂತ್ರಿಯ ಸ್ಥಾನಕ್ಕೆ ಮೇಲೆತ್ತಿದರು. ಯೋಸೇಫನು ಇದ್ದ ಸ್ಥಳದಲ್ಲೆಲ್ಲಾ ಏಳಿಗೆ ಆದನು.

ಯೋಸೇಫನು ತನ್ನ ಸಹೋದರರೊಂದಿಗೆ ಮತ್ತು ಯಾಕೋಬನೊಂದಿಗೆ ಪುನರ್ಮಿಲನವಾದನು. ಅವನ ಇಡೀ ಕುಟುಂಬವು (ಎಪ್ಪತ್ತು ಜನರು) ಈಜಿಪ್ಟಿಗೆ ಸ್ಥಳಾಂತರವಾದರು. ಅವರು ಗೌರವಯುತವಾದ ಸ್ಥಾನ ಹೊಂದಿದರು ಆದರೆ ಕಾಲ ಕಳೆದಂತೆ ಸನ್ನಿವೇಶವು ಬದಲಾಯಿತು.

**ವಿಮೋ 1:6-9 ಆ ನಂತರ ಯೋಸೇಫನೂ, ಅವನ ಅಣ್ಣತಮ್ಮಂದಿರೂ, ಆ ಸಂತತಿಯವರೆಲ್ಲರೂ ಮರಣ ಹೊಂದಿದರು. ಆದರೆ ಇಸ್ರಾಯೇಲರ ಮಕ್ಕಳು ಅತ್ಯಧಿಕವಾಗಿ ಅಭಿವೃದ್ಧಿಯಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಬೆಳೆದು ಬಲ ಹೊಂದಿದರು. ಆ ದೇಶವು ಅವರಿಂದ ತುಂಬಿಹೋಯಿತು. ತರುವಾಯ ಯೋಸೇಫನನ್ನು ಅರಿಯದ ಹೊಸ ಅರಸನು ಐಗುಪ್ತದೇಶದ ಆಳ್ವಿಕೆಗೆ ಬಂದನು. ಅರಸನು ತನ್ನ ಜನರಿಗೆ, “ಇಸ್ರಾಯೇಲರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಮತ್ತು ನಮಗಿಂತ ಬಹಳ ಬಲಶಾಲಿಗಳೂ ಆಗಿದ್ದಾರೆ ನೋಡಿರಿ.**

**ಈಜಿಪ್ಟಿನಲ್ಲಿ ಇಸ್ರಾಯೇಲಿನ ಮಕ್ಕಳು**

*ಕ್ರಿ.ಪೂ. 1,840 ರಿಂದ 1,440*

ದೇವರ ಆಶೀರ್ವಾದಗಳು ಇಸ್ರಾಯೇಲಿನ ಮಕ್ಕಳ ಮೇಲಿತ್ತು ಮತ್ತು ಅವರಿಗೆ ಹಿಂಸೆ ಹೆಚ್ಚಾದಂತೆಲ್ಲಾ ಅವರ ಜನಸಂಖ್ಯೆಯೂ ಹೆಚ್ಚಾಯಿತು.

**ವಿಮೋ. 1:12-14a ಐಗುಪ್ತರು ಇಸ್ರಾಯೇಲರನ್ನು ಉಪದ್ರವಪಡಿಸಿದಷ್ಟೂ, ಅವರು ಬಹಳವಾಗಿ ಹೆಚ್ಚಿ ಹರಡಿಕೊಂಡಿದ್ದರಿಂದ ಐಗುಪ್ತರು ಇಸ್ರಾಯೇಲರ ವಿಷಯದಲ್ಲಿ ಬಹಳ ಹೆದರಿಕೆಯುಳ್ಳವರಾದರು. ಐಗುಪ್ತರು ಇಸ್ರಾಯೇಲರಿಂದ ಕ್ರೂರವಾಗಿ ಸೇವೆಮಾಡಿಸಿಕೊಂಡರು. ಮಣ್ಣಿನ ಕೆಲಸದಲ್ಲಿಯೂ, ಇಟ್ಟಿಗೆಮಾಡುವ ಕೆಲಸದಲ್ಲಿಯೂ, ವ್ಯವಸಾಯದ ಎಲ್ಲಾ ವಿಧವಾದ ಕೆಲಸದಲ್ಲಿಯೂ ಕಠಿಣವಾಗಿ ದುಡಿಸಿಕೊಂಡು ಅವರ ಜೀವಿತವನ್ನೇ ಬೇಸರಪಡಿಸಿದರು.**

**ಮೋಶೆ**

ಇಸ್ರಾಯೇಲಿನ ಮಕ್ಕಳ ಜನಸಂಖ್ಯೆಯನ್ನು ಕಡಿಮೆಗೊಳಿಸಲು ಫರೋಹನು ಎಲ್ಲಾ ನವಜಾತ ಗಂಡು ಮಕ್ಕಳನ್ನು ನದಿಯಲ್ಲಿ ಎಸೆದುಬಿಡಬೇಕೆಂದು ಅಪ್ಪಣೆ ಕೊಟ್ಟನು. ಮೋಶೆಯು ಜನಿಸಿದಾಗ ಅವನ ತಾಯಿಯು ಅವನನ್ನು ಮೂರು ತಿಂಗಳುಗಳ ಕಾಲ ಬಚ್ಚಿಟ್ಟಳು. ನಂತರ, ಅವನನ್ನು ಇನ್ನೂ ಬಚ್ಚಿಡಲು ಆಗದಿದ್ದಾಗ ಒಂದು ಪುಟ್ಟಿಯನ್ನು ತೆಗೆದುಕೊಂಡು ಅದರಲ್ಲಿ ಮೋಶೆಯನ್ನು ಮಲಗಿಸಿ ನದಿಯಲ್ಲಿ ಬಿಟ್ಟಳು.

ಮೋಶೆಯ ಮೇಲೆ ದೇವರ ಹಸ್ತವಿತ್ತು. ಫರೋಹನ ಮಗಳು ಆ ಮಗುವನ್ನು ಕಂಡಳು, ನಂತರ ಅದರ ತಾಯಿಯನ್ನೇ ಶುಶ್ರೂಷೆ ಮಾಡಲು ನೇಮಿಸಿದಳು.

ಮೋಶೆಯು ಫರೋಹನ ಪುತ್ರಿಯ ಮಗನಾಗಿ ಬೆಳೆದನು. ಆದರೂ ಅವನು ನಾಲ್ವತ್ತು ವರ್ಷ ಪ್ರಾಯದವನಾದಾಗ ಒಬ್ಬ ಈಜಿಪ್ಟಿನವನು ಹಿಬ್ರೂ ಗುಲಾಮನೊಬ್ಬನನ್ನು ಹೊಡೆಯುವುದನ್ನು ಕಂಡು ಅವನನ್ನು ಕೊಂದು ಹಾಕಿದನು. ಅವನು ತನ್ನನ್ನು ತನ್ನ ಜನರೊಂದಿಗೆ ಗುರುತಿಸಿಕೊಂಡನು ಮತ್ತು ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಓಡಿ ಹೋದನು.

ಮೋಶೆಯು ಮಿದ್ಯಾನಿನಲ್ಲಿ ಒಬ್ಬ ಕುರುಬನಾಗಿ ಮುಂದಿನ ನಾಲ್ವತ್ತು ವರ್ಷಗಳನ್ನು ಕಳೆದನು. ಆನಂತರ ಒಂದು ದಿನ ಬೆಂಕಿಯಿಂದ ಉರಿಯುತ್ತಿದ್ದ ಒಂದು ಪೊದೆಯನ್ನು ಹತ್ತಿರದಿಂದ ಪರಿಶೀಲಿಸಲು ಬಂದಾಗ ದೇವರು ಅವನೊಂದಿಗೆ ಮಾತನಾಡಿ ತನ್ನ ಜನರನ್ನು ಅವನು ಈಜಿಪ್ಟಿನಿಂದ ಬಿಡಿಸಬೇಕೆಂದು ಕರೆದನು.

**ಹತ್ತು ಬಾಧೆಗಳು**

ಇಸ್ರಾಯೇಲಿನ ಮಕ್ಕಳು ಈಜಿಪ್ಟ್ ದೇಶವನ್ನು ಬಿಟ್ಟು ಹೋಗಲು ಅನುಮತಿಸಬೇಕೆಂದು ಫರೋಹನನ್ನು ಕೇಳುವುದಕ್ಕಾಗಿ ದೇವರು ಮೋಶೆಯನ್ನು ಅವನ ಬಳಿಗೆ ಕಳುಹಿಸಿದಾಗ, ಫರೋಹನು ಒಪ್ಪಲಿಲ್ಲ. (ಮೋಶೆಯ ಕಾಲದಲ್ಲಿದ್ದ ಫರೋಹನು ಈಗ ಸತ್ತು ಹೋಗಿದ್ದನು). ಫರೋಹನು ಅವರನ್ನು ಹೋಗಗೊಡಿಸಲು ಮನಸ್ಸು ಮಾಡುವವರೆಗೆ ದೇವರು ಈಜಿಪ್ಟಿಯನ್ನರ ಮೇಲೆ ಹತ್ತು ಬಾಧೆಗಳನ್ನು ಬರಮಾಡಿದರು.

- ಅವರು ದೇವರೆಂದು ಆರಾಧಿಸಿದ ನೈಲ್ ನದಿಯು ರಕ್ತವಾಯಿತು.
- ನದಿಯಿಂದ ಸಾವಿರಾರು ಕಪ್ಪೆಗಳು ಬಂದು ಎಲ್ಲೆಡೆ ಹರಡಿಕೊಂಡವು.
- ಭೂಮಿಯ ಧೂಳು ಹೇನುಗಳಾದವು.
- ವಿಷದ ಹುಳಗಳು ವಿಪರೀತವಾಗಿ ತುಂಬಿಕೊಂಡು ದೇಶವನ್ನು ಹಾಳು ಮಾಡಿದವು.
- ಅವರ ದನಕರುಗಳಿಗೆ, ಕುದುರೆಗಳಿಗೆ, ಕತ್ತೆಗಳಿಗೆ, ಒಂಟೆಗಳಿಗೆ, ಎತ್ತುಗಳಿಗೆ ಮತ್ತು ಕುರಿಗಳಿಗೆ ಭಯಂಕರವಾದ ವ್ಯಾಧಿ ಬಂದು ಅವೆಲ್ಲವೂ ಸತ್ತು ಹೋದವು.
- ಜೀವಂತವಾಗಿ ಉಳಿದಿದ್ದ ಜನರ ಮತ್ತು ಪ್ರಾಣಿಗಳ ಶರೀರದ ಮೇಲೆ ಬೊಬ್ಬೆಗಳು ಬಂದವು.
- ಆನೆಕಲ್ಲಿನ ಮಳೆಯು ರಭಸವಾಗಿ ಬೀಸಿ ಮನೆಯಿಂದ ಹೊರಗಿದ್ದ ಜನರನ್ನು ಮತ್ತು ಪ್ರಾಣಿಗಳನ್ನು ಕೊಂದಿತು.
- ಭೂಮಿಯ ನೆಲವೇ ಕಾಣದಷ್ಟು ಸಂಖ್ಯೆಯಲ್ಲಿ ಮಿಡಿತೆಗಳು ಬಂದು ಮರಗಳನ್ನೂ ಸಹ ತಿಂದುಬಿಟ್ಟವು.

* ಭೂಮಿಯನ್ನು ಮೂರು ದಿನಗಳ ಕಾಲ ಕಾರ್ಗತ್ತಲೆಯು ಆವರಿಸಿತು. ಒಬ್ಬರಿಗೊಬ್ಬರು ಕಾಣಿಸದಷ್ಟು ಕತ್ತಲೆ ಇದ್ದದ್ದರಿಂದ ಯಾವನೂ ತಾನಿರುವ ಸ್ಥಳದಿಂದ ಏಳಲಿಲ್ಲ.

ಪ್ರತಿಯೊಂದು ಬಾಧೆಯ ನಂತರ, ದೇವರಿಗೆ ವಿಧೇಯನಾಗುವ ಅವಕಾಶವು ಫರೋಹನಿಗೆ ಕೊಡಲ್ಪಟ್ಟಿತು, ಆದರೆ ಅವನು ಅದನ್ನು ತಿರಸ್ಕರಿಸಿದನು.

* ಅಂತಿಮವಾದ ಬಾಧೆಯು ಈಜಿಪ್ಟಿಯನ್ನರ ಚೊಚ್ಚಲ ಮಕ್ಕಳ ಸಂಹಾರವಾಗಿತ್ತು.

ಈ ರಾತ್ರಿಯಲ್ಲಿ ಇಸ್ರಾಯೇಲರು ಏನು ಮಾಡಬೇಕೆಂದು ದೇವರು ನಿರ್ದಿಷ್ಟವಾದ ಸೂಚನೆಗಳನ್ನು ಅವರಿಗೆ ನೀಡಿದ್ದರು. ಅವರು ಒಂದು ಯಜ್ಞಬಲಿಯನ್ನು ಅರ್ಪಿಸಿ ಅದರ ರಕ್ತವನ್ನು ತೆಗೆದುಕೊಂಡು ತಮ್ಮ ಮನೆಯ ಬಾಗಿಲನ ನಿಲುವುಪಟ್ಟಿಗಳಿಗೆ ಹಚ್ಚಬೇಕಾಗಿತ್ತು. ನಂತರ ಅವರು ಪ್ರಯಾಣಕ್ಕೆ ಸಿದ್ಧವಾಗಿ ಆ ಯಜ್ಞಬಲಿಯನ್ನು ಭುಜಿಸಬೇಕಾಗಿತ್ತು. ಆ ರೀತಿಯಾಗಿ ಯಜ್ಞಬಲಿಯ ರಕ್ತವನ್ನು ತಮ್ಮ ಮನೆಯ ಬಾಗಿಲನ ನಿಲುವುಪಟ್ಟಿಗಳಿಗೆ ಹಚ್ಚದೆ ಇರುವ ಇಸ್ರಾಯೇಲರ - ಅಂದರೆ ದೇವರಿಗೆ ವಿಧೇಯರಾಗದೆ ಇರುವವರ - ಚೊಚ್ಚಲ ಮಕ್ಕಳು ಈಜಿಪ್ಟಿಯನ್ನರ ಚೊಚ್ಚಲ ಮಕ್ಕಳೊಂದಿಗೆ ಸಂಹರಿಸಲ್ಪಟ್ಟರು. ಇದು ಮೊದಲ ಪಸ್ಕಹಬ್ಬವಾಗಿತ್ತು ಮತ್ತು ನಮ್ಮ ರಕ್ಷಣೆಗಾಗಿ ಯೇಸು ಶಿಲುಬೆಯ ಮೇಲೆ ಪ್ರಾಣ ಕೊಟ್ಟು ನಮಗಾಗಿ ರಕ್ತದ ಸಂರಕ್ಷಣೆಯನ್ನು ಒದಗಿಸಿದಾಗ ಇದು ನೆರವೇರಿತು.

**ವಿಮೋ 12:13 ಆದರೆ ನೀವು ಇರುವ ಎಲ್ಲಾ ಮನೆಗಳ ಬಾಗಿಲಿಗೆ ಹಚ್ಚಿರುವ ರಕ್ತವು ನಿಮಗೆ ಗುರುತಾಗಿರುವುದು. ಆ ರಕ್ತವನ್ನು ನಾನು ನೋಡುವಾಗ ನಿಮಗೆ ಯಾವ ನಷ್ಟವನ್ನೂ ಮಾಡದೇ ಮುಂದಕ್ಕೆ ದಾಟಿಹೋಗುವೆನು. ನಾನು ಐಗುಪ್ತ್ಯದವರನ್ನು ಸಂಹರಿಸುವಾಗ ನಿಮಗೆ ಯಾವ ಹಾನಿಯೂ ಉಂಟಾಗುವುದಿಲ್ಲ.**

## ಈಜಿಪ್ಟ್ ನಿಂದ ಕಾನಾನಿನವರೆಗೆ

*ಕ್ರಿ.ಪೂ. 1,440 ರಿಂದ 1,400*

### ಕೆಂಪು ಸಮುದ್ರ ಎರಡು ಭಾಗವಾದದ್ದು

ಈಜಿಪ್ಟಿಗೆ ಸ್ಥಳಾಂತರಗೊಂಡಿದ್ದ ಎಪ್ಪತ್ತು ಜನರು ಈಗ ಒಂದು ದೊಡ್ಡ ಜನಸಮೂಹವಾಗಿದ್ದರು. ಚೊಚ್ಚಲಮಕ್ಕಳ ಸಂಹಾರವಾದ ನಂತರ ಫರೋಹನು ಅವರನ್ನು ದೇಶದಿಂದ "ಹೊರಡಿಸಿದನು". ಆದರೆ ಅದರ ನಂತರ ಅವನು ತನ್ನ ಮನಸ್ಸನ್ನು ಬದಲಾಯಿಸಿ ಅವರನ್ನು ಹಿಂತಿರುಗಿ ಕರಕೊಂಡು ಬರುವುದಕ್ಕಾಗಿ ತನ್ನ ಸೇನೆಯನ್ನು ಕಳುಹಿಸಿದನು.

ಇಸ್ರಾಯೇಲರು ಸಿಲುಕಿಕೊಂಡರು. ಎಡಬಲದಲ್ಲಿ ಪರ್ವತಗಳು, ಮುಂದೆ ಕೆಂಪು ಸಮುದ್ರ, ಹಿಂದೆ ಫರೋಹನ ಸೈನ್ಯ. ದೇವರು ಅವರನ್ನು ಸಂರಕ್ಷಿಸುವುದಕ್ಕಾಗಿ ಅವರ ಮತ್ತು ಸೈನ್ಯದ ನಡುವೆ ಒಂದು ಮೇಘಸ್ತಂಭವನ್ನು ಮತ್ತು ಅಗ್ನಿಸ್ತಂಭವನ್ನು ನಿಲ್ಲಿಸಿದರು. ಇಸ್ರಾಯೇಲರ ಭಾಗದಲ್ಲಿ ಬೆಳಕಿತ್ತು ಆದರೆ ಈಜಿಪ್ಟಿಯನ್ನರ ಭಾಗದಲ್ಲಿ ಕತ್ತಲಿತ್ತು. ನಂತರ ದೇವರು ಕೆಂಪು ಸಮುದ್ರವನ್ನು ಇಬ್ಭಾಗ ಮಾಡಿದರು ಮತ್ತು ಆ ದೊಡ್ಡ ಜನಸಮೂಹವು ಒಣನೆಲದ ಮೇಲೆ ನಡೆದು ಸಮುದ್ರವನ್ನು ದಾಟಿದರು.

ಈಜಿಪ್ಟಿಯನ್ನರ ಸೈನ್ಯವು ಅವರನ್ನು ಬೆನ್ನಟ್ಟಲು ಯತ್ನಿಸಿದಾಗ ಸಮುದ್ರದ ನೀರು ಅವರ ಮೇಲೆ ಬಿದ್ದು ಅವರನ್ನು ಅದರಲ್ಲೇ ಮುಳುಗಿಸಿತು.

### ಧರ್ಮಶಾಸ್ತ್ರವು ಕೊಡಲ್ಪಟ್ಟಿದ್ದು

ದೇವರು ಜನರನ್ನು ಸಿನಾಯಿ ಪರ್ವತದ ಬಳಿಗೆ ನಡೆಸಿದರು ಮತ್ತು ಅವರು ಅಲ್ಲಿ ಮೂರು ದಿನಗಳ ಕಾಲ ತಮ್ಮನ್ನು ಶುದ್ಧೀಕರಿಸಿಕೊಂಡರು. ಅವರು ಮೊದಲ ಪಸ್ಕಹಬ್ಬವನ್ನು ಆಚರಿಸಿ ಈಜಿಪ್ಟ್ ದೇಶವನ್ನು ಬಿಟ್ಟ ನಂತರ ನಿರ್ದಿಷ್ಟವಾಗಿ ಐವತ್ತು ದಿನಗಳಾದ ಮೇಲೆ ಧರ್ಮಶಾಸ್ತ್ರವು ಕೊಡಲ್ಪಟ್ಟಿತು. ಯೇಸು ಈ ಲೋಕವನ್ನು ಬಿಟ್ಟು ಹೋದ ಮೇಲೆ ಐವತ್ತು ದಿನಗಳ ನಂತರ ಪರಿಶುದ್ಧಾತ್ಮನು ನಮ್ಮ ಹೃದಯಗಳ ಮೇಲೆ ದೇವರ ಧರ್ಮಶಾಸ್ತ್ರವನ್ನು ಬರೆಯುವುದಕ್ಕಾಗಿ ಬಂದರು.

**ವಿಮೋ 19:16-20 ಮೂರನೆಯ ದಿನದಲ್ಲಿ ಸೂರ್ಯೋದಯವಾಗಲು ಆ ಬೆಟ್ಟದ ಮೇಲೆ ಗುಡುಗು, ಮಿಂಚೂ, ಕಾರ್ಮುಗಿಲೂ, ತುತ್ತೂರಿಯ ಮಹಾಧ್ವನಿಯೂ ಉಂಟಾಗಲು ಪಾಳೆಯಲ್ಲಿದ್ದ ಜನರೆಲ್ಲರೂ ನಡುಗಿದರು. ದೇವದರ್ಶನಕ್ಕಾಗಿ ಮೋಶೆ ಜನರನ್ನು ಪಾಳೆಯದ ಹೊರಕ್ಕೆ ಕರೆದುಕೊಂಡು ಬರಲು, ಅವರು ಬೆಟ್ಟದ ಕೆಳಗೆ ನಿಂತುಕೊಂಡರು. ಯೆಹೋವನು ಬೆಂಕಿಯೊಳಗೆ ಸೀನಾಯಿ ಬೆಟ್ಟದ ಮೇಲೆ ಇಳಿದು ಬಂದನು. ಆದುದರಿಂದ ಆ ಬೆಟ್ಟವೆಲ್ಲಾ ಹೊಗೆಯಿಂದ ಆವರಿಸಿಕೊಂಡಿತು. ಆ ಹೊಗೆ ಆವಿಗೆಯ ಹೊಗೆಯಂತೆ ಏರಿತು. ಅದಲ್ಲದೆ ಜನರೆಲ್ಲರು ಬಹಳವಾಗಿ ನಡುಗಿದರು.ಬೆಟ್ಟವೆಲ್ಲಾ ಬಹಳವಾಗಿ ಕಂಪಿಸಿತು.**

**ತುತ್ತೂರಿಯ ಧ್ವನಿ ಹೆಚ್ಚಾಗುತ್ತಾ ಬಂದಾಗ, ಮೋಶೆಯು ದೇವರ ಸಂಗಡ ಮಾತನಾಡಿದನು. ಆಗ ದೇವರು ಎತ್ತರದ ಧ್ವನಿಯಲ್ಲಿ ಅವನಿಗೆ ಉತ್ತರಕೊಟ್ಟನು. ಯೆಹೋವನು ಸೀನಾಯಿ ಬೆಟ್ಟದ ಶಿಖರಕ್ಕೆ ಇಳಿದು ಬಂದನು. ಆತನು ಬೆಟ್ಟದ ತುದಿಗೆ ಬಾ ಎಂದು ಮೋಶೆಯನ್ನು ಕರೆಯಲು ಅವನು ಬೆಟ್ಟವನ್ನೇರಿದನು.**

ಬಂಗಾರದ ಬಸವ

ಮೋಶೆಯು ಯೆಹೋವನೊಂದಿಗೆ ಮಾತನಾಡುತ್ತಿರುವಾಗ - ಅವರು ಯೆಹೋವನು ಮಾಡಿದ ಅದ್ಭುತಕರ ಸಂಗತಿಗಳನ್ನು ನೋಡಿದಾಗ್ಯೂ, ಅವರು ಆತನ ಸ್ವರವನ್ನು ಗುಡುಗಿನ ಶಬ್ಧಗಳಲ್ಲಿ ಕೇಳಿದಾಗ್ಯೂ - ಯೆಹೋವನು ಮೋಶೆಗೆ ಧರ್ಮಶಾಸ್ತ್ರವನ್ನು ಮತ್ತು ಗುಡಾರದ ಯೋಜನೆಗಳನ್ನು ಕೊಡುತ್ತಿರುವಾಗಲೇ, ಇತ್ತ ಜನರು ಆರೋನನ ಸಹಾಯದೊಂದಿಗೆ ಬಂಗಾರದ ಬಸವವನ್ನು ಮಾಡಿ ಅದನ್ನು ಆರಾಧಿಸಿದರು.

ದೇವರು ಮೋಶೆಗೆ, *ನಾನು ಈ ಜನರನ್ನು ನಾಶಮಾಡುವೆನು ಮತ್ತು ನಿನ್ನಿಂದ ಒಂದು ದೊಡ್ಡ ಸಂತಾನವಾಗುವಂತೆ ಮಾಡುವೆನು* ಎಂದು ಹೇಳಿದರು. ಆದರೆ ಮೋಶೆ ಅವರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದಾಗ ದೇವರು ಅವರನ್ನು ಕ್ಷಮಿಸಿದನು.

ಇಸ್ರಾಯೇಲಿನ ಮಕ್ಕಳು ಕಾನಾನಿನ ಗಡಿಪ್ರದೇಶಕ್ಕೆ ಬಂದರು, ಆದರೆ ದೇವರು ಅವರಿಗೆ ಆ ದೇಶದ ಮೇಲೆ ಜಯವನ್ನು ಕೊಡುವನು ಎಂಬುದನ್ನು ಸಂಶಯಿಸಿದರು ಮತ್ತು ಅರಣ್ಯದಲ್ಲಿ ನಾಲ್ವತ್ತು ವರ್ಷಗಳವರೆಗೆ ಅಲೆದಾಡಿದರು.

## ನ್ಯಾಯಸ್ಥಾಪಕರುಗಳ ಕಾಲ – ದೇಶವನ್ನು ವಶಪಡಿಸಿಕೊಳ್ಳುವುದು

*ಕ್ರಿ.ಪೂ. 1,400 ರಿಂದ 1,051*

ಮೋಶೆಯು ಮರಣ ಹೊಂದಿ ಹೋರೇಬ್ ಪರ್ವತದ ಮೇಲೆ ದೇವರಿಂದ ಹೂಣಲ್ಪಟ್ಟಿದ್ದನು. ಯೆಹೋಶುವನು ಇಸ್ರಾಯೇಲಿನ ಮಕ್ಕಳ ನಾಯಕತ್ವವನ್ನು ವಹಿಸಿದ್ದನು ಮತ್ತು ನಾಲ್ವತ್ತು ವರ್ಷಗಳ ನಂತರ ಅವರು ಮತ್ತೊಮ್ಮೆ ಕಾನಾನಿನ ಗಡಿಭಾಗಕ್ಕೆ ಬಂದರು.

ಮತ್ತೊಮ್ಮೆ ದೇವರು ಒಂದು ನದಿಯ ನೀರನ್ನು ಒಣಗುವಂತೆ ಮಾಡಿದರು. ಈ ಬಾರಿ ಅದು ಯೊರ್ದಾನ್ ನದಿಯಾಗಿತ್ತು ಮತ್ತು ಜನರು ಒಣನೆಲದ ಮೇಲೆ ದಾಟಿ ಹೋದರು.

ಯೆರಿಕೋವಿನ ಗೋಡೆಗಳು ಅಲೌಕಿಕವಾಗಿ ಬಿದ್ದು ಹೋದವು ಮತ್ತು ಅವರು ಕಾನಾನ್ ದೇಶದ ಆಕ್ರಮಣವನ್ನು ಆರಂಭಿಸಿದರು.

ಯಾಜಕ ಕುಲವಾದ ಲೇವಿಯ ಕುಲವನ್ನು ಹೊರತುಪಡಿಸಿ ಕಾನಾನ್ ದೇಶವನ್ನು ಪ್ರತಿಯೊಂದು ಕುಲಗಳಿಗೆ ಭಾಗ ಮಾಡಲಾಯಿತು.

ಇಸ್ರಾಯೇಲ್ ದೇಶವು ಸುತ್ತಮುತ್ತಲಿನ ದೇಶಗಳಿಗಿಂತ ವಿಭಿನ್ನವಾಗಿತ್ತು ಯಾಕೆಂದರೆ ಅವರಿಗೆ ಒಬ್ಬ ಮಾನವ ರಾಜನಿರಲಿಲ್ಲ. ದೇವರೇ ಅವರ ರಾಜನಾಗಿದ್ದರು. ಯೆಹೋಶುವನ ನಾಯಕತ್ವದ ನಂತರ ಅವರನ್ನು ನ್ಯಾಯಸ್ಥಾಪಕರು ಆಳಿದರು. ಅವರಲ್ಲಿ ಮುಖ್ಯವಾದ ನ್ಯಾಯಸ್ಥಾಪಕರುಗಳು ಯಾರೆಂದರೆ :

- ಒತ್ನಿಯೇಲ್ - ಮೊದಲ ನ್ಯಾಯಸ್ಥಾಪಕ
- ದೆಬೋರಾ - ಒಬ್ಬ ಸ್ತ್ರೀ
- ಗಿದ್ಯೋನ - ಧೀರ ಮನುಷ್ಯ
- ಯೆಪ್ತಹ
- ಸಂಸೋನ - ಬಲಿಷ್ಠ ಮನುಷ್ಯ
- ಎಲೀ
- ಸಮುವೇಲ - ಕೊನೆಯ ನ್ಯಾಯಸ್ಥಾಪಕ.

## ಇಸ್ರಾಯೇಲ್ ರಾಜ್ಯದ ಸ್ಥಾಪನೆ

*ಕ್ರಿ. ಪೂ 1,051 ರಿಂದ 931*

### ಜನರು ಒಬ್ಬ ರಾಜನು ಬೇಕೆಂದು ಕೇಳಿಕೊಂಡರು

ಸಮುವೇಲನು ವೃದ್ಧನಾಗಿದ್ದಾಗ ಜನರು ತಮಗೆ ಒಬ್ಬ ರಾಜನು ಬೇಕೆಂದು ಕೇಳಿಕೊಂಡರು. ಅವರು ದೇವರ ಆಳ್ವಿಕೆಗೆ ದಂಗೆ ಎದ್ದರು ಮತ್ತು ದೇವರು ಅವರ ಇಷ್ಟದಂತೆ ನಡೆಯಲು ಬಿಟ್ಟರು. ಸಮುವೇಲನು ಅವರಿಗೆ ನೀಡಿದ ಎಚ್ಚರಿಕೆಯನ್ನು ಕೇಳಿರಿ.

**1 ಸಮುವೇಲ 8:7 ಆಗ ಯೆಹೋವನು ಸಮುವೇಲನಿಗೆ, "ಜನರು ಹೇಳಿದಂತೆಯೇ ಮಾಡು; ಅವರು ನಿನ್ನನ್ನಲ್ಲ, ನನ್ನನ್ನು ತಿರಸ್ಕರಿಸಿದ್ದಾರೆ. ನನ್ನ ಆಳ್ವಿಕೆಯನ್ನು ಬೇಡವೆನ್ನುತ್ತಿದ್ದಾರೆ."**

ದೇವರು ಅವರಿಗೆ ಎಚ್ಚರಿಕೆಯನ್ನು ನೀಡಿ ಒಬ್ಬ ಅರಸನು ಅವರಿಂದ ಏನನ್ನೆಲ್ಲಾ ತೆಗೆದುಕೊಳ್ಳುವನು ಎಂದು ತಿಳಿಸಿದರು :

- ಅವರ ಗಂಡುಮಕ್ಕಳನ್ನು ತನಗಾಗಿ ತೆಗೆದುಕೊಳ್ಳುವನು
- ಅವರ ಹೆಣ್ಣುಮಕ್ಕಳನ್ನು ತನಗಾಗಿ ತೆಗೆದುಕೊಳ್ಳುವನು
- ಅವರ ಹೊಲಗಳನ್ನು, ದ್ರಾಕ್ಷೆ ತೋಟಗಳನ್ನು, ಓಲಿವ್ ತೋಟಗಳನ್ನು ತೆಗೆದುಕೊಂಡು ಇನ್ನೊಬ್ಬರಿಗೆ ಅದನ್ನು ಕೊಡುವನು
- ಅವರಿಗಿದ್ದ ಎಲ್ಲಾದರ ಹತ್ತು ಭಾಗವನ್ನು ತೆಗೆದುಕೊಳ್ಳುವನು

ದೇವರು ತನ್ನ ಎಚ್ಚರಿಕೆಯನ್ನು ಮುಂದುವರೆಸಿದರು,

**1 ಸಮುವೇಲ 8:18,19 ಆಗ ನೀವು ಆರಿಸಿಕೊಂಡ ಅರಸನ ದೆಸೆಯಿಂದ ಆ ದಿನದಲ್ಲಿ ಬೇಸತ್ತು ಯೆಹೋವನಿಗೆ ಮೊರೆಯಿಡುವಿರಿ. ಆಗ ಆತನು ನಿಮ್ಮನ್ನು ಲಕ್ಷಿಸುವುದಿಲ್ಲ" ಅಂದನು. ಸಮುವೇಲನು ಎಷ್ಟು ಹೇಳಿದರೂ ಜನರು ಅವನ ಮಾತುಗಳನ್ನು ಕೇಳಲೊಲ್ಲದೆ, "ಇಲ್ಲ; ನಮಗೆ ಅರಸನನ್ನು ನೇಮಿಸಿಕೊಡು... ಎಂದು ಹೇಳಿದರು.**

ಅವರು ಕೇಳಿಕೊಂಡದ್ದು ಅವರಿಗೇ ಒಳ್ಳೆಯದಲ್ಲದಿದ್ದರೂ ದೇವರು ಅದನ್ನು ಕೊಟ್ಟರು. ಸಮುವೇಲನು ಸೌಲನನ್ನು ರಾಜನಾಗಿ ಅಭಿಷೇಕಿಸಿದನು. ದೇವರಿಂದ ಆಳಲ್ಪಟ್ಟಿದ್ದ ದೇಶವು ದೇವಾಧಿಪತ್ಯದಿಂದ ಮಾನವನಿಂದ ಆಳಲ್ಪಟ್ಟ ದೇಶವಾಗಿ ರಾಜಾಧಿಪತ್ಯವಾಯಿತು.

ಸೌಲ

ಸೌಲನು ದೇವರಿಂದ ಅಭಿಷೇಕಿಸಲ್ಪಟ್ಟವನಾಗಿ ಆಳ್ವಿಕೆಯನ್ನು ಆರಂಭಿಸಿದನು. ಅವನು ದೀನ ಮನುಷ್ಯನಾಗಿದ್ದನು ಮತ್ತು ಸ್ವ-ನಿಯಂತ್ರಣವುಳ್ಳವನಾಗಿದ್ದನು, ಆದರೆ ಅವನು ಗರ್ವಿಷ್ಠನಾಗಿ ಮತ್ತು ಅವಿಧೇಯನಾಗಿ ಹೋದನು. ಅಂತಿಮವಾಗಿ ದೇವರು ಸಮುವೇಲನಿಗೆ ಹೀಗೆ ಹೇಳಿದರು,

**1 ಸಮುವೇಲ 15:10,11 ಯೆಹೋವನು ಸಮುವೇಲನಿಗೆ, "ಸೌಲನನ್ನು ಅರಸನನ್ನಾಗಿ ಮಾಡಿದ್ದಕ್ಕೆ ಈಗ ವಿಷಾದಿಸುತ್ತೇನೆ. ಅವನು ನನ್ನನ್ನು ಬಿಟ್ಟುಬಿಟ್ಟನು; ನನ್ನ ಆಜ್ಞೆಗಳನ್ನು ನೆರವೇರಿಸಲಿಲ್ಲ" ಎಂದು ಹೇಳಿದನು.**

ಸಮುವೇಲನು ಸೌಲನನ್ನು ಎಚ್ಚರಿಸಲು ನೋಡಿದನು ಆದರೆ ಅವನ ಮಾತನ್ನು ಸೌಲನು ಕೇಳಲಿಲ್ಲ. ಆಗ ದೇವರು ಮುಂದಿನ ರಾಜನನ್ನು ಅಭಿಷೇಕಿಸಲು ಸಮುವೇಲನನ್ನು ಕಳುಹಿಸಿಕೊಟ್ಟರು.

ಸೌಲನು ತನ್ನ ಸೇವಕನನ್ನು ತನಗೆ ಕೊಲ್ಲುವಂತೆ ಹೇಳಿ ತನ್ನ ಜೀವವನ್ನು ಕೊನೆಗೊಳಿಸಿದನು.

ದಾವೀದ

ದಾವೀದನು ಇಸ್ರಾಯೇಲರ ಎರಡನೆಯ ರಾಜನಾಗಿದ್ದನು ಮತ್ತು ಅವನ ಆಳ್ವಿಕೆಯ ಅಡಿಯಲ್ಲಿ ದೇಶವು ಬಲಿಷ್ಠಗೊಂಡು ಅತ್ಯಂತ ಹೆಚ್ಚು ಸ್ಥಳಗಳನ್ನು ವಶಪಡಿಸಿಕೊಂಡಿತು. ದಾವೀದನು ನನ್ನ ಹೃದಯಕ್ಕೆ ಒಪ್ಪುವ ಮನುಷ್ಯನು ಎಂದು ದೇವರು ಹೇಳಿದರು.

**1 ಸಮುವೇಲ 13:14b ನೀನು ಯೆಹೋವನ ಆಜ್ಞೆಯನ್ನು ಕೈಕೊಳ್ಳದೆ ಹೋದುದರಿಂದ ಆತನು ತನಗೆ ಒಪ್ಪುವ ಬೇರೊಬ್ಬ ಪುರುಷನನ್ನು ತನ್ನ ಪ್ರಜೆಯ ಮೇಲೆ ಪ್ರಭುವಾಗಿ ನೇಮಿಸಿದ್ದಾನೆ"**

ದಾವೀದನು ಒಬ್ಬ ಯುದ್ಧಶೂರನಾಗಿದ್ದನು, ಒಬ್ಬ ರಾಜನಾಗಿದ್ದನು, ಒಬ್ಬ ಪ್ರವಾದಿಯಾಗಿದ್ದನು ಮತ್ತು ಒಬ್ಬ ಕೀರ್ತನೆಗಾರನಾಗಿದ್ದನು. ದೇವರು ಅವನಿಗೆ ದೇವಾಲಯದ ಯೋಜನೆಗಳನ್ನು ಕೊಟ್ಟರು.

ಕೀರ್ತನೆಗಳ ಗ್ರಂಥದ ಹೆಚ್ಚು ಭಾಗವನ್ನು ದಾವೀದನೇ ಬರೆದು ದೇವರನ್ನು ಹೇಗೆ ಸ್ತುತಿಸಬೇಕು ಮತ್ತು ಆರಾಧಿಸಬೇಕೆಂದು ಜನರಿಗೆ ಕಲಿಸಿಕೊಟ್ಟನು.

ದಾವೀದನ ಆಳ್ವಿಕೆಯ ಬಹುತೇಕ ಭಾಗವು ದೇವರಿಗೆ ಒಂದು ಸಾಕ್ಷಿಯಾಗಿದೆ, ಆದರೆ ಅವನಿಗೆ ಎರಡು ಬಲಹೀನತೆಗಳಿದ್ದವು - ಹೆಣ್ಣು ಮತ್ತು ತನ್ನ ನಿಕಟ ವ್ಯಕ್ತಿಗಳನ್ನು ಶಿಸ್ತಿನಲ್ಲಿಡದೆ ಇದ್ದದ್ದು. ಅವನ ಜೀವನದ ಅಂತ್ಯ

ವರ್ಷಗಳಲ್ಲಿ, ಅವನ ಪುತ್ರರು ದಂಗೆ ಎದ್ದರು, ಜಗಳಗಳನ್ನು ತಂದರು ಮತ್ತು ಅವನ ರಾಜ್ಯವನ್ನೂ ಸಹ ಕದ್ದುಕೊಳ್ಳಲು ನೋಡಿದರು.

**ಸೊಲೊಮೊನ**

ಸೊಲೊಮೊನನು ಒಂದು ದೊಡ್ಡ ದೈವಾನುಗ್ರಹದಿಂದ ತನ್ನ ಆಳ್ವಿಕೆಯನ್ನು ಆರಂಭಿಸಿದನು. ಅವನು ದಾವೀದನ ಆಶೀರ್ವಾದಗಳೊಂದಿಗೆ ರಾಜನಾಗಿ ಅಭಿಷೇಕಿಸಲ್ಪಟ್ಟನು. ಅವನ ತಂದೆಯು ಶೇಖರಿಸಿದ್ದ ಮಹಾ ಸಂಪತ್ತನ್ನು ಅವನು ಹೊಂದಿಕೊಂಡನು. ಅವನನ್ನು ಜನರು ಪ್ರೀತಿಸಿ ಅವನ ಮೇಲೆ ಅಪಾರವಾದ ನಿರೀಕ್ಷೆಯನ್ನಿರಿಸಿ ಅವನನ್ನು ಅಂಗೀಕರಿಸಿದರು.

ಅವನು ತನ್ನ ಆಳ್ವಿಕೆಯನ್ನು ಆರಂಭಿಸಿದಾಗ ಅವನಿಗಿದ್ದ ದೊಡ್ಡ ಬಯಕೆಯು ಜ್ಞಾನವನ್ನು ಪಡೆಯಬೇಕು ಎಂಬದಾಗಿತ್ತು ಮತ್ತು ಅವನಿಗೆ ದೈವಿಕವಾದ ಬುದ್ಧಿಸಾಮರ್ಥ್ಯಗಳು ಕೊಡಲ್ಪಟ್ಟವು. ಅವನು ತನ್ನ ಜೀವನದ ಅಂತಿಮ ವರ್ಷಗಳಲ್ಲಿ ಜ್ಞಾನೋಕ್ತಿ, ಪರಮಗೀತ ಮತ್ತು ಪ್ರಸಂಗಿ ಪುಸ್ತಕಗಳನ್ನು ಸಂಗ್ರಹಿಸಿ ಬರೆದನು ಎಂದು ನಂಬಲಾಗುತ್ತದೆ.

ಅವನು ದೇವರ ಮಹಾ ಆಲಯವನ್ನು ಕಟ್ಟಿದನು. ಆದರೂ ಸೊಲೊಮೊನನು ಶಾರೀರಿಕ ಆಶೆಗಳಿಗೆ ಮತ್ತು ವಿಗ್ರಹಾರಾಧನೆಗಳಲ್ಲಿ ಬಿದ್ದು ಹೋದನು. ಅವನಿಗೆ ಏಳು ನೂರು ಪತ್ನಿಯರು ಮತ್ತು ಮುನ್ನೂರು ಉಪ-ಪತ್ನಿಯರಿದ್ದರು. ಬಹುಶಃ ಪ್ರಸಂಗಿ ಪುಸ್ತಕವು ಅವನ ಜೀವನದ ಅಂತ್ಯವರ್ಷಗಳಲ್ಲಿನ ಒಂದು ವ್ಯಕ್ತಿ ಚಿತ್ರಣವಾಗಿದೆ. ರಾಜ್ಯವು ವಿಭಜನೆಯಾಯಿತು - ಬೇರೆ ದೇಶಕ್ಕೆ ಸೆರೆಯಾಗಿ ಹೋಯಿತು

*ಕ್ರಿ. ಪೂ. 931 ರಿಂದ 586*

ಸೊಲೊಮೊನನ ಮರಣದ ಸಮಯದಲ್ಲಿ ರೆಹೊಬೊಮನು ಇಸ್ರಾಯೇಲಿನ ರಾಜನಾದನು. ಜನರು ತಮ್ಮ ಮೇಲೆ ಹಾಕಲಾಗಿದ್ದ ಭಾರವಾದ ತೆರಿಗೆಯನ್ನು ಕಡಿಮೆಗೊಳಿಸಬೇಕೆಂದು ಕೇಳಿಕೊಂಡರು. ರೆಹೊಬೊಮನು ಹಿರಿಯರನ್ನು ವಿಚಾರಿಸಿದಾಗ ಅವನು ಜನರಿಗೆ ದಯೆತೋರಿಸಿ ಅವರನ್ನು ಮೆಚ್ಚಿಸಿ ಅವರೊಂದಿಗೆ ಒಳ್ಳೆಯ ಮಾತುಗಳನ್ನಾಡಿದರೆ ಅವರು ಶಾಶ್ವತವಾಗಿ ನಿನ್ನ ಸೇವಕರಾಗಿರುವರು ಎಂದು ಹೇಳಿದರು.

ಅವನು ಅವರ ಬುದ್ಧಿಮಾತನ್ನು ತಿರಸ್ಕರಿಸಿ ತನ್ನೊಂದಿಗೆ ಆಟವಾಡಿ ಬೆಳೆದಿದ್ದ ಯೌವ್ವನಸ್ಥರ ಬಳಿಗೆ ಸಮಾಲೋಚನೆಗಾಗಿ ಹೋದನು. ಅವರು ಜನರಿಗೆ ಹೀಗೆ ಹೇಳು ಅಂದರು :

**1 ಅರಸು 12:11 ನನ್ನ ತಂದೆಯು ನಿಮ್ಮ ಮೇಲೆ ಭಾರವಾದ ನೊಗವನ್ನು ಹಾಕಿರುವುದು ನಿಜ. ಆದರೆ ನಾನು ಅದಕ್ಕೆ ಇನ್ನೂ ಹೆಚ್ಚಿನ ಭಾರವನ್ನು ಕೂಡಿಸುತ್ತೇನೆ ಅವನು ನಿಮ್ಮನ್ನು ಬಾರುಕೋಲುಗಳಿಂದ ಹೊಡೆದದ್ದು ನಿಜ. ನಾನಾದರೋ ನಿಮ್ಮನ್ನು ಮುಳ್ಳುಕೊರಡೆಗಳಿಂದ ದಂಡಿಸುವೆನು'**

ಉತ್ತರದಲ್ಲಿದ್ದ ಕುಲಗಳ ಜನರು ದಂಗೆ ಎದ್ದರು ಮತ್ತು ಇಸ್ರಾಯೇಲ್ ದೇಶವು ವಿಭಜನೆಯಾಯಿತು.

**ಇಸ್ರಾಯೇಲ್ – ಉತ್ತರ ರಾಜ್ಯ**

ಉತ್ತರ ರಾಜ್ಯವು ಹತ್ತು ಕುಲಗಳನ್ನು ಹೊಂದಿತ್ತು. ಅದು ದಂಗೆಯಿಂದ ಜನಿಸಿದ ರಾಜ್ಯವಾಗಿತ್ತು. ಅದನ್ನು ಹತ್ತೊಂಭತ್ತು ವಿವಿಧ ರಾಜರುಗಳು ಆಳಿದಾಗ್ಯೂ ಅವರಲ್ಲಿ ಒಬ್ಬನೂ ಒಳ್ಳೆಯ ರಾಜನಾಗಿರಲಿಲ್ಲ.

ಆಹಾಬನು ಎಲಿಯನ ಕಾಲದಲ್ಲಿದ್ದ ದುಷ್ಟ ರಾಜನಾಗಿದ್ದನು. ಅವನ ಹೆಂಡತಿಯು ಯೆಜೆಬೇಲಳು.

ಯೆಹೋರಾಮ, ಯೆಹು, ಯೆಹೋವಹಾಜ ಮತ್ತು ಯೆಹೋವಾಷನು ಎಲಿಷನ ಕಾಲದ ದುಷ್ಟ ರಾಜರುಗಳಾಗಿದ್ದರು.

ಪ್ರವಾದಿಗಳಾದ ಹೋಶೆಯ, ಆಮೋಸ, ಎಲಿಯ ಮತ್ತು ಎಲಿಷರು ಈ ರಾಜ್ಯದ ರಾಜರುಗಳನ್ನು ಮತ್ತು ಜನರನ್ನು ಎಚ್ಚರಿಸಿದರು. ಯೋನನೂ ಸಹ ಈ ರಾಜ್ಯದವನಾಗಿದ್ದನು.

2 ಅರಸು 17 ರಲ್ಲಿ ಉತ್ತರ ರಾಜ್ಯದ ಭಯಂಕರವಾದ ಪಾಪಗಳ ಒಂದು ಪಟ್ಟಿಯು ಕೊಡಲಾಗಿದೆ. ಅಂತಿಮವಾಗಿ, ಅವರ ಪಾಪಗಳು ಮಿತಿ ಮೀರಿದಾಗ ಅವರು ಸೆರೆಯಾಳುಗಳಾಗಿ ಹೋಗುವಂತೆ ದೇವರು ಬಿಟ್ಟರು.

**ಯೆಹೂದ – ದಕ್ಷಿಣ ರಾಜ್ಯ**

ದಕ್ಷಿಣ ರಾಜ್ಯವು ಎರಡು ಕುಲಗಳನ್ನು ಹೊಂದಿತ್ತು.

ಅದರ ಇಪ್ಪತ್ತು ರಾಜರುಗಳಲ್ಲಿ ಎಂಟು ರಾಜರುಗಳು ಒಳ್ಳೆಯವರಾಗಿದ್ದರು ಮತ್ತು ದೇವರು ಈ ರಾಜರುಗಳ ಸಲುವಾಗಿ ಯೆಹೂದವನ್ನು ಹೆಚ್ಚು ಕಾಲ ಉಳಿಸಿದರು.

ಒಳ್ಳೆಯ ರಾಜರುಗಳಲ್ಲಿ ಕೆಲವರು (ಆರಾಧನೆಯಲ್ಲಿ ಕ್ರಮವನ್ನು ಪುನಃ ಸ್ಥಾಪಿಸಿದ) ಯೆಹೋಷಾಫಾಟನು, ಯೆಹೋವಾಷನು, ಉಜ್ಜೀಯನು, ಯೊತಾಮನು ಮತ್ತು ಹಿಜ್ಕೀಯನು. ಯೆಹೂದದ ಪ್ರವಾದಿಗಳು ಯಾರೆಂದರೆ : ಮೀಕ, ಹಬಕ್ಕೂಕ, ಯೋವೇಲ, ಯೆರೆಮೀಯ, ಓಬದ್ಯ, ಯೆಶಾಯ, ನಹೂಮ ಮತ್ತು ಚೆಫನ್ಯ.

ಪ್ರಲಾಪಗಳ ಪುಸ್ತಕವು ಯೆಹೂದದ ಪತನದ ಬಗ್ಗೆ ಯೆರೆಮೀಯನು ವ್ಯಕ್ತಪಡಿಸಿದ ದುಃಖವಾಗಿದೆ. ಅದು ಈ ಮಾತುಗಳೊಂದಿಗೆ ಕೊನೆಗೊಳ್ಳುತ್ತದೆ :

**ಪ್ರಲಾಪ 5:22 ನಮ್ಮನ್ನು ನಿನ್ನ ಕಡೆಗೆ ತಿರುಗಿಸು; ನೀನು ತಿರುಗಿಸಿದ ಹಾಗೆ ತಿರುಗುವೆವು.**

## ಬಾಬಿಲೋನಿನಲ್ಲಿ ಸೆರೆವಾಸ

*ಕ್ರಿ. ಪೂ. 605 ರಿಂದ 535*

ನಾವು ಹಳೆ ಒಡಂಬಡಿಕೆಯಿಂದ ಕಲಿಯಬಹುದಾದ ಒಂದು ಅತ್ಯಂತ ಆದರಣೆಯನ್ನು ಕೊಡುವ ವಿಷಯವೇನೆಂದರೆ ದೇವರು ರಾಷ್ಟ್ರಗಳನ್ನು ನಿಯಂತ್ರಿಸುತ್ತಾರೆ. ಅವುಗಳು ದೇವರ ಯೋಜನೆಗನುಸಾರವಾಗಿ ಅಧಿಕಾರಕ್ಕೆ ಏಳುತ್ತವೆ ಮತ್ತು ಅಧಿಕಾರದಿಂದ ಬೀಳುತ್ತವೆ. ಇಸ್ರಾಯೇಲಿನ ಜನರು ಅವಿಧೇಯರಾಗಿ ಇತರೆ ದೇವರುಗಳನ್ನು ಆರಾಧಿಸಿದರು. ಆಗ ದೇವರು ಅವರನ್ನು ಶಿಸ್ತುಪಡಿಸುವುದಕ್ಕಾಗಿ ಮತ್ತು ಅವರನ್ನು ಗುಲಾಮರನ್ನಾಗಿ ಒಯ್ಯುವುದಕ್ಕಾಗಿ ಬಾಬಿಲೋನ್ ದೇಶವನ್ನು ಎಬ್ಬಿಸಿದರು.

ಬಾಬಿಲೋನ್ ಸೇನೆಯ ಒಬ್ಬ ಸೇನಾಧಿಕಾರಿಯು ಯೆಹೂದದ ಜನರು ಬಿದ್ದುಹೋದರೆಂದು ತಿಳಿದವನಾಗಿದ್ದನು.

**ಯೆರೆಮೀಯ 40:2,3 ಆಗ ಕಾವಲು ದಂಡಿನ ಅಧಿಪತಿಯು ಯೆರೆಮೀಯನನ್ನು ಕರೆಯಿಸಿ ಅವನಿಗೆ, "ನಿನ್ನ ದೇವರಾದ ಯೆಹೋವನು ಈ ಸ್ಥಳಕ್ಕೆ ಇಂಥ ಕೆಡುಕಾಗಲಿ ಎಂದು ಶಾಪಕೊಟ್ಟನು. ಆತನು ಅದನ್ನೇ ಬರಮಾಡಿ ತನ್ನ ಮಾತನ್ನು ನೆರವೇರಿಸಿದ್ದಾನೆ; ನೀವು ಯೆಹೋವನ ಧ್ವನಿಗೆ ಕಿವಿಗೊಡದೆ ಆತನಿಗೆ ಪಾಪಮಾಡಿದ್ದರಿಂದಲೇ ಇದು ನಿಮಗೆ ಸಂಭವಿಸಿದೆ."**

## ನೆಬುಕದ್ನೇಚರ

ಯೆಹೂದದ ಜನರೆಲ್ಲರೂ ಒಮ್ಮೆಲೇ ಸೆರೆಯಾಳುಗಳಾಗಿ ಒಯ್ಯಲ್ಪಡಲಿಲ್ಲ. ದಾನಿಯೇಲ, ಶದ್ರಕ್, ಮೇಶಕ್ ಮತ್ತು ಅಬೆದ್ನೆಗೊ ಮೊದಲು ಕೊಂಡೊಯ್ಯಲ್ಪಟ್ಟ ಗುಂಪಿನಲ್ಲಿದ್ದರು ಮತ್ತು ಅವರು ನಾಯಕತ್ವ ಸ್ಥಾನಕ್ಕೆ ಏರಿಸಲ್ಪಟ್ಟರು. ನೆಬುಕದ್ನೇಚರನು ಬಾಬಿಲೋನಿನ ರಾಜನಾಗಿದ್ದನು. ಅವನ ಆಳ್ವಿಕೆಯ ಸಮಯದಲ್ಲಿಯೇ ಶದ್ರಕ್, ಮೇಶಕ್ ಮತ್ತು ಅಬೆದ್ನೆಗೊ ಇವರೆಲ್ಲರೂ ಬೆಂಕಿಯ ಆವಿಗೆಯಲ್ಲಿ ಎಸೆಯಲ್ಪಟ್ಟರು ಮತ್ತು ಜೀವಂತವಾಗಿ ಹೊರಬಂದರು. ನೆಬುಕದ್ನೇಚರನು ಗರ್ವದಿಂದ ತುಂಬಿಕೊಂಡನು ಮತ್ತು ದೇವರು ತನಗೆ ಕೊಟ್ಟಿದ್ದೆಲ್ಲವನ್ನೂ ತಾನೇ ಸಾಧಿಸಿಕೊಂಡದ್ದೆಂದು ಹೇಳಿದನು.

**ದಾನಿಯೇಲ 4:30 ರಾಜನಾದ ನೆಬುಕದ್ನೇಚರನು... "ನನ್ನ ಮಹಿಮೆಯು ಪ್ರಸಿದ್ಧಿಗೆ ಬರುವಂತೆ ನನ್ನ ಸಾಮರ್ಥ್ಯ ಬಲದಿಂದ ರಾಜನಿವಾಸಕ್ಕಾಗಿ ನಾನು ಕಟ್ಟಿಸಿಕೊಂಡಿರುವುದು ಇಗೋ, ಮಹಾ ಪಟ್ಟಣವಾದ ಈ ಬಾಬೆಲ್" ಎಂದು ಕೊಚ್ಚಿಕೊಂಡನು"**

ಆ ಕ್ಷಣದಲ್ಲಿ ಅವನು ಹುಚ್ಚನಾದನು ಮತ್ತು ಒಂದು ಪ್ರಾಣಿಯಂತೆ ಬಯಲಿನಲ್ಲಿ ವಾಸಮಾಡಿದನು. ಹೀಗೆ ಸಂಭವಿಸುವುದೆಂದು ದಾನಿಯೇಲನು ಮೊದಲೇ ಎಚ್ಚರಿಸಿದ್ದನು ಮತ್ತು ಇದನ್ನು ತಿಳಿದುಕೊಳ್ಳುವವರೆಗೂ ಇದೇ ಪರಿಸ್ಥಿತಿಯಲ್ಲಿ ಏಳು ವರ್ಷಗಳನ್ನು ಕಳೆಯುವನೆಂದೂ ಎಚ್ಚರಿಸಿದ್ದನು :

**ಪರಾತ್ಪರನಾದ ದೇವರು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದನ್ನು ತನಗೆ ಬೇಕಾದವರಿಗೆ ಒಪ್ಪಿಸುತ್ತಾನೆ ಎಂಬುದು ನಿನಗೆ ತಿಳಿದು ಬರುವುದು (ದಾನಿಯೇಲ 4:25b) .**

ಏಳು ವರ್ಷಗಳ ಅಂತ್ಯದಲ್ಲಿ ನೆಬುಕದ್ನೇಚರನಿಗೆ ಸ್ವಸ್ಥಬುದ್ಧಿಯು ಹಿಂತಿರುಗಿ ಬಂದಿತು. ಆಗ ಅವನು ಹೇಳಿದ್ದೇನೆಂದರೆ :

**ದಾನಿಯೇಲ 4:37 ಈಗ ನೆಬೂಕದ್ನೆಚ್ಚರನಾದ ನಾನು ಪರಲೋಕ ರಾಜನನ್ನು ಹೊಗಳಿ, ಕೊಂಡಾಡಿ ಕೀರ್ತಿಸುತ್ತೇನೆ. ಆತನ ಕಾರ್ಯಗಳೆಲ್ಲಾ ಸತ್ಯ, ಆತನ ಮಾರ್ಗಗಳೆಲ್ಲಾ ನ್ಯಾಯ; ಸೊಕ್ಕಿನಿಂದ ನಡೆಯುವವರನ್ನು ತಗ್ಗಿಸಬಲ್ಲನು.**

**ಬೆಲ್ಶಚ್ಚರ**

ನೆಬುಕದ್ನೇಚರನ ಮೊಮ್ಮಗನಾದ ಬೆಲ್ಶಚ್ಚರನು ಬಾಬಿಲೋನಿನ ಕೊನೆಯ ಅರಸನಾಗಿದ್ದನು. ಅವನ ಬಗ್ಗೆ ಹೆಚ್ಚು ತಿಳಿದಿಲ್ಲ. ಆದರೆ ಅವನು ನಡೆಸಿದ ಮಹಾ ಭೋಜನಾ ಕೂಟದಲ್ಲಿ ಸಾವಿರಾರು ಜನರು ಭಾಗಿಯಾಗಿದ್ದರು ಮತ್ತು ಯೆರುಸಲೇಮಿನ ದೇವಾಲಯದಿಂದ ಒಯ್ಯಲ್ಪಟ್ಟಿದ್ದ ಬೆಳ್ಳಿಯ ಮತ್ತು ಚಿನ್ನದ ಪಾತ್ರೆಗಳಲ್ಲಿ ಅವರು ಕುಡಿದರು. ಆಗ ಒಂದು ಕೈ ಕಾಣಿಸಿಕೊಂಡು ಗೋಡೆಯ ಮೇಲೆ ಒಂದು ಸಂದೇಶವನ್ನು ಬರೆಯಿತು. ಅದರ ಅರ್ಥವನ್ನು ದಾನಿಯೇಲನು ವಿವರಿಸಿದನು.

**ದಾನಿಯೇಲ 5:26-28,31 ಇದರ ಅರ್ಥವು ಹೀಗಿದೆ, ಮೆನೇ ಎಂದರೆ, ದೇವರು ನಿನ್ನ ಆಳ್ವಿಕೆಯ ಕಾಲವನ್ನು ಲೆಕ್ಕಿಸಿ ಕೊನೆಗಾಣಿಸಿದ್ದಾನೆ. ತೆಕೇಲ್ ಎಂದರೆ, ನೀನು ತಕ್ಕಡಿಯಲ್ಲಿ ತೂಗಲ್ಪಟ್ಟು ನಿನ್ನ ಯೋಗ್ಯತೆ ಕಡಿಮೆಯಾಗಿ ಕಂಡು ಬಂದಿದೆ. ಪೆರೇಸ್ ಎಂದರೆ, ನಿನ್ನ ರಾಜ್ಯವು ವಿಭಾಗವಾಗಿ ಮೇದ್ಯಯರಿಗೂ, ಪಾರಸಿಯರಿಗೂ ಕೊಡಲ್ಪಟ್ಟಿದೆ" ಎಂದು ಅರಿಕೆಮಾಡಿದನು.**

**ದಾನಿಯೇಲ 5:30,31a ಅದೇ ರಾತ್ರಿಯಲ್ಲಿ ಕಸ್ದೀಯ ರಾಜನಾದ ಬೇಲ್ಶಚ್ಚರನು ಕೊಲ್ಲಲ್ಪಟ್ಟನು. ಮೇದ್ಯನಾದ ದಾರ್ಯಾವೆಷನು ರಾಜ್ಯವನ್ನು ತೆಗೆದುಕೊಂಡನು.**

ಇಸ್ರಾಯೇಲ್ ದೇಶವು ದುಷ್ಟತನ ನಡೆಸಿ ಬಾಬಿಲೋನಿಯನ್ನರ ಸೆರೆಯಾಯಿತು. ಬಾಬಿಲೋನ್ ದುಷ್ಟತನ ನಡೆಸಿ ಪರ್ಷಿಯನ್ನರ ಸೆರೆಯಾಯಿತು.

**ಕೋರೇಷ**

ಕೋರೇಷನು ಪರ್ಷಿಯನ್ ಸಾಮ್ರಾಜ್ಯದ ಸ್ಥಾಪಕನಾಗಿದ್ದನು ಮತ್ತು ಅವನು ಬಾಬಿಲೋನನ್ನು ವಶಪಡಿಸಿಕೊಂಡನು ಮತ್ತು ಯೆಹೂದ್ಯರನ್ನು ಸೆರೆಯಿಂದ ಬಿಡಿಸಲು ದೇವರಿಂದ ಅಭಿಷೇಕಿಸಲ್ಪಟ್ಟಿದ್ದನು. ಪ್ರವಾದಿಯಾದ ಯೆಶಾಯನು ಕೋರೇಷನ ಬರುವಿಕೆಯ ಬಗ್ಗೆ ಪ್ರವಾದಿಸಿದ್ದನು ಮತ್ತು ಅವನು ಹುಟ್ಟುವುದಕ್ಕಿಂತ ಇನ್ನೂರು ವರ್ಷಗಳ ಮುಂಚೆಯೇ ಅವನ ಹೆಸರನ್ನು ಸಹ ಮುಂತಿಳಿಸಿದ್ದನು.

**ಯೆಶಾಯ 44:24a,28 ನಿನ್ನ ವಿಮೋಚಕನಾದ ಯೆಹೋವನು ಹೀಗೆನ್ನುತ್ತಾನೆ…**

**ಕೋರೆಷನ ವಿಷಯವಾಗಿ, 'ಅವನು ನನ್ನ ಮಂದೆಯನ್ನು ಕಾಯುವವನು, ಯೆರೂಸಲೇಮು ಕಟ್ಟಲ್ಪಡಲಿ, ದೇವಸ್ಥಾನದ ಅಸ್ತಿವಾರವು ಹಾಕಲ್ಪಡಲಿ' ಎಂದು ಹೇಳಿ, 'ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸತಕ್ಕವನು'" ಎಂಬುದಾಗಿ ಮಾತನಾಡುವವನು ನಾನೇ.**

## ಪುನರ್ ಸ್ಥಾಪನೆ

*ಕ್ರಿ.ಪೂ. 535 ರಿಂದ 400*

ಸೆರೆಯಾಳುಗಳು ಮೂರು ವಿವಿಧ ಕಾಲಘಟ್ಟದಲ್ಲಿ ಇಸ್ರಾಯೇಲಿಗೆ ಹಿಂತಿರುಗಿದರು. ಜೆರುಬ್ಬಾಬೇಲ, ಯೆಶುವಾ, ಹಗ್ಗಾಯ್ ಮತ್ತು ಜೆಕರ್ಯ ಮೊದಲು ಹಿಂತಿರುಗಿದರು. ದೇವಾಲಯವನ್ನು ಪುನರ್ ನಿರ್ಮಾಣ ಮಾಡಬೇಕೆಂಬುದು ಅವರ ಉದ್ದೇಶವಾಗಿತ್ತು.

ಎಜ್ರನು ಎರಡನೆಯ ಗುಂಪಿನಲ್ಲಿ ಬಂದನು ಮತ್ತು ಧರ್ಮಶಾಸ್ತ್ರ ಬೋಧನೆಯನ್ನು ಮತ್ತು ನೀತಿವಂತ ಆರಾಧನೆಯನ್ನು ಪುನಃ ಸ್ಥಾಪಿಸಬೇಕೆಂಬುದು ಅವನ ಉದ್ದೇಶವಾಗಿತ್ತು.

ಅಂತಿಮವಾಗಿ ನೆಹೆಮೀಯ ಮತ್ತು ಇತರರು ಯೆರುಸಲೇಮಿನ ಪೌಳಿಗೋಡೆಗಳನ್ನು ಪುನರ್ ನಿರ್ಮಾಣ ಮಾಡುವುದಕ್ಕಾಗಿ ಹಿಂತಿರುಗಿದರು.

ಮಲಾಕಿ ಪುಸ್ತಕವನ್ನು ಯಾವಾಗ ಬರೆಯಲಾಯಿತು ಎಂಬುದು ಅಷ್ಟು ಸ್ಪಷ್ಟವಾಗಿಲ್ಲ. ಅದು ಬಹುಶಃ ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟ ಕೊನೆಯ ಪುಸ್ತಕವಾಗಿರಬಹುದು. ಮಲಾಕಿ ಹೀಗೆ ಬರೆದನು,

**ಮಲಾಕಿ 4:2a ನನ್ನ ನಾಮದಲ್ಲಿ ಭಯಭಕ್ತಿಯಿಟ್ಟಿರುವ ನಿಮಗೋ ದೇವರ ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟುಮಾಡುವ ಕಿರಣಗಳುಳ್ಳವನಾಗಿ ಮೂಡುವನು…"**

## ವಿಮರ್ಶೆಗಾಗಿ ಪ್ರಶ್ನೆಗಳು

1. ಈ ಪಾಠದಲ್ಲಿ ಪಟ್ಟಿ ಮಾಡಲಾಗಿರುವ ಹಳೆ ಒಡಂಬಡಿಕೆ ಇತಿಹಾಸದ ಒಂಭತ್ತು ಕಾಲಗಳು ಯಾವವು ?

2. ಇಸ್ರಾಯೇಲ್ ಜನರು ಇತರೆ ದೇಶಗಳಂತೆ ನಮಗೂ ಒಬ್ಬ ಮಾನವ ರಾಜನು ಬೇಕೆಂದು ಬಯಸಿದಾಗ ದೇವರು ಅವರಿಗೆ ಯಾವ ಎಚ್ಚರಿಕೆಯನ್ನು ಕೊಟ್ಟರು ?

3. ಈ ಪಾಠದ ಪ್ರಕಾರ, ನಾವು ಹಳೆ ಒಡಂಬಡಿಕೆಯಿಂದ ಕಲಿಯಬಹುದಾದ ಒಂದು ಅತ್ಯಂತ ಆದರಣೆಯ ವಿಷಯವೇನು ? ಈ ಸತ್ಯದ ಬಗ್ಗೆ ಸತ್ಯವೇದದಲ್ಲಿರುವ ಉದಾಹರಣೆಗಳನ್ನು ಕೊಡಿರಿ.

## ಪಾಠ ಮೂರು

# *ದೇವರ ಒಡಂಬಡಿಕೆಯ ಮಕ್ಕಳು*

### ಪೀಠಿಕೆ

ದೇವರು ಭೂಮಿಯನ್ನು ಸೃಷ್ಟಿಸುವುದರ ಮೊದಲು ಮಾನವಕುಲದ ಸೃಷ್ಟಿಯನ್ನು ಯೋಜಿಸಿದರು. ದೇವರು ತನ್ನ ಪೂರ್ವಜ್ಞಾನದ ಮೂಲಕ ಆದಾಮ ಮತ್ತು ಹವ್ವರು ಪಾಪ ಮಾಡುವರೆಂದು ತಿಳಿದಿದ್ದರು ಮತ್ತು ಒಬ್ಬ ವಿಮೋಚಕನ ಬರುವಿಕೆಯನ್ನೂ ಯೋಜಿಸಿದರು. ದೇವರು :

* ಒಡಂಬಡಿಕೆಯನ್ನು ಮಾಡಿಕೊಳ್ಳುವ,
* ಒಡಂಬಡಿಕೆಯನ್ನು ಪಾಲಿಸು,
* ಒಡಂಬಡಿಕೆಯನ್ನು ಪ್ರಕಟಿಸುವ ದೇವರಾಗಿದ್ದಾರೆ.

ಮೋಶೆಯ ಇದರ ಬಗ್ಗೆ ಬರೆದನು.

**ಧರ್ಮೋ 7:9 ಆದುದರಿಂದ ನಿಮ್ಮ ದೇವರಾದ ಯೆಹೋವನೊಬ್ಬನೇ ದೇವರೆಂದು ತಿಳಿದುಕೊಳ್ಳಬೇಕು. ಆತನು ನಂಬಿಗಸ್ತನಾದ ದೇವರು; ತನ್ನನ್ನು ಪ್ರೀತಿಸಿ ತನ್ನ ಆಜ್ಞೆಗಳನ್ನು ಅನುಸರಿಸುವವರಿಗೆ ತಾನು ಮಾಡಿದ ವಾಗ್ದಾನವನ್ನೂ ಮತ್ತು ಕೃಪೆಯನ್ನೂ ಅವರ ಸಂತತಿಯವರಲ್ಲಿ ಸಾವಿರ ತಲೆಗಳವರೆಗೂ ನೆರವೇರಿಸುವವನಾಗಿಯೂ…**

ಸೃಷ್ಟಿಗಿಂತ ಮೊದಲು ದೇವರು ಮಾನವಕುಲದೊಂದಿಗೆ ಒಂದು ಶಾಶ್ವತವಾದ ಒಡಂಬಡಿಕೆಯನ್ನು ಸ್ಥಾಪಿಸಿದರು. ಈ ಒಡಂಬಡಿಕೆಯು ಈಗಲೂ ಚಾಲ್ತಿಯಲ್ಲಿದೆ. ಈ ಒಡಂಬಡಿಕೆಯು ನಮಗೆ ಸೇರಿದ್ದು !

ಹಳೆ ಒಡಂಬಡಿಕೆಯಲ್ಲಿ ದೇವರು ಸ್ಥಾಪಿಸಿರುವ ಒಡಂಬಡಿಕೆಗಳು ಇಂದಿಗೂ ನಮ್ಮ ಜೀವನದ ಭಾಗಗಳಾಗಿವೆ.

### ವ್ಯಾಖ್ಯಾನ

ಒಡಂಬಡಿಕೆಯೆಂದರೆ ದೇವರು ಮತ್ತು ಆತನ ಜನರ ನಡುವೆ ಇರುವ ಒಂದು ಗಂಭೀರವಾದ ಒಪ್ಪಂದವಾಗಿದೆ, ಒಂದು ರೀತಿಯ ಕರಾರು ಇದ್ದ ಹಾಗೆ. ರಕ್ತದ ಒಡಂಬಡಿಕೆಯೆಂದರೆ ಆತನ ಸ್ವಂತ ರಕ್ತದಿಂದ ಮುದ್ರೆ ಹಾಕಲ್ಪಟ್ಟ ಒಡಂಬಡಿಕೆಯಾಗಿದ್ದು ಅದನ್ನು ಮುರಿಯಲು ಸಾಧ್ಯವಿಲ್ಲ.

ಈ ಒಡಂಬಡಿಕೆಗಳನ್ನು ದೇವರೇ ಪ್ರಾರಂಭಿಸಿದರು ಮತ್ತು ಆತನು ಅವುಗಳನ್ನು ತನ್ನ ಕುರಿತಾದ, ತನ್ನ ಯೋಜನೆಗಳ ಕುರಿತಾದ, ತನ್ನ ಉದ್ದೇಶಗಳ ಕುರಿತಾದ ಒಂದು ಪ್ರಕಟನೆಯಾಗಿ ಮಾನವಕುಲಕ್ಕೆ ಪ್ರಸ್ತುತಪಡಿಸಿದರು.

**ಎರಡು ರೀತಿಯಾದ ಒಡಂಬಡಿಕೆಗಳು**

✳ *ಷರತ್ತಿಲ್ಲದ ಒಡಂಬಡಿಕೆ*

ಎರಡು ರೀತಿಯಾದ ಒಡಂಬಡಿಕೆಗಳಿವೆ - ಷರತ್ತಿಲ್ಲದ ಒಡಂಬಡಿಕೆ ಮತ್ತು ಷರತ್ತುಬದ್ಧ ಒಡಂಬಡಿಕೆ. ಷರತ್ತಿಲ್ಲದ ಒಡಂಬಡಿಕೆಯು ಮಾನವಕುಲದ ಪರವಾಗಿ ದೇವರು ಕೈಗೊಂಡ ಬಾಧ್ಯತೆಯಾಗಿದೆ. ವಿಧೇಯತೆಯಿದ್ದರೂ ವಿಧೇಯತೆಯಿಲ್ಲದಿದ್ದರೂ ದೇವರು ಅವುಗಳನ್ನು ನೆರವೇರಿಸುತ್ತಾರೆ.

✳ *ಷರತ್ತುಬದ್ಧ ಒಡಂಬಡಿಕೆ*

ಇತರೆ ಒಡಂಬಡಿಕೆಗಳು ಷರತ್ತುಬದ್ಧ ಒಡಂಬಡಿಕೆಗಳಾಗಿದ್ದು ಮಾನವಕುಲವು ಅವುಗಳನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದಾಗಿದೆ. ಈ ಒಡಂಬಡಿಕೆಗಳ ಷರತ್ತುಗಳನ್ನು ಎಂದಿಗೂ ಬದಲಾಗದ ದೇವರು ನೇಮಿಸಿದ್ದಾರೆ. ಹಾಗಾಗಿ ಈ ನಿಯಮಗಳನ್ನು ಬದಲಾಯಿಸಲಾಗುವುದಿಲ್ಲ. ಷರತ್ತುಬದ್ಧ ಒಡಂಬಡಿಕೆಯ ಲಾಭಗಳನ್ನು ನಂಬಿಕೆ ಮತ್ತು ವಿಧೇಯತೆಯ ಮೂಲಕ ಮಾತ್ರ ಪಡೆದುಕೊಳ್ಳಲು ಸಾಧ್ಯ.

**ಶಾಶ್ವತವಾದ ಒಡಂಬಡಿಕೆ (ಷರತ್ತುಬದ್ಧ)**

---

**ಒಂದು ಮೂಲಭೂತವಾದ ಒಡಂಬಡಿಕೆ**

ಶಾಶ್ವತವಾದ ಒಡಂಬಡಿಕೆಯು ಗತ ನಿತ್ಯತ್ವದಲ್ಲಿ ತಂದೆಯಾದ ದೇವರ ಮಗನ ಮತ್ತು ಪರಿಶುದ್ಧಾತ್ಮರ ಸಮಾಲೋಚನೆಯಲ್ಲಿ ಪ್ರಾರಂಭವಾಯಿತು. ಒಂದು ಶಾಶ್ವತ ಕುಟುಂಬವಿರಬೇಕೆಂಬ ತನ್ನ ಬಯಕೆಯನ್ನು ಪೂರೈಸಲು ದೇವರು ಮಾನವಕುಲದ ಸೃಷ್ಟಿಯನ್ನು ಯೋಜಿಸಿದರು. ಅವರು ತನ್ನ ಮಗನಿಗಾಗಿ ಒಂದು ವಧುವನ್ನು ಬಯಸಿದರು ಮತ್ತು ಒಂದು ಶಾಶ್ವತ ಕುಟುಂಬವನ್ನು ಬಯಸಿದರು.

ಆದಾಮ ಮತ್ತು ಹವ್ವರ ದಂಗೆ ಮತ್ತು ಪತನವನ್ನು ಮೊದಲೇ ತಿಳಿದಿದ್ದ ಆತನು ತನ್ನ ಮಗನ ಮರಣದ ಮೂಲಕ ಅವರ ವಿಮೋಚನೆಯನ್ನು ಯೋಜಿಸಿದನು. ಮಾನವಕುಲವು ಯಾವುದಕ್ಕಾಗಿ ಸೃಷ್ಟಿಸಲ್ಪಟ್ಟಿತೋ ಅವೆಲ್ಲವನ್ನೂ ವಿಮೋಚನೆಯ ಮೂಲಕ ಪುನಃ ಹೊಂದಬೇಕಾಗಿತ್ತು. ಪುರುಷರು ಮತ್ತು ಮಹಿಳೆಯರು ಪರಿಪೂರ್ಣರೂ, ನೀತಿವಂತರೂ, ಪೂರ್ಣಗೊಂಡವರೂ ಆದವರಾಗಿ ದೇವರ ಮಗನಿಗೆ ಸೂಕ್ತವಾದ ಶಾಶ್ವತ ವಧುವಾಗುವರು.

ಈ ಮೂಲಭೂತವಾದ ಶಾಶ್ವತ ಒಡಂಬಡಿಕೆಯ ಮೇಲೆಯೇ ಉಳಿದೆಲ್ಲಾ ಒಡಂಬಡಿಕೆಗಳು ಆಧರಿಸಿದೆ.

ನಾವು

✱ *ಕರೆಯಲ್ಪಟ್ಟಿದ್ದೇವೆ*

ಶಾಶ್ವತವಾದ ಒಡಂಬಡಿಕೆಯು ಮಾನವಕುಲದ ಕಡೆಗಿರುವ ದೇವರ ಉದ್ದೇಶ ಮತ್ತು ಕೃಪೆಯನ್ನು ಪ್ರಕಟಿಸುತ್ತದೆ.

**2 ತಿಮೊಥಿ 1:9,10 ಆತನು ನಮ್ಮಲ್ಲಿರುವ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವುದಕ್ಕೆ ಕರೆದನು. ಆತನು ಅನಾದಿಕಾಲದಲ್ಲಿ ಆ ಕೃಪೆಯನ್ನು ಕ್ರಿಸ್ತ ಯೇಸುವಿನಲ್ಲಿ ನಮಗೆ ಅನುಗ್ರಹಿಸಿ, ಈಗ ನಮ್ಮ ರಕ್ಷಕನಾದ ಕ್ರಿಸ್ತ ಯೇಸುವಿನ ಪ್ರತ್ಯಕ್ಷತೆಯ ಮೂಲಕ ಅದನ್ನು ಪ್ರಕಟಪಡಿಸಿದ್ದಾನೆ. ಈತನು ಮರಣವನ್ನು ನಿರ್ಮೂಲಗೊಳಿಸಿ ಸುವಾರ್ತೆಯ ಮೂಲಕ ಜೀವವನ್ನೂ ಅಮರತ್ವವನ್ನೂ ಬೆಳಕಿಗೆ ತಂದಿದ್ದಾನೆ.**

✱ *ವಿಮೋಚಿಸಲ್ಪಟ್ಟಿದ್ದೇವೆ*

ಅದು ಆತನ ಮಗನಾದ ಯೇಸುವಿನ ರಕ್ತಧಾರೆಯ ಮೂಲಕ ಮಾನವಕುಲಕ್ಕಾಗಿ ದೇವರು ಹೊಂದಿದ್ದ ವಿಮೋಚನೆಯ ಯೋಜನೆಯನ್ನು ಪ್ರಕಟಿಸುತ್ತದೆ.

**ಇಬ್ರಿಯರಿಗೆ 13:20 ನಿತ್ಯವಾದ ಒಡಂಬಡಿಕೆಯನ್ನು, ರಕ್ತದಿಂದ ನಿಶ್ಚಯಪಡಿಸುವುದಕ್ಕಾಗಿ, ಸಭೆಯೆಂಬ ಹಿಂಡಿಗೆ ಮಹಾಪಾಲಕನಾಗಿರುವ ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಬರಮಾಡಿದ, ಶಾಂತಿದಾಯಕನಾದ ದೇವರು ...**

✱ *ಕ್ರಿಸ್ತನಲ್ಲಿ ಮೊದಲೇ ನೇಮಿಸಲ್ಪಟ್ಟೆವು*

ಇದು ಮಾನವಕುಲವು ಸೃಷ್ಟಿಸಲ್ಪಡುವುದು ಮತ್ತು ಆನಂತರ ಅದು ತನ್ನ ಮಗನ ಸಾರೂಪ್ಯಕ್ಕೆ ಅನುಗುಣವಾಗುವುದು ಎಂಬ ದೇವರ ಯೋಜನೆಯನ್ನು ಪ್ರಕಟಿಸುತ್ತದೆ.

**ರೋಮಾ 8:29,30 ದೇವರು ಯಾರನ್ನು ತಮ್ಮವರೆಂದು ಮೊದಲೇ ಆರಿಸಿಕೊಂಡನೋ ಅವರನ್ನು ತನ್ನ ಮಗನ ಅನುರೂಪಿಗಳಾಗುವಂತೆ ಆಗಲೇ ನೇಮಿಸಿದನು. 30ಮತ್ತು ಯಾರನ್ನು ಮೊದಲು ನೇಮಿಸಿದನೋ ಅವರನ್ನು ಕರೆದನು. ಯಾರನ್ನು ಕರೆದನೋ ಅವರನ್ನು ನೀತಿವಂತರೆಂದು ನಿರ್ಣಯಿಸಿದನು. ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು ಮಹಿಮಾಪದವಿಗೆ ಸೇರಿಸಿದನು.**

✱ *ಭವಿಷ್ಯವನ್ನು ಹೊಂದಿದ್ದೇವೆ*

ಗತನಿತ್ಯತ್ವದಿಂದ ದೇವರು ಮಾನವಕುಲದೊಂದಿಗೆ ಹೊಂದಿರುವ ಶಾಶ್ವತವಾದ ಒಡಂಬಡಿಕೆಯು ನಮ್ಮ ಭವಿಷ್ಯವನ್ನು ಸ್ಥಾಪಿಸಿತು.

**ಎಫೆಸ 1:4 ನಾವು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು, ಜಗತ್ತು ಸೃಷ್ಟಿಯಾಗುವುದಕ್ಕಿಂತ ಮೊದಲೇ ದೇವರು ಕ್ರಿಸ್ತನಲ್ಲಿ ನಮ್ಮನ್ನು ಆರಿಸಿಕೊಂಡನು...**

**1 ಕೊರಿಂಥ 2:7 ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ. ಅದು ಯಾವುದೆಂದರೆ ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಮರೆಮಾಡಿದ್ದ ದೇವರ ಜ್ಞಾನದ ಮರ್ಮವೇ ಆಗಿದೆ.**

**ನಮ್ಮ ಆಶೀರ್ವಾದಗಳು**

* *ನಿತ್ಯವಾದ ಜೀವನ*

ಶಾಶ್ವತವಾದ ಒಡಂಬಡಿಕೆಯ ಭಾಗಿಗಳಾದ ನಾವು ನಿತ್ಯವಾದ ಜೀವನವನ್ನು ಹೊಂದಿದ್ದೇವೆ. ಅದು ನಮ್ಮೊಳಗಿರುವ ದೇವರ ಜೀವವಾಗಿದೆ.

**ತೀತನು 1:2 ದೇವರು, ಅನಾದಿಕಾಲದಲ್ಲಿಯೇ ವಾಗ್ದಾನ ಮಾಡಿದ ನಿತ್ಯಜೀವದ ನಿರೀಕ್ಷೆಯನ್ನು...**

* *ಆತನ ಪ್ರೀತಿ*

ನಾವು ಆತನ ಪ್ರೀತಿಯನ್ನು ಹೊಂದಿಕೊಳ್ಳಬಹುದು.

**ಯೆರೆಮೀಯ 31:3 ಯೆಹೋವನು... ದರ್ಶನಕೊಟ್ಟು, "ನಾನು ನಿನ್ನನ್ನು ಪ್ರೀತಿಸಿರುವುದು ಶಾಶ್ವತ ಪ್ರೇಮದಿಂದಲೇ; ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ."**

* *ನೀತಿವಂತಿಕೆ*

ದಾನಿಯೇಲ 9:24 ರ ಪ್ರಕಾರ,

**ಅಧರ್ಮವನ್ನು ಕೊನೆಗಾಣಿಸುವುದು, ಪಾಪಗಳನ್ನು ತೀರಿಸುವುದು, ಅಪರಾಧವನ್ನು ನಿವಾರಿಸುವುದು, ಸನಾತನ ಧರ್ಮವನ್ನು ಸ್ಥಾಪಿಸುವುದು... ನಿಷ್ಕರ್ಷೆಯಾಗಿದೆ.**

ನಮ್ಮ ಪರವಾಗಿ ಕ್ರಿಸ್ತನು ಮಾಡಿದ ವಿಮೋಚನಾ ಕಾರ್ಯವು ನಮ್ಮ ಪಾಪಗಳಿಗೆ ಪ್ರಾಯಶ್ಚಿತ್ತವನ್ನು ಮತ್ತು ಶಾಶ್ವತವಾದ ನೀತಿವಂತಿಕೆಯನ್ನು ತರುವುದಾಗಿತ್ತು.

**2 ಕೊರಿಂಥ 5:21 ಪಾಪವನ್ನೇ ಅರಿಯದ ಕ್ರಿಸ್ತ ಯೇಸುವನ್ನು ದೇವರು ನಮಗೋಸ್ಕರ ಪಾಪಸ್ವರೂಪಿಯನ್ನಾಗಿಸಿದರು. ಕ್ರಿಸ್ತ ಯೇಸುವಿನಲ್ಲಿ ನಾವು ನೀತಿವಂತರಾಗಬೇಕೆಂದು ದೇವರು ಹೀಗೆ ಮಾಡಿದರು.**

* *ಹೆಸರು*

ನಮಗೆ ಶಾಶ್ವತವಾದ ಹೆಸರು ಕೊಡಲ್ಪಟ್ಟಿದೆ.

**ಯೆಶಾಯ 56:5 ನನ್ನ ಆಲಯದಲ್ಲಿಯೂ ಗೋಡೆಗಳ ಬಳಿಗೂ ಕುಮಾರ ಕುಮಾರ್ತೆಯರಿಗಿಂತ ಉತ್ತಮವಾದ ಸ್ಥಳವನ್ನೂ ಹೆಸರನ್ನೂ ನಾನು ಕೊಡುತ್ತೇನೆ. ಎಂದಿಗೂ ಅಳಿಯದ ಶಾಶ್ವತವಾದ ಹೆಸರನ್ನು ಅವರಿಗೆ ನಾನು ಕೊಡುವೆನು ಎಂದು ಹೇಳುತ್ತಾನೆ.**

* *ರಾಜ್ಯ*

ನಾವು ಶಾಶ್ವತವಾದ ರಾಜ್ಯದ ಭಾಗವಾಗುತ್ತೇವೆ.

**ದಾನಿಯೇಲ 7:27 ರಾಜ್ಯವೂ ದೊರೆತನವೂ ಆಕಾಶದ ಕೆಳಗಿರುವ ಪೂರ್ತಿ ರಾಜ್ಯಗಳ ಮಹತ್ತು ಮಹೋನ್ನತನ ಪರಿಶುದ್ಧವಾದ ಜನರಿಗೆ ಕೊಡಲ್ಪಡುವದು; ಆತನ ರಾಜ್ಯವು ನಿತ್ಯವಾದ ರಾಜ್ಯ ಮತ್ತು ಎಲ್ಲಾ ದೊರೆತನಗಳೂ ಆತನನ್ನು ಸೇವಿಸುವವು ಮತ್ತು ವಿಧೇಯವಾಗಿರುವವು.**

* *ಶಾಶ್ವತವಾದ ಆನಂದ*

ನಮಗೆ ಶಾಶ್ವತವಾದ ಆನಂದವಿದೆ.

**ಯೆಶಾಯ 51:11 ಆದಕಾರಣ ಕರ್ತನಿಂದ ವಿಮೋಚಿಸಲ್ಪಟ್ಟವರು ತಿರುಗಿಕೊಂಡು ಹಾಡುತ್ತಾ ಚೀಯೋನಿಗೆ ಬರುವರು; ಶಾಶ್ವತವಾದ ಆನಂದವು ಅವರ ತಲೆಯ ಮೇಲಿರುವದು, ಅವರು ಹರ್ಷಾನಂದಗಳನ್ನು ಹೊಂದಿಕೊಳ್ಳುವರು; ದುಃಖವು, ವ್ಯಥೆಯು ಓಡಿ ಹೋಗುವವು.**

**ಷರತ್ತುಗಳು**

ಒಡಂಬಡಿಕೆಯ ಎಲ್ಲಾ ಆಶೀರ್ವಾದಗಳನ್ನು ನೀಡುವುದು ದೇವರ ಪಾತ್ರವಾಗಿತ್ತು. ನಮ್ಮ ಪಾತ್ರವೇನು? ಶಾಶ್ವತವಾದ ಒಡಂಬಡಿಕೆಯನ್ನು ಸ್ವೀಕರಿಸಿ ಅದನ್ನು ಇಂದಿಗೂ ಮತ್ತು ಎಂದೆಂದಿಗೂ ನಮ್ಮದಾಗಿಸಿಕೊಳ್ಳಲು ಯಾವ ಷರತ್ತುಗಳಿವೆ?

* *ನಂಬಿಕೆ*

ಈ ಶಾಶ್ವತವಾದ ಒಡಂಬಡಿಕೆಯನ್ನು ನಮ್ಮ ಜೀವಿತಗಳಲ್ಲಿ ಹೊಂದಿಕೊಳ್ಳಲು ಇರುವ ಒಂದೇ ಒಂದು ಮಾರ್ಗವು - ನಂಬಿಕೆಯ ಮೂಲಕವಾಗಿದೆ.

**ಯೋಹಾನ 3:16 ದೇವರು ಲೋಕವನ್ನು ಎಷ್ಟೋ ಪ್ರೀತಿಮಾಡಿ ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಯಾವನಾದರೂ ನಾಶವಾಗದೆ ನಿತ್ಯಜೀವವನ್ನು ಪಡೆದವನಾಗಿರುವನು.**

* *ವಿಧೇಯತೆ*

ಈ ಶಾಶ್ವತವಾದ ಒಡಂಬಡಿಕೆಯನ್ನು ನಮ್ಮ ಜೀವಿತಗಳಲ್ಲಿ ಚಾಲ್ತಿಯಲ್ಲಿರುವಂತೆ ಕಾಪಾಡಿಕೊಳ್ಳಲು ವಿಧೇಯತೆಯಿರಬೇಕು.

**ಯೋಹಾನ 14:15 ನೀವು ನನ್ನನ್ನು ಪ್ರೀತಿಸುವದಾದರೆ ನನ್ನ ಆಜ್ಞೆಗಳನ್ನು ಕೈಕೊಳ್ಳಿರಿ.**

**ಇಬ್ರಿಯ 5:9 ಇದಲ್ಲದೆ ಸಿದ್ಧಿಗೆ ಬಂದು ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಆತನು ಕರ್ತನಾದನು.**

* *ಮುದ್ರೆ ಹಾಕಲ್ಪಟ್ಟಿದ್ದೇವೆ*

ಶಾಶ್ವತವಾದ ಒಡಂಬಡಿಕೆಯನ್ನು ತಂದೆಯು ಯೋಜಿಸಿದರು, ಅದು ಮಗನಿಂದ ನೆರವೇರಿಸಲ್ಪಟ್ಟಿತು ಮತ್ತು ಪರಿಶುದ್ಧಾತ್ಮನಿಂದ ಮುದ್ರೆ ಹಾಕಲ್ಪಟ್ಟಿತು.

**ಎಫೆಸ 1:13 ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯ ವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ.**

**ಏದೆನ್ ಒಡಂಬಡಿಕೆ (ಷರತ್ತುಬದ್ಧ)**

ಏದೆನ್ ಒಡಂಬಡಿಕೆಯು ದೇವರು ಆದಾಮ ಮತ್ತು ಹವ್ವರನ್ನು ಸೃಷ್ಟಿಸಿ ಏದೆನ್ ತೋಟದಲ್ಲಿರಿಸಿದಾಗ ಸ್ಥಾಪಿಸಿದ ಮೊದಲ ಒಡಂಬಡಿಕೆಯಾಗಿದೆ. ಅದರಲ್ಲಿ, ಅವರು ಮಾನವಕುಲಕ್ಕಾಗಿ ಹೊಂದಿದ್ದ ತಮ್ಮ ಉದ್ದೇಶ ಮತ್ತು ಯೋಜನೆಯನ್ನು ಪ್ರಕಟಿಸಿದರು.

ಈ ಒಡಂಬಡಿಕೆಯು, ಇತರೆ ಎಲ್ಲಾ ಒಡಂಬಡಿಕೆಗಳಂತೆ, ವಿಧೇಯತೆಗೆ ಆಶೀರ್ವಾದವನ್ನೂ ಮತ್ತು ಅವಿಧೇಯತೆಗೆ ಶಾಪವನ್ನೂ ಒದಗಿಸಿತು.

**ಆಶೀರ್ವಾದಗಳು**

**ಆದಿಕಾಂಡ 1:28-30 ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿದನು. ದೇವರು--ಅಭಿವೃದ್ಧಿಯಾಗಿ ಹೆಚ್ಚಿ ಭೂಮಿಯನ್ನು ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ; ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯ ಮೇಲೆ ಚಲಿಸುವ ಪ್ರತಿಯೊಂದು ಜೀವಿಯ ಮೇಲೆಯೂ ದೊರೆತನಮಾಡಿರಿ ಎಂದು ಅವರಿಗೆ ಹೇಳಿದನು.**

**ದೇವರು--ಇಗೋ, ಸಮಸ್ತ ಭೂಮಿಯ ಮೇಲೆ ಇರುವ ಬೀಜವುಳ್ಳ ಪ್ರತಿಯೊಂದು ಪಲ್ಯವನ್ನೂ ಬೀಜಬಿಡುವ ಪ್ರತಿಯೊಂದು ಹಣ್ಣಿನ ಮರವನ್ನೂ ನಿಮಗೆ ಕೊಟ್ಟಿದ್ದೇನೆ. ಅದು ನಿಮಗೆ ಆಹಾರಕ್ಕಾಗಿರುವದು.**

**ಇದಲ್ಲದೆ ನಾನು ಭೂಮಿಯ ಪ್ರತಿಯೊಂದು ಮೃಗಕ್ಕೂ ಆಕಾಶದ ಪ್ರತಿಯೊಂದು ಪಕ್ಷಿಗೂ ಭೂಮಿಯ ಮೇಲೆ ಹರಿದಾಡುವ ಜೀವವುಳ್ಳ ಪ್ರತಿಯೊಂದಕ್ಕೂ ಹಸುರಾದ ಪ್ರತಿಯೊಂದು ಪಲ್ಯವನ್ನು ಆಹಾರಕ್ಕಾಗಿ ಕೊಟ್ಟಿದ್ದೇನೆ ಅಂದನು; ಅದು ಹಾಗೆಯೇ ಆಯಿತು.**

**ಷರತ್ತುಗಳು**

ವಿಧೇಯತೆಗೆ ಆಶೀರ್ವಾದ ಇದ್ದಂತೆಯೇ, ಆ ವಿಧೇಯತೆಯ ಪರೀಕ್ಷೆಯನ್ನು ಸಹ ದೇವರು ಒದಗಿಸಿದರು. ಆದಾಮ ಮತ್ತು ಹವ್ವರು ಅವಿಧೇಯರಾದರೆ, ಅವರು ಒಡಂಬಡಿಕೆಯ ಶಾಪವನ್ನು ಸ್ವೀಕರಿಸುವರು.

**ಆದಿಕಾಂಡ 2:16,17 ದೇವರಾದ ಕರ್ತನು ಮನುಷ್ಯನಿಗೆ ಆಜ್ಞಾಪಿಸಿದ್ದೇನಂದರೆ-- ನೀನು ತೋಟದ ಎಲ್ಲಾ ಮರಗಳ ಫಲವನ್ನು ಯಥೇಚ್ಛವಾಗಿ ತಿನ್ನಬಹುದು; ಆದರೆ ಒಳ್ಳೇದು ಕೆಟ್ಟದರ ತಿಳುವಳಿಕೆಯನ್ನುಂಟುಮಾಡುವ ಮರದ ಫಲವನ್ನು ನೀನು**

**ತಿನ್ನಬಾರದು; ಅದನ್ನು ತಿಂದ ದಿನದಲ್ಲಿ ಖಂಡಿತವಾಗಿ ಸಾಯುವಿ ಅಂದನು.**

ಒಡಂಬಡಿಕೆಯ ನಿಯಮಗಳಿಗೆ ಅವರ ಬದ್ಧತೆಯನ್ನು ಪರೀಕ್ಷಿಸಲು ಏದೆನ್ ಒಡಂಬಡಿಕೆಯು ಆದಾಮ ಮತ್ತು ಹವ್ವರನ್ನು ಪರೀಕ್ಷೆಗೆ ಒಳಪಡಿಸಿತು.

**ಒಡಂಬಡಿಕೆಯು ಮುರಿಯಲ್ಪಟ್ಟಿತು**

ಆದಾಮ ಮತ್ತು ಹವ್ವರು ಹಣ್ಣನ್ನು ತಿಂದ ಮೇಲೆ ದೇವರೊಂದಿಗಿದ್ದ ಅವರ ಸಂಬಂಧವು ಮುರಿದು ಹೋಯಿತು. ಅವರು ಇನ್ನು ಮುಂದೆ ದೇವರ ಪ್ರಸನ್ನತೆಯಲ್ಲಿ ಧೈರ್ಯವಾಗಿ ಬರಲಾಗಲಿಲ್ಲ.

**ಆದಿಕಾಂಡ 3:8 ಆಗ ಕರ್ತನಾದ ದೇವರು ದಿನದ ತಂಗಾಳಿಯಲ್ಲಿ ತೋಟದೊಳಗೆ ತಿರುಗಾಡುವ ಶಬ್ದವನ್ನು ಆದಾಮನೂ ಅವನ ಹೆಂಡತಿಯೂ ಕೇಳಿ ದೇವರಾದ ಕರ್ತನ ಸನ್ನಿಧಿಯಿಂದ ತೋಟದ ಮರಗಳಲ್ಲಿ ಅಡಗಿಕೊಂಡರು.**

✳ *ಸೈತಾನನ ಮೇಲೆ ಶಾಪ*

ಮಾನವನ ಬೀಳುವಿಕೆಯ ಹಿಂದೆ ಸೈತಾನನ ಪಾತ್ರವಿದ್ದದ್ದರಿಂದ ಅವನ ಮೇಲೆ ಒಂದು ಶಾಪವು ಹಾಕಲಾಯಿತು.

**ಆದಿಕಾಂಡ 3:14,15 ಆಗ ಕರ್ತನಾದ ದೇವರು ಸರ್ಪಕ್ಕೆ--ನೀನು ಇದನ್ನು ಮಾಡಿದ ಕಾರಣ ಎಲ್ಲಾ ಪಶುಗಳಲ್ಲಿಯೂ ಎಲ್ಲಾ ಅಡವಿಯ ಮೃಗಗಳ ಲ್ಲಿಯೂ ಶಪಿಸಲ್ಪಟ್ಟು ಜೀವದಿಂದಿರುವ ದಿವಸಗಳಲ್ಲೆಲ್ಲಾ ಹೊಟ್ಟೆಯಿಂದ ಹರಿದಾಡಿ ಮಣ್ಣನ್ನು ತಿನ್ನುವಿ. ನಿನಗೂ ಸ್ತ್ರೀಗೂ ನಿನ್ನ ಸಂತತಿಗೂ ಸ್ತ್ರೀ ಸಂತತಿಗೂ ಹಗೆತನ ಇಡುವೆನು; ಆತನು ನಿನ್ನ ತಲೆಯನ್ನು ಜಜ್ಜುವನು ಮತ್ತು ನೀನು ಆತನ ಹಿಮ್ಮಡಿಯನ್ನು, ಕಚ್ಚುವಿ ಅಂದನು.**

✳ *ಹವ್ವಳ ಮೇಲೆ ಶಾಪ*

ಸ್ತ್ರೀಯ ಮೇಲೆ ಶಾಪ ಬಂದಿತು.

**ಆದಿಕಾಂಡ 3:16 ಸ್ತ್ರೀಗೆ ಆತನು--ನಾನು ನಿನ್ನ ದುಃಖವನ್ನೂ ಗರ್ಭವೇದನೆಯನ್ನೂ ಅಧಿಕವಾಗಿ ಹೆಚ್ಚಿಸುವೆನು, ನೀನು ಕಷ್ಟದಿಂದ ಮಕ್ಕಳನ್ನು ಹೆರುವಿ, ನಿನ್ನ ಗಂಡನ ಮೇಲೆ ನಿನಗೆ ಆಶೆ ಇರುವದು; ಅವನು ನಿನ್ನನ್ನು ಆಳುವನು ಅಂದನು.**

✳ *ಆದಾಮನ ಮೇಲೆ ಮತ್ತು ಭೂಮಿಯ ಮೇಲೆ ಶಾಪ*

ಆದಾಮನ ಮೇಲೆ ಮತ್ತು ಅವನ ಮೂಲಕ ಎಲ್ಲಾ ಮನುಷ್ಯರ ಮೇಲೆ ಬಂದ ಶಾಪವು, ಭೂಮಿಯ ಮೇಲೆಯೂ ಶಾಪವನ್ನು ತಂದಿತು. ಆ ದಿನದಿಂದ, ಅವನು ತನ್ನ ಜೀವನದ ಎಲ್ಲಾ ದಿನಗಳಲ್ಲೂ ಕೆಲಸವನ್ನು

ಮಾಡಲೇಬೇಕಾಯಿತು ಮತ್ತು ಅದನ್ನು ಮಾಡುವಾಗ ಅವನು ಬೆವರು ಸುರಿಸುತ್ತಾನೆ. ಅದು ಕಠಿಣವೂ ಮತ್ತು ಅಹಿತಕರವೂ ಆಗಿರುವುದು.

**ಆದಿಕಾಂಡ 3:17,18 ಆದಾಮನಿಗೆ ಆತನು--ನೀನು ನಿನ್ನ ಹೆಂಡತಿಯ ಮಾತನ್ನು ಕೇಳಿ ತಿನ್ನಬಾರದೆಂದು ನಾನು ನಿನ ಆಜ್ಞಾಪಿಸಿದ ಮರದ ಫಲವನ್ನು ತಿಂದಕಾರಣ ನಿನ್ನ ನಿಮಿತ್ತ ಭೂಮಿಯು ಶಪಿಸಲ್ಪಟ್ಟಿದೆ; ನಿನ್ನ ಜೀವನದ ದಿನಗಳಲ್ಲೆಲ್ಲಾ ದುಃಖದಲ್ಲೇ ನೀನು ಅದರ ಫಲವನ್ನು ತಿನ್ನುವಿ. ಇದಲ್ಲದೆ ಭೂಮಿಯು ಮುಳ್ಳುಗಳನ್ನೂ ದತ್ತೂರಿಗಳನ್ನೂ ನಿನಗಾಗಿ ಬೆಳೆಯುವದು. ನೀನು ಹೊಲದ ಪಲ್ಯವನ್ನು ತಿನ್ನುವಿ.**

ಭೂಮಿಯು ಕೇವಲ ಒಳ್ಳೆಯದನ್ನು ಮಾತ್ರ ಉತ್ಪತ್ತಿ ಮಾಡುವುದರ ಬದಲಾಗಿ ಮುಳ್ಳುಗಳನ್ನೂ ದತ್ತೂರಿಗಳನ್ನೂ ಹೊರತರುವುದು.

✳ *ಮರಣ*

ಎಲ್ಲಾ ಸೃಷ್ಟಿಗಳ ಮೇಲೆಯೂ ಮಾನವಕುಲದ ಮೇಲೆಯೂ ಮರಣವು ಬಂದಿತು.

**ಆದಿಕಾಂಡ 3:19 ನೀನು ಮಣ್ಣಿಗೆ ತಿರುಗುವವರೆಗೆ ನಿನ್ನ ಹಣೆಯ ಬೆವರನ್ನು ಸುರಿಸಿ ರೊಟ್ಟಿಯನ್ನು ತಿನ್ನುವಿ. ಯಾಕಂದರೆ ನೀನು ಅದರೊಳಗಿಂದ ಅಂದರೆ (ಮಣ್ಣಿನೊಳಗಿಂದ) ತೆಗೆಯಲ್ಪಟ್ಟೆ; ನೀನು ಮಣ್ಣಾಗಿದ್ದಿ, ಮಣ್ಣಿಗೆ ತಿರುಗಿಕೊಳ್ಳುವಿ ಅಂದನು.**

✳ *ಯೇಸು ನಮಗಾಗಿ ಶಪಿಸಲ್ಪಟ್ಟನು*

ಯೇಸು ತನ್ನ ಶ್ರಮೆ ಮತ್ತು ಮರಣದ ಮೂಲಕ ನಮಗಾಗಿ ಶಪಿಸಲ್ಪಟ್ಟದ್ದನ್ನು ನೆನಪಿಸಿಕೊಳ್ಳದೆ ಕೇವಲ ಪಾಪದ ನಿಮಿತ್ತ ಬಂದ ಶಾಪಗಳ ಪಟ್ಟಿಯನ್ನು ಮಾಡಬಾರದು.

**ಗಲಾತ್ಯ 3:13 ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಮಾಡಲ್ಪಟ್ಟು ನ್ಯಾಯಪ್ರಮಾಣದ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಯಾಕಂದರೆ--ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಬರೆದದೆಯಲ್ಲಾ.**

## ಆದಾಮನೊಂದಿಗಿನ ಒಡಂಬಡಿಕೆ (ಷರತ್ತಿಲ್ಲದ್ದು)

ಆದಾಮ ಮತ್ತು ಹವ್ವರ ಪಾಪಗಳ ಮೂಲಕ ಅವರ ಮೇಲೆ ಶಾಪಗಳು ಬಂದಾಗ್ಯೂ ಅವುಗಳ ನಡುವೆಯೂ ದೇವರು ಅವರಿಗೆ ವಿಮೋಚನೆಯ ವಾಗ್ದಾನವನ್ನು ಮಾಡಿದರು. ದೇವರು ಮಾನವಕುಲದೊಂದಿಗೆ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಂಡರು.

### ವಾಗ್ದಾನ

**ಆದಿಕಾಂಡ 3:15 ನಿನಗೂ ಸ್ತ್ರೀಗೂ ನಿನ್ನ ಸಂತತಿಗೂ ಸ್ತ್ರೀ ಸಂತತಿಗೂ ಹಗೆತನ ಇಡುವೆನು; ಆತನು ನಿನ್ನ ತಲೆಯನ್ನು ಜಜ್ಜುವನು ಮತ್ತು ನೀನು ಆತನ ಹಿಮ್ಮಡಿಯನ್ನು, ಕಚ್ಚುವಿ ಅಂದನು.**

ಸ್ತ್ರೀಯ ಸಂತಾನವು ನಿನ್ನ ತಲೆಯನ್ನು ಜಜ್ಜುವನು ಮತ್ತು ಸೈತಾನನು ಆತನ ಹಿಮ್ಮಡಿಯನ್ನು ಕಚ್ಚುವಿ ಎಂದು ದೇವರು ಸೈತಾನನಿಗೆ ಹೇಳಿದರು.

ದೇವರು ಸ್ತ್ರೀಯ ಸಂತಾನದ ಮೂಲಕ ಮಾನವಕುಲಕ್ಕಾಗಿ ಒಬ್ಬ ವಿಮೋಚಕನನ್ನು ಕಳುಹಿಸಿಕೊಡುವೆನೆಂದು ಹೇಳಿದ ಕ್ಷಣದಿಂದ ಸ್ತ್ರೀಯ ಎಲ್ಲಾ ಸಂತಾನವನ್ನು ನಾಶಮಾಡಬೇಕೆಂದು ಸೈತಾನನು ಉದ್ದೇಶಿಸಿದನು.

ತಲೆಮಾರುಗಳು ಕಳೆದಂತೆ ಸ್ತ್ರೀ ಪುರುಷರು ದೇವರನ್ನು ಅಲಕ್ಷಿಸಿ ಹೆಚ್ಚೆಚ್ಚಾಗಿ ದುಷ್ಟರಾಗುತ್ತಾ ಹೋದರು. ಮಾನವಕುಲವನ್ನು ಕೆಡಿಸುವುದಕ್ಕಾಗಿ ಸೈತಾನನ ದುರಾತ್ಮಗಳು ಸ್ತ್ರೀಯರೊಂದಿಗೆ ಐಕ್ಯವಾಗಿ ಒಂದು ಹೊಸ ಅರ್ಧ ಮನುಷ್ಯ ಅರ್ಧ ದುರಾತ್ಮಗಳನ್ನು ಸೃಷ್ಟಿಸಿದವು.

**ಆದಿಕಾಂಡ 6:4a ಆ ದಿನಗಳಲ್ಲಿ ಭೂಮಿಯ ಮೇಲೆ ಮಹಾ ಶರೀರಗಳಾದವರು ಇದ್ದರು, ಆಮೇಲೆಯೂ ಇದ್ದರು; ದೇವಕುಮಾರರು ಮನುಷ್ಯ ಕುಮಾರ್ತೆಯರನ್ನು ಕೂಡಿದಾಗ ಅವರಿಗೆ ಮಕ್ಕಳನ್ನು ಹೆತ್ತರು. ಇವರೇ ಪೂರ್ವಕಾಲದಲ್ಲಿ ಪ್ರಸಿದ್ಧರಾದ ಪರಾಕ್ರಮಶಾಲಿಗಳಾಗಿದ್ದವರು.**

ಸೈತಾನನ ತಲೆಯನ್ನು ಜಜ್ಜಲು ಬರಲಿದ್ದ "ಸ್ತ್ರೀಯ ಸಂತಾನವನ್ನು" (ಕ್ರಿಸ್ತನನ್ನು) ತಡೆಯಲು ಸೈತಾನನು ಮಾಡಿದ ಪ್ರಯತ್ನವಿದು.

ಮೋಶೆಯ ಜನನದ ಸಮಯದಲ್ಲಿ ಇದೇ ದುರಾತ್ಮವು ಫರೋಹನೊಳಗೆ ಹೊಕ್ಕಿತು ಮತ್ತು ಯೇಸುವಿನ ಜನನದ ಸಮಯದಲ್ಲಿ ಅರಸನಾದ ಹೆರೋದನೊಳಗೆ ಹೊಕ್ಕಿತು. ಈ ಸೈತಾನನ ಆತ್ಮವು ಮಾನವಕುಲಕ್ಕಾಗಿ ಇರುವ ದೇವರ ಯೋಜನೆಯನ್ನು ತಡೆಯಲು ಶಿಶುಗಳನ್ನು ಕೊಲ್ಲಲು ಬಯಸುತ್ತದೆ. ಇದು ಗರ್ಭಪಾತದ ಮೂಲಕ ಶಿಶುಗಳನ್ನು ಕೊಲ್ಲಲು ಈಗಲೂ ಪ್ರೇರೇಪಿಸುತ್ತಿದೆ.

## ನೋಹನೊಂದಿಗಿನ ಒಡಂಬಡಿಕೆ (ಷರತ್ತುಬದ್ಧ)

### ಆಶೀರ್ವಾದಗಳು

ಪ್ರವಾಹದ ನಂತರ, ದೇವರು ನೋಹನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡರು. ಅದು ಆತನ ಮೂಲ ಒಡಂಬಡಿಕೆಗಳನ್ನು ಧೃಢೀಕರಿಸಿ ಮಾನವಕುಲಕ್ಕಾಗಿರುವ ತನ್ನ ವಿಮೋಚನಾ ಯೋಜನೆಯ ಒಂದು ಪೂರ್ಣ ಪ್ರಕಟನೆಯನ್ನು ಕೊಟ್ಟಿತು. ಭೂಮಿಯ ಮೇಲೆ ವಾಸವಿದ್ದ ಎಲ್ಲಾದರ ಮೇಲೆ ದೇವರು ಹೇಗೆ ಆದಾಮ ಮತ್ತು ಹವ್ವರಿಗೆ ಅಧಿಕಾರವನ್ನು ಕೊಟ್ಟರೋ ನೋಹನಿಗೂ ಅದೇ ಅಧಿಕಾರವನ್ನು ಕೊಟ್ಟರು.

**ಆದಿಕಾಂಡ 9:1,2 ದೇವರು ನೋಹನನ್ನೂ ಅವನ ಕುಮಾರರನ್ನೂ ಆಶೀರ್ವದಿಸಿ ಅವರಿಗೆ--ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿ ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ. ಭೂಮಿಯ ಮೇಲಿರುವ ಎಲ್ಲಾ ಮೃಗಗಳ ಮೇಲೆಯೂ ಆಕಾಶದ ಎಲ್ಲಾ ಪಕ್ಷಿಗಳ ಮೇಲೆಯೂ ಭೂಮಿಯ ಮೇಲೆ ಹರಿದಾಡುವವುಗಳೆಲ್ಲವುಗಳ ಮೇಲೆಯೂ ಸಮುದ್ರದ ಎಲ್ಲಾ ಮೀನುಗಳ ಮೇಲೆಯೂ ನಿಮ್ಮ ಭಯವು ಮತ್ತು ನಿಮ್ಮ ಹೆದರಿಕೆಯು ಇರುವದು; ನಿಮ್ಮ ಕೈಗಳಲ್ಲಿ ಅವು ಕೊಡಲ್ಪಟ್ಟಿವೆ.**

**ಆದಿಕಾಂಡ 9:9,10a ಇಗೋ, ನಾನು ನನ್ನ ಒಡಂಬಡಿಕೆಯನ್ನು ನಿಮ್ಮ ಸಂಗಡಲೂ ನಿಮ್ಮ ತರುವಾಯ ನಿಮ್ಮ ಸಂತತಿಯವರ ಸಂಗಡಲೂ ನಾವೆಯೊಳಗಿಂದ ಹೊರಗೆ ಬಂದ ಎಲ್ಲವುಗಳ ಅಂದರೆ ಭೂಮಿಯ ಎಲ್ಲಾ ಜೀವಿಗಳ [ಜೊತೆಗೆ ಸ್ಥಾಪಿಸುತ್ತೇನೆ].**

**ಎರಡು ಷರತ್ತುಗಳು**

✳ *ರಕ್ತವನ್ನು ತಿನ್ನಬಾರದು*

ನೋಹನೂ ಮತ್ತು ಅವನ ಕುಟುಂಬದವರೂ ರಕ್ತವನ್ನು ತಿನ್ನಬಾರದೆಂದು ದೇವರು ಅವರಿಗೆ ಆಜ್ಞಾಪಿಸಿದರು.

**ಆದಿಕಾಂಡ 9:4 ಆದರೆ ಮಾಂಸವನ್ನು ಜೀವವಿರುವ ರಕ್ತದೊಂದಿಗೆ ನೀವು ತಿನ್ನಬಾರದು.**

✳ *ಮನುಷ್ಯರನ್ನು ಕೊಲ್ಲಬಾರದು*

ಅವರು ಇನ್ನೊಬ್ಬ ಮನುಷ್ಯನನ್ನು ಕೊಲ್ಲಬಾರದಾಗಿತ್ತು.

**ಆದಿಕಾಂಡ 9:6 ಯಾವನು ಮನುಷ್ಯನ ರಕ್ತವನ್ನು ಸುರಿಸುವನೋ ಅವನ ರಕ್ತವು ಮನುಷ್ಯನಿಂದಲೇ ಸುರಿಸಲ್ಪಡುವದು. ಯಾಕಂದರೆ ದೇವರು ತನ್ನ ಸ್ವರೂಪದಲ್ಲಿ ಮನುಷ್ಯ ನನ್ನು ಉಂಟುಮಾಡಿದನು.**

ಮಾನವ ಜನಾಂಗದ ಮೇಲೆ ಸೈತಾನನ ಮುಂದಿನ ದಾಳಿ ಈ ಎರಡು ಕ್ಷೇತ್ರಗಳಲ್ಲಿದೆ.

ಯೇಸು ಎಲ್ಲಾ ಮಾನವಕುಲಕ್ಕಾಗಿ ಮಾನವ ಯಜ್ಞಬಲಿಯಾಗಿ ಬರಬೇಕಿತ್ತು. ಅವರ ರಕ್ತವು ಎಲ್ಲಾ ಮಾನವಕುಲಕ್ಕೆ ಪ್ರಾಯಶ್ಚಿತ್ತ ಬಲಿಯಾಗಿತ್ತು. ಸೈತಾನನು ಇದನ್ನು ಹೇಗೆ ಹೋರಾಡಬಹುದು?

ಮಾನವ ಬಲಿಗಳನ್ನು ಸಾಮಾನ್ಯಗೊಳಿಸುವ ಮೂಲಕ.

ಇದೇ ಪದ್ಧತಿಗಳು ಇಂದಿಗೂ ಸೈತಾನನ ಆರಾಧಕರ ಮೂಲಕ ಮುಂದುವರೆದಿದೆ.

**ಒಂದು ಗೋಚರವಾದ ಚಿಹ್ನೆ**

ಈ ಒಡಂಬಡಿಕೆಯಲ್ಲಿ ಒಂದು ಗೋಚರವಾದ ಚಿಹ್ನೆ ಇತ್ತು. ದೇವರು ಎಂದಿಗೂ ಇಡೀ ಭೂಮಿಯನ್ನು ಪ್ರವಾಹದಿಂದ ನಾಶಪಡಿಸುವುದಿಲ್ಲ ಎಂದು ವಾಗ್ದಾನ ಮಾಡಿ ಅದಕ್ಕೆ ಸಂಕೇತವಾಗಿ ಮಳೆಬಿಲ್ಲನ್ನು ನೀಡಿದರು.

**ಆದಿಕಾಂಡ 9:12-15 ದೇವರು ಪುನಃ ಹೇಳಿದ್ದೇನಂದರೆ, “ನಾನು ನಿಮ್ಮನ್ನೂ ನಿಮ್ಮ ಸಂಗಡ ಇರುವ ಸಮಸ್ತ ಜೀವರಾಶಿಗಳನ್ನೂ ಕುರಿತು ತಲತಲಾಂತರಗಳಲ್ಲಿಯೂ ಮಾಡುವ ಈ ಒಡಂಬಡಿಕೆಗೆ ಮೇಘಗಳಲ್ಲಿ ನಾನು ಇಟ್ಟಿರುವ ಈ ಕಾಮನಬಿಲ್ಲೇ ಗುರುತಾಗಿರುವುದು. ನನಗೂ ಭೂಜೀವಿಗಳಿಗೂ ಮಾಡಿಕೊಂಡ ಒಡಂಬಡಿಕೆಗೆ ಇದೇ ಗುರುತಾಗಿರಲಿ. ನಾನು ಭೂಲೋಕದ ಮೇಲೆ ಮೇಘಗಳನ್ನು ಕವಿಸುವಾಗ ಆ ಕಾಮನಬಿಲ್ಲು ಮೇಘಗಳಲ್ಲಿ ಕಂಡುಬರುವುದು. ಆಗ ನಾನು ನಿಮ್ಮನ್ನೂ, ಎಲ್ಲಾ ಜೀವರಾಶಿಗಳನ್ನೂ ಕುರಿತು ಮಾಡಿದ ಒಡಂಬಡಿಕೆಯನ್ನು ಜ್ಞಾಪಕಮಾಡಿಕೊಳ್ಳುವೆನು. ಇನ್ನು ಮುಂದೆ ನೀರು ಹೆಚ್ಚಿ ಎಲ್ಲಾ ಭೂಜೀವಿಗಳನ್ನು ಹಾಳುಮಾಡುವ ಪ್ರಳಯವಾಗುವುದಿಲ್ಲ.**

**ಅಬ್ರಹಾಮನೊಂದಿಗಿನ ಒಡಂಬಡಿಕೆ (ಷರತ್ತುಬದ್ಧ)**

---

ಪ್ರವಾಹಕ್ಕಿಂತ ಮುಂಚೆ ಮಾನವಕುಲವು ಹೆಚ್ಚೆಚ್ಚಾಗಿ ದುಷ್ಟರಾದಂತೆ, ಪ್ರವಾಹದ ನಂತರವೂ ಅವರು ದುಷ್ಟತನದಲ್ಲಿ ಮುಂದುವರೆದರು. ನೋಹನ ಮಕ್ಕಳು ದೇವರ ಮುಂದೆ ನೀತಿವಂತರಾಗಿ ನಡೆಯಲಿಲ್ಲ, ಮತ್ತು ಅವರ ಸಂತತಿಗಳೂ ನೀತಿವಂತರಾಗಿ ನಡೆಯಲಿಲ್ಲ.

ಆಗ ದೇವರು ಅಬ್ರಹಾಮನೊಂದಿಗೆ ಮಾತಾಡಿ, ಅವನನ್ನು ಹೊರಗೆ ಕರೆದು ಮಾನವಕುಲದೊಂದಿಗಿನ ತನ್ನ ಒಡಂಬಡಿಕೆಯನ್ನು ನವೀಕರಿಸಿದರು. ಈಗ ದೇವರು ಎಲ್ಲಾ ಮಾನವಕುಲದೊಂದಿಗೆ, ನೋಹನ ಸಂತತಿಯವರೊಂದಿಗೆಲ್ಲಾ ನೇರವಾಗಿ ವ್ಯವಹರಿಸುವುದರಿಂದ ತನ್ನನ್ನು ಪ್ರತಿನಿಧಿಸಬೇಕಾದ ನಿರ್ದಿಷ್ಟ ಕುಟುಂಬವನ್ನು ಕರೆಯುವತ್ತ ಸಾಗಿದನು.

ಗಮನಿಸಿ: ಮುಂದಿನ ಕೆಲವು ವಚನಗಳಲ್ಲಿ, ಷರತ್ತುಗಳನ್ನು ಅಂಡರ್ ಲೈನ್ ಮಾಡಲಾಗಿದೆ. ಆಶೀರ್ವಾದಗಳು ಆವರಣಗಳಲ್ಲಿವೆ.

**ಆದಿಕಾಂಡ 12:1-3 ಯೆಹೋವನು ಅಬ್ರಾಮನಿಗೆ, “<u>ನೀನು, ನಿನ್ನ ಸ್ವದೇಶವನ್ನೂ, ಬಂಧುಬಳಗವನ್ನೂ, ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು.</u> [ನಾನು ನಿನ್ನನ್ನು ಮಹಾ ಜನಾಂಗವಾಗುವಂತೆ ಮಾಡಿ, ಆಶೀರ್ವದಿಸಿ, ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವಾದದ ನಿಧಿಯಾಗುವಿ. ನಿನ್ನನ್ನು ಆಶೀರ್ವದಿಸುವವರನ್ನು ನಾನು ಆಶೀರ್ವದಿಸುವೆನು; ನಿನ್ನನ್ನು ಶಪಿಸುವವರನ್ನು ನಾನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಜನಾಂಗಗಳಿಗೆ ಆಶೀರ್ವಾದವುಂಟಾಗುವುದು”] ಎಂದು ಹೇಳಿದನು.**

**ಇಸಾಕನೊಂದಿಗೆ**

ದೇವರು ಇಸಾಕನೊಂದಿಗೆ ಈ ಒಡಂಬಡಿಕೆಯನ್ನು ನವೀಕರಿಸಿದರು.

ಆದಿಕಾಂಡ **26:3,4** ನೀನು ಈ ದೇಶದಲ್ಲಿ ಪ್ರವಾಸಿಯಾಗಿರು; [ನಾನು ನಿನ್ನ ಬಳಿಯಲ್ಲಿದ್ದು ನಿನ್ನನ್ನು ಅಭಿವೃದ್ಧಿಪಡಿಸಿ ನಿನಗೂ, ನಿನ್ನ ಸಂತತಿಯವರಿಗೂ ಈ ಪ್ರದೇಶಗಳನ್ನೆಲ್ಲಾ ಕೊಡುವೆನು. ಹೀಗೆ ನಿನ್ನ ತಂದೆಯಾದ ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ನೆರವೇರಿಸುವೆನು, ನಿನ್ನ ಸಂತತಿಯವರನ್ನು ಆಕಾಶದಲ್ಲಿರುವ ನಕ್ಷತ್ರಗಳಂತೆ ಹೆಚ್ಚಿಸುವೆನು. ನಿನ್ನ ಸಂತತಿಗೆ ಈ ಪ್ರದೇಶಗಳನ್ನೆಲ್ಲಾ ಕೊಡುವೆನು. ನಿನ್ನ ಸಂತತಿಯ ಮೂಲಕ ಭೂಮಿಯ ಎಲ್ಲಾ ಜನಾಂಗಗಳಿಗೂ ಆಶೀರ್ವಾದವುಂಟಾಗುವುದು.]

**ಯಾಕೋಬನೊಂದಿಗೆ**

ದೇವರು ಯಾಕೋಬನೊಂದಿಗೆ ಈ ಒಡಂಬಡಿಕೆಯನ್ನು ನವೀಕರಿಸಿದರು.

ಆದಿಕಾಂಡ **28:13,14** ಇದಲ್ಲದೆ ಯೆಹೋವನು ಅದರ ಮೇಲೆ ನಿಂತುಕೊಂಡು, "ನಿನ್ನ ತಂದೆಯಾದ ಅಬ್ರಹಾಮನ ದೇವರೂ, ಇಸಾಕನ ದೇವರೂ ಆಗಿರುವ ಯೆಹೋವನು ನಾನೇ. [ನೀನು ಮಲಗಿರುವ ಭೂಮಿಯನ್ನು ನಿನಗೂ, ನಿನ್ನ ಸಂತತಿಗೂ ಕೊಡುವೆನು. ನಿನ್ನ ಸಂತತಿಯು ಭೂಮಿಯ ಧೂಳಿನಷ್ಟು ಅಸಂಖ್ಯವಾಗುವುದು. ನೀನು ಪೂರ್ವ, ಪಶ್ಚಿಮ, ದಕ್ಷಿಣ ಉತ್ತರ ದಿಕ್ಕುಗಳಿಗೆ ಹರಡಿಕೊಳ್ಳುವಿ. ನಿನ್ನಿಂದಲೂ, ನಿನ್ನ ಸಂತತಿಯಿಂದಲೂ, ಭೂಮಿಯ ಎಲ್ಲಾ ಕುಲದವರು ಆಶೀರ್ವಾದ ಹೊಂದುವರು.]

**ನಮ್ಮೊಂದಿಗೆ**

ದೇವರು ನಮ್ಮೊಂದಿಗೆ ಈ ಒಡಂಬಡಿಕೆಯನ್ನು ನವೀಕರಿಸಿದರು !

ಗಲಾತ್ಯ **3:14** [ಅಬ್ರಹಾಮನಿಗೆ ಉಂಟಾದ ಆಶೀರ್ವಾದವು, ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆಲ್ಲ ಸಿಗುವಂತೆಯೂ ಮತ್ತು ದೇವರು ವಾಗ್ದಾನ ಮಾಡಿದ ಪರಿಶುದ್ಧಾತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ, ತನ್ನ ಮರಣದ ಮೂಲಕ ಕ್ರಿಸ್ತನು ನಮ್ಮನ್ನು ಕೊಂಡುಕೊಂಡನು.]

ಗಲಾತ್ಯ **3:28,29** ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಅಥವಾ ಗ್ರೀಕನು ಎಂದಾಗಲೀ, ಆಳು ಅಥವಾ ಒಡೆಯ ಎಂದಾಗಲೀ, ಗಂಡು ಹಾಗೂ ಹೆಣ್ಣು ಎಂದಾಗಲೀ ಭೇದವಿಲ್ಲ. ನೀವು ಕ್ರಿಸ್ತನವರಾಗಿದ್ದರೆ [ಅಬ್ರಹಾಮನ ವಂಶದವರಾಗಿ ಹಾಗೂ ದೇವರ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ.]

ನಂಬಿಕೆ ಮತ್ತು ವಿಧೇಯತೆಯಿಂದ, ದೇವರ ಒಡಂಬಡಿಕೆಯ ಮಕ್ಕಳಾದ ನಾವು ಅಬ್ರಹಾಮ, ಇಸಾಕ ಮತ್ತು ಯಾಕೋಬರ ಎಲ್ಲಾ ಒಡಂಬಡಿಕೆಯ ಆಶೀರ್ವಾದಗಳಲ್ಲಿ ನಡೆಯಬಹುದು.

## ಮೋಶೆಯೊಂದಿಗಿನ ಒಡಂಬಡಿಕೆ (ಷರತ್ತುಬದ್ಧ)

ಅಬ್ರಹಾಮನ ಸಂತತಿಯು ವೃದ್ಧಿಯಾಯಿತು, ನಂತರ ಬರಗಾಲದ ಸಮಯದಲ್ಲಿ ದೇವರು ಅವರನ್ನು ಈಜಿಪ್ಟಿಗೆ ಸ್ಥಳಾಂತರಿಸಿದರು. ಮೊದಲು ಅವರು ಅತಿಥಿಗಳಂತಿದ್ದರು, ನಂತರ ಅವರು

ಗುಲಾಮರಾದರು. ಕೊನೆಗೆ ನಾನೂರು ವರ್ಷಗಳ ನಂತರ ದೇವರು ತನ್ನ ಜನರನ್ನು ಗುಲಾಮತನದಿಂದ ಹೊರತರಲು ಮತ್ತು ಹಿಂತಿರುಗಿ ಸಮೃದ್ಧಿ ಜೀವನಕ್ಕೆ ನಡೆಸಲು ಮೋಶೆಯನ್ನು ನಾಯಕನನ್ನಾಗಿ ಕರೆದರು.

**ವಿಮೋ 3:7,8a ಆಗ ಯೆಹೋವನು, "ಐಗುಪ್ತ ದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನಿಶ್ಚಯವಾಗಿ ನೋಡಿದ್ದೇನೆ. ಬಿಟ್ಟೀ ಕೆಲಸ ಮಾಡುವ ವಿಷಯದಲ್ಲಿ, ಅವರು ಇಟ್ಟ ಮೊರೆಯು ನನಗೆ ಕೇಳಿಸಿತು. ಅವರ ದುಃಖವನ್ನೆಲ್ಲಾ ನಾನು ಬಲ್ಲೆನು. ಆದಕಾರಣ ಅವರನ್ನು ಐಗುಪ್ತ್ಯರ ಕೈಯೊಳಗಿಂದ ಬಿಡಿಸುವುದಕ್ಕೂ ಆ ದೇಶದಿಂದ ಅವರನ್ನು ಹಾಲೂ ಮತ್ತು ಜೇನೂ ಹರಿಯುವ ವಿಸ್ತಾರವಾದ ಒಳ್ಳೆಯ ದೇಶಕ್ಕೆ... ನಡೆಸಿಕೊಂಡು ಹೋಗುವುದಕ್ಕೂ ಇಳಿದು ಬಂದಿದ್ದೇನೆ.**

ಈಜಿಪ್ಟ್ ದೇಶದಿಂದ ಇಸ್ರಾಯೇಲ್ ಜನರು ಬಿಡುಗಡೆಯಾದ ದಿನದವರೆಗೂ ಅಂದರೆ ಮೂರು ತಿಂಗಳ ಕಾಲ ನಡೆದ ಎಲ್ಲಾ ಘಟನೆಗಳನ್ನು ನಾವು ಬಿಟ್ಟು ಮುಂದಕ್ಕೆ ಹೋಗೋಣ.

**ಒಡಂಬಡಿಕೆಯು ಕೊಡಲ್ಪಟ್ಟದ್ದು**

**ವಿಮೋ 19:3-6b ಮೋಶೆ ಬೆಟ್ಟವನ್ನೇರಿ ದೇವರ ಸನ್ನಿಧಿಗೆ ಹೋದನು. ಆಗ ಯೆಹೋವನು ಬೆಟ್ಟದ ಮೇಲಿಂದ ಮೋಶೆಯನ್ನು ಕರೆದು ಅವನಿಗೆ, "ನೀನು ಯಾಕೋಬನ ಮನೆತನದವರಾದ ಇಸ್ರಾಯೇಲರಿಗೆ ಈ ಮಾತುಗಳನ್ನು ತಿಳಿಸಿ ಹೇಳಬೇಕು. 'ನಾನು ಐಗುಪ್ತ್ಯರಿಗೆ ಮಾಡಿದ್ದನ್ನೂ, ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ಈ ಸ್ಥಳಕ್ಕೆ ಬರಮಾಡಿದ್ದನ್ನೆಲ್ಲಾ ನೀವು ನೋಡಿದ್ದೀರಿ. ಆದ್ದರಿಂದ ನೀವು ನನ್ನ ಮಾತುಗಳನ್ನು ಶ್ರದ್ಧೆಯಿಂದ ಕೇಳಿ, ನನ್ನ ಒಡಂಬಡಿಕೆಯನ್ನು ಕಾಪಾಡಿಕೊಂಡರೆ, [ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗಿರುವಿರಿ. ಸಮಸ್ತ ಭೂಮಿಯು ನನ್ನದೇ. ನೀವು ನನಗೆ ಶ್ರೇಷ್ಠ ಯಾಜಕರೂ, ಪರಿಶುದ್ಧ ಜನರೂ ಆಗಿರುವಿರಿ'].**

ಒಡಂಬಡಿಕೆಯ ಮಕ್ಕಳಾದ ನಾವೂ ಸಹ "ಹದ್ದಿನ ರೆಕ್ಕೆಗಳ" ಮೇಲೆ ಹೊತ್ತುಕೊಳ್ಳಲ್ಪಟ್ಟು ಬಂಧನದಿಂದ ಹೊರತರಲ್ಪಡುತ್ತೇವೆ. ನಾವು ದೇವರ ಮಾತುಗಳನ್ನು ಶ್ರದ್ಧೆಯಿಂದ ಕೇಳಿ ಆತನ ಒಡಂಬಡಿಕೆಯನ್ನು ಕಾಪಾಡಿಕೊಂಡರೆ ನಾವೂ ಸಹ ದೇವರಿಗೆ ಒಂದು ವಿಶೇಷವಾದ ನಿಧಿಯಾಗಿರುವೆವು. ಒಡಂಬಡಿಕೆಯ ಮಕ್ಕಳಾದ ನಾವೂ ಸಹ ಯಾಜಕರ ಒಂದು ರಾಜ್ಯವೂ ಮತ್ತು ಪರಿಶುದ್ಧ ಜನರೂ ಆಗಿದ್ದೇವೆ.

**ಪಾಲೆಸ್ತೀನ್ ಒಡಂಬಡಿಕೆ (ಷರತ್ತುಬದ್ಧ)**

ಇಸ್ರಾಯೇಲ್ ಜನರು ಅರಣ್ಯದಲ್ಲಿದ್ದಾಗ ದೇವರು ಅವರಿಗೆ ಧರ್ಮಶಾಸ್ತ್ರವನ್ನು ಕೊಟ್ಟರು. ಅದನ್ನು ಅವರಿಗೆ ಕೊಡುತ್ತಾ ಅವುಗಳನ್ನು ಪಾಲಿಸಿದರೆ ಆಶೀರ್ವಾದವೂ ಮತ್ತು ಅವುಗಳನ್ನು ಪಾಲಿಸದಿದ್ದರೆ ಶಾಪವೂ ಉಂಟಾಗುವುದೆಂದು ಹೇಳಿದರು.

ಈ ಒಡಂಬಡಿಕೆಯ ಆಶೀರ್ವಾದ ಮತ್ತು ಶಾಪಗಳು ಧರ್ಮೋಪದೇಶಕಾಂಡ 28 :1-68 ರಲ್ಲಿ ಕೊಡಲಾಗಿದೆ. ಈ ಆಶೀರ್ವಾದ ಮತ್ತು ಶಾಪಗಳು ಅಬ್ರಹಾಮನಿಗೂ ಅವನ ಸಂತತಿಯವರೆಲ್ಲರಿಗೂ ಕೊಡಲ್ಪಟ್ಟಿದೆ. ನಂತರ ಅವುಗಳು ಇಸ್ರಾಯೇಲ್ ದೇಶಕ್ಕೆ ಕೊಡಲ್ಪಟ್ಟವು ಮತ್ತು ಹೊಸ ಒಡಂಬಡಿಕೆಯಲ್ಲಿ ನಾವು ಅಬ್ರಹಾಮನ ಮಕ್ಕಳಾಗಿದ್ದೇವೆ ಎಂದು ಹೇಳಲ್ಪಟ್ಟಿರುವುದರಿಂದ ಈ ಆಶೀರ್ವಾದಗಳು ನಮಗೂ ಸಹ ಇರುವಂತದ್ದಾಗಿದೆ.

**ಆಶೀರ್ವಾದಗಳು**

ಇಸ್ರಾಯೇಲ್ ಜನರು ಈ ಆಶೀರ್ವಾದಗಳನ್ನು ಹೇಗೆ ಪಡೆದುಕೊಳ್ಳಬಹುದಾಗಿತ್ತು ? ಯೆಹೋವನ ಮಾತಿಗೆ ವಿಧೇಯರಾಗುವುದರ ಮೂಲಕ.

**ಧರ್ಮೋ 28:1,2 ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ, ನಾನು ಈಗ ನಿಮಗೆ ಬೋಧಿಸುವ ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ, ಆತನು ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತಸ್ಥಿತಿಗೆ ತರುವನು. ನಿಮ್ಮ ದೇವರಾದ ಯೆಹೋವನ ಮಾತಿಗೆ ಕಿವಿಗೊಟ್ಟು ನಡೆದರೆ ಈ ಶುಭಗಳೆಲ್ಲಾ ನಿಮಗೆ ಪ್ರಾಪ್ತವಾಗುವವು.**

ನಾವು ಯೆಹೋವನ ಮಾತಿಗೆ ವಿಧೇಯರಾದರೆ, ಆತನ ಆಜ್ಞೆಗಳನ್ನು ಶ್ರದ್ಧೆಯಿಂದ ಪಾಲಿಸಿದರೆ ಆಶೀರ್ವಾದಗಳು ತನ್ನಷ್ಟಕ್ಕೆ ತಾನೇ ನಮ್ಮ ಮೇಲೆ ಬರುವವು.

ಧರ್ಮೋಪದೇಶಕಾಂಡ 28:3-14 ನ್ನು ಓದುವಾಗ ವೈಯಕ್ತಿಕ ಸರ್ವನಾಮಗಳನ್ನು ಬಳಸಿ ಓದಿರಿ. ಉದಾಹರಣೆಗೆ :

"ನನಗೆ ಊರಿನಲ್ಲಿಯೂ ಮತ್ತು ಹೊಲದಲ್ಲಿಯೂ ಶುಭವುಂಟಾಗುವುದು. ನನ್ನ ಸಂತಾನದವರಿಗೂ, ವ್ಯವಸಾಯಗಳಿಗೂ, ದನ, ಕುರಿ ಮುಂತಾದ ಪಶುಗಳಿಗೂ ಶುಭವುಂಟಾಗುವುದು…"

**ಷರತ್ತುಗಳು**

ಇಸ್ರಾಯೇಲ್ ದೇಶವು ಯಾಕೆ ಶಾಪಗಳನ್ನು ಪಡೆಯುವುದು ?

ಯಾಕೆಂದರೆ ಅವರು ಯೆಹೋವನ ಮಾತಿಗೆ ವಿಧೇಯರಾಗಲಿಲ್ಲ. ಅವರು ಆತನ ಆಜ್ಞೆಗಳನ್ನು ಪಾಲಿಸಲಿಲ್ಲ.

**ಧರ್ಮೋ 28:15** ಆದರೆ ನೀವು ನಿಮ್ಮ ದೇವರಾದ ಯೆಹೋವನ ಮಾತಿಗೆ ಕಿವಿಗೊಡದೆ, ನಾನು ಈಗ ನಿಮಗೆ ಬೋಧಿಸುವ ಆತನ ಆಜ್ಞಾವಿಧಿಗಳನ್ನು ಅನುಸರಿಸದೆ ಹೋದರೆ ಈ ಶಾಪಗಳು ನಿಮಗೆ ಪ್ರಾಪ್ತವಾಗುವವು…

ದೇವರ ಒಡಂಬಡಿಕೆಯ ಮಕ್ಕಳಾದ ನಾವು ಯೆಹೋವನ ಸ್ವರಕ್ಕೆ "ಶ್ರದ್ಧೆಯಿಂದ ವಿಧೇಯರಾದರೆ" ಮತ್ತು ಆತನ ಎಲ್ಲಾ ಆಜ್ಞೆಗಳನ್ನು ಪಾಲಿಸಿದರೆ ನಾವೂ ಸಹ ಆಶೀರ್ವಾದವನ್ನು ಪಡೆಯುತ್ತೇವೆ. ದೇವರು ತನ್ನ ಜಲನಿಧಿಯನ್ನು ತೆರೆದು ನಮ್ಮ ಕೈಕೆಲಸವನ್ನು ಫಲದಾಯಕವಾಗಿ ಮಾಡುವರು.

## ದಾವೀದನೊಂದಿಗಿನ ಒಡಂಬಡಿಕೆ (ಷರತ್ತಿಲ್ಲದ್ದು)

ದೇವರು ಆದಾಮ ಮತ್ತು ಹವ್ವರೊಂದಿಗೆ, ನಂತರ ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ನವೀಕರಿಸಿದರು.

**2 ಸಮುವೇಲ 7:12,13 ನಿನ್ನ ಆಯುಷ್ಕಾಲವು ಮುಗಿದು, ನೀನು ಪೂರ್ವಿಕರ ಬಳಿಗೆ ಸೇರಿದ ಮೇಲೆ, ನಿನ್ನಿಂದ ಹುಟ್ಟುವ ಮಕ್ಕಳಲ್ಲಿ ಒಬ್ಬನನ್ನು ಎಬ್ಬಿಸಿ, ಅವನ ರಾಜ್ಯವನ್ನು ಸ್ಥಿರಪಡಿಸುವೆನು. ಅವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು. ನಾನು ಅವನ ರಾಜ್ಯದ ಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು.**

### ವಾಗ್ದಾನ

ಸಂತಾನವು (ಮೆಸ್ಸೀಯನು) ದಾವೀದನ ಮೂಲಕ ಬರುವನು ಮತ್ತು ಆತನು ಒಂದು ಶಾಶ್ವತವಾದ ರಾಜ್ಯವನ್ನು ಸ್ಥಾಪಿಸುವರು.

ಶಾಶ್ವತವಾದ ಒಡಂಬಡಿಕೆಗಳ ಭಾಗಿಗಳಾಗಿ ನಾವು ವಾಗ್ದಾನ ಮಾಡಲ್ಪಟ್ಟ ಸಂತಾನವನ್ನು ಎದುರುನೋಡುತ್ತಿಲ್ಲ ; ನಾವು ನಂಬಿಕೆಯಿಂದ ಯೇಸುವನ್ನೇ ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನಾಗಿ ಸ್ವೀಕರಿಸಿದ್ದೇವೆ. ಒಡಂಬಡಿಕೆಯ ಮಕ್ಕಳಾಗಿ ನಾವು ಈ ಲೋಕದಲ್ಲಿ ದೇವರ ರಾಜ್ಯವು ಸ್ಥಾಪಿಸಲ್ಪಟ್ಟಿರುವುದನ್ನು ಕಾಣಬಹುದು.

ನಾವು ಭೂಮಿಯ ಮೇಲೆ ಮತ್ತು ಅದರಲ್ಲಿರುವ ಎಲ್ಲದರ ಮೇಲೆಯೂ ದೊರೆತನವನ್ನು ತೆಗೆದುಕೊಳ್ಳುತ್ತಾ ರಾಜರುಗಳಂತೆ ಆಳಬಹುದು. ನಾವು ನಮ್ಮ ಜೀವಿತಗಳಿಗಾಗಿ ಇರುವ ಸೃಷ್ಟಿಕರ್ತನ ಉದ್ದೇಶಗಳನ್ನು ನೆರವೇರಿಸಬಹುದು. ನಾವು ದೇವರೊಂದಿಗಿರುವ ನಮ್ಮ ಶಾಶ್ವತವಾದ ಒಡಂಬಡಿಕೆಯಲ್ಲಿ ನಡೆಯಬಹುದು. ಈಗಲೂ ಅದೇ ಷರತ್ತುಗಳಿವೆ - ನಂಬಿಕೆ ಮತ್ತು ವಿಧೇಯತೆ.

## ವಿಮರ್ಶೆಗಾಗಿ ಪ್ರಶ್ನೆಗಳು

1. ಷರತ್ತುಬದ್ಧ ಮತ್ತು ಷರತ್ತಿಲ್ಲದ ಒಡಂಬಡಿಕೆಗಳ ನಡುವಿನ ವ್ಯತ್ಯಾಸವನ್ನು ವಿವರಿಸಿ.

2. ಈ ಪಾಠದಲ್ಲಿ ಚರ್ಚಿಸಲಾಗಿರುವ ಒಡಂಬಡಿಕೆಗಳನ್ನು ವಿವರಿಸಿರಿ.

3. ಈ ಒಡಂಬಡಿಕೆಗಳನ್ನು ನೀವು ಇಂದು ಅರ್ಥಮಾಡಿಕೊಳ್ಳುವುದು ಏಕೆ ಮುಖ್ಯವಾಗಿದೆ?

# ಮೆಸ್ಸೀಯನ ಕುರಿತಾದ ಮುಖ್ಯ ಪ್ರವಾದನೆಗಳು

| ಕೊಡಲ್ಪಟ್ಟದ್ದು | ವಿಷಯ | ನೆರವೇರಿದ್ದು |
|---|---|---|
| ಆದಿಕಾಂಡ 3:15 | ಸ್ತ್ರೀಯ ಸಂತಾನ | ಗಲಾತ್ಯ 4:4 |
| ಆದಿಕಾಂಡ 12:3 | ಅಬ್ರಹಾಮನ ಸಂತಾನ | ಮತ್ತಾಯ 1:1 |
| ಆದಿಕಾಂಡ 17:19 | ಇಸಾಕನ ಸಂತಾನ | ಲೂಕ 3:34 |
| ಅರಣ್ಯಕಾಂಡ 24:17 | ಯಾಕೋಬನ ರಾಜ ಸಂತಾನ | ಮತ್ತಾಯ 1:2 |
| ಆದಿಕಾಂಡ 49:10 | ಯೆಹೂದ ಕುಲದ ರಾಜ | ಲೂಕ 3:33 |
| 1 ಸಮುವೇಲ 2:10 | ಒಬ್ಬ ರಾಜನಾಗಿರುವನು | ಲೂಕ 19:38 |
| ಯೆಶಾಯ 9:7 | ದಾವೀದನ ಸಿಂಹಾಸನಕ್ಕೆ ಉತ್ತರಾಧಿಕಾರಿ | ಲೂಕ 1:32,33 |
| ಕೀರ್ತನೆ 45:6,7 | ಅಭಿಷೇಕಿಸಲ್ಪಟ್ಟವನು ಮತ್ತು ಶಾಶ್ವತವಾಗಿರುವವನು | ಇಬ್ರಿಯ 1:8-12 |
| ಮೀಕ 5:2 | ಬೆತ್ಲೆಹೇಮಿನಲ್ಲಿ ಜನಿಸುವನು | ಲೂಕ 2:407 |
| ಯೆಶಾಯ 7:14 | ಕನ್ಯೆಯ ಗರ್ಭದಲ್ಲಿ ಜನಿಸುವನು | ಲೂಕ 1:26-31 |
| ಯೆರೆಮೀಯ 31:15 | ಶಿಶುಗಳ ಮಾರಣಹೋಮ | ಮತ್ತಾಯ 2:16 |
| ಹೊಶೆಯ 11:1 | ಈಜಿಪ್ಟಿಗೆ ಹೋದದ್ದು | ಮತ್ತಾಯ 2:14,15 |
| ಮಲಾಕಿ 3:1 | ಆತನಿಗಿಂತ ಮುಂಚೆ ಯೋಹಾನನ ಆಗಮನ | ಲೂಕ 7:24,27 |
| ಕೀರ್ತನೆ 2:7 | ದೇವರ ಪುತ್ರನೆಂಬ ಘೋಷಣೆ | ಮತ್ತಾಯ 3:17 |
| ಯೆಶಾಯ 9:1,2 | ಗಲಿಲಾಯದಲ್ಲಿನ ಸೇವೆ | ಮತ್ತಾಯ 4:13-16 |
| ಯೆಶಾಯ 11:2 | ಆತನ ಕೆಲವು ಗುಣಲಕ್ಷಣಗಳು | ಲೂಕ 2:52 |
| ಕೀರ್ತನೆ 78:2-4 | ಸಾಮ್ಯಗಳ ಮೂಲಕ ಮಾತನಾಡುವನು | ಮತ್ತಾಯ 13:34,35 |
| ಧರ್ಮೋಪದೇಶಕಾಂಡ 18:15 | ಮೋಶೆಯ ಹಾಗೆ ಪ್ರವಾದಿಯಾಗಿರುವನು | ಅಪೋ. 3:20,22 |
| ಯೆಶಾಯ 61:1,2 | ಮುರಿದ ಹೃದಯವುಳ್ಳವರನ್ನು ಕಟ್ಟುವನು | ಲೂಕ 4:18,19 |
| ಯೆಶಾಯ 53:3 | ತನ್ನ ಸ್ವಂತ ಜನರಿಂದ ತಿರಸ್ಕರಿಸಲ್ಪಡುವನು | ಯೋಹಾನ 1:11 |
| ಕೀರ್ತನೆ 110:4 | ಮೆಲ್ಕಿಜೆದೇಕನ ತರಹದ ಪ್ರವಾದಿ | ಇಬ್ರಿಯ 5:5,6 |
| ಜೆಕರ್ಯ 9:9 | ವಿಜಯೋತ್ಸವದ ಪ್ರವೇಶ | ಮಾರ್ಕ 11:7,9 |
| ದಾನಿಯೇಲ 9:25 | ವಿಜಯೋತ್ಸವದ ಪ್ರವೇಶದ ಸಮಯ | ಲೂಕ 2:1,2;3:23;19:42 |
| ಕೀರ್ತನೆ 8:2 | ಶಿಶುಗಳಿಂದ ಸ್ತುತಿಸಲ್ಪಡುವನು | ಮತ್ತಾಯ 21:15,16 |
| ಯೆಶಾಯ 53:1 | ನಂಬಲ್ಪಡುವದಿಲ್ಲ | ಯೋಹಾನ 12:37,38 |
| ಕೀರ್ತನೆ 41:9 | ಆಪ್ತ ಸ್ನೇಹಿತನಿಂದಲೇ ದ್ರೋಹ | ಲೂಕ 22:47,48 |
| ಜೆಕರ್ಯ 11:12 | 30 ಬೆಳ್ಳಿಯ ನಾಣ್ಯಗಳಿಗಾಗಿ ದ್ರೋಹ | ಮತ್ತಾಯ 26:14,15 |
| ಜೆಕರ್ಯ 11:13 | ಹಣವು ಹಿಂತಿರುಗಿಸಲ್ಪಟ್ಟಿದ್ದು/ಕುಂಬಾರನ ಹೊಲ | ಮತ್ತಾಯ 27:6,7 |
| ಕೀರ್ತನೆ 109:7,8 | ಯೂದನ ಸ್ಥಾನವನ್ನು ಇನ್ನೊಬ್ಬನು ತೆಗೆದುಕೊಂಡಿದ್ದು | ಅಪೋ. 1:18-20 |
| ಕೀರ್ತನೆ 22:7,8 | ಸುಳ್ಳು ಸಾಕ್ಷಿಗಳು ಆತನ ಮೇಲೆ ಆರೋಪ ಮಾಡಿದ್ದು | ಮತ್ತಾಯ 26:60,61 |
| ಕೀರ್ತನೆ 35:11 | ಸುಳ್ಳು ಸಾಕ್ಷಿಗಳಿಂದ ಆರೋಪಿಯಾದದ್ದು | ಮಾರ್ಕ 14:57,58 |
| ಯೆಶಾಯ 53:7 | ಆರೋಪಗಳಿಗೆ ಮೌನವಾಗಿದ್ದದ್ದು | ಮಾರ್ಕ 15:4,5 |
| ಯೆಶಾಯ 50:6 | ಮುಖದ ಮೇಲೆ ಉಗುಳಲ್ಪಟ್ಟಿದ್ದು ಮತ್ತು ಹೊಡೆಯಲ್ಪಟ್ಟಿದ್ದು | ಮತ್ತಾಯ 26:67 |
| ಕೀರ್ತನೆ 35:19 | ವಿನಾಕಾರಣ ದ್ವೇಷಿಸಲ್ಪಟ್ಟಿದ್ದು | ಮತ್ತಾಯ 26:67 |
| ಕೀರ್ತನೆ 69:4 | ನಿಷ್ಕಾರಣ ದ್ವೇಷಿಸಲ್ಪಟ್ಟಿದ್ದು | ಯೋಹಾನ 15:23-25 |

| | | |
|---|---|---|
| ಯೆಶಾಯ 53:5 | ನಮಗಾಗಿ ಮಾಡಿದ ತ್ಯಾಗಬಲಿ | ರೋಮಾ 5:6,8 |
| ಯೆಶಾಯ 53:12 | ಅಪರಾಧಿಗಳೊಂದಿಗೆ ಶಿಲುಬೆಗೇರಿಸಲ್ಪಟ್ಟಿದ್ದು | ಮಾರ್ಕ 15:27,28 |
| ಜೆಕರ್ಯ 12:10 | ಕೈಗಳಿಗೆ ಮತ್ತು ಕಾಲುಗಳಿಗೆ ಮೊಳೆ ಹೊಡೆಯಲ್ಪಟ್ಟಿದ್ದು | ಯೋಹಾನ 20:27 |
| ಕೀರ್ತನೆ 22:7,8 | ಹೀಯಾಳಿಸಲ್ಪಟ್ಟಿದ್ದು ಮತ್ತು ಅಪಹಾಸ್ಯ ಮಾಡಲ್ಪಟ್ಟಿದ್ದು | ಲೂಕ 23:35 |
| ಕೀರ್ತನೆ 69:9 | ನಿಂದಿಸಲ್ಪಟ್ಟಿದ್ದು | ರೋಮಾ 15:3 |
| ಕೀರ್ತನೆ 109:4 | ತನ್ನ ಶತ್ರುಗಳಿಗಾಗಿ ಪ್ರಾರ್ಥಿಸಿದ್ದು | ಲೂಕ 23:34 |
| ಕೀರ್ತನೆ 22:17,18 | ಆತನ ಉಡುಪುಗಳಿಗಾಗಿ ಚೀಟು ಹಾಕಲ್ಪಟ್ಟಿದ್ದು | ಮತ್ತಾಯ 27:35,36 |
| ಕೀರ್ತನೆ 22:1 | ದೇವರಿಂದ ತಿರಸ್ಕರಿಸಲ್ಪಟ್ಟಿದ್ದು | ಮತ್ತಾಯ 27:46 |
| ಕೀರ್ತನೆ 34:20 | ಯಾವ ಮೂಳೆಯೂ ಮುರಿಯಲ್ಪಡಲಿಲ್ಲ | ಯೋಹಾನ 19:32-36 |
| ಕೀರ್ತನೆ 69:21 | ಕಹಿ ಬೆರಸಿದ ದ್ರಾಕ್ಷಾರಸವನ್ನು ಕುಡಿಯವುದಕ್ಕೆ ಕೊಟ್ಟಿದ್ದು | ಮತ್ತಾಯ 27:34 |
| ಜೆಕರ್ಯ 12:10 | ಆತನ ಪಕ್ಕೆಯು ಚುಚ್ಚಲ್ಪಟ್ಟಿದ್ದು | ಯೋಹಾನ 19:34 |
| ಯೆಶಾಯ 53:9 | ಪುಷ್ಟರ ನಡುವೆ ಹೂಣಲ್ಪಟ್ಟಿದ್ದು | ಮತ್ತಾಯ 27:57-60 |
| ಕೀರ್ತನೆ 16:10 | ಪುನರುತ್ಥಾನ ಹೊಂದುವನು | ಮಾರ್ಕ 16:6,7 |
| ಕೀರ್ತನೆ 68:18 | ದೇವರ ಬಲಗಡೆಗೆ ಏರಿ ಹೋಗುವನು | ಮಾರ್ಕ 16:19 |

## ಪಾಠ ನಾಲ್ಕು

# *ಹಳೆ ಒಡಂಬಡಿಕೆಯಲ್ಲಿ ಕ್ರಿಸ್ತನ ಕುರಿತಾದ ಪ್ರಕಟನೆ*

ಕೆಲವರು ಹಳೆ ಒಡಂಬಡಿಕೆಯನ್ನು ಇತಿಹಾಸದ ಪುಸ್ತಕ ಎಂದು ಕರೆಯುತ್ತಾರೆ. ಇದು ಇತಿಹಾಸವೇ - ಆದರೆ ಅದಕ್ಕಿಂತಲೂ ಹೆಚ್ಚಾಗಿ ಇದು "ಅವನ ಕಥೆಯಾಗಿದೆ." ಪ್ರಪಂಚದ ಸೃಷ್ಟಿ ಮತ್ತು ದೇವರು *ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ* ಎಂದು ಹೇಳಿದಾಗ ಆದ ಮಾನವಕುಲದ ಸೃಷ್ಟಿ ಮೊದಲುಗೊಂಡು ಇಸ್ರಾಯೇಲ್ ದೇಶದ ಪತನದವರೆಗೆ, ಕ್ರಿಸ್ತನು ಪ್ರತಿಯೊಂದು ಪುಸ್ತಕದಲ್ಲೂ ಪ್ರಕಟಿಸಲ್ಪಟ್ಟಿದ್ದಾರೆ.

ಹಳೆಯ ಒಡಂಬಡಿಕೆಯಲ್ಲಿ ಮುಂಬರುವ ಮೆಸ್ಸೀಯನ ಬಗ್ಗೆ 330 ಪ್ರವಾದನೆಗಳಿವೆ. ಅವುಗಳು ಸಾಮಾನ್ಯವಾದ ರೀತಿಯಲ್ಲಿ ಆರಂಭಿಸಿದಾಗ್ಯೂ ಕಾಲ ಕಳೆದಂತೆ ಹೆಚ್ಚು ನಿರ್ದಿಷ್ಟವಾದವು.

ಯೇಸು ಕ್ರಿಸ್ತನೇ ದೇವರ ಮಗನು - ಪಾಪದ ದಂಡನೆಗಳಿಂದ ಮಾನವಕುಲವನ್ನು ಬಿಡಿಸುವುದಕ್ಕಾಗಿ ಕಳುಹಿಸಲ್ಪಟ್ಟ ವ್ಯಕ್ತಿ ಎಂಬುದಕ್ಕೆ - ಯೇಸು ಕ್ರಿಸ್ತನಲ್ಲಿ ನೆರವೇರಿದ ಈ ಅದ್ಭುತವಾದ ಪ್ರವಾದನೆಗಳೇ ನಿರಾಕರಿಸಲಾಗದ ಪುರಾವೆಯಾಗಿದೆ.

ಗಮನಿಸಿ: ಈ ಪಾಠದಲ್ಲಿ ಸ್ಥಳವನ್ನು ಉಳಿಸುವ ಕಾರಣದಿಂದ ನಾವು ಹಲವು ಕಡೆ ನೆರವೇರುವಿಕೆಯ ಹೊಸ ಒಡಂಬಡಿಕೆಯ ವಚನಗಳನ್ನು ನೀಡಿಲ್ಲ. ಅವುಗಳನ್ನು ಹಿಂದಿನ ಪುಟದಲ್ಲಿನ ಚಾರ್ಟ್ನಲ್ಲಿ ಪಟ್ಟಿ ಮಾಡಲಾಗಿದೆ

## ಬರಲಿರುವ ಮೆಸ್ಸೀಯನು

### ಸ್ತ್ರೀಯ ಸಂತಾನ

ಈ ಹಿಂದೆ ತಿಳಿಸಿರುವಂತೆ, ಯೇಸುವಿನ ಬಗ್ಗೆ ಮಾಡಲ್ಪಟ್ಟ ಮೊದಲ ಪ್ರವಾದನೆಯು ಆತನು ಸ್ತ್ರೀಯ ಸಂತಾನವಾಗಿರುವನು ಎಂಬದಾಗಿದೆ.

**ಆದಿಕಾಂಡ 3:15 ನಿನಗೂ, ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು. ನೀನು ಅವನ ಹಿಮ್ಮಡಿಯನ್ನು ಕಚ್ಚುವಿ" ಎಂದು ಹೇಳಿದನು.**

ಪೌಲನು ಈ ಪ್ರವಾದನೆಯ ನೆರವೇರುವಿಕೆಯ ಬಗ್ಗೆ ಹೇಳುತ್ತಾನೆ.

**ಗಲಾತ್ಯ 4:4, ಆದರೆ ಸೂಕ್ತಸಮಯ ಬಂದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಕ್ಕೆ ಅಧೀನರಾದವರನ್ನು ಬಿಡಿಸಬೇಕೆಂತಲೂ, ಪುತ್ರರ ಬಾಧ್ಯತೆಯ ಪದವಿಯನ್ನು ನಮಗೆ ದೊರಕಿಸಿಕೊಡಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ, ಧರ್ಮಶಾಸ್ತ್ರಾಧೀನನಾಗಿಯೂ ಬಂದನು.**

ಮುಂಬರುವ ಮೆಸ್ಸೀಯನನ್ನು ಆದಾಮ ಮತ್ತು ಹವ್ವರಿಗೆ, ಅಬ್ರಹಾಮನಿಗೆ, ಇಸಾಕನಿಗೆ, ಯಾಕೋಬನಿಗೆ ಮತ್ತು ದಾವೀದನಿಗೆ ವಾಗ್ದಾನ ಮಾಡಲಾಗಿತ್ತು.

ಪ್ರಾರಂಭದಲ್ಲಿ ವಾಗ್ದಾನ ಮಾಡಲ್ಪಟ್ಟ ಸಂತಾನವು ಯಾವ ಸ್ತ್ರೀಯಿಂದಾದರೂ ಬರಬಹುದೆಂದು ತೋರಿತು. ನಂತರ ಪ್ರವಾದನೆಗಳು ಹೆಚ್ಚೆಚ್ಚಾಗಿ ನಿರ್ದಿಷ್ಟವಾಗ ತೊಡಗಿದವು. ಆ ವಾಗ್ದಾನವು ಅಬ್ರಹಾಮನ ಸಂತತಿಯಲ್ಲಿ ನೆರವೇರುವುದು - ಇಸಾಕನಿಂದ - ಯಾಕೋಬನಿಂದ - ದಾವೀದನಿಂದ. ಆತನ ವಂಶಾವಳಿಯ ಪ್ರವಾದನೆಗಳು ಹೆಚ್ಚು ಹೆಚ್ಚು ನಿರ್ದಿಷ್ಟವಾಯಿತು.

## ಬೆತ್ಲೆಹೇಮಿನಲ್ಲಿ ಜನನ

ಮೆಸ್ಸೀಯನು ಬೆತ್ಲೆಹೇಮಿನಲ್ಲಿ ಜನಿಸುವನು ಎಂದು ಪ್ರವಾದಿಸಲಾಗಿತ್ತು ಮತ್ತು ಯೇಸು ಬೆತ್ಲೆಹೇಮಿನಲ್ಲಿ ಜನಿಸಿದರು.

**ಮೀಕ 5:2 ಎಫ್ರಾತದ ಬೇತ್ಲೆಹೇಮೇ, ನೀನು ಯೆಹೂದದ ಗ್ರಾಮಗಳಲ್ಲಿ ಚಿಕ್ಕದ್ದಾಗಿದ್ದರೂ ಇಸ್ರಾಯೇಲನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು. ಆತನ ಕುಲದ ಮೂಲವು ಪುರಾತನವೂ ಮತ್ತು ಅನಾದಿಯೂ ಆದದ್ದು.**

**ಲೂಕ 2:4-7 ಯೋಸೇಫನು ಸಹ ತಾನು ದಾವೀದನ ಮನೆತನದವನೂ, ಗೋತ್ರದವನೂ ಆಗಿದ್ದದರಿಂದ ಹೆಸರು ನೊಂದಾಯಿಸಿಕೊಳ್ಳುವುದಕ್ಕಾಗಿ ತನಗೆ ನಿಶ್ಚಿತಾರ್ಥವಾಗಿದ್ದ ಹಾಗೂ ಗರ್ಭವತಿಯಾಗಿದ್ದ ಮರಿಯಳ ಸಂಗಡ ಗಲಿಲಾಯ ಸೀಮೆಯ ನಜರೇತ್ ಎಂಬ ಊರಿನಿಂದ ಹೊರಟು ಯೂದಾಯದಲ್ಲಿರುವ ಬೇತ್ಲೆಹೇಮೆಂಬ ದಾವೀದನೂರಿಗೆ ಹೋದರು. ಅವರು ಅಲ್ಲಿದ್ದಾಗ ಆಕೆಗೆ ಪ್ರಸವಕ್ಕೆ ದಿನತುಂಬಿತು. ಆಕೆಯು ತನ್ನ ಚೊಚ್ಚಲು ಮಗನನ್ನು ಹೆತ್ತು ಬಟ್ಟೆಯಲ್ಲಿ ಸುತ್ತಿ ಛತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಅವನನ್ನು ಗೋದಲಿಯಲ್ಲಿ ಮಲಗಿಸಿದಳು.**

## ಮೋಶೆಯ ಹಾಗೆ ಪ್ರವಾದಿ

ಮೆಸ್ಸೀಯನು ಮೋಶೆಯ ಹಾಗೆ ಪ್ರವಾದಿಯಾಗಿರುವನು.

**ಧರ್ಮೋ 18:15a ನಿಮ್ಮ ದೇವರಾದ ಯೆಹೋವನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು ನಿಮಗೆ ಏರ್ಪಡಿಸುವನು; ಅವನಿಗೆ ನೀವು ಕಿವಿಗೊಡಬೇಕು.**

## ಮೆಲ್ಕಿಜೆದೆಕನ ತರಹದ ಯಾಜಕ

ಆತನು ಮೆಲ್ಕಿಜೆದೆಕನ ತರಹದ ಯಾಜಕನಾಗಿರುವನು.

**ಕೀರ್ತನೆ 110:4 "ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹ ಯಾಜಕನಾಗಿರುವೆ" ಎಂದು ಯೆಹೋವನು ಆಣೆಯಿಟ್ಟು ನುಡಿದಿದ್ದಾನೆ; ಪಶ್ಚಾತ್ತಾಪಡುವುದಿಲ್ಲ.**

ದಾವೀದನ ಹಾಗೆ ರಾಜನು

ಆತನು ದಾವೀದನ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿರುವನು.

**ಯೆಶಾಯ 9:7 ಆತನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವುದು. ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು. ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು. ಸೇನಾಧೀಶ್ವರನಾದ ಯೆಹೋವನ ಅನುಗ್ರಹವು ಇದನ್ನು ನೆರವೇರಿಸುವುದು.**

**ಲೂಕ 1:32,33 ಆತನು ಮಹಾಪುರುಷನಾಗುವನು, ಪರಾತ್ಪರನಾದ ದೇವರ ಕುಮಾರನೆಂದು ಕರೆಯಲ್ಪಡುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬನ ವಂಶವನ್ನು ಸದಾಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇರದು" ಎಂದು ಹೇಳಿದನು.**

ಬರುವ ಸಮಯ

ಮೆಸ್ಸೀಯನು ಇತಿಹಾಸದ ಒಂದು ನಿರ್ದಿಷ್ಟ ಕಾಲದಲ್ಲಿ ಬರುವನು. ಆತನು ಇಸ್ರಾಯೇಲರ ರಾಜನಾಗಿ ತನ್ನನ್ನು ಅರ್ಪಿಸುವನು. ಆದರೆ ತಿರಸ್ಕರಿಸಲ್ಪಡುವನು.

**ದಾನಿ 9:25,26b ಇದನ್ನು ತಿಳಿದು ಮನದಟ್ಟುಮಾಡಿಕೋ; ಯೆರೂಸಲೇಮ್ ಜೀರ್ಣೋದ್ಧಾರವಾಗಿ ಕಟ್ಟಲ್ಪಡಲಿ ಎಂಬ ದೈವೋಕ್ತಿಯು ಹರಡುವ ದಿನದಿಂದ ಅಭಿಷಿಕ್ತನಾದ ಪ್ರಭುವು ಬರುವುದರೊಳಗೆ ಏಳು ವಾರಗಳು ಕಳೆಯಬೇಕು! ಅದು ಪುನಃ ಕಟ್ಟಲ್ಪಟ್ಟು ಅರವತ್ತೆರಡು ವಾರ ಇರುವುದು; ಅದಕ್ಕೆ ಚೌಕವೂ ಕಂದಕವೂ ಇರುವವು; ಆ ಕಾಲವು ಬಹು ಕಷ್ಟಕಾಲ. ಅರುವತ್ತೆರಡು ವಾರಗಳಾದ ಮೇಲೆ ಅಭಿಷಿಕ್ತನೊಬ್ಬನು ಛೇದಿಸಲ್ಪಡುವನು; ಅವನಿಗೆ ಏನೂ ಇರದು…**

ದಾವೀದನ ಪ್ರವಾದನೆಗಳು

---

ದಾವೀದನು ಇತರ ಪ್ರವಾದಿಗಳಿಗಿಂತ ಹೆಚ್ಚಾಗಿ ಕ್ರಿಸ್ತನ ಶ್ರಮೆಯನ್ನು ಅರ್ಥಮಾಡಿಕೊಂಡನೆಂದು ತೋರುತ್ತದೆ. ಅವನು ತನ್ನ ಸ್ವಂತ ಶ್ರಮೆಯ ಮೂಲಕ ಕ್ರಿಸ್ತನು ಶಿಲುಬೆಯ ಮೇಲೆ ತೂಗುಹಾಕಲ್ಪಟ್ಟಾಗ ಅನುಭವಿಸಿದ ಭಾವನೆಗಳ ಬಗ್ಗೆ ನಮಗೆ ಒಳನೋಟಗಳನ್ನು ನೀಡುತ್ತಾನೆ - ಆತನು ಭೂಮಿಯ ಆಳದಲ್ಲಿದ್ದಾಗಿನ ಭಾವನೆಗಳ ಬಗ್ಗೆ ಸಹ ನಮಗೆ ಒಳನೋಟಗಳನ್ನು ನೀಡುತ್ತಾನೆ. ಯೇಸು

ಮಹಿಮೆಯೊಂದಿಗೆ ಪರಲೋಕದ ಸಿಂಹಾಸನ ಕೋಣೆಗೆ ಹಿಂತಿರುಗುವುದನ್ನು ಅವನು ವರ್ಣಿಸುತ್ತಾನೆ.

**ವಿಶ್ವಾಸದ್ರೋಹದ ಬಗ್ಗೆ ಪ್ರವಾದನೆಗಳು**

* *ಸ್ನೇಹಿತನಿಂದ ವಿಶ್ವಾಸದ್ರೋಹ*

ಯೇಸುವಿಗೆ ಸ್ನೇಹಿತನಿಂದ ವಿಶ್ವಾಸದ್ರೋಹವಾಗುವುದು, ಈ ಸ್ನೇಹಿತನ ದಿನಗಳು ಕೊಂಚವಾಗಿರುವುದು ಮತ್ತು ಅವನ ಸ್ಥಾನಕ್ಕೆ ಇನ್ನೊಬ್ಬನನ್ನು ನೇಮಿಸಲಾಗುವುದು ಎಂದು ದಾವೀದನು ಪ್ರವಾದಿಸಿದನು.

**ಕೀರ್ತನೆ 41:9 ನಾನು ಯಾರನ್ನು ನಂಬಿದ್ದೆನೋ, ಯಾರು ನನ್ನ ಮನೆಯಲ್ಲಿ ಅನ್ನಪಾನಗಳನ್ನು ತೆಗೆದುಕೊಂಡನೋ, ಅಂತಹ ಆಪ್ತಸ್ನೇಹಿತನು ನನಗೆ ಕಾಲನ್ನು ಅಡ್ಡಗೊಟ್ಟಿದ್ದಾನೆ.**

**ಕೀರ್ತನೆ 109:8 ಅವನ ಜೀವಿತದ ದಿನಗಳು ಸ್ವಲ್ಪವಾಗಿರಲಿ; ಅವನ ಉದ್ಯೋಗವು ಮತ್ತೊಬ್ಬನಿಗಾಗಲಿ.**

* *ಸುಳ್ಳುಸಾಕ್ಷಿಗಳು ಆತನನ್ನು ಆರೋಪಿಸಿದರು*

ಆತನ ವಿರುದ್ಧ ಅವರು ಸುಳ್ಳುಸಾಕ್ಷಿಗಳನ್ನು ಕರೆತರುವರು ಎಂದು ದಾವೀದನು ಪ್ರವಾದಿಸಿದನು.

**ಕೀರ್ತನೆ 27:12 ಸುಳ್ಳುಸಾಕ್ಷಿಗಳೂ ಬೆದರಿಸುವವರೂ ನನಗೆ ವಿರುದ್ಧವಾಗಿ ಎದ್ದಿದ್ದಾರೆ; ಇಂಥ ವೈರಿಗಳ ವಶಕ್ಕೆ ನನ್ನನ್ನು ಕೊಡಬೇಡ.**

ಮತ್ತಾಯನು ಈ ಪ್ರವಾದನೆಯನ್ನು ದೃಢೀಕರಿಸುತ್ತಾನೆ.

**ಮತ್ತಾಯ 26:59-61 ಆಗ ಮುಖ್ಯಯಾಜಕರೂ ಹಿರೀಸಭೆಯವರೆಲ್ಲರೂ ಯೇಸುವನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಸುಳ್ಳುಸಾಕ್ಷಿಯನ್ನು ಹುಡುಕಿದರು; ಆದರೆ ಬಹು ಮಂದಿ ಸುಳ್ಳುಸಾಕ್ಷಿಗಳು ಮುಂದೆ ಬಂದರೂ ಏನೂ ಸಿಕ್ಕಲಿಲ್ಲ. ಅನಂತರ ಇಬ್ಬರು ಮುಂದೆ ಬಂದು, "ನಾನು ದೇವರ ಆಲಯವನ್ನು ಕೆಡವಿಬಿಟ್ಟು ಮೂರು ದಿನಗಳಲ್ಲಿ ತಿರುಗಿ ಕಟ್ಟಬಲ್ಲೆನೆಂದು 'ಈ ಮನುಷ್ಯನು ಹೇಳಿದನು'" ಅಂದರು"**

* *ವಿನಾಕಾರಣ ದ್ವೇಷಿಸಲ್ಪಟ್ಟನು*

ಆತನು ವಿನಾಕಾರಣ ದ್ವೇಷಿಸಲ್ಪಡುವನು.

**ಕೀರ್ತನೆ 69:4 ನಿಷ್ಕಾರಣ ದ್ವೇಷಿಗಳು ನನ್ನ ತಲೆಗೂದಲುಗಳಿಗಿಂತ ಹೆಚ್ಚಾಗಿದ್ದಾರೆ; ನಿರಾಕಾರಣವಾಗಿ ನನ್ನನ್ನು ಮುಗಿಸಿಬಿಡಬೇಕೆಂದಿರುವ ವೈರಿಗಳು ಬಲಿಷ್ಠರಾಗಿದ್ದಾರೆ. ನಾನು ಅಪಹರಿಸದಿದ್ದರೂ ನನ್ನಿಂದ ದಂಡ ತೆಗೆದುಕೊಂಡರಲ್ಲಾ.**

ಯೋಹಾನನು ಈ ಪ್ರವಾದನೆಯನ್ನು ದೃಢೀಕರಿಸುತ್ತಾನೆ ಮತ್ತು ಈ ವಚನವನ್ನೂ ಉಲ್ಲೇಖಿಸುತ್ತಾನೆ.

**ಯೋಹಾನ 15:23-25 ನನ್ನನ್ನು ದ್ವೇಷಿಸುವವನು ನನ್ನ ತಂದೆಯನ್ನು ಸಹ ದ್ವೇಷಿಸುತ್ತಾನೆ. ಬೇರೆ ಯಾರೂ ಮಾಡದಿರುವ ಕ್ರಿಯೆಗಳನ್ನು ನಾನು ಅವರ ನಡುವೆ ಮಾಡದೆಹೋಗಿದ್ದರೆ ಅವರಿಗೆ ಪಾಪವು ಇರುತ್ತಿರಲಿಲ್ಲ. ಆದರೆ ಈಗ ಅವರು ನನ್ನ ಅದ್ಭುತಕಾರ್ಯಗಳನ್ನು ನೋಡಿದ್ದಾರೆ, ಆದರೂ ನನ್ನನ್ನೂ ನನ್ನ ತಂದೆಯನ್ನೂ ದ್ವೇಷಿಸಿದ್ದಾರೆ 'ಅವರು ನನ್ನನ್ನು ನಿಷ್ಕಾರಣವಾಗಿ ದ್ವೇಷಿಸಿದರು' ಎಂದು ಅವರ ಧರ್ಮಶಾಸ್ತ್ರದಲ್ಲಿ ಬರೆದಿರುವ ಮಾತು ನೆರವೇರುವಂತೆ ಹೀಗಾಯಿತು.'**

**ಶಿಲುಬೆಯ ಮರಣದ ಬಗ್ಗೆ ಪ್ರವಾದನೆಗಳು**

ಶಿಲುಬೆಯ ಮರಣದ ಬಗ್ಗೆ ಅನೇಕ ಪ್ರವಾದನೆಗಳಿವೆ. ಅವುಗಳ ನೆರವೇರುವಿಕೆಗಳನ್ನು ಮತ್ತಾಯ 27, ಮಾರ್ಕ 15, ಲೂಕ 23, ಯೋಹಾನ 19 ರಲ್ಲಿ ಕಾಣಬಹುದು.

* *ಕೈ ಮತ್ತು ಕಾಲುಗಳಿಗೆ ಮೊಳೆ ಜಡಿಯಲ್ಪಟ್ಟಿದ್ದು*
* *ಆತನ ಅಂಗಿಗಾಗಿ ಸೈನಿಕರು ಚೀಟು ಹಾಕಿದ್ದು*

**ಕೀರ್ತನೆ 22:16-19 ನಾಯಿಗಳು ನನ್ನನ್ನು ಸುತ್ತಿಕೊಂಡಿವೆ; ದುಷ್ಟರ ಗುಂಪು ನನ್ನನ್ನು ಆವರಿಸಿಕೊಂಡಿದೆ. ನನ್ನ ಕೈಕಾಲುಗಳನ್ನು ತಿವಿದಿದ್ದಾರೆ. ನನ್ನ ಎಲುಬುಗಳನ್ನೆಲ್ಲಾ ಎಣಿಸುವುದಕ್ಕಾಗುವುದು; ಅವರೋ ನನ್ನನ್ನು ನೋಡಿ ನೋಡಿ ಹಿಗ್ಗುತ್ತಾರೆ. ನನ್ನ ಮೇಲ್ಹೊದಿಕೆಯನ್ನು ತಮ್ಮಲ್ಲಿ ಪಾಲು ಮಾಡಿಕೊಳ್ಳುತ್ತಾರೆ; ನನ್ನ ಅಂಗಿಗಾಗಿ ಚೀಟುಹಾಕುತ್ತಾರೆ. ಯೆಹೋವನೇ, ನನ್ನ ರಕ್ಷಕನೇ, ನೀನಾದರೋ ದೂರವಾಗಿರಬೇಡ; ಬೇಗ ಬಂದು ಸಹಾಯಮಾಡು!**

* *ನಿಂದಿಸಲ್ಪಟ್ಟನು, ಕಡೆಗಣಿಸಲ್ಪಟ್ಟನು, ಹೀಯಾಳಿಸಲ್ಪಟ್ಟನು*
* *ಅಪಹಾಸ್ಯದ ಬಗ್ಗೆ ಪ್ರವಾದನೆ*

**ಕೀರ್ತನೆ 22:6-8 ನಾನಾದರೋ ಹುಳದಂಥವನೇ ಹೊರತು ಮನುಷ್ಯನಲ್ಲ; ಮನುಷ್ಯರಿಂದ ನಿಂದಿಸಲ್ಪಟ್ಟು ಜನರಿಂದ ತಿರಸ್ಕಾರ ಹೊಂದಿದ್ದೇನೆ. ನನ್ನನ್ನು ನೋಡುವವರೆಲ್ಲರೂ ಹಾಸ್ಯಮಾಡುತ್ತಾರೆ; ಅವರು ಓರೇ ತುಟಿ ಮಾಡಿ ತಲೆ ಆಡಿಸುತ್ತಾ,"ಯೆಹೋವನು ತನ್ನನ್ನು ರಕ್ಷಿಸುವನೆಂದು ಆತನಲ್ಲಿ ಭರವಸವಿಟ್ಟಿದ್ದಾನಲ್ಲಾ; ಆತನು ಇವನನ್ನು ಮೆಚ್ಚಿದ್ದಾದರೆ ರಕ್ಷಿಸಲಿ" ಎಂದು ಹೇಳುತ್ತಾರೆ!**

* *ಕಹಿಯಾದ ರಸವನ್ನು ಮತ್ತು ಹುಳಿ ದ್ರಾಕ್ಷಾರಸವನ್ನು ಕೊಟ್ಟರು*

**ಕೀರ್ತನೆ 69:21 ನನಗೆ ಉಣ್ಣುವುದಕ್ಕೆ ಕಹಿಯಾದ ವಸ್ತುವನ್ನೂ, ಬಾಯಾರಿದಾಗ, ಹುಳಿ ದ್ರಾಕ್ಷಾರಸವನ್ನೂ ಕೊಟ್ಟರು.**

* *ವೈರಿಗಳಿಗಾಗಿ ಪ್ರಾರ್ಥಿಸಿದನು*

**ಕೀರ್ತನೆ 109:4,5 ನಾನು ಅವರನ್ನು ಪ್ರೀತಿಸಿದರೂ, ಅವರು ನನ್ನನ್ನು ವಿರೋಧಿಸುತ್ತಾರೆ; ನಾನಾದರೋ ನಿನಗೆ ಮೊರೆಯಿಡುತ್ತೇನೆ. ಉಪಕಾರಕ್ಕೆ ಅಪಕಾರವನ್ನು ಮಾಡಿದ್ದಾರೆ; ನಾನು ಪ್ರೀತಿಸಿದ್ದಕ್ಕೆ ಪ್ರತಿಯಾಗಿ ನನ್ನನ್ನು ದ್ವೇಷಿಸಿದ್ದಾರೆ.**

* *ಒಂದು ಮೂಳೆಯೂ ಮುರಿಯಲ್ಪಡಲಿಲ್ಲ*

**ಕೀರ್ತನೆ 34:20 ಆತನು ಅವನ ಎಲುಬುಗಳನ್ನೆಲ್ಲಾ ಕಾಪಾಡುತ್ತಾನೆ; ಅವುಗಳಲ್ಲಿ ಒಂದಾದರೂ ಮುರಿದುಹೋಗುವುದಿಲ್ಲ.**

**ಆತನ ಪುನರುತ್ಥಾನ / ಸ್ವರ್ಗಾರೋಹಣ**

ಈ ಪ್ರವಾದನೆಗಳ ನೆರವೇರುವಿಕೆಗಳನ್ನು ಮತ್ತಾಯ 28, ಮಾರ್ಕ 16, ಲೂಕ 24 ಮತ್ತು ಯೋಹಾನ 20 ರಲ್ಲಿ ಕಾಣಬಹುದು.

* *ಮರಣದಲ್ಲಿಯೂ*

ಯೇಸು ಸಾಯುತ್ತಿರುವಾಗಲೂ ದೇವರು ತನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲವೆಂದು ತಿಳಿದಿದ್ದರು. ದಾವೀದನು ಈ ಸಮಯದಲ್ಲಿನ ತನ್ನ ಆಲೋಚನೆಗಳನ್ನು ನಮಗೆ ತಿಳಿಸುತ್ತಾನೆ.

**ಕೀರ್ತನೆ 16:10 ಏಕೆಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವುದಿಲ್ಲ; ನಿನ್ನ ಭಕ್ತನಿಗೆ ಅಧೋಲೋಕವನ್ನು ನೋಡಗೊಡಿಸುವುದಿಲ್ಲ.**

* *ವಿಜಯೋತ್ಸವ*

ಯೇಸು ಪರಲೋಕದ ಸಿಂಹಾಸನ ಕೋಣೆಗೆ ಹಿಂತಿರುಗುವ ಒಂದು ಅದ್ಭುತವಾದ ವರ್ಣನೆಯನ್ನೂ ಸಹ ದಾವೀದನು ನಮಗೆ ಕೊಡುತ್ತಾನೆ.

**ಕೀರ್ತನೆ 24:7-10 ದ್ವಾರಗಳೇ, ಉನ್ನತವಾಗಿರ್ರಿ! ಪುರಾತನವಾದ ಕದಗಳೇ ತೆರೆದುಕೊಂಡಿರ್ರಿ! ಮಹಾಮಹಿಮೆಯುಳ್ಳ ಅರಸನು ಆಗಮಿಸುತ್ತಾನೆ. ಮಹಾಮಹಿಮೆಯುಳ್ಳ ಈ ಅರಸನು ಯಾರು? ಮಹಾ ಬಲಿಷ್ಠನೂ, ವಿಶೇಷ ಪರಾಕ್ರಮಿಯೂ ಆಗಿರುವ ಯೆಹೋವ, ಯುದ್ಧವೀರನಾಗಿರುವ ಯೆಹೋವ. ದ್ವಾರಗಳೇ, ಉನ್ನತವಾಗಿರ್ರಿ! ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ! ಮಹಾಮಹಿಮೆಯುಳ್ಳ ಅರಸನು ಆಗಮಿಸುತ್ತಾನೆ. ಮಹಾಮಹಿಮೆಯುಳ್ಳ ಈ ಅರಸನು ಯಾರು? ಸೇನಾಧೀಶ್ವರನಾದ ಯೆಹೋವನೇ, ಮಹಾಮಹಿಮೆಯುಳ್ಳ ಅರಸನು ಈತನೇ.**

**ಕೀರ್ತನೆ 68:18 ನೀನು ಜಯಿಸಿದ ಬಹು ಜನರನ್ನು ಸೆರೆಹಿಡಿದುಕೊಂಡು ಹೋಗಿ, ನಿನಗೆ ದ್ರೋಹಿಗಳಾದ ಮನುಷ್ಯರಿಂದಲೇ ಕಪ್ಪಗಳನ್ನು ಸಂಗ್ರಹಿಸಿ, ದೇವನಾದ ಯಾಹುವು ಅಲ್ಲೇ ವಾಸಿಸುವಂತೆ, ಉನ್ನತಸ್ಥಾನಕ್ಕೆ ಏರಿದ್ದೀ.**

ಯೆಶಾಯನ ಪ್ರವಾದನೆಗಳ ವಿವರಗಳು ಅದ್ಭುತವಾಗಿವೆ. ಯೇಸುವಿನ ಮರಣದ ಬಗ್ಗೆ ಯೆಶಾಯ ಐವತ್ತಮೂರು ಸಂಪೂರ್ಣ ವಿವರಣೆಯನ್ನು ನೀಡುತ್ತದೆ. ಇದು ಎಷ್ಟು ವಿವರವಾಗಿತ್ತೆಂದರೆ, ಆರಂಭಿಕ ಯೆಹೂದಿ ಧಾರ್ಮಿಕ ಮುಖಂಡರು ಇದು ತಮ್ಮ ಧರ್ಮಗ್ರಂಥದ ಭಾಗವಾಗಿರಲಿಲ್ಲ ಎಂದು ಹೇಳಿಕೊಂಡರು - ಇದನ್ನು ಯಹೂದಿ ಕ್ರೈಸ್ತರು ಸೇರಿಸಿದ್ದಾರೆ ಎಂದರು.

1947 ರಲ್ಲಿ, ಮೃತ ಸಮುದ್ರ ಸುರುಳಿಗಳನ್ನು ಕಂಡುಹಿಡಿಯಲಾಯಿತು. ಇದು ಇದುವರೆಗೂ ಕಂಡುಹಿಡಿಯಲಾಗಿರುವ ಸತ್ಯವೇದದ ಅತ್ಯಂತ ಪ್ರಾಚೀನ ಸುರುಳಿಗಳಾಗಿವೆ. ಪ್ರಾರಂಭದಿಂದ ಕೊನೆಯವರೆಗೆ ಯಾವುದೇ ರೀತಿಯಲ್ಲಿ ಮುರಿಯಲ್ಪಡದೆ ಇರುವ ಕೇವಲ ಒಂದು ಸುರುಳಿ ಮಾತ್ರ ಉಳಿದುಕೊಂಡಿತು. ಅದು ಯೆಶಾಯನ ಬರಹಗಳಾಗಿದ್ದವು ಮತ್ತು ಅದರಲ್ಲಿ ಐವತ್ತಮೂರನೇ ಅಧ್ಯಾಯವಿತ್ತು.

ಯೆಶಾಯನ ಪ್ರವಾದನೆಗಳ ನಿರ್ದಿಷ್ಟತೆಗಳಿಗೆ ಹೋಗುವ ಮೊದಲು ಯೆಶಾಯ ಐವತ್ತಮೂರನೇ ಅಧ್ಯಾಯವನ್ನು ಓದಿರಿ.

ಯೇಸು ಯೆಶಾಯ 61:1 ಮತ್ತು 2 ನ್ನು ಉಲ್ಲೇಖಿಸಿದಾಗ ತನ್ನನ್ನು ಯೆಶಾಯನ ಪ್ರವಾದನೆಗಳೊಂದಿಗೆ ಗುರುತಿಸಿಕೊಂಡರು.

**ಲೂಕ 4:18,19 "ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವಾರ್ತೆಯನ್ನು ಸಾರುವುದಕ್ಕಾಗಿ ಅಭಿಷೇಕಿಸಿರುವನು. ಸೆರೆಯಲ್ಲಿರುವವರನ್ನು ಬಿಡುಗಡೆಮಾಡುವುದಕ್ಕೂ, ಮತ್ತು ಕುರುಡರಿಗೆ ಕಣ್ಣು ಬರುವುದಕ್ಕೂ ಹಿಂಸಿಸಲ್ಪಟ್ಟವರನ್ನು ಬಿಡಿಸಿ ಕಳುಹಿಸುವುದಕ್ಕೂ ಕರ್ತನು ನೇಮಿಸಿರುವ ಶುಭವರ್ಷವನ್ನು ಪ್ರಚಾರಪಡಿಸುವುದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ."**

**ಯೇಸುವಿನ ಇತಿಹಾಸ**

ಯೇಸುವಿನ ಕುರಿತಾದ ಹಳೆಯ ಒಡಂಬಡಿಕೆಯ ಪ್ರವಾದನೆಗಳು ಆತನ ಅನನ್ಯ ಜನನ, ಕುಟುಂಬ ರೇಖೆ ಮತ್ತು ಅಭಿಷೇಕದ ಬಗ್ಗೆ ಮಾತನಾಡುತ್ತವೆ.

✱ *ಕನ್ಯೆಯಲ್ಲಿ ಜನನ*

**ಯೆಶಾಯ 7:14 ಆದಕಾರಣ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು. ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಒಬ್ಬ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು.**

✱ *ಕುಟುಂಬ*

**ಯೆಶಾಯ 11:1 ಇಷಯನ ಬೇರಿನಿಂದ ಒಂದು ಚಿಗುರು ಒಡೆಯುವುದು ಮತ್ತು ಅದರ ಬೇರಿನಿಂದ ಹೊರಟ ಕೊಂಬೆಯು ಫಲಿಸುವುದು.**

* *ಅಭಿಷೇಕ*

ಯೆಶಾಯ **11:2** ಆ ಅಂಕುರದ ಮೇಲೆ... ಯೆಹೋವನ ಆತ್ಮವೇ ನೆಲೆಗೊಂಡಿರುವುದು.

ಯೇಸುವಿನ ಗುಣಲಕ್ಷಣಗಳು

* *ಜ್ಞಾನ*

ಯೆಶಾಯ **11:2** ಆ ಅಂಕುರದ ಮೇಲೆ ಜ್ಞಾನ ವಿವೇಕದಾಯಕ ಆತ್ಮ, ಆಲೋಚನಾ ಪರಾಕ್ರಮಗಳನ್ನು ಹುಟ್ಟಿಸುವ ಆತ್ಮ, ತಿಳಿವಳಿಕೆಯನ್ನೂ ಮತ್ತು ಯೆಹೋವನ ಭಯವನ್ನೂ ಉಂಟುಮಾಡುವ ಆತ್ಮ, ಅಂತು ಯೆಹೋವನ ಆತ್ಮವೇ ನೆಲೆಗೊಂಡಿರುವುದು.

* *ಆತ್ಮಿಕ ವಿವೇಚನೆ*

ಯೆಶಾಯ **11:3** ಆತನು ಯೆಹೋವನ ಭಯದಲ್ಲಿ ಆನಂದಿಸುವನು. ಆತನು ಕಣ್ಣಿಗೆ ಕಂಡಂತೆ ತೀರ್ಪು ಮಾಡುವುದಿಲ್ಲ. ಕಿವಿಗೆ ಬಿದ್ದಂತೆ ನಿರ್ಣಯಿಸುವುದಿಲ್ಲ.

* *ನ್ಯಾಯ*

ಯೆಶಾಯ **11:4** ಆದರೆ ಬಡವರಿಗೋಸ್ಕರ ನ್ಯಾಯವಾಗಿ ತೀರ್ಪುಮಾಡುವನು. ಲೋಕದ ದೀನರಿಗಾಗಿ ಧರ್ಮವನ್ನು ನಿರ್ಣಯಿಸುವನು. ಭೂಮಿಯನ್ನು ತನ್ನ ಬಾಯಿಯ ಕೋಲಿನಿಂದ ದಂಡಿಸುವನು. ದುಷ್ಟನನ್ನು ತನ್ನ ತುಟಿಗಳ ಉಸಿರಿನಿಂದ ಕೊಲ್ಲುವನು.

* *ನೀತಿವಂತಿಕೆ*

ಯೆಶಾಯ **11:5** ಧರ್ಮವೇ ಅವನಿಗೆ ನಡುಕಟ್ಟು, ಪ್ರಾಮಾಣಿಕತೆಯೇ ಸೊಂಟಪಟ್ಟಿ.

* *ಮೌನ*

ಯೆಶಾಯ **42:2** ಇವನು ಕೂಗಾಡುವುದಿಲ್ಲ, ಆರ್ಭಟಿಸುವುದಿಲ್ಲ, ಬೀದಿಗಳಲ್ಲಿ ಇವನ ಧ್ವನಿಯೇ ಕೇಳಿಸುವುದಿಲ್ಲ.

ಯೆಶಾಯ **53:7** ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ, ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ.

* *ಸಾತ್ವಿಕತೆ*

ಯೆಶಾಯ **42:3** ಜಜ್ಜಿದ ದಂಟನ್ನು ಮುರಿದು ಹಾಕದೆ, ಕಳೆಗುಂದಿದ ದೀಪವನ್ನು ನಂದಿಸದೆ, ಸದ್ಧರ್ಮವನ್ನು ಪ್ರಚುರಪಡಿಸಿ ಸಿದ್ಧಿಗೆ ತರುವನು.

* *ದೀರ್ಘಶಾಂತಿ*

ಯೆಶಾಯ **42:4** ಲೋಕದಲ್ಲಿ ಸದ್ಧರ್ಮವನ್ನು ಸ್ಥಾಪಿಸುವ ತನಕ ಇವನು ಕಳೆಗುಂದದೆಯೂ, ಜಜ್ಜಿಹೋಗದೆಯೂ ತನ್ನ ಕಾರ್ಯದಲ್ಲಿ ನಿರತನಾಗಿರುವನು. ದ್ವೀಪಗಳು ಇವನ ಧರ್ಮಪ್ರಮಾಣಕ್ಕೆ ಕಾದಿರುವವು.

* *ಪ್ರಕಾಶ*

ಯೆಶಾಯ **42:6** “ಯೆಹೋವನೆಂಬ ನಾನು ನನ್ನ ಧರ್ಮದ ಸಂಕಲ್ಪಾನುಸಾರವಾಗಿ ನಿನ್ನನ್ನು ಕೈಹಿಡಿದು, ಕಾಪಾಡಿ ನನ್ನ ಜನರಿಗೆ ಒಡಂಬಡಿಕೆಯ ಆಧಾರವನ್ನಾಗಿಯೂ, ಅನ್ಯಜನಗಳಿಗೆ ಬೆಳಕನ್ನಾಗಿಯೂ ನೇಮಿಸಿದ್ದೇನೆ.

ಯೆಶಾಯ **9:2** ಕತ್ತಲಲ್ಲಿ ಸಂಚರಿಸಿದ ಜನರಿಗೆ ದೊಡ್ಡ ಬೆಳಕು ಕಾಣಿಸಿತು. ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಪ್ರಕಾಶವು ಹೊಳೆಯಿತು.

* *ಕನಿಕರ*

ಯೆಶಾಯ **53:4** ನಿಜವಾಗಿಯೂ ನಮ್ಮ ವ್ಯಾಧಿಗಳನ್ನು ಸಂಕಷ್ಟವನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ಹೌದು, ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು.

* *ದೀನತೆ*

ಯೆಶಾಯ **53:7** ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ, ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ.

* *ಪ್ರಾಯಶ್ಚಿತ್ತ ಬಲಿದಾನ*

ಯೆಶಾಯ **53:10** ಅವನನ್ನು ಜಜ್ಜುವುದು ಯೆಹೋವನ ಸಂಕಲ್ಪವಾಗಿತ್ತು. ಆತನು ಅವನನ್ನು ವ್ಯಾಧಿಯಿಂದ ಬಾಧಿಸಿ ಹೀಗೆಂದುಕೊಂಡನು, ಇವನು ತನ್ನ ಆತ್ಮವನ್ನು ಪ್ರಾಯಶ್ಚಿತ್ತಯಜ್ಞಕ್ಕಾಗಿ ಒಪ್ಪಿಸಿದ ಮೇಲೆ ತನ್ನ ಸಂತಾನವನ್ನು ನೋಡುವನು, ಚಿರಂಜೀವಿಯಾಗುವನು, ನನ್ನ ಸಂಕಲ್ಪವು ಇವನ ಕೈಯಿಂದ ನೆರವೇರುವುದು.

* *ಪಾಪರಹಿತತೆ*

ಯೆಶಾಯ **53:9** ಅವನು ಯಾವ ಅನ್ಯಾಯವನ್ನು ಮಾಡದಿದ್ದರೂ, ಅವನ ಬಾಯಲ್ಲಿ ಯಾವ ವಂಚನೆಯು ಇಲ್ಲದಿದ್ದರೂ, ಅವನು ಸತ್ತಾಗ ದುಷ್ಟರ ಮಧ್ಯೆ ಪುಷ್ಟರ ನಡುವೆ ಅವನನ್ನು ಹೂಣಿಟ್ಟರು.

* *ಶ್ರೇಷ್ಠತೆ*

ಯೆಶಾಯ **53:12** ಇವನು ಇಂಥವನಾಗಿರುವುದರಿಂದ ನಾನು ಇವನಿಗೆ ದೊಡ್ಡವರ ಸಂಗಡ ಪಾಲು ಕೊಡುವೆನು, ಇವನು ಬಲಿಷ್ಠರೊಡನೆ ಸೂರೆಯನ್ನು ಹಂಚಿಕೊಳ್ಳುವನು; ತನ್ನ ಪ್ರಾಣವನ್ನು ಧಾರೆಯೆರೆದು, ಮರಣಹೊಂದಿ, ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು, ಬಹು ಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆ ಮಾಡಿದನು.

✱ *ರಕ್ಷಿಸುವ ಶಕ್ತಿ*

ಯೆಶಾಯ **53:11** ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು; ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ ಮೂಲಕ ಬಹು ಜನರನ್ನು ಧರ್ಮಮಾರ್ಗಕ್ಕೆ ತರುವನು; ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು.

ಯೇಸುವಿನ ಸೇವೆ

✱ *ಬೆಳಕು ಕೊಡುವವನು*

ಯೆಶಾಯ **9:2** ಕತ್ತಲಲ್ಲಿ ಸಂಚರಿಸಿದ ಜನರಿಗೆ ದೊಡ್ಡ ಬೆಳಕು ಕಾಣಿಸಿತು. ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಪ್ರಕಾಶವು ಹೊಳೆಯಿತು.

✱ *ನ್ಯಾಯಧೀಶ*

ಯೆಶಾಯ **11:3** ಆತನು ಯೆಹೋವನ ಭಯದಲ್ಲಿ ಆನಂದಿಸುವನು. ಆತನು ಕಣ್ಣಿಗೆ ಕಂಡಂತೆ ತೀರ್ಪು ಮಾಡುವುದಿಲ್ಲ. ಕಿವಿಗೆ ಬಿದ್ದಂತೆ ನಿರ್ಣಯಿಸುವುದಿಲ್ಲ.

✱ *ನ್ಯಾಯವಾಗಿ ತೀರ್ಪು ಮಾಡುವನು*

ಯೆಶಾಯ **11:4** ಆದರೆ ಬಡವರಿಗೋಸ್ಕರ ನ್ಯಾಯವಾಗಿ ತೀರ್ಪುಮಾಡುವನು. ಲೋಕದ ದೀನರಿಗಾಗಿ ಧರ್ಮವನ್ನು ನಿರ್ಣಯಿಸುವನು.

✱ *ಧರ್ಮಶಾಸ್ತ್ರ ಕೊಡುವವನು*

ಯೆಶಾಯ **42:4** ಲೋಕದಲ್ಲಿ ಸದ್ಧರ್ಮವನ್ನು ಸ್ಥಾಪಿಸುವ ತನಕ ಇವನು ಕಳೆಗುಂದದೆಯೂ, ಜಜ್ಜಿಹೋಗದೆಯೂ ತನ್ನ ಕಾರ್ಯದಲ್ಲಿ ನಿರತನಾಗಿರುವನು. ದ್ವೀಪಗಳು ಇವನ ಧರ್ಮಪ್ರಮಾಣಕ್ಕೆ ಕಾದಿರುವವು.

✱ *ವಿಮೋಚಕನು*

ಯೆಶಾಯ **42:7** ನೀನು ಕುರುಡರಿಗೆ ಕಣ್ಣುಕೊಟ್ಟು, ಬಂದಿಗಳನ್ನು ಸೆರೆಯಿಂದಲೂ, ಕತ್ತಲಲ್ಲಿ ಬಿದ್ದವರನ್ನು ಕಾರಾಗೃಹದಿಂದಲೂ ಹೊರಗೆ ತರುವಿ.

✱ *ಭಾರ ಹೊರುವವನು*

ಯೆಶಾಯ **53:4** ನಿಜವಾಗಿಯೂ ನಮ್ಮ ವ್ಯಾಧಿಗಳನ್ನು ಸಂಕಷ್ಟವನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ಹೌದು, ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು.

✱ *ಪಾಪ ಹೊರುವವನು*

ಯೆಶಾಯ **53:6** ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ಹೋಗಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು.

* *ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವನು*

ಯೆಶಾಯ **53:12** ಇವನು ಇಂಥವನಾಗಿರುವುದರಿಂದ ನಾನು ಇವನಿಗೆ ದೊಡ್ಡವರ ಸಂಗಡ ಪಾಲು ಕೊಡುವೆನು, ಇವನು ಬಲಿಷ್ಠರೊಡನೆ ಸೂರೆಯನ್ನು ಹಂಚಿಕೊಳ್ಳುವನು; ತನ್ನ ಪ್ರಾಣವನ್ನು ಧಾರೆಯೆರೆದು, ಮರಣಹೊಂದಿ, ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು, ಬಹು ಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆ ಮಾಡಿದನು.

* *ಒಬ್ಬನೇ ರಕ್ಷಕನು*

ಯೆಶಾಯ **53:5** ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನು ಉಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು.

* *ಸೌಖ್ಯಪಡಿಸುವವನು*

ಯೆಶಾಯ **53:5b** ... ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು.

ಯೇಸುವಿನ ಶಿರೋನಾಮಗಳು

* *ಇಮ್ಮಾನುವೇಲ*

ಯೆಶಾಯ **7:14** ಆದಕಾರಣ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು. ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಒಬ್ಬ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು.

* *ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರೂ, ನಿತ್ಯನಾದ ತಂದೆ, ಸಮಾಧಾನದ ಪ್ರಭು*

ಯೆಶಾಯ **9:6** ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವುದು; ಅದ್ಭುತ ಸ್ವರೂಪನು, ಆಲೋಚನಾ ಕರ್ತನು,ಪರಾಕ್ರಮಿಯಾದ ದೇವರೂ, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬುದು ಆತನ ಹೆಸರು.

* *ನೀತಿಯುಳ್ಳ ರಾಜನು*

ಯೆಶಾಯ **32:1** ಇಗೋ, ಒಬ್ಬ ರಾಜನು ನೀತಿಗನುಸಾರವಾಗಿ ಆಳುವನು. ಅಧಿಪತಿಗಳು ನ್ಯಾಯದಿಂದ ದೊರೆತನ ಮಾಡುವರು.

* *ನನ್ನ ಸೇವಕನು*

ಯೆಶಾಯ **42:1** ಇಗೋ, ನನ್ನ ಸೇವಕನು! ಇವನಿಗೆ ನಾನೇ ಆಧಾರ. ಇವನು ನನಗೆ ಇಷ್ಟನು, ನನ್ನ ಪ್ರಾಣಪ್ರಿಯನು. ಇವನಲ್ಲಿ ನನ್ನ ಆತ್ಮವನ್ನು ಇರಿಸಿದ್ದೇನೆ. ಇವನು ಅನ್ಯಜನಗಳಲ್ಲಿಯೂ ಸದ್ಧರ್ಮವನ್ನು ಪ್ರಚುರಪಡಿಸುವನು.

* *ಯೆಹೋವನ ಬಾಹು*

**ಯೆಶಾಯ 53:1 ನಾವು ಕೇಳಿದ ಸಂಗತಿಯನ್ನು ನಮ್ಮಲ್ಲಿ ಯಾರು ನಂಬಿದ್ದರು? ಯೆಹೋವನ ಬಾಹುವು ಯಾರಿಗೆ ಗೋಚರವಾಗಿತ್ತು?**

* *ಅಭಿಷೇಕಿಸಲ್ಪಟ್ಟ ಪ್ರಸಂಗಿಕ*

**ಯೆಶಾಯ 61:1 ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಇದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು; ಮನಮುರಿದವರನ್ನು ಕಟ್ಟಿ ವಾಸಿಮಾಡುವುದಕ್ಕೂ, ಸೆರೆಯವರಿಗೆ ಬಿಡುಗಡೆಯಾಗುವುದನ್ನು, ಬಂದಿಗಳಿಗೆ ಕದ ತೆರೆಯುವುದನ್ನು ಪ್ರಸಿದ್ಧಿಪಡಿಸುವುದಕ್ಕೂ… ಆತನು ನನ್ನನ್ನು ಕಳುಹಿಸಿದ್ದಾನೆ.**

**ಸಾರಾಂಶ**

ಮುಂಬರುವ ಮೆಸ್ಸೀಯನ ಬಗ್ಗೆ ಮಾತನಾಡುವ ಹಳೆ ಒಡಂಬಡಿಕೆಯ 330 ಪ್ರವಾದನೆಗಳೆಲ್ಲವೂ ಕ್ರಿಸ್ತನಲ್ಲಿ ನೆರವೇರಿದವು. ಇಷ್ಟೊಂದು ಪ್ರವಾದನೆಗಳು ಒಬ್ಬ ಮನುಷ್ಯನಲ್ಲಿ "ಆಕಸ್ಮಿಕವಾಗಿ" ನೆರವೇರುವುದು ಅಸಾಧ್ಯ. ಇದು ಕಾಕತಾಳೀಯವಾಗಿರಲು ಸಾಧ್ಯವಿಲ್ಲ. ಯೇಸು ದೇವರ ಮಗನಾಗಿದ್ದಾರೆ. ಇಡೀ ಹಳೆ ಒಡಂಬಡಿಕೆಯ ಪುಸ್ತಕಗಳಲ್ಲೆಲ್ಲಾ ಚಿತ್ರಿಸಲ್ಪಟ್ಟವರು ಅವರೇ. ಅವರೇ ಮಾನವಕುಲದ ರಕ್ಷಕರು.

**ವಿಮರ್ಶೆಗಾಗಿ ಪ್ರಶ್ನೆಗಳು**

1. ಮುಂಬರುವ ಮೆಸ್ಸೀಯನಿಗೆ ಸಂಬಂಧಿಸಿದಂತೆ ಧರ್ಮಗ್ರಂಥದಲ್ಲಿ ದಾಖಲಾಗಿರುವ ಮೊದಲ ಪ್ರವಾದನೆಯೇನು? ಅದು ಹೇಗೆ ಹೆಚ್ಚು ನಿರ್ದಿಷ್ಟವಾಯಿತು?

2. ಧರ್ಮಗ್ರಂಥದಲ್ಲಿ ಕಂಡುಬರುವಂತೆ ಮುಂಬರುವ ಮೆಸ್ಸೀಯನು ಪ್ರವಾದಿಯಾಗಿ, ಯಾಜಕನಾಗಿ ಮತ್ತು ರಾಜನಾಗಿ ಕಾರ್ಯನಿರ್ವಹಿಸುತ್ತಾನೆಂದು ಪ್ರಕಟಿಸುವ ಮೂರು ಪ್ರವಾದನೆಗಳನ್ನು ಪಟ್ಟಿ ಮಾಡಿರಿ.

3. ಯೇಸು ಕ್ರಿಸ್ತನ ಮುಂಬರುವ ವಿಮೋಚನಾ ಕಾರ್ಯದ ಒಂದು ಪ್ರಮುಖ ಅಂಶವನ್ನು ಪ್ರಕಟಿಸುವ ಕೀರ್ತನೆಗಳ ಪುಸ್ತಕ ಮತ್ತು ಯೆಶಾಯನ ಪುಸ್ತಕ ಎರಡರಿಂದಲೂ ಎರಡು ಪ್ರಮುಖ ಪ್ರವಾದನೆಗಳನ್ನು ಪಟ್ಟಿ ಮಾಡಿರಿ.




# ಮೋಶೆಯ ದೇವದರ್ಶನ ಗುಡಾರ

## ಅತೀ ಪರಿಶುದ್ಧ ಸ್ಥಳ – ತಂದೆಯಾದ ದೇವರು

*ವರ್ಷಕೊಮ್ಮೆ ಪ್ರಧಾನ ಯಾಜಕನಿಗಾಗಿ ಮಾತ್ರ ತೆರೆದಿರುತ್ತದೆ*

**ಪೀಠೋಪಕರಣಗಳು:**

*f* **ದೇವರ ಮಂಜೂಷ** – ದೇವರ ಪ್ರಸನ್ನತೆ

*g* **ಕೃಪಾಸನ** – ದೇವರ ಸಿಂಹಾಸನ

## ಪರಿಶುದ್ಧ ಸ್ಥಳ – ದೇವರ ಪುತ್ರ

*ಯಾಜಕರಿಗೆ ಮಾತ್ರ ತೆರೆದಿರುತ್ತದೆ*

**ಪೀಠೋಪಕರಣಗಳು:**

*c* **ರೊಟ್ಟಿಯ ಮೇಜು** – ಯೇಸು, ಜೀವಕೊಡುವ ರೊಟ್ಟಿ

*d* **ಬಂಗಾರದ ದೀಪಸ್ತಂಭ** – ಯೇಸು, ಲೋಕದ ಬೆಳಕು

*e* **ಧೂಪವೇದಿ** – ಯೇಸು, ಮಧ್ಯಸ್ತಿಕೆ ಪ್ರಾರ್ಥನೆ ಮಾಡುವವನು

## ಅಂಗಳ – ಪರಿಶುದ್ಧಾತ್ಮನಾದ ದೇವರು

*ಎಲ್ಲಾ ವಿಶ್ವಾಸಿಗಳಿಗೆ ತೆರೆದಿದೆ*

**ಪೀಠೋಪಕರಣಗಳು:**

*a* **ಯಜ್ಞವೇದಿ** – ಯೇಸು, ಶ್ರೇಷ್ಟ ಬಲಿ

*b* **ತಾಮ್ರದ ತೊಟ್ಟಿ** – ಯೇಸು, ಶುದ್ಧೀಕರಿಸುವ ದೇವರ ವಾಕ್ಯ

**ಸಭೆಯ ಸಂಕೇತ** – ಪವಿತ್ರಾತ್ಮನ ಮೂಲಕ ದೇವರ ವಾಸಸ್ಥಾನ

**ಎಫೆಸ 2:19-22** *ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೇ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ. ಅಪೊಸ್ತಲರೂ ಪ್ರವಾದಿಗಳೂ ಎಂಬ ಅಡಿಪಾಯದ ಮೇಲೆ ನೀವೂ ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ. ಯೇಸು ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು. ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ, ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ ನೀವೂ ಸಹ*

*ಪವಿತ್ರಾತ್ಮನ ಮೂಲಕವಾಗಿ ದೇವರಿಗೆ ವಾಸಸ್ಥಾನವಾಗುವುದಕ್ಕೆ ನಮ್ಮ ಜೊತೆಯಲ್ಲಿ ಕಟ್ಟಲ್ಪಡುತ್ತಾ ಇದ್ದೀರಿ.*

**ವಿಶ್ವಾಸಿಯ ಸಂಕೇತ** – ದೇವರ ಮಂದಿರ

**2 ಕೊರಿಂಥ 6:16b** *ನಾವು ದೇವರೇ ಹೇಳಿರುವಂತೆ ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ, "ನಾನು ಅವರಲ್ಲಿ ವಾಸಮಾಡುವೆನು, ಅವರ ನಡುವೆಯೇ ನಾ ತಿರುಗಾಡುವೆನು ಅವರಿಗೆ ನಾನೇ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು" ಎಂದು ಹೇಳಿದ್ದಾನೆ.*

**ಪರಲೋಕದಲ್ಲಿರುವವುಗಳ ಪ್ರತಿರೂಪ**

**ಇಬ್ರಿಯ 8:5** *ಮೋಶೆಯು ಗುಡಾರವನ್ನು ಕಟ್ಟುವುದಕ್ಕಿದ್ದಾಗ, "ನೋಡು, ನಾನು ಬೆಟ್ಟದಲ್ಲಿ ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನೂ ಮಾಡಬೇಕು" ಎಂದು ದೇವರಿಂದ ಎಚ್ಚರಿಸಲ್ಪಟ್ಟಂತೆಯೇ ಪರಲೋಕದಲ್ಲಿರುವವುಗಳ ಪ್ರತಿರೂಪವೂ, ಛಾಯೆಯೂ ಆಗಿರುವ ಆಲಯದಲ್ಲಿ ಅವರು ಸೇವೆ ಸಲ್ಲಿಸುತ್ತಿದ್ದಾರೆ.*

**ಇಬ್ರಿಯ 9:23** *ಆದ್ದರಿಂದ ಪರಲೋಕದಲ್ಲಿರುವ ವಸ್ತುಗಳ ಛಾಯೆಯಂತಿರುವ ವಸ್ತುಗಳ ಶುದ್ಧೀಕರಣಕ್ಕಾಗಿ ಇಂಥಾ ಯಜ್ಞಗಳು ಅವಶ್ಯವಾದರೂ, ಪರಲೋಕದವುಗಳನ್ನು ಶುದ್ಧೀಕರಿಸಲು ಇವುಗಳಿಗಿಂತ ಉತ್ತಮವಾದ ಯಜ್ಞಗಳು ಅವಶ್ಯ.*

### ಪಾಠ ಐದು

# *ಆರಾಧನೆ ಮತ್ತು ಸೇವೆಗಾಗಿ ಮಾದರಿಗಳು*

## ಪ್ರತಿರೂಪ, ಮಾದರಿಗಳು ಮತ್ತು ಪ್ರತಿಬಿಂಬಗಳು

**ಪ್ರತಿರೂಪ:**

ಬರಲಿರುವದನ್ನು ಮೊದಲೇ ಸಿದ್ಧಪಡಿಸುವುದು (ಮೂಲಮಾದರಿ)

**ಸಂಕೇತ:**

ಸಮಯಕ್ಕೆ ಸಂಬಂಧಿಸದ ಬೇರೆ ಯಾವುದನ್ನಾದರೂ ಪ್ರತಿನಿಧಿಸುತ್ತದೆ

ಪ್ರತಿರೂಪಗಳಲ್ಲಿ ಸಂಕೇತಗಳಿರಬಹುದು, ಆದರೆ ಸಂಕೇತಗಳಲ್ಲಿ ಪ್ರತಿರೂಪಗಳಿರುವುದಿಲ್ಲ

**ಉದಾಹರಣೆ:**

ಪಸ್ಕಹಬ್ಬ - ಕ್ರಿಸ್ತನ ಬಲಿದಾನದ ಮೂಲಕ ಪಾಪಿಗಳಿಗಾಗುವ ವಿಮೋಚನೆಯ ಪ್ರತಿರೂಪ

ಪಸ್ಕಹಬ್ಬದ ಕುರಿ - ಕ್ರಿಸ್ತನ ಸಂಕೇತ

ಹಳೆ ಒಡಂಬಡಿಕೆಯುದ್ದಕ್ಕೂ ದೇವರು ಮುಂಬರುವ ವಿಮೋಚಕನ ಕುರಿತಾದ ಪ್ರತಿರೂಪ, ಮಾದರಿಗಳು ಮತ್ತು ಪ್ರತಿಬಿಂಬಗಳನ್ನು ಕೊಟ್ಟರು.

ಇಸ್ರಾಯೇಲ್ ಜನರು ಈಜಿಪ್ಟಿನಿಂದ ಹೊರಬಂದ ಕೂಡಲೇ ದೇವರು ಮೋಶೆಗೆ ಧರ್ಮಶಾಸ್ತ್ರವನ್ನು ಕೊಟ್ಟರು. ಅವರು ತಾವು ಪಾಲಿಸಬೇಕಾದ ಏಕೀಕೃತ ನಿಯಮಗಳನ್ನು ಹೊಂದುವವರೆಗೆ ಒಂದು ರಾಷ್ಟ್ರವಾಗಲು ಸಾಧ್ಯವಿರಲಿಲ್ಲ. ಧರ್ಮಶಾಸ್ತ್ರವು ಎರಡು ಭಾಗಗಳನ್ನು ಹೊಂದಿತ್ತು - ಒಂದು ನಾಗರಿಕ ಮತ್ತು ಆಹಾರ ನಿಯಮಗಳ ಮೂಲಕ ಜನರ ಸಂರಕ್ಷಣೆಗಾಗಿ - ಇನ್ನೊಂದು ಯೇಸು ಕ್ರಿಸ್ತನ ಮೂಲಕ ವಿಮೋಚನೆ ನೀಡುವುದಕ್ಕಾಗಿ. ಧರ್ಮಶಾಸ್ತ್ರವು ಕ್ರಿಸ್ತನ ಕಡೆಗೆ ಬೆರಳು ಮಾಡಿ ತೋರಿಸಿತು.

ದೇವದರ್ಶನ ಗುಡಾರವನ್ನು ಮಾಡಲು ದೇವರು ಮೋಶೆಗೆ ನಿಖರವಾದ ಸೂಚನೆಗಳನ್ನು ಸಹ ಕೊಟ್ಟನು. ದೇವದರ್ಶನ ಗುಡಾರದ ಪ್ರತಿಯೊಂದು ಭಾಗವು ಸಾಂಕೇತಿಕವಾಗಿತ್ತು. ಪ್ರತಿಯೊಂದು ಭಾಗವು ಮುಂಬರುವ ಮೆಸ್ಸೀಯನ ಜೀವನ ಮತ್ತು ಮರಣದ ಬಗ್ಗೆ ಮಾತನಾಡಿತು. ಈ ಪಾಠದಲ್ಲಿ, ನಾವು ದೇವದರ್ಶನ ಗುಡಾರ ಮತ್ತು ಅರ್ಪಣೆಗಳನ್ನು ಅಧ್ಯಯನ ಮಾಡಲಿದ್ದೇವೆ.

ಯೇಸು ತಾನು ಧರ್ಮಶಾಸ್ತ್ರವನ್ನು ನಿರರ್ಥಕಪಡಿಸಲು ಬರಲಿಲ್ಲ ಬದಲಾಗಿ ನೆರವೇರಿಸುವುದಕ್ಕೆ ಬಂದನೆಂದು ಹೇಳಿದರು.

**ಮತ್ತಾಯ 5:17 "ಮೋಶೆಯ ಧರ್ಮನಿಯಮವನ್ನಾಗಲಿ ಪ್ರವಾದಿಗಳ ಪ್ರವಾದನೆಗಳನ್ನಾಗಲಿ ನಿರರ್ಥಕಪಡಿಸುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ; ನಿರರ್ಥಕಪಡಿಸಲು ಬಂದಿಲ್ಲ; ಬದಲಾಗಿ ನೆರವೇರಿಸುವುದಕ್ಕೆ ಬಂದಿದ್ದೇನೆ.**

ಈ ಕೆಳಗಿರುವಂತಹ ವಚನಗಳನ್ನು ಅರ್ಥಮಾಡಿಕೊಳ್ಳಲು ನಾವು ದೇವದರ್ಶನ ಗುಡಾರ, ಅರ್ಪಣೆಗಳು, ಹಬ್ಬಗಳು ಮತ್ತು ಯಾಜಕರುಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯವಾಗಿದೆ.

ಇಬ್ರಿಯ **8:1-3b,5** ನಾವು ಈಗ ಹೇಳುವ ಸಂಗತಿಗಳಲ್ಲಿ ಮುಖ್ಯವಾದ ಮಾತೇನೆಂದರೆ, ಪರಲೋಕದೊಳಗೆ ಮಹೋನ್ನತನ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದಂಥ ಮಹಾಯಾಜಕನು ನಮಗಿದ್ದಾನೆ. ಆತನು ಪವಿತ್ರ ಸ್ಥಾನದಲ್ಲಿ ಮನುಷ್ಯರಿಂದಲ್ಲ, ಕರ್ತನೇ ಹಾಕಿದ ನಿಜವಾದ ದೇವದರ್ಶನ ಗುಡಾರದಲ್ಲಿ ಯಾಜಕೋದ್ಯೋಗ ನಡಿಸುವವನಾಗಿದ್ದಾನೆ. ಪ್ರತಿಯೊಬ್ಬ ಮಹಾಯಾಜಕನು ಕಾಣಿಕೆಗಳನ್ನೂ, ಯಜ್ಞಗಳನ್ನೂ ಸಮರ್ಪಿಸುವುದಕ್ಕೆ ನೇಮಕವಾಗಿರುತ್ತಾನೆ.

ಮೋಶೆಯು ಗುಡಾರವನ್ನು ಕಟ್ಟುವುದಕ್ಕಿದ್ದಾಗ, "ನೋಡು, ನಾನು ಬೆಟ್ಟದಲ್ಲಿ ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನೂ ಮಾಡಬೇಕು" ಎಂದು ದೇವರಿಂದ ಎಚ್ಚರಿಸಲ್ಪಟ್ಟಂತೆಯೇ ಪರಲೋಕದಲ್ಲಿರುವವುಗಳ ಪ್ರತಿರೂಪವೂ, ಛಾಯೆಯೂ ಆಗಿರುವ ಆಲಯದಲ್ಲಿ ಅವರು ಸೇವೆ ಸಲ್ಲಿಸುತ್ತಿದ್ದಾರೆ.

## ದೇವದರ್ಶನ ಗುಡಾರ

ದೇವದರ್ಶನ ಗುಡಾರದ ಮಾದರಿಯನ್ನು ಮೋಶೆಗೆ ನೀಡಲಾಯಿತು - ಅಳತೆಗಳು, ಮರ, ವಸ್ತು, ಚಿನ್ನ ಮತ್ತು ಬೆಳ್ಳಿ, ಆಭರಣಗಳು, ನಾರುಬಟ್ಟೆ ಮತ್ತು ಉಣ್ಣೆ. ಅವೆಲ್ಲವುಗಳೂ ನಿರ್ದಿಷ್ಟವಾದ ಅರ್ಥಗಳನ್ನು ಹೊಂದಿದ್ದವು - ಅವೆಲ್ಲವೂ ಕ್ರಿಸ್ತನತ್ತ ಬೆರಳು ಮಾಡಿದವು.

## ಮೂರು ವಿಭಾಗಗಳು

ದೇವದರ್ಶನ ಗುಡಾರಕ್ಕೆ ಮೂರು ವಿಭಾಗಗಳಿದ್ದವು. ಅವುಗಳು ದೇವರ ಮೂರು ವಿಭಿನ್ನ ವ್ಯಕ್ತಿತ್ವಗಳ - ತಂದೆ, ಮಗ ಮತ್ತು ಪವಿತ್ರಾತ್ಮನ - ಸಂಕೇತವಾಗಿವೆ. ಅವು ಮಾನವಕುಲದ ದೇಹ, ಪ್ರಾಣ ಮತ್ತು ಆತ್ಮದ ಸಂಕೇತವೂ ಆಗಿದ್ದವು.

✱ *ಅಂಗಳ*

ಮೊದಲ ಪ್ರದೇಶವು ಅಂಗಳವಾಗಿತ್ತು. ಎಲ್ಲಾ ಜನರು ಅಂಗಳವನ್ನು ಪ್ರವೇಶಿಸಬಹುದಾಗಿತ್ತು - ಯೆಹೂದ್ಯರು ಮಾತ್ರವಲ್ಲದೆ ಯೆಹೂದತ್ವಕ್ಕೆ ಮತಾಂತರಗೊಂಡ ಅನ್ಯಜನರೂ ಸಹ. ಈ ಅಂಗಳವು ಎಲ್ಲಾ ಮಾನವಕುಲವನ್ನು ಕ್ರಿಸ್ತನ ಬಳಿಗೆ ತರಲು ಅವರೊಂದಿಗೆ ಕಾರ್ಯಮಾಡುವ ಪರಿಶುದ್ಧಾತ್ಮನನ್ನು ಪ್ರತಿನಿಧಿಸುತ್ತದೆ.

✱ *ಪರಿಶುದ್ಧ ಸ್ಥಳ*

ಯಾಜಕರುಗಳು ಅಥವಾ ಪುರೋಹಿತರುಗಳು ಪರಿಶುದ್ಧ ಸ್ಥಳವನ್ನು ಪ್ರವೇಶಿಸಬಹುದಾಗಿತ್ತು. ಅವರು ಅಂಗಳದಲ್ಲಿ ಹಾಗೂ ಪರಿಶುದ್ಧ ಸ್ಥಳದಲ್ಲಿ ಯಜ್ಞಬಲಿಗಳನ್ನು ಅರ್ಪಿಸಿದರು. ಪರಿಶುದ್ಧ ಸ್ಥಳವು ನಮ್ಮ ಯಜ್ಞಬಲಿಯಾಗಿರುವ ಯೇಸುವನ್ನು ಪ್ರತಿನಿಧಿಸುತ್ತದೆ.

✱ *ಅತೀ ಪರಿಶುದ್ಧ ಸ್ಥಳ*

ಪ್ರಧಾನ ಯಾಜಕನು ಮಾತ್ರ ಅತೀ ಪರಿಶುದ್ಧ ಸ್ಥಳವನ್ನು ಪ್ರಾಯಶ್ಚಿತ್ತ ದಿನದಂದು ಪ್ರವೇಶಿಸಬಹುದಾಗಿತ್ತು. ಅವನು ಜನರಿಗಾಗಿ ಯಜ್ಞಬಲಿಗಳನ್ನು ಅರ್ಪಿಸಲು ಅತೀ ಪರಿಶುದ್ಧ ಸ್ಥಳವನ್ನು ಪ್ರವೇಶಿಸುವದಕ್ಕಿಂತ ಮುಂಚೆ ತನ್ನನ್ನು ತಾನೇ ಪವಿತ್ರಗೊಳಿಸಿಕೊಳ್ಳುತ್ತಿದ್ದನು. ಅವನ ಜೀವನದಲ್ಲಿ ಪಾಪ ಇದ್ದರೆ ಅವನು ಸಾಯುತ್ತಿದ್ದನು. ಅತೀ ಪರಿಶುದ್ಧ ಸ್ಥಳವು ದೇವರ ಸನ್ನಿಧಾನವನ್ನು ಪ್ರತಿನಿಧಿಸುತ್ತದೆ.

ಅತೀ ಪರಿಶುದ್ಧ ಸ್ಥಳಕ್ಕೂ ಪರಿಶುದ್ಧ ಸ್ಥಳಕ್ಕೂ ನಡುವೆ ಒಂದು ಬಹಳ ದಪ್ಪವಾದ, ನೇಯ್ದ ಪರದೆ ಅಥವಾ ಮುಸುಕು ಇತ್ತು. ಯೇಸು ಶಿಲುಬೆಯ ಮೇಲೆ ಮರಣಹೊಂದಿದಾಗ, ಈ ಪರದೆಯು ಅಲೌಕಿಕವಾಗಿ ಮೇಲಿನಿಂದ ಕೆಳಕ್ಕೆ ಹರಿದು ಹೋಯಿತು. ಅದು ಇನ್ನು ಮುಂದೆ ಪ್ರತ್ಯೇಕವಾದ ಅತೀ ಪರಿಶುದ್ಧ ಸ್ಥಳದ ಅಗತ್ಯವಿಲ್ಲವೆಂಬುದನ್ನು ಸೂಚಿಸುತ್ತದೆ.

ನಮ್ಮ ಪರವಾಗಿ ದೇವರ ಸನ್ನಿಧಿಯನ್ನು ಪ್ರವೇಶಿಸುವ ಒಬ್ಬ ಯಾಜಕನ ಅಗತ್ಯವು ಈಗ ಇಲ್ಲ! ಯೇಸು ನಮ್ಮ ಪ್ರಧಾನ ಯಾಜಕನಾದರು ಮತ್ತು ನಾವು ನೇರವಾಗಿ ಆತನ ಬಳಿಗೆ ಬರಬಹುದು. ನಾವು ದೇವರ ಸನ್ನಿಧಿಗೆ ಧೈರ್ಯವಾಗಿ ಬರಬಹುದು.

**ಮತ್ತಾಯ 27:50,51 ಅನಂತರ ಯೇಸು ತಿರುಗಿ ಮಹಾ ಧ್ವನಿಯಿಂದ ಕೂಗಿ ಪ್ರಾಣಬಿಟ್ಟನು. ಆಗ ಇಗೋ, ದೇವಾಲಯದ ಪರದೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು; ಭೂಮಿಯು ನಡುಗಿತು; ಬಂಡೆಗಳು ಸೀಳಿಹೋದವು...**

ಯೇಸು ಇಡೀ ಲೋಕಕ್ಕಾಗಿ ಯಜ್ಞಬಲಿಯಾದಾಗ ದೇವಾಲಯದ ಅಥವಾ ದೇವದರ್ಶನ ಗುಡಾರದ ಅಗತ್ಯವು ಇನ್ನು ಮೇಲೆ ಇರಲಿಲ್ಲ. ಅವುಗಳ ಉದ್ದೇಶವು ಯೇಸುವಿನಲ್ಲಿ ನೆರವೇರಿದವು. ಪೀಠೋಪಕರಣಗಳು,

ಹಬ್ಬಗಳು, ಅರ್ಪಣೆಗಳು ಮತ್ತು ಯಾಜಕರುಗಳು - ಇವೆಲ್ಲವೂ ಯೇಸುವಿನ ಚಿತ್ರಣಗಳಾಗಿದ್ದವು ಮತ್ತು ಆತನು ಮಾನವಕುಲಕ್ಕಾಗಿ ಮಾಡಲಿದ್ದ ಕಾರ್ಯಗಳ ಚಿತ್ರಣಗಳಾಗಿದ್ದವು.

ಇಂದು, ನಾವು ಸ್ತುತಿಯನ್ನು ಮತ್ತು ನಂತರ ಆರಾಧನೆಯನ್ನು ಪ್ರವೇಶಿಸುವಾಗ ದೇವದರ್ಶನ ಗುಡಾರದ ಮೂರು ವಿಭಾಗಗಳನ್ನು ನೆನಪಿಸಿಕೊಳ್ಳುವುದು ಒಳ್ಳೆಯದು. ನಾವು ದೇವರ ಸನ್ನಿಧಾನವನ್ನು ಹೇಗೆ ಪ್ರವೇಶಿಸುತ್ತೇವೆ ಎಂಬುದನ್ನು ಅವುಗಳು ಪ್ರತಿನಿಧಿಸುತ್ತವೆ. ಮೊದಲು, ನಾವು ಕೃತಜ್ಞತೆಯೊಂದಿಗೆ ದ್ವಾರವನ್ನು ಪ್ರವೇಶಿಸುತ್ತೇವೆ. ಎರಡನೆಯದಾಗಿ, ನಾವು ದೇವರು ನಮಗಾಗಿ ಮಾಡಿರುವ ಒಳಿತಿಗಾಗಿ ಸ್ತುತಿಯೊಂದಿಗೆ ಆತನ ಅಂಗಳಗಳನ್ನು ಪ್ರವೇಶಿಸುತ್ತೇವೆ. ಅಂತಿಮವಾಗಿ, ನಾವು ಅತೀ ಪರಿಶುದ್ಧ ಸ್ಥಳವನ್ನು ಪ್ರವೇಶಿಸಿ ಕರ್ತನು ಯಾರಾಗಿದ್ದಾನೋ ಅದಕ್ಕಾಗಿ ನಾವು ಆತನನ್ನು ಆರಾಧಿಸುವುದರಲ್ಲಿ ಸಮಯವನ್ನು ಕಳೆಯುತ್ತೇವೆ.

## ಪೀಠೋಪಕರಣಗಳು

ದೇವದರ್ಶನ ಗುಡಾರದಲ್ಲಿನ ಪ್ರತಿಯೊಂದು ಪೀಠೋಪಕರಣಗಳು ಯೇಸುವನ್ನು ಪ್ರತಿನಿಧಿಸಿತು. ಇದನ್ನು ಇಡೀ ಮಾನವಕುಲದ ವಿಮೋಚಕನ ಒಂದು ಭೌತಿಕವಾದ ಪ್ರಾತಿನಿಧ್ಯವಾಗಿ ವಿನ್ಯಾಸಗೊಳಿಸಲಾಗಿತ್ತು. ಪ್ರತಿಯೊಂದು ವಸ್ತುವನ್ನು ವಿನ್ಯಾಸಗೊಳಿಸಲು ಬಳಸಲಾದ ಮೂಲವಸ್ತುವು ವಿಶೇಷ ಮಹತ್ವವನ್ನು ಹೊಂದಿತ್ತು.

* ಚಿನ್ನ - ದೈವತ್ವದ ಪ್ರಕಟನೆ
* ಬೆಳ್ಳಿ - ವಿಮೋಚನೆ
* ತಾಮ್ರ - ನ್ಯಾಯತೀರ್ಪು

ವಿವಿಧ ಹೊದಿಕೆಗಳ ಬಣ್ಣವೂ ಸಹ ವಿಶೇಷ ಮಹತ್ವವನ್ನು ಹೊಂದಿತ್ತು.

* ನೀಲಿ - ಸ್ವರ್ಗೀಯ ಗುಣವುಳ್ಳದ್ದು ಅಥವಾ ಮೂಲವುಳ್ಳದ್ದು
* ನೇರಳೆ - ರಾಜತ್ವ
* ಕಡುಕೆಂಪು - ಯಜ್ಞಬಲಿ

ಅಕೇಶಿಯ ಮರವು ಬಹುತೇಕ ನಾಶವಾಗದ ಮರವಾಗಿತ್ತು ಮತ್ತು ಅದು "ನಾಶವಾಗದಂಥ ಕ್ರಿಸ್ತನನ್ನು" ಪ್ರತಿನಿಧಿಸುತ್ತದೆ.

### ಅಂಗಳದಲ್ಲಿ

* *ತಾಮ್ರದ ಬಲಿಪೀಠ*

ಎಲ್ಲರೂ ದೇವಾಲಯದ ಅಂಗಳಕ್ಕೆ ಬರಬಹುದಾಗಿತ್ತು. ಅವರು ದ್ವಾರವನ್ನು ಪ್ರವೇಶಿಸುತ್ತಿದ್ದಂತೆ, ಅವರ ಕಣ್ಣಿಗೆ ಬೀಳುವ ಮೊದಲ ವಸ್ತುವು ತಾಮ್ರದ ಬಲಿಪೀಠವಾಗಿತ್ತು. ಇದನ್ನು ದಹನಬಲಿಯ ಬಲಿಪೀಠ ಎಂದೂ ಕರೆಯಲಾಗುತ್ತಿತ್ತು. ಅವರು ದೇವರ ಸಮೀಪಕ್ಕೆ ಬಂದಂತೆ ಇದೇ

ಸ್ಥಳದಲ್ಲಿ ಅವರ ಪಾಪಗಳಿಗಾಗಿ ಬಲಿಗಳನ್ನು ಅರ್ಪಿಸಲಾಗುತ್ತಿತ್ತು. ಬಲಿಪೀಠವನ್ನು ಅಕೇಶಿಯ ಮರದಿಂದ ಮತ್ತು ತಾಮ್ರದಿಂದ ಮಾಡಲಾಗಿತ್ತು. ಅಕೇಶಿಯ ಮರವು ನಾಶವಾಗದ ಕ್ರಿಸ್ತನನ್ನು ಪ್ರತಿನಿಧಿಸಿತು ಮತ್ತು ತಾಮ್ರವು ಪಾಪಗಳ ನ್ಯಾಯತೀರ್ಪನ್ನು ಪ್ರತಿನಿಧಿಸಿತು.

ಈ ಬಲಿಪೀಠದ ಮೇಲೆ ಅರ್ಪಿಸಲ್ಪಟ್ಟ ಬಲಿಗಳು ದೇವರ ಮಗನು ಮಾಡುವ ಅಂತಿಮ ಯಜ್ಞಬಲಿಯನ್ನು ಪ್ರತಿನಿಧಿಸಿದವು.

**ಇಬ್ರಿಯ 9:26b …ಆದರೆ ಒಂದೇ ಸಾರಿ, ಯುಗಗಳ ಸಮಾಪ್ತಿಯವರೆಗೂ, ಆತನು ಪಾಪ ನಿವಾರಣೆ ಮಾಡುವ ಉದ್ದೇಶದಿಂದ ತನ್ನನ್ನು ತಾನೇ ಯಜ್ಞಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು.**

ಯೇಸು ನಮ್ಮ ಪಾಪಗಳ ಕ್ಷಮಾಪಣೆಗಾಗಿ ನಮ್ಮ ಯಜ್ಞಬಲಿಯಾದರು. ಈಗ ನಾವು ನಮ್ಮ ಶರೀರಗಳನ್ನು ಒಂದು ಸಜೀವ ಯಜ್ಞವಾಗಿ ಅರ್ಪಿಸಬೇಕು.

**ರೋಮಾ 12:1 ಆದ್ದರಿಂದ ಸಹೋದರರರೇ, ದೇವರ ಕನಿಕರವನ್ನು ನೆನಪಿಸುತ್ತಾ, ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಸಮರ್ಪಿಸಿರೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ; ಇದೇ ವಿವೇಕ ಪೂರ್ವಕವಾದ ಆರಾಧನೆಯು.**

✳ *ತಾಮ್ರದ ತೊಟ್ಟಿ*

ಮುಂದಿನ ಪೀಠೋಪಕರಣವು ತಾಮ್ರದಿಂದ ಮಾಡಲ್ಪಟ್ಟಿದ್ದ ತೊಟ್ಟಿಯಾಗಿತ್ತು. ಅದರಲ್ಲಿ ನೀರು ತುಂಬಿತ್ತು ಮತ್ತು ಯಾಜಕರು ಸೇವೆಯ ಮೊದಲು ತಮ್ಮ ಕೈ ಕಾಲುಗಳನ್ನು ತೊಳೆಯಬೇಕಾಗಿತ್ತು. ಈ ತೊಳೆಯುವಿಕೆಯು ಅಗತ್ಯವಿರುವಷ್ಟು ಬಾರಿ ಮಾಡಲಾಗುತ್ತಿತ್ತು ಮತ್ತು ಕ್ರಿಸ್ತನು ನಮ್ಮನ್ನು ಪ್ರತಿಯೊಂದು ಸುಕ್ಕು ಮತ್ತು ಕಳಂಕದಿಂದ ಶುದ್ಧೀಕರಿಸುವುದನ್ನು ಇದು ಸೂಚಿಸುತ್ತದೆ.

**ಎಫೆಸ 5:25b,-27 … ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪಾವನಗೊಳಿಸುವುದಕ್ಕಾಗಿ ತನ್ನನ್ನು ತಾನೇ ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದಂತೆ ಪರಿಶುದ್ಧವೂ, ನಿರ್ದೋಷವೂ, ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಿಮಾಡಿದನು.**

ನಾವು ರಕ್ಷಣೆಯನ್ನು ಪಡೆದ ನಂತರ ನಿರಂತರವಾದ ಶುದ್ಧೀಕರಣದ ಅಗತ್ಯವಿದೆ. ಒಂದು ವೇಳೆ ನಾವು ಪಾಪ ಮಾಡಿದರೆ ನಮ್ಮ ಪಾಪಗಳನ್ನು ಅರಿಕೆ ಮಾಡಬೇಕು ಮತ್ತು ಕ್ಷಮಾಪಣೆಯನ್ನು ಪಡೆದುಕೊಳ್ಳಬೇಕು.

**1 ಯೋಹಾನ 1:9 ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿ ಸಕಲ ಅನೀತಿಯಿಂದ ನಮ್ಮನ್ನು ಶುದ್ಧಿಮಾಡುವನು.**

ನಾವು ದೇವರ ವಾಕ್ಯವನ್ನು ಸಹ ದಿನನಿತ್ಯ ಭುಜಿಸಬೇಕು.

**ಯೋಹಾನ 15:3 ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ನೀವು ಶುದ್ಧರಾಗಿದ್ದೀರಿ.**

**ಪರಿಶುದ್ಧ ಸ್ಥಳದಲ್ಲಿ**

ಪರಿಶುದ್ಧ ಸ್ಥಳದಲ್ಲಿ ಮೂರು ಪೀಠೋಪಕರಣಗಳಿದ್ದವು. ಬಲಭಾಗದಲ್ಲಿ ರೊಟ್ಟಿಯ ಮೇಜು, ಎಡಭಾಗದಲ್ಲಿ ಚಿನ್ನದ ದೀಪಸ್ತಂಭ ಮತ್ತು ಧೂಪವೇದಿಯು ನೇರವಾಗಿ ಮುಂದೆ ಇತ್ತು.

✱ *ರೊಟ್ಟಿಯ ಮೇಜು*

ರೊಟ್ಟಿಯ ಮೇಜನ್ನು ಅಕೇಶಿಯ ಮರದಿಂದ ಮಾಡಲಾಗಿತ್ತು ಮತ್ತು ಚಿನ್ನದಿಂದ ಹೊದಿಸಲಾಗಿತ್ತು. ಇದು ಕ್ರಿಸ್ತನ ಮಾನವತ್ವವನ್ನು ಮತ್ತು ದೈವತ್ವವನ್ನು ಪ್ರತಿನಿಧಿಸಿತು. ರೊಟ್ಟಿಯನ್ನು ಯಾವಾಗಲೂ ಈ ಮೇಜಿನ ಮೇಲೆ ಇಡಲಾಗುತ್ತಿತ್ತು ಮತ್ತು ಅದು ಕ್ರಿಸ್ತನನ್ನು ಸೂಚಿಸುತ್ತದೆ - ಜೀವ ಕೊಡುವ ರೊಟ್ಟಿ.

**1 ಕೊರಿಂಥ 10:16,17 ನಾವು ದೇವರ ಸ್ತೋತ್ರಮಾಡಿ ಪಾನಪಾತ್ರೆಯಲ್ಲಿ ಪಾನ ಮಾಡುವುದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ? ನಾವು ರೊಟ್ಟಿಯನ್ನು ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ? ರೊಟ್ಟಿ ಒಂದೇ ಆಗಿರುವ ಹಾಗೆ ಅನೇಕರಾಗಿರುವ ನಾವೆಲ್ಲರು ಒಂದೇ ದೇಹದಂತಿದ್ದೇವೆ. ಯಾಕೆಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲು ತೆಗೆದುಕೊಂಡು ತಿನ್ನುತ್ತೇವೆ.**

ನಾವು ಒಂದೇ ದೇಹವಾಗಿದ್ದೇವೆ - ರೊಟ್ಟಿಯಾಗಿದ್ದೇವೆ - ಎಂದು ಪೌಲನು ಬರೆದನು. ಯೇಸು ರೊಟ್ಟಿಯಾಗಿದ್ದಾರೆ ಮತ್ತು ಆತನಲ್ಲಿ ನಾವೂ ಸಹ ರೊಟ್ಟಿಯಾಗಿದ್ದೇವೆ.

✱ *ಚಿನ್ನದ ದೀಪಸ್ತಂಭ*

ದೀಪಸ್ತಂಭವು ಪರಿಶುದ್ಧ ಚಿನ್ನದಿಂದ ಮಾಡಲ್ಪಟ್ಟಿತ್ತು ಮತ್ತು ಅದು ಕ್ರಿಸ್ತನು ನಿಜವಾದ ಬೆಳಕಾಗಿದ್ದಾನೆ ಎಂಬುದನ್ನು ಸೂಚಿಸಿತು.

ಅಪೋಸ್ತಲನಾದ ಯೋಹಾನನು ಹೀಗೆ ಬರೆದನು,

**ಯೋಹಾನ 8:12 ಯೇಸು ಪುನಃ ಜನರೊಂದಿಗೆ ಮಾತನಾಡುತ್ತಾ, “ನಾನೇ ಲೋಕದ ಬೆಳಕಾಗಿದ್ದೇನೆ. ನನ್ನನ್ನು ಹಿಂಬಾಲಿಸುವವನು ಎಂದಿಗೂ ಕತ್ತಲೆಯಲ್ಲಿ ನಡೆಯುವುದಿಲ್ಲ, ಆದರೆ ಅವನು ಜೀವದ ಬೆಳಕನ್ನು ಹೊಂದಿರುವನು” ಎಂದು ಹೇಳಿದನು.**

ನಾವು ಯೇಸುವನ್ನು ಹಿಂಬಾಲಿಸುವಾಗ ಆತನ ಬೆಳಕಿನಲ್ಲಿ ನಡೆಯುತ್ತೇವೆ ಮತ್ತು ಇತರರಿಗೆ ಬೆಳಕಾಗುತ್ತೇವೆ.

**ಮತ್ತಾಯ 5:16 ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಆಗ ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು.**

✳ *ಧೂಪವೇದಿ*

ಧೂಪವೇದಿಯು ಅಕೇಶಿಯಾ ಮರದಿಂದ ಮಾಡಲಟ್ಟಿದ್ದು ಬಂಗಾರದಿಂದ ಹೊದಿಸಲ್ಪಟ್ಟಿತ್ತು. ನಿತ್ಯವೂ ಉರಿಯುವ ಧೂಪವು ನಮಗಾಗಿ ಬೇಡುವ ಕ್ರಿಸ್ತನನ್ನು ಸೂಚಿಸಿತು.

**ರೋಮಾ 8:34 ಹಾಗಿದ್ದ ಮೇಲೆ ಅಪರಾಧಿಗಳೆಂದು ಖಂಡಿಸುವವರು ಯಾರು? ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿರುವ ಕ್ರಿಸ್ತ ಯೇಸುವೋ?**

ನಾವು ಪ್ರಾರ್ಥನೆಯ ಮೂಲಕ ಪ್ರತಿದಿನವೂ ಧೂಪ ಅರ್ಪಣೆಯನ್ನು ಮುಂದುವರೆಸಬೇಕು.

**ಪ್ರಕಟನೆ 8:3,4 ಅನಂತರ ಮತ್ತೊಬ್ಬ ದೇವದೂತನು ಬಂದನು, ಅವನು ಚಿನ್ನದ ಧೂಪಾರತಿ ಹಿಡಿದುಕೊಂಡು ಯಜ್ಞವೇದಿಯ ಬಳಿಯಲ್ಲಿ ನಿಂತನು. ಸಿಂಹಾಸನದ ಮುಂದಣ ಚಿನ್ನದ ಧೂಪವೇದಿಯ ಮೇಲೆ ಪರಿಶುದ್ಧ ಜನರೆಲ್ಲರ ಪ್ರಾರ್ಥನೆಗಳೊಂದಿಗೆ ಸಮರ್ಪಿಸುವುದಕ್ಕಾಗಿ ಅವನಿಗೆ ಬಹಳ ಧೂಪವು ಕೊಡಲ್ಪಟ್ಟಿತು. ಆಗ ಧೂಪದ ಹೊಗೆಯು ದೇವದೂತನ ಕೈಯಿಂದ ಹೊರಟು ದೇವಜನರ ಪ್ರಾರ್ಥನೆಗಳೊಂದಿಗೆ ಸೇರಿ ದೇವರ ಸನ್ನಿಧಿಗೆ ಏರಿಹೋಯಿತು.**

**ಅತೀ ಪರಿಶುದ್ಧ ಸ್ಥಳದಲ್ಲಿ**

✳ *ದೇವರ ಮಂಜೂಷ*

ಅತೀ ಪರಿಶುದ್ಧ ಸ್ಥಳದಲ್ಲಿ ಎರಡು ಪೀಠೋಪಕರಣಗಳಿದ್ದವು - ದೇವರ ಮಂಜೂಷ ಮತ್ತು ಕೃಪಾಸನ. ಆರೋನನ ಕೋಲು, ಕಲ್ಲಿನ ಹಲಿಗೆಗಳು ಮತ್ತು ಮನ್ನ ದೇವರ ಮಂಜೂಷದಲ್ಲಿದ್ದವು.

ದೇವರ ಮಂಜೂಷವು ಅಕೇಶಿಯಾ ಮರದಿಂದ ಹಾಗೂ ಚಿನ್ನದಿಂದ ಮಾಡಲಾಗಿತ್ತು ಮತ್ತು ಈ ವಸ್ತುಗಳು ಸಹ ಕ್ರಿಸ್ತನ ಮಾನವತ್ವ ಮತ್ತು ದೈವತ್ವವನ್ನು ಸೂಚಿಸಿತು.

ಮೋಶೆಯು ದೇವರ ಮಂಜೂಷದ ಸ್ಥಳದಲ್ಲಿಯೇ ದೇವರ ಪ್ರಸನ್ನತೆಯನ್ನು ಕಂಡನು. ಇಂದು ಯೇಸುವೇ ನಾವು ದೇವರೊಂದಿಗೆ ಭೇಟಿಯಾಗುವ ಸ್ಥಳವಾಗಿದ್ದಾರೆ.

**ವಿಮೋ 25:22 ಅಲ್ಲಿಯೇ ನಾನು ನಿನಗೆ ದರ್ಶನವನ್ನು ಕೊಡುವೆನು. ಕೃಪಾಸನದ ಮೇಲೆ ಆಜ್ಞಾಶಾಸನಗಳನ್ನು ಇಟ್ಟಿರುವ ಮಂಜೂಷದ ಮೇಲಣ ಎರಡು ಕೆರೂಬಿಗಳ ನಡುವೆಯೇ ನಾನು ಇದ್ದು ನಿನ್ನ ಸಂಗಡ ಮಾತನಾಡಿ ನೀನು ಇಸ್ರಾಯೇಲರಿಗೆ ಆಜ್ಞಾಪಿಸಬೇಕಾಗಿರುವ ಎಲ್ಲಾ ಸಂಗತಿಗಳನ್ನು ತಿಳಿಸುವೆನು.**

✱ *ಕೃಪಾಸನ*

ಕೃಪಾಸನವು ಪರಿಶುದ್ಧವಾದ ದೈವತ್ವವನ್ನು ಪ್ರತಿನಿಧಿಸುತ್ತಾ ಶುದ್ಧ ಚಿನ್ನದಿಂದ ಮಾಡಲಾಗಿತ್ತು. ದೇವರ ಮಂಜೂಷದ ಮೇಲೆ, ಕೃಪಾಸನದ ಎರಡು ತುದಿಯಲ್ಲಿ ಶುದ್ಧ ಚಿನ್ನದಿಂದ ಮಾಡಲಾಗಿದ್ದ ಎರಡು ಕೆರೂಬಿಯರುಗಳಿದ್ದವು. ಈ ಕೃಪಾಸನವು ತನ್ನ ಸೃಷ್ಟಿಗಳಾದ ದೇವದೂತರಿಂದ ಸಂರಕ್ಷಿಸಲ್ಪಟ್ಟ ದೇವರ ಸಿಂಹಾಸನದ ಪ್ರತಿರೂಪವಾಗಿತ್ತು.

**ಇಬ್ರಿಯ 4:16 ಆದುದರಿಂದ ನಾವು ತಕ್ಕ ಸಮಯದಲ್ಲಿ ಕರುಣೆಯನ್ನು ಹೊಂದುವಂತೆಯೂ ಆತನ ಕೃಪೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಆತನ ಕೃಪಾಸನದ ಮುಂದೆ ಬರೋಣ.**

**ಅರ್ಪಣೆಗಳು**

ಅರ್ಪಣೆಗಳು ಪೀಠೋಪಕರಣಗಳಂತೆ ಮತ್ತು ಹಬ್ಬಗಳಂತೆಯೇ ಅರ್ಥಗರ್ಭಿತವಾಗಿದ್ದವು. ಅರ್ಪಣೆಗಳು ಮತ್ತು ಯಜ್ಞಬಲಿಗಳೆಲ್ಲವೂ ನಂಬಿಕೆಯಿಂದ ಮಾಡಲ್ಪಟ್ಟಾಗ ಪರಿಣಾಮಕಾರಿಯಾಗಿದ್ದವು.

ಐದು ಮುಖ್ಯ ಅರ್ಪಣೆಗಳಿದ್ದವು, ಅವುಗಳನ್ನು ಯಾಜಕಕಾಂಡದ ಮೊದಲ ಐದು ಅಧ್ಯಾಯಗಳಲ್ಲಿ ವಿವರವಾಗಿ ಅಧ್ಯಯನ ಮಾಡಬಹುದು. ಅವೆಲ್ಲವೂ ಒಂದು ಪರಿಪೂರ್ಣವಾದ ಯಜ್ಞಬಲಿಯ - ಅಂದರೆ ಯೇಸುವಿನ ಯಜ್ಞಬಲಿಯ - ವಿವಿಧ ಅಂಶಗಳನ್ನು ಪ್ರತಿನಿಧಿಸಿದವು.

ಅವುಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು :

- ✱ ಸುವಾಸನೆಯನ್ನುಂಟುಮಾಡುವ ಹೋಮಗಳು - ಇದು ಪರಿಪೂರ್ಣನಾದ ಕ್ರಿಸ್ತನ ಪ್ರತಿರೂಪವಾಗಿದೆ. ಆತನು ದೇವರ ಚಿತ್ತವನ್ನು ಮಾಡುವುದರಲ್ಲಿ ಸಂತೋಷಿಸಿದನು.
- ✱ ಸುವಾಸನೆಯಿಲ್ಲದ ಹೋಮಗಳು - ಇದು ಪಾಪಿಗಳ ಅಪರಾಧಗಳನ್ನು ಹೊತ್ತುಕೊಳ್ಳುವ ಕ್ರಿಸ್ತನ ಪ್ರತಿರೂಪವಾಗಿದೆ.

**ಸುವಾಸನೆಯನ್ನುಂಟುಮಾಡುವ ಹೋಮಗಳು**

✱ *ದಹನ ಬಲಿ*

ದಹನಬಲಿಯ ಉದ್ದೇಶವು ನಾವು ದೇವರ ಸಮೀಪಕ್ಕೆ ಬರುವುದಾಗಿತ್ತು.

ದಹನಬಲಿಗೆ ಅಥವಾ ಸರ್ವಾಂಗಹೋಮಕ್ಕೆ ಹೋರಿಯನ್ನಾಗಲಿ, ಕುರಿಮರಿಯನ್ನಾಗಲಿ, ಮೇಕೆಯನ್ನಾಗಲಿ, ಪಾರಿವಾಳದ ಮರಿಯನ್ನಾಗಲಿ

ಅಥವಾ ಬೆಳವಕ್ಕಿಯನ್ನಾಗಲಿ ಅರ್ಪಿಸಬಹುದಾಗಿತ್ತು. ಯಾವ ಪ್ರಾಣಿ ಅಥವಾ ಪಕ್ಷಿಯನ್ನು ಅರ್ಪಿಸಬೇಕೆಂಬುದು ಒಬ್ಬ ಮನುಷ್ಯನ ಆಸ್ತಿಯ ಮೇಲೆ ನಿರ್ಧರಿತವಾಗಿತ್ತು. ಅದು ಒಬ್ಬ ಮನುಷ್ಯನಿಗೆ ಕೊಂಡುಕೊಳ್ಳಲು ಸಾಧ್ಯವಾಗುವಂತದ್ದಾಗಿರಬೇಕು ಮತ್ತು ಸ್ವಲ್ಪವೂ ಸುಕ್ಕು ಕಳಂಕವಿಲ್ಲದ್ದಾಗಿರಬೇಕು, ಪರಿಪೂರ್ಣವಾಗಿರಬೇಕು.

ಇದು ಸ್ವಯಂಪ್ರೇರಿತ ಅರ್ಪಣೆಯಾಗಿತ್ತು ಮತ್ತು ಯಾವುದೇ ಸುಕ್ಕು ಕಳಂಕವಿಲ್ಲದೆ ತನ್ನನ್ನೇ ಸ್ವಯಂಪ್ರೇರಿತವಾಗಿ ಅರ್ಪಿಸಿಕೊಂಡ ಕ್ರಿಸ್ತನ ಸಂಕೇತವಾಗಿತ್ತು.

ಅರ್ಪಣೆಯನ್ನು ತರುವ ವ್ಯಕ್ತಿಯು ತನ್ನ ಕೈಗಳನ್ನು ಅದರ ತಲೆಯ ಮೇಲಿಡಬೇಕು ಆಗ ಅವನ ಪಾಪಗಳು ಅದಕ್ಕೆ ವರ್ಗಾವಣೆಗೊಳ್ಳುತ್ತದೆ ಆನಂತರ ಅದನ್ನು ಕೊಲ್ಲಬೇಕು. ಇದನ್ನು ಮಾಡುವುದು ಸುಲಭವಾಗಿರಲಿಲ್ಲ ಯಾಕಂದರೆ ಅವನು ತರುವ ಅರ್ಪಣೆಯು ಅವನ ಸಾಕು ಪ್ರಾಣಿಯಾಗಿದ್ದಿರಬಹುದು.

ನಮ್ಮ ಪಾಪಗಳಿಗಾಗಿ ಸಾಯಲು ದೇವರು ತನ್ನ ಮಗನನ್ನು ಕೊಟ್ಟಿದ್ದೂ ಸುಲಭವಾಗಿರಲಿಲ್ಲ.

✱ *ಧಾನ್ಯ ಸಮರ್ಪಣೆ*

ಧಾನ್ಯ ಸಮರ್ಪಣೆಯ ಉದ್ದೇಶವು ದೇವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವುದಾಗಿತ್ತು. ಅದು ಗೋಧಿ ಹಿಟ್ಟು, ಎಣ್ಣೆ, ಉಪ್ಪು ಮತ್ತು ಧೂಪದಿಂದ ಕೂಡಿತ್ತು. ಅದೂ ಸಹ ಸ್ವಯಂಪ್ರೇರಿತ ಅರ್ಪಣೆಯಾಗಿತ್ತು.

ಗೋಧಿಯ ಹಿಟ್ಟು ಉತ್ಕೃಷ್ಟವಾಗಿರಬೇಕಿತ್ತು - ಯಾವುದೇ ಉಂಡೆಗಳಿಲ್ಲದೆ, ಒರಟಾಗಿರದೆ ಮತ್ತು ಕಲ್ಮಶಗಳಿಲ್ಲದೆ ಇರಬೇಕು. ಇದು ಕ್ರಿಸ್ತನ ಪರಿಪೂರ್ಣತೆಯ ಬಗ್ಗೆ ಮಾತನಾಡುತ್ತದೆ.

ಎಣ್ಣೆಯು ಕ್ರಿಸ್ತನ ಜೀವನದಲ್ಲಿದ್ದ ಪರಿಶುದ್ಧಾತ್ಮನ ಪ್ರಸನ್ನತೆಯ ಬಗ್ಗೆ ಮಾತನಾಡುತ್ತದೆ.

ಧೂಪವು ಸುಡಲ್ಪಡುವಾಗ ಅದ್ಭುತವಾದ ಸುಗಂಧವನ್ನು ನೀಡುತ್ತದೆ. ಅದು ನಮ್ಮ ಪರವಾಗಿ ಯೇಸು ಅನುಭವಿಸಿದ ಶ್ರಮೆಯನ್ನು ಮತ್ತು ಆ ಸಮಯದಲ್ಲಿ ಆತನಿಂದ ಬರುವ ಪರಿಪೂರ್ಣತೆಯ ಬಗ್ಗೆ ಮಾತನಾಡುತ್ತದೆ.

ಉಪ್ಪು ಅರ್ಪಣೆಯ ಸಂರಕ್ಷಣೆಯ ಬಗ್ಗೆ ಮಾತನಾಡುತ್ತದೆ.

ಈ ಅರ್ಪಣೆಯಲ್ಲಿ, ಪಾಪ ಮತ್ತು ಸುಳ್ಳು ಸಿದ್ಧಾಂತವನ್ನು ಪ್ರತಿನಿಧಿಸುವ ಯಾವುದೇ ಹುಳಿ ಇರಬಾರದು. ಯಾವುದೇ ಜೇನುತುಪ್ಪ ಇರಬಾರದು, ಅದು ಪ್ರಾಕೃತ ಮನುಷ್ಯನಿಗೆ ಬಹಳ ತೃಪ್ತಿಕರವಾದದ್ದನ್ನು ಪ್ರತಿನಿಧಿಸುತ್ತದೆ. ಈ ಅರ್ಪಣೆಯ ಒಂದು ಹಿಡಿಯಷ್ಟು ದೇವರಿಗೆ ಅರ್ಪಿಸಬೇಕಾಗಿತ್ತು ಮತ್ತು ಮಿಕ್ಕದ್ದನ್ನು ಯಾಜಕರ ಬಳಕೆಗಾಗಿ ಕೊಡಲ್ಪಡಬೇಕಿತ್ತು.

✷ *ಸಮಾಧಾನ ಯಜ್ಞ*

ಸಮಾಧಾನ ಯಜ್ಞದ ಉದ್ದೇಶವು ದೇವರೊಂದಿಗೆ ಅನ್ಯೋನ್ಯತೆ, ಆಪ್ತತೆ ಮತ್ತು ಸಂತೋಷವನ್ನು ಹೊಂದುವುದಾಗಿತ್ತು.

ಈ ಅರ್ಪಣೆಯ ಒಂದು ವಿಭಿನ್ನತೆಯೇನೆಂದರೆ, ಅರ್ಪಣೆಯ ಒಂದು ಭಾಗ ಯೆಹೋವನಿಗೆ, ಒಂದು ಭಾಗ ಯಾಜಕರುಗಳಿಗೆ ಮತ್ತು ಮಿಕ್ಕಿದ ಭಾಗ ಅರ್ಪಿಸುವ ಕುಟುಂಬಕ್ಕೆ ಹೋಯಿತು. ಕ್ರಿಸ್ತನು ನಮ್ಮನ್ನು ದೇವರೊಂದಿಗೆ ಸಂಧಾನಪಡಿಸುವುದನ್ನು ಇದು ಚಿತ್ರಿಸುತ್ತದೆ.

ಒಬ್ಬ ವ್ಯಕ್ತಿಯ ಜೀವಿತದಲ್ಲಿ ಪಾಪವಿದ್ದರೆ ಮತ್ತು ದೇವರೊಂದಿಗೆ ಸಂಧಾನವಾಗಿರದಿದ್ದರೆ ಸಮಾಧಾನ ಯಜ್ಞವನ್ನು ಅರ್ಪಿಸಲು ಆಗುತ್ತಿರಲಿಲ್ಲ.

**ಸುವಾಸನೆಯಿಲ್ಲದ ಹೋಮಗಳು**

✷ *ಪ್ರಾಯಶ್ಚಿತ್ತ ಯಜ್ಞ*

ಪ್ರಾಯಶ್ಚಿತ್ತ ಯಜ್ಞದ ಉದ್ದೇಶವು ಪಾಪದ ಅಪರಾಧ ಮನೋಭಾವನೆಯನ್ನು ಮುಚ್ಚುವುದಾಗಿತ್ತು.

ಯಾಜಕನು ದೋಷಿಯಾಗಿದ್ದರೆ ಹೋರಿಯನ್ನು ಸಮರ್ಪಿಸಬೇಕು, ಮುಖ್ಯಾಧಿಕಾರಿಯಾಗಿದ್ದರೆ ಗಂಡು ಮೇಕೆಯನ್ನು, ಇತರರು ಹೆಣ್ಣು ಮೇಕಯನ್ನು ಸಮರ್ಪಿಸಬೇಕು. ಪ್ರತಿಯೊಂದು ಸಂದರ್ಭದಲ್ಲೂ, ಅರ್ಪಿಸಲ್ಪಡುವ ಪ್ರಾಣಿಯು ಯಾವುದೇ ಕಲೆ ಅಥವಾ ಕಳಂಕವಿಲ್ಲದೆ ಇರಬೇಕಾಗಿತ್ತು.

ದಹನಬಲಿಯಲ್ಲಿ, ಅರ್ಪಣೆಯು ಒಬ್ಬ ವ್ಯಕ್ತಿಯ ಸಾಮರ್ಥ್ಯಕ್ಕೆ ಅನುಗುಣವಾಗಿರುವುದನ್ನು ಗಮನಿಸುವುದು ಆಸಕ್ತಿಕರವಾಗಿದೆ. ಆದರೆ, ಪ್ರಾಯಶ್ಚಿತ್ತ ಯಜ್ಞದ ಅರ್ಪಣೆಯು ಒಬ್ಬ ವ್ಯಕ್ತಿಯ ಸ್ಥಾನಕ್ಕೆ ಅನುಗುಣವಾಗಿದೆ. ಯಾಜಕನ ಪಾಪಕ್ಕಾಗಿ ಮಾಡಲಾದ ಅರ್ಪಣೆಯು ಅತ್ಯಂತ ದೊಡ್ಡದು - ಮುಖ್ಯಾಧಿಕಾರಿಗಿಂತ ದೊಡ್ಡದು.

ಅರ್ಪಣೆಯನ್ನು ತರುವ ವ್ಯಕ್ತಿಯು, ತನ್ನ ಪಾಪಗಳಿಗಾಗಿ ಕ್ಷಮೆಯನ್ನು ಬಯಸುವ ವ್ಯಕ್ತಿಯು, ಬಲಿಯನ್ನು ಜನರ ಮುಂದೆ ದೇವಾಲಯಕ್ಕೆ ತರಬೇಕಾಗಿತ್ತು. ಅವನು ತನ್ನ ಪಾಪಗಳನ್ನು ಅರಿಕೆ ಮಾಡಬೇಕಾಗಿತ್ತು. ನಂತರ ಅವನು ತನ್ನ ಪಾಪಗಳನ್ನು ಹೊತ್ತ ನಿಷ್ಕಳಂಕ ಪ್ರಾಣಿಯನ್ನು ಕೊಲ್ಲಬೇಕಾಗಿತ್ತು. ಇದು ನಮ್ಮ ಪಶ್ಚಾತ್ತಾಪದ ಅಗತ್ಯವನ್ನು ಮತ್ತು ನಮ್ಮ ಪಾಪಗಳಿಗಾಗಿ ಕ್ರಿಸ್ತನು ಸಾಯಬೇಕಾಯಿತು ಎಂಬ ಹೊಣೆಯನ್ನು ಒಪ್ಪಿಕೊಳ್ಳುವುದನ್ನು ಚಿತ್ರಿಸುತ್ತದೆ.

ಪಾಪವನ್ನರಿಯದ ಯೇಸು ನಮಗಾಗಿ ಪಾಪಸ್ವರೂಪಿಯಾದರು.

**2 ಕೊರಿಂಥ 5:21 ಪಾಪವನ್ನೇ ಅರಿಯದ ಕ್ರಿಸ್ತ ಯೇಸುವನ್ನು ದೇವರು ನಮಗೋಸ್ಕರ ಪಾಪಸ್ವರೂಪಿಯನ್ನಾಗಿಸಿದರು. ಕ್ರಿಸ್ತ ಯೇಸುವಿನಲ್ಲಿ ನಾವು ನೀತಿವಂತರಾಗಬೇಕೆಂದು ದೇವರು ಹೀಗೆ ಮಾಡಿದರು.**

ಯಾಜಕನು ಬಲಿಯ ರಕ್ತದಲ್ಲಿ ಸ್ವಲ್ಪವನ್ನು ಬೆರಳಿನಲ್ಲಿ ತೆಗೆದುಕೊಂಡು ಧೂಪವೇದಿಗೆ ಹಚ್ಚಿದ ನಂತರ ಒಂದು ಭಾಗವನ್ನು ತಾಮ್ರದ ವೇದಿಯ ಮೇಲೆ ಸುಟ್ಟನು, ನಂತರ ಬಲಿಯ ಉಳಿದ ಭಾಗವನ್ನು ತೆಗೆದುಕೊಂಡು ಪಾಳೆಯದ ಹೊರಗೆ ಸುಟ್ಟನು.

ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ, ಯೇಸು ಪಟ್ಟಣದ ಹೊರಗೆ ಸತ್ತರು ಎಂದು ಓದುತ್ತೇವೆ.

**ಇಬ್ರಿಯರಿಗೆ 13:12 ಅದರಂತೆ ಯೇಸು ಕೂಡ ಸ್ವಂತ ರಕ್ತದಿಂದ ತನ್ನ ಜನರನ್ನು ಶುದ್ಧೀಕರಿಸುವುದಕ್ಕೋಸ್ಕರ ಪಟ್ಟಣದ ಹೊರಗೆ ಸತ್ತನು.**

ನಾವು ಆತನ ನಿಮಿತ್ತ ಉಂಟಾಗುವ ನಿಂದೆಯನ್ನು ತಾಳಿಕೊಳ್ಳಬೇಕು, ಆತನನ್ನು ಮಾತ್ರ ಹುಡುಕಬೇಕು ಮತ್ತು ನಿರಂತರವಾಗಿ ಆತನನ್ನು ಸ್ತುತಿಸಬೇಕು.

**ಇಬ್ರಿಯರಿಗೆ 13:13-15 ಆದ್ದರಿಂದ ನಾವು ಆತನ ನಿಮಿತ್ತ ಉಂಟಾಗುವ ನಿಂದೆಯನ್ನು ತಾಳಿಕೊಳ್ಳುವವರಾಗಿ, ಪಾಳೆಯದ ಆಚೆ ಆತನ ಬಳಿಗೆ ಹೊರಟುಹೋಗೋಣ. ಏಕೆಂದರೆ ಇಹದಲ್ಲಿ ಶಾಶ್ವತವಾದ ಪಟ್ಟಣವು ನಮಗಿಲ್ಲ. ಭವಿಷ್ಯತ್ತಿನಲ್ಲಿ ಬರುವ ಪಟ್ಟಣವನ್ನು ಎದುರುನೋಡುತ್ತಾ ಇದ್ದೇವೆ. ಆದ್ದರಿಂದ ಯೇಸುವಿನ ಮೂಲಕವಾಗಿಯೇ ದೇವರಿಗೆ ಸ್ತೋತ್ರವೆಂಬ ಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ, ಆತನನ್ನು ನಾವು ಕರ್ತನೆಂದು ನಂಬಿ ಬಾಯಿಂದ ಅರಿಕೆ ಮಾಡುವುದೇ ನಾವು ಅರ್ಪಿಸುವ ಯಜ್ಞವಾಗಿದೆ.**

✳ *ದೋಷ ಪರಿಹಾರ ಯಜ್ಞ*

ದೋಷ ಪರಿಹಾರಕ ಯಜ್ಞದಲ್ಲಿ ಕ್ರಿಸ್ತನು ನಮ್ಮ ಪಾಪಗಳಿಂದಾದ ಗಾಯಕ್ಕಾಗಿ ತನ್ನ ಮರಣದಲ್ಲಿ ಪರಿಹಾರವನ್ನು ಒದಗಿಸುವ ಚಿತ್ರಣವನ್ನು ಕಾಣುತ್ತೇವೆ.

ಯೋಹಾನನು ಹೀಗೆ ಬರೆದನು,

**1 ಯೋಹಾನ 1:8-10 ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಗೊಳಿಸಿಕೊಂಡ ಹಾಗಾಯಿತು ಮತ್ತು ಸತ್ಯವೆಂಬುದು ನಮ್ಮಲ್ಲಿಲ್ಲವೆಂದು ತಿಳಿಯುತ್ತದೆ. ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿ ಸಕಲ ಅನೀತಿಯಿಂದ ನಮ್ಮನ್ನು ಶುದ್ಧಿಮಾಡುವನು. ನಾವು ಪಾಪ ಮಾಡಲಿಲ್ಲವೆಂದು ಹೇಳಿದರೆ ಆತನನ್ನು ಸುಳ್ಳುಗಾರನನ್ನಾಗಿ ಮಾಡಿದಂತಾಗುತ್ತದೆ ಮತ್ತು ಆತನ ವಾಕ್ಯವು ನಮ್ಮಲ್ಲಿ ನೆಲೆಗೊಂಡಿರುವುದಿಲ್ಲ.**

ಒಬ್ಬ ವ್ಯಕ್ತಿಯ ಜೀವನದ ದೈನಂದಿನ ವ್ಯವಹಾರಗಳಲ್ಲಿ ಒಳಗೊಳ್ಳುವ ಹಲವಾರು ಕ್ಷೇತ್ರಗಳಲ್ಲಿ ನಡೆಯುವ ದೋಷಗಳ ಪರಿಹಾರಕ್ಕಾಗಿ ದೋಷಪರಿಹಾರಕ ಯಜ್ಞವು ಕೊಡಲ್ಪಟ್ಟಿತ್ತು. ಈ ಆರು ದೋಷಗಳ ಕ್ಷೇತ್ರಗಳನ್ನು ಅಧ್ಯಯನ ಮಾಡುವುದು ಬಹಳ ಮುಖ್ಯ, ಏಕೆಂದರೆ

ಇವುಗಳಲ್ಲಿ ಇಂದು ಅನೇಕ ಕ್ರೈಸ್ತರು ಭಾಗಿಯಾಗಿದ್ದಾರೆ, ಆದರೆ ಅವುಗಳು ಪಾಪವೆಂದು ಅರಿತುಕೊಳ್ಳುವುದಿಲ್ಲ. ನಾವು ಈ ರೀತಿಯ ಪಾಪದಲ್ಲಿದ್ದೇವೆ ಎಂದು ನಮಗೆ ತಿಳಿದಾಗ ನಮಗೆ ತ್ವರಿತವಾದ ಕ್ಷಮೆಯೂ ಇದೆ ಎಂದು ತಿಳಿದುಕೊಳ್ಳುವುದು ಎಷ್ಟು ಒಳ್ಳೆಯದು.

ಪಾಪಕ್ಷಮಾಪಣೆಯ ಮೊದಲ ಹೆಜ್ಜೆಯು ಪಾಪದ ಅರಿಕೆಯಾಗಿತ್ತು.

**ಯಾಜಕ 5:5 ಅವನು ಈ ವಿಷಯಗಳಲ್ಲಿ ಯಾವುದಾದರೂ ಒಂದರಲ್ಲಿ ದೋಷಿಯಾದಾಗ ತಾನು ಮಾಡಿದ ತಪ್ಪನ್ನು ಒಪ್ಪಿಕೊಳ್ಳಬೇಕು.**

ಪಾಪಕ್ಷಮಾಪಣೆಯ ಮೊದಲ ಹೆಜ್ಜೆಯು ಇಂದಿಗೂ ಪಾಪದ ಅರಿಕೆಯಾಗಿದೆ.

**1 ಯೋಹಾನ 1:9 ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿ ಸಕಲ ಅನೀತಿಯಿಂದ ನಮ್ಮನ್ನು ಶುದ್ಧಿಮಾಡುವನು.**

* *ಆರು ರೀತಿಯ ದೋಷಗಳು*

⅄ **ಆಣೆಯಿಡುವ ಪಾಪ**

ಇಂದಿನ ನ್ಯಾಯಾಲಯದಲ್ಲಿ ಇರುವಂತೆಯೇ ಇದು ಸತ್ಯವನ್ನು ಹೇಳುವುದರ ಕುರಿತಾಗಿದೆ.

ಒಬ್ಬ ವ್ಯಕ್ತಿಯು ಸತ್ಯವನ್ನು ತಿಳಿದಿದ್ದರೂ ಅದನ್ನು ಹಂಚಿಕೊಳ್ಳದಿದ್ದರೆ ಅದು ಪಾಪವಾಗಿತ್ತು.

**ಯಾಜಕ 5:1 ನ್ಯಾಯಾಧಿಕಾರಿಯು ತಿಳಿಸಬೇಕೆಂದು ಆಣೆ ಇಟ್ಟರೂ, ಯಾವನಾದರೂ ತಾನು ಕಂಡು ಕೇಳಿದ್ದನ್ನು ತಿಳಿಸದೆಹೋದರೆ ಅವನು ಪಾಪಕ್ಕೆ ಗುರಿಯಾಗುವನು.**

⅄ **ಅಶುದ್ಧತೆಯ ಪಾಪ**

ಇದು ಒಬ್ಬ ವ್ಯಕ್ತಿಯ ಕಣ್ಣಿಗೆ ಮರೆಯಾಗಿದ್ದರೂ ಹೆಣವನ್ನಾಗಲಿ ಅಥವಾ ಅಶುದ್ಧ ವಸ್ತುವನ್ನು ಅವನಿಗೆ ತಗಲಿದಾಗ ಆಗುವ ಪಾಪದ ಕುರಿತಾಗಿದೆ.

**Leviticus 5:2 ಯಾವನಿಗಾದರೂ ಅಶುದ್ಧವಾದ ಕಾಡುಮೃಗ, ಪಶು ಮತ್ತು ಜಂತು ಇವುಗಳ ಹೆಣವಾಗಲಿ ಅಥವಾ ಬೇರೆ ಯಾವ ಅಶುದ್ಧವಸ್ತುವಾಗಲಿ ತಗಲಿದರೆ, ದೇವರು ಅದನ್ನು ಅಶುದ್ಧ ಎಂದು ಪರಿಗಣಿಸುವುದರಿಂದ ಅವನಿಗೆ ತಿಳಿಯದೆ ಹೋದರೂ ಅವನು ಅಶುದ್ಧನೂ ಮತ್ತು ದೋಷಿಯೂ ಆಗಿರುವನು.**

ಅದು ತಿಳಿದುಬರುವಾಗ ಪಾಪವಾಗುತ್ತದೆ. ಇಂದು ನಮ್ಮ ಸುತ್ತಲಿರುವ ಪ್ರಪಂಚದಿಂದ ಬಹಳ ಅಶುದ್ಧತೆಯು ಬರುತ್ತದೆ. ನಾವು ಬಯಸದಿದ್ದರೂ ನಮ್ಮ ಕಣ್ಣಿಗೆ ಬೀಳುವ ವಿಷಯಗಳಿವೆ ಅಥವಾ ನಾವು ಇದು ಕೆಟ್ಟದ್ದೆಂದು ಅರಿಯದೆ ಮಾಡುವ ವಿಷಯಗಳಿವೆ.

⅄ **ಕೊಟ್ಟ ಭಾಷೆ ತಪ್ಪುವುದರ ಪಾಪ**

ದೇವರು ಕೊಟ್ಟ ಭಾಷೆ ತಪ್ಪುವುದನ್ನು ಗಂಭೀರವಾಗಿ ವ್ಯವಹರಿಸುತ್ತಾರೆ. ನಾವು ಕೊಟ್ಟ ಭಾಷೆಯನ್ನು ನೆರವೇರಿಸದಿದ್ದರೆ ದೇವರು ತನ್ನ ಮಾತನ್ನು ನೆರವೇರಿಸುವನು ಎಂಬುದನ್ನು ಸಹ ನಾವು ನಂಬಲು ಸಾಧ್ಯವಾಗುವುದಿಲ್ಲ.

ಇತರರು ನಮ್ಮ ಮಾತನ್ನು ಎಷ್ಟರ ಮಟ್ಟಿಗೆ ನಂಬುತ್ತಾರೋ ನಾವೂ ಸಹ ಅಷ್ಟರ ಮಟ್ಟಿಗೆ ಮಾತ್ರ ದೇವರ ವಾಕ್ಯವನ್ನು ನಂಬಲು ಸಾಧ್ಯ. ನಾವು ಕೊಟ್ಟ ಭಾಷೆಯನ್ನು ನೆರವೇರಿಸುವ ಜನರಾಗಲು ಕಲಿಯಬೇಕು. ನಾವು ಮಾಡುತ್ತೇವೆಂದು ಹೇಳಿದ್ದನ್ನು ಮಾಡಬೇಕು.

**ಯಾಜಕ 5:4 ಯಾವನಾದರೂ ಆಲೋಚಿಸದೆ ಮೇಲಿಗಾಗಲಿ ಅಥವಾ ಕೇಡಿಗಾಗಲಿ ಯಾವುದಾದರೂ ಆಣೆಯಿಟ್ಟುಕೊಂಡರೆ, ಅದು ಅವನಿಗೆ ತಿಳಿಯದೆ ಹೋದರೂ ತಿಳಿದುಬಂದಾಗ ಅವನು ಇದರಿಂದಲೂ ದೋಷಿಯಾಗುವನು.**

**ಅರಣ್ಯಕಾಂಡ 30:2 ಯಾವನಾದರೂ ಯೆಹೋವನಿಗೆ ಹರಕೆ ಮಾಡಿದರೆ ಇಲ್ಲವೆ ತಾನು ಅಶುದ್ಧವಾದುದನ್ನು ಮುಟ್ಟದೆ ಇರುವೆನೆಂದು ಆಣೆಯಿಟ್ಟುಕೊಂಡರೆ ಅವನು ತನ್ನ ಮಾತನ್ನು ಮೀರದೆ ಹೇಳಿದಂತೆಯೇ ನೆರವೇರಿಸಬೇಕು.**

⅄ **ಪವಿತ್ರ ವಸ್ತುಗಳ ಬಗ್ಗೆ ಪಾಪ**

**ಯಾಜಕ 5:15a ಯಾವನಾದರೂ ಯೆಹೋವನಿಗೆ ಸಲ್ಲಿಸಬೇಕಾದ ದೇವರ ವಸ್ತುಗಳನ್ನು ಸಮರ್ಪಿಸುವುದರಲ್ಲಿ ಅಜಾಗ್ರತೆಯಿಂದ ದ್ರೋಹಮಾಡಿ ದೋಷಕ್ಕೆ ಒಳಗಾದರೆ…**

ದೇವದರ್ಶನ ಗುಡಾರದ, ಹಬ್ಬಗಳ ಮತ್ತು ಅರ್ಪಣೆಗಳ ಎಲ್ಲಾ ವಸ್ತುಗಳು ಪವಿತ್ರವಾದದ್ದಾಗಿತ್ತು. ಇವುಗಳನ್ನು ಎಂದಿಗೂ ಮಾತಿನಲ್ಲಾಗಲಿ ಕ್ರಿಯೆಯಲ್ಲಾಗಲಿ ಹಗುರವಾಗಿ ಪರಿಗಣಿಸಬಾರದಾಗಿತ್ತು. ಇಂದು ಇದನ್ನು ಇವುಗಳಿಗೆ ಅನ್ವಯಿಸಬಹುದು :

- ✳ ಕರ್ತನಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸುಳ್ಳು ಹೇಳುವುದು - "ಕರ್ತನು ನಿನಗೆ ಇದನ್ನು ಹೇಳು ಎಂದು ನನಗೆ ತಿಳಿಸಿದರು" ಅಥವಾ "ನಾನು ದಿನಕ್ಕೆ ಅರ್ಧ ಘಂಟೆ ಪ್ರಾರ್ಥಿಸುತ್ತೇನೆ" ಎನ್ನುವುದು ಆದರೆ ಮಾಡದಿರುವುದು
- ✳ ದೇವರು ಕೊಟ್ಟಿರುವ ಪ್ರತಿಭೆಗಳನ್ನು ವ್ಯರ್ಥ ಮಾಡುವುದು
- ✳ ಕಾಣಿಕೆ ಮತ್ತು ದಶಮ ಭಾಗವನ್ನು ಕೊಡದಿರುವುದು

⅄ **ಅಜ್ಞಾನದ ಪಾಪಗಳು**

**ಯಾಜಕ 5:17 ಯಾವನಾದರೂ ಯೆಹೋವನು ನಿಷೇಧಿಸಿದ ಕಾರ್ಯಗಳಲ್ಲಿ ಯಾವುದನ್ನಾದರೂ ಮಾಡಿ ದೋಷಕ್ಕೆ ಒಳಗಾದರೆ, ಅದು ಅವನಿಗೆ ತಿಳಿಯದೆ ಹೋದರೂ ಅವನು ಅದರಿಂದ ಅಪರಾಧಿಯಾಗಿ ತನ್ನ ಪಾಪಫಲವನ್ನು ಅನುಭವಿಸಬೇಕು.**

⅄ **ಯೆಹೋವನಿಗೆ ವಿರುದ್ಧವಾದ ಪಾಪ**

ಈ ಕೆಳಗಿನ ಪಟ್ಟಿಯಲ್ಲಿರುವ ವಿಷಯಗಳು ಯೆಹೋವನ ವಿರುದ್ಧವಾದ ಪಾಪಗಳಾದರೂ ಅವೆಲ್ಲವೂ ಇತರರ ವಿರುದ್ಧ ಮಾಡಿದ ಪಾಪಗಳಾಗಿವೆ ಎಂಬುದನ್ನು ಗಮನಿಸುವುದು ಆಸಕ್ತಿ ಮೂಡಿಸುತ್ತದೆ. ಕ್ಷಮಾಪಣೆಯನ್ನು ಹೊಂದಬೇಕಾದರೆ, ಅಂದಿಗೂ ಮತ್ತು ಇಂದಿಗೂ ಅವುಗಳನ್ನು ನ್ಯಾಯವಾದ ಮಾಲೀಕನಿಗೆ ಹಿಂತಿರುಗಿಸುವುದು ಅವಶ್ಯವಾಗಿತ್ತು.

**ಯಾಜಕ 6:2-3 ಯಾವನಾದರೂ ಪಾಪಮಾಡಿ, ಯೆಹೋವನಿಗೆ ವಿರುದ್ಧವಾಗಿ,**

- **ಮತ್ತೊಬ್ಬನಿಂದ ತನ್ನ ವಶಕ್ಕೆ ಕೊಡಲ್ಪಟ್ಟ ವಸ್ತುವಿನ ವಿಷಯದಲ್ಲಾಗಲಿ ಅಥವಾ**
- **ತನ್ನ ಬಳಿಯಲ್ಲಿ ಇಡಲ್ಪಟ್ಟ ಅಡವಿಟ್ಟ ವಸ್ತುಗಳ ವಿಷಯದಲ್ಲಾಗಲಿ ಸುಳ್ಳಾಡುವುದರಿಂದ,**
- **ಮತ್ತೊಬ್ಬನನ್ನು ಮೋಸಗೊಳಿಸಿದ್ದರಿಂದ,**
- **ಮತ್ತೊಬ್ಬನು ಕಳೆದುಕೊಂಡದ್ದನ್ನು ತಾನು ಕಂಡು ಸುಳ್ಳಾಣೆಯಿಟ್ಟದ್ದರಿಂದ,**
- **ಇವುಗಳಲ್ಲಿ ಯಾವ ವಿಷಯದಲ್ಲಾದರೂ ಒಬ್ಬನು ಪಾಪಮಾಡಿದರೆ ಯೆಹೋವನಿಗೆ ದ್ರೋಹಿಯಾಗಿ ದೋಷಕ್ಕೆ ಒಳಗಾಗುವನು. ಅವನು ಪಾಪಮಾಡಿ ಅಪರಾಧಿಯಾಗಿರುವುದರಿಂದ ಅವನು ತಾನು ಕದ್ದದ್ದನ್ನು, ಮೋಸದಿಂದ ಪಡೆದದ್ದನ್ನು ತನ್ನ ವಶಕ್ಕೆ ತೆಗೆದುಕೊಂಡದ್ದನ್ನು, ತಾನು ಕಂಡುಕೊಂಡದ್ದನ್ನು, ಬೇರೆ ಯಾವುದರ ವಿಷಯದಲ್ಲಿ ಅವನು ಸುಳ್ಳಾಣೆಯಿಟ್ಟನೋ ಅದನ್ನು ಪೂರ್ತಿಯಾಗಿ ತಂದುಕೊಡಬೇಕಲ್ಲದೆ, ಐದನೆಯ ಒಂದು ಪಾಲನ್ನು ಹೆಚ್ಚಾಗಿ ಕೊಡಬೇಕು. ಅವನು ಪ್ರಾಯಶ್ಚಿತ್ತಯಜ್ಞವನ್ನು ಮಾಡುವ ದಿನದಲ್ಲೇ ಅದನ್ನು ನ್ಯಾಯವಾದ ಅದರ ಒಡೆಯನಿಗೆ ಹಿಂದಕ್ಕೆ ಕೊಡಬೇಕು.**

## ಸಾರಾಂಶ

ನಾವು ಗುಡಾರದ ವಿನ್ಯಾಸ, ಪೀಠೋಪಕರಣಗಳು ಮತ್ತು ಅರ್ಪಣೆಗಳನ್ನು ಅಧ್ಯಯನ ಮಾಡಿರುವಾಗ ಅವೆಲ್ಲವೂ ಮುಂಬರುವ ವಿಮೋಚಕನನ್ನು ಸೂಚಿಸಿತು ಎಂಬುದನ್ನು ಕಲಿತಿದ್ದೇವೆ. ಯೇಸು ಪ್ರತಿಯೊಂದು ಪ್ರತಿರೂಪವನ್ನು, ಸಂಕೇತವನ್ನು ಮತ್ತು ಪ್ರತಿಬಿಂಬವನ್ನು ನೆರವೇರಿಸಿದರು. ಅವರು ಪ್ರತಿಯೊಂದು ಅರ್ಪಣೆಗಳನ್ನೂ ನೆರವೇರಿಸಿದರು.

ನಾವು ಯೇಸು ಕ್ರಿಸ್ತನ ಮೇಲೆ ನಂಬಿಕೆಯಿಡುವಾಗ ಆತನು ನಮ್ಮ ಪರವಾಗಿ ಮಾಡಿರುವ ತ್ಯಾಗಬಲಿಯನ್ನು ನಾವು ಸ್ವೀಕರಿಸುತ್ತೇವೆ. ಆತನ ಮೇಲಿನ ನಂಬಿಕೆಯ ಮೂಲಕ ನಾವು ಪಾಪದಿಂದ ಬಿಡುಗಡೆಗೊಳಿಸಲ್ಪಟ್ಟಿದ್ದೇವೆ. ಯೆರೆಮೀಯನು ಪ್ರಲಾಪಗಳ ಪುಸ್ತಕದಲ್ಲಿ ಆನಂದಿಸಿದಂತೆ ನಾವೂ ಸಹ ಆನಂದಿಸಬಹುದು :

**ಪ್ರಲಾಪ 3:22,23 ನಾನು ಉಳಿದಿರುವುದು ಒಡಂಬಡಿಕೆಗೆ ಬದ್ಧವಾಗಿರುವ ಆತನ ನಂಬಿಗಸ್ತಿಕೆಯಿಂದಲೇ; ಯೆಹೋವನ ಕೃಪಾವರಗಳ ಕಾರ್ಯಗಳು ನಿಂತುಹೋಗವು. ದಿನದಿನವು ಹೊಸಹೊಸದಾಗಿ ಒದಗುತ್ತವೆ; ನಿನ್ನ ನಂಬಿಗಸ್ತಿಕೆಯು ದೊಡ್ಡದು!**

## ವಿಮರ್ಶೆಗಾಗಿ ಪ್ರಶ್ನೆಗಳು

1. ಗುಡಾರದ ಮೂರು ವಿಭಾಗಗಳು ಯಾವುದರ ಸಂಕೇತಗಳಾಗಿದ್ದವು ?

2. ಪರಿಶುದ್ಧ ಸ್ಥಳದಲ್ಲಿದ್ದ ಮೂರು ಪೀಠೋಪಕರಣಗಳು ಯಾವುದರ ಸಂಕೇತಗಳಾಗಿದ್ದವು?

3. ಸುವಾಸನೆಯನ್ನುಂಟುಮಾಡುವ ಮೂರು ಹೋಮಗಳನ್ನು ಮತ್ತು ಸುವಾಸನೆಯಲ್ಲದ ಎರಡು ಹೋಮಗಳನ್ನು ಪಟ್ಟಿ ಮಾಡಿರಿ.

## ಪಸ್ಕಹಬ್ಬದ ಹಾಗೂ ಯೇಸುವಿನ ಯಜ್ಞಬಲಿಯ ನಡುವೆ ಇರುವ ಸಮನಾಂತರಗಳು

| *ಹಳೆ ಒಡಂಬಡಿಕೆಯ ಉಲ್ಲೇಖ ವಚನ* | *ಹೊಸ ಒಡಂಬಡಿಕೆಯ ಉಲ್ಲೇಖ ವಚನ* |
|---|---|
| **1. ದೋಷಗಳನ್ನು ಪರಿಶೀಲಿಸುವ ಸಮಯ – 3 1/2 ದಿನಗಳು** | |
| ವಿಮೋ 12:3,5,6 | ಯೋಹಾನ 18:38 (3 1/2 ವರ್ಷಗಳು) |
| **2. ಪರಿಶೀಲಿಸಿದ ಕುರಿಮರಿಯು ಕೊಲ್ಲಲ್ಪಡಬೇಕು** | |
| ವಿಮೋ 12:6 | ಯೋಹಾನ 12:24; ಮತ್ತಾಯ 16:21 |
| **3. ಸುರಿಸಲ್ಪಟ್ಟ ರಕ್ತವು ದೇವರ ನ್ಯಾಯತೀರ್ಪಿನಿಂದ ತಪ್ಪಿಸುತ್ತದೆ** | |
| ವಿಮೋ 12:7,12,13 | ಇಬ್ರಿಯ 9:22, 12 ಯೋಹಾನ 1:7 |
| **4. ಮಾನವನು ರಕ್ಷಣೆ ಹೊಂದಬೇಕಾದರೆ ಕೆಲವೊಂದನ್ನು ಮಾಡಬೇಕು** | |
| ವಿಮೋ 12:22 | ಯೋಹಾನ 3:16 |
| **5. ದೇವಜನರು ಬಲಿಯ ಮಾಂಸವನ್ನು ಸ್ಮರಿಸುತ್ತಾ ತಿನ್ನಬೇಕು** | |
| ವಿಮೋ 12:8-10 | ಮಾರ್ಕ 14:22 |
| **6. ಯೇಸು, ಒಂದು ಕುರಿಮರಿಯ ಹಾಗೆ, ತನ್ನ ಪ್ರಾಣಕ್ಕಾಗಿ ಬೇಡಿಕೊಳ್ಳಲಿಲ್ಲ** | |
| ಯೆಶಾಯ 53:7 | ಮತ್ತಾಯ 27:13,14 |
| **7. ಯೇಸು ಪಸ್ಕಹಬ್ಬದ ಆಚರಣೆಯ ಸಮಯದಲ್ಲಿ ಮರಣ ಹೊಂದಿದರು** | |
| | ಮಾರ್ಕ 14:12; ಮಾರ್ಕ 15:6 |
| **8. ಕುರಿಮರಿಯ ಯಾವ ಮೂಳೆಯೂ ಮುರಿಯಲ್ಪಡಬಾರದು** | |
| ವಿಮೋ 12:46, ಅರಣ್ಯ 9:12 | ಯೋಹಾನ 19:33,36 |
| **9. ಅವಿಶ್ವಾಸಿಗಳು ಬಲಿಯ ಮಾಂಸವನ್ನು ತಿನ್ನಬಾರದು** | |
| ವಿಮೋ 12:43,45,48 | 1 ಕೊರಿಂಥ 10:21 |
| **10. ಕ್ರಿಸ್ತನು ನಮ್ಮ ಪಸ್ಕವೆಂದು ಕರೆಯಲ್ಪಟ್ಟಿದ್ದಾರೆ** | |
| | 1 ಕೊರಿಂಥ 5:7 |
| **11. ಜನರು ಪಸ್ಕಹಬ್ಬವನ್ನು ಆಚರಿಸಬೇಕಾದ ಅದೇ ಪಟ್ಟಣದಲ್ಲಿ ಯೇಸು ಮರಣ ಹೊಂದಿದರು** | |
| ಧರ್ಮೋ 16:2; 2 ಅರಸು 23:27 | ಮಾರ್ಕ 10:33 |

ಡಾ| ಜ್ಯಾಕ್ ಟುಲ್ಸ್ ರವರ ಸಂಕಲನ

## ಪಾಠ ಆರು

# *ಹಬ್ಬಗಳು, ರಾಜರುಗಳು ಮತ್ತು ಪುರೋಹಿತರುಗಳು*

### ಹಬ್ಬಗಳು

ಇಸ್ರಾಯೇಲಿನ ಹಬ್ಬಗಳು ಸಂತೋಷದ, ಸಂಭ್ರಮಾಚರಣೆಯ ಮತ್ತು ಕೃತಜ್ಞತೆ ಸಲ್ಲಿಸುವ ಸಮಯಗಳಾಗಿದ್ದವು. ಅವುಗಳು ಇಸ್ರಾಯೇಲ್ ರಾಷ್ಟ್ರದ ಇತಿಹಾಸದಲ್ಲಿ ನಡೆದ ಮಹಾನ್ ಘಟನೆಗಳ ಸ್ಮರಣೆಗಳಾಗಿದ್ದವು. ಆದರೆ ಅವುಗಳು ಭವಿಷ್ಯದಲ್ಲಿ ನಡೆಯುವ ಘಟನೆಗಳ ಪ್ರವಾದನಾತ್ಮಕ ಚಿತ್ರವೂ ಆಗಿದ್ದವು. ಒಟ್ಟು ಏಳು ಹಬ್ಬಗಳಿದ್ದವು.

- ಪಸ್ಕಹಬ್ಬ
- ಹುಳಿಯಿಲ್ಲದ ರೊಟ್ಟಿಯ ಹಬ್ಬ
- ಪ್ರಥಮಫಲಗಳ ಹಬ್ಬ
- ಪಂಚಾಶತ್ತಮದ ಹಬ್ಬ
- ತುತ್ತೂರಿಗಳ ಹಬ್ಬ
- ಪ್ರಾಯಶ್ಚಿತ್ತ ದಿನದ ಹಬ್ಬ
- ಗುಡಾರಗಳ ಹಬ್ಬ

### ಪಸ್ಕಹಬ್ಬ (ಪೆಸಕ್)

*ವಚನ ಉಲ್ಲೇಖಗಳು: ವಿಮೋ 12:1-14, 21-29; ಯಾಜಕ 23:4,5; ಅರಣ್ಯ 33:3; ಧರ್ಮೋ 16:1-8*

ಪಸ್ಕಹಬ್ಬವು ಈಜಿಪ್ಟಿನಲ್ಲಿ ಒಂದು ರಾತ್ರಿ ಪ್ರಾರಂಭವಾಯಿತು, ಅಂದು ಕುರಿಮರಿಯನ್ನು ಬಲಿ ಅರ್ಪಿಸಿ ಅದರ ರಕ್ತವನ್ನು ಹಿಸ್ಸೋಪ್ ಗಿಡದಿಂದ ಮನೆ ಬಾಗಿಲಿನ ನಿಲುವುಪಟ್ಟಿಗಳಿಗೆ ಹಚ್ಚುವಂತೆ ಇಸ್ರಾಯೇಲ್ ಜನರಿಗೆ ಸೂಚಿಸಲಾಗಿತ್ತು. ದೇವರ ಕುರಿಮರಿಯಾದ ಯೇಸು ಎಲ್ಲಾ ಮಾನವಕುಲದ ಪಾಪಗಳಿಗಾಗಿ ಶಿಲುಬೆಗೇರಿಸಲ್ಪಟ್ಟ ದಿನ ಅದು ನೆರವೇರಿತು. ಯೇಸು ಪ್ರಪಂಚದ ಅಡಿಪಾಯದ ಮೊದಲೇ ವಧಿಸಲ್ಪಟ್ಟ ಪಸ್ಕದ ಕುರಿಮರಿಯಾಗಿದ್ದರು.

ಫರೋಹನು ದೇವರ ಜನರನ್ನು ಹೋಗಗೊಡಿಸಬೇಕೆಂದು ಮೋಶೆ ಅವನಿಗೆ ಕೇಳಿಕೊಂಡನು. ಫರೋಹನು ಅದಕ್ಕೆ ವಿರೋಧಿಸಿದನು, ಆಗ ಒಂದಾದ ನಂತರ ಒಂದು ಬಾಧೆಗಳು ಈಜಿಪ್ಟಿನ ಮೇಲೆ ಬಂದವು. ಜೇಷ್ಠ ಪುತ್ರರ ಮರಣಗಳು ಅಂತಿಮವಾದ ಬಾಧೆಯಾಗಿತ್ತು.

**ಪಸ್ಕಹಬ್ಬದ ಬದಲಾಗಿ ಈಗ ಕರ್ತನ ಭೋಜನವನ್ನು ಆಚರಿಸಲಾಗುತ್ತದೆ.**

*ಮಾಂಸವನ್ನು ತಿನ್ನುವುದು ಕ್ರಿಸ್ತನ ದೇಹವನ್ನು ತಿನ್ನುವುದನ್ನು ಪ್ರತಿನಿಧಿಸುತ್ತದೆ ಯೇಸು ವಾಕ್ಯವಾಗಿದ್ದಾರೆ, ಇಂದು ನಾವು ದೇವರ ವಾಕ್ಯವನ್ನು ತಿನ್ನುವುದರಿಂದ ಆತನ ಮಾಂಸವನ್ನು ತಿನ್ನುತ್ತೇವೆ.*

**ಯೋಹಾನನು ಹೀಗೆ ಬರೆದನು:**

*ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರೊಂದಿಗಿತ್ತು; ಆ ವಾಕ್ಯವು ದೇವರಾಗಿತ್ತು... ಆ ವಾಕ್ಯವೆಂಬುವವನು ಮನುಷ್ಯನಾಗಿ ನಮ್ಮ ಮಧ್ಯದಲ್ಲಿ ವಾಸಮಾಡಿದನು.*

*(ಯೋಹಾನ 1:1,14a)*

ಒಂದು ತ್ಯಾಗಬಲಿಯ ಕುರಿಮರಿಯನ್ನು ಸಿದ್ಧಪಡಿಸುವಂತೆ ದೇವರು ಮೋಶೆಗೆ ಸೂಚಿಸಿದರು, ಮೋಶೆ ಅದನ್ನು ಜನರಿಗೆ ಸೂಚಿಸಿದನು. ಈ ಕುರಿಮರಿಯ ರಕ್ತವನ್ನು ಬಾಗಿಲಿನ ಎರಡೂ ನಿಲುವುಪಟ್ಟಿಗಳಿಗೆ ಮತ್ತು ಮೇಲ್ಭಾಗದಲ್ಲಿ ಹಿಸ್ಸೋಪ್ ಗಿಡವನ್ನು ಬಳಸಿ ಚಿಮುಕಿಸಬೇಕಾಗಿತ್ತು. ರಕ್ತವನ್ನು ಚಿಮುಕಿಸಿದ ರೀತಿಯು ಶಿಲುಬೆಯ ಚಿತ್ರಣದಂತಿತ್ತು. ರಕ್ತವನ್ನು ಬಳಿಯದೆ ಚಿಮುಕಿಸಬೇಕಾಗಿತ್ತು. ಇದು ಯೇಸು ಹೊಡೆಯಲ್ಪಟ್ಟಾಗ ಚಿಮ್ಮಿದ ರಕ್ತವನ್ನು ಪ್ರತಿನಿಧಿಸಿತು.

ಕುರಿಮರಿಯನ್ನು ಕಹಿಯಾದ ಸೊಪ್ಪಿನೊಂದಿಗೆ ಬೇಯಿಸಲಾಗುತ್ತಿತ್ತು ಮತ್ತು ಹುಳಿಯಿಲ್ಲದ ರೊಟ್ಟಿಯೊಂದಿಗೆ ತಿನ್ನಲಾಗುತ್ತಿತ್ತು. ಕಹಿಯಾದ ಸೊಪ್ಪುಗಳು ಯೇಸುವಿನ ಕಹಿಯಾದ ಹಿಂಸೆ ಮತ್ತು ಮರಣವನ್ನು ಪ್ರತಿನಿಧಿಸಿತು ಮತ್ತು ಹುಳಿಯಿಲ್ಲದ ರೊಟ್ಟಿಯು ಯೇಸುವಿನ ಪಾಪರಹಿತತೆಯ ಬಗ್ಗೆ ಮಾತನಾಡುತ್ತದೆ. ಇಡೀ ಕುಟುಂಬವು ಹೊರಡಲು ಸಿದ್ಧರಾಗಿ ನಿಂತುಕೊಂಡೇ ಈ ಬಲಿ ಅರ್ಪಣೆಯನ್ನು ತಿಂದರು.

ಇಸ್ರಾಯೇಲ್ ಜನರು ಈ ಬಲಿಯನ್ನು ಅರ್ಪಿಸುವ ಅಥವಾ ಅರ್ಪಿಸದಿರುವ ಸ್ವಾತಂತ್ರವನ್ನು ಹೊಂದಿದ್ದರು. ರಕ್ತವನ್ನು ನಂಬಿದವರು ಮತ್ತು ತಮ್ಮ ಬಾಗಿಲುಗಳ ನಿಲುವುಪಟ್ಟಿಗಳಿಗೆ ಅದನ್ನು ಹಚ್ಚಿದವರ ಚೊಚ್ಚಲ ಮಕ್ಕಳು ಮರಣ ಹೊಂದಲಿಲ್ಲ.

ಇಂದೂ ಸಹ ನಮಗೆ ಒಂದು ಆಯ್ಕೆ ಕೊಡಲ್ಪಟ್ಟಿದೆ. ನಾವು ದೇವರ ವಾಕ್ಯದ ಮೇಲೆ ನಂಬಿಕೆಯಿಟ್ಟು ಕ್ರಿಸ್ತನು ನಮಗಾಗಿ ಮಾಡಿರುವ ತ್ಯಾಗಬಲಿಯನ್ನು ಸ್ವೀಕರಿಸಬಹುದು ಅಥವಾ ತಿರಸ್ಕರಿಸಬಹುದು.

> **ಯೋಹಾನ 3:16-18 "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ಅಪರಾಧಿಯೆಂದು ಖಂಡಿಸಲಿಕ್ಕೆ ಕಳುಹಿಸಲಿಲ್ಲ. ಆತನನ್ನು ನಂಬುವವನಿಗೆ ನ್ಯಾಯತೀರ್ಪು ಆಗುವುದಿಲ್ಲ, ಆದರೆ ನಂಬದವನಿಗೆ ಆಗಲೇ ತೀರ್ಪಾಯಿತು. ಏಕೆಂದರೆ, ಅವನು ದೇವರ ಒಬ್ಬನೇ ಮಗನ ಹೆಸರಿನ ಮೇಲೆ ನಂಬಿಕೆ ಇಡಲಿಲ್ಲ.**

ಪಸ್ಕಹಬ್ಬದ ಆಚರಣೆಯು ದೇವರು ಇಸ್ರಾಯೇಲ್ ದೇಶವನ್ನು ಈಜಿಪ್ಟಿನಿಂದ ಹೊರತಂದದ್ದರ ಸ್ಮರಣೆಯಾಗಿತ್ತು. ಅದು ಈಜಿಪ್ಟಿನ ಗುಲಾಮತನದಿಂದ ರಕ್ಷಣೆ ಹೊಂದಿದ್ದರ ಸಂಕೇತವಾಗಿತ್ತು. ನಮಗೆ ಅದು ಪಾಪದ ಭೀಕರತೆಯಿಂದ ರಕ್ಷಣೆ ಹೊಂದಿದ್ದರ ಅರ್ಥವನ್ನು ಕೊಡುತ್ತದೆ.

ಈ ಒಂದು ಹಬ್ಬದಲ್ಲಿಯೇ ಕ್ರಿಸ್ತನನ್ನು ಹಲವು ವಿಧಗಳಲ್ಲಿ ಪ್ರತಿನಿಧಿಸಲಾಗಿದೆ, ಹಾಗಾಗಿ ಈ ಪಾಠದ ಆರಂಭದಲ್ಲಿ ಸಮಾನಾಂತರಗಳನ್ನು ತೋರಿಸಲು ನಾವು ಚಾರ್ಟ್ ಅನ್ನು ಸೇರಿಸಿದ್ದೇವೆ.

**ಹುಳಿಯಿಲ್ಲದ ರೊಟ್ಟಿ (ಹಗ್ ಹ ಮಾಟ್ಜೋ)**

*ಉಲ್ಲೇಖ ವಚನಗಳು: ವಿಮೋ 12:8,15-20,31-39; 13:3-10; ಯಾಜಕ 23:6-8; ಅರಣ್ಯ. 28:17-25; ಧರ್ಮೋ 16:1-8*

ಪಸ್ಕಹಬ್ಬ, ಹುಳಿಯಿಲ್ಲದ ರೊಟ್ಟಿ ಮತ್ತು ಪ್ರಥಮಫಲಗಳ ಹಬ್ಬಗಳು ಪ್ರಾರಂಭವಾಗುವುದಕ್ಕಿಂತ ಮೊದಲು ಮನೆಯ ಪ್ರತಿಯೊಂದು ಪಾತ್ರೆಗಳು ತೊಳೆಯಲ್ಪಡುತ್ತಿದ್ದವು, ಯಾಕೆಂದರೆ ಈ ಹಿಂದೆ ಮಾಡಿದ ಉಪಹಾರಗಳಿಂದ ಯಾವುದೇ ಹುಳಿಯು ಉಳಿದುಕೊಂಡಿರಬಾರದೆಂಬುದನ್ನು ನಿಶ್ಚಯಪಡಿಸಿಕೊಳ್ಳುವುದಕ್ಕಾಗಿ. ಈ ಶುದ್ಧೀಕರಣವು ಪೂರ್ಣಗೊಂಡ ನಂತರವೇ ಮಹಿಳೆಯರು ಹಬ್ಬಗಳಿಗೆ ತಯಾರಿಯನ್ನು ಆರಂಭಿಸಬಹುದಾಗಿತ್ತು.

ಹುಳಿಯಿಲ್ಲದ ರೊಟ್ಟಿಯ ಹಬ್ಬವು ಏಳು ದಿನಗಳವರೆಗೆ ಮುಂದುವರೆಯಿತು. ಅದು ಪಾಪವನ್ನು ತೊರೆಯುವ - ಪಾಪದಿಂದ ಬೇರ್ಪಡುವ - ದೇವರಿಗಾಗಿ ಶುದ್ಧಪಡಿಸಿಕೊಳ್ಳುವ - ಸಮಯದ ಸಂಕೇತವಾಗಿತ್ತು.

ಹುಳಿಯು ಯಾವಾಗಲೂ ಪಾಪದ, ಸುಳ್ಳು ಬೋಧನೆಯ ಅಥವಾ ವಂಚನೆಯ ಒಂದು ಪ್ರತಿರೂಪವಾಗಿದೆ. ಈ ಪೂರ್ವಸಿದ್ಧತೆಯ ಶುದ್ಧೀಕರಣವು ಒಂದು ಸ್ವಲ್ಪ ಹುಳಿಯು ಎಲ್ಲವನ್ನೂ ಹುಳಿಯಾಗಿಸುತ್ತದೆ ಎಂಬ ವಾಸ್ತವಾಂಶದ ಬಗ್ಗೆ ಮಾತನಾಡುತ್ತದೆ.

ಈ ಹಬ್ಬವು ಯೇಸುವಿನ ಪರಿಪೂರ್ಣವಾದ ಪಾಪರಹಿತ ತ್ಯಾಗಬಲಿಯ ಚಿತ್ರಣವಾಗಿದೆ. ಅಪೋಸ್ತಲನಾದ ಪೌಲನು ಈ ತ್ಯಾಗಬಲಿಯ ಮಹತ್ವವನ್ನು ನಮಗೆ ವಿವರಿಸುತ್ತಾರೆ :

**1 ಕೊರಿಂಥ 5:7,8 ನೀವು ಹುಳಿಯಿಲ್ಲದವರೆನಿಸಿಕೊಂಡದ್ದರಿಂದ ಹಳೇ ಹುಳಿಯನ್ನು ತೆಗೆದುಹಾಕಿ ಹೊಸ ಕಣಕದಂತಾಗಿರಿ. ಯಾಕೆಂದರೆ ಈಗಾಗಲೇ ನಮ್ಮ ಪಸ್ಕ ಯಜ್ಞದ ಕುರಿಮರಿಯು ಬಲಿಯಾಗಿದೆ; ಆ ಕುರಿಮರಿ ಯಾವುದೆಂದರೆ ಕ್ರಿಸ್ತನೇ. ಆದಕಾರಣ ನಾವು ಹಳೇ ಹುಳಿಯನ್ನು ಅಂದರೆ ದುರ್ಮಾರ್ಗತ್ವ ಮತ್ತು ದುಷ್ಟತ್ವ ಎಂಬ ಹುಳಿಯನ್ನು ಇಟ್ಟುಕೊಳ್ಳದೇ ಪ್ರಾಮಾಣಿಕತೆ ಹಾಗೂ ಸತ್ಯತೆ ಎಂಬ ಹುಳಿಯಿಲ್ಲದ ರೊಟ್ಟಿಯನ್ನೇ ತೆಗೆದುಕೊಂಡು ಹಬ್ಬವನ್ನು ಆಚರಿಸೋಣ.**

**ಸುಗ್ಗಿಯ ಹಬ್ಬ ಅಥವಾ ಪ್ರಥಮಫಲಗಳ ಹಬ್ಬ (ಬೀಕ್ಕುರಿನ್)**

*ವಚನ ಉಲ್ಲೇಖ: ಯಾಜಕ 23:9-14*

ಪ್ರಥಮಫಲಗಳ ಹಬ್ಬವು ಇಸ್ರಾಯೇಲ್ ಜನರು ವಾಗ್ದಾನ ದೇಶವನ್ನು ಪ್ರವೇಶಿಸಿದಾಗ ಆರಂಭವಾಯಿತು. ಅವರು ಅರಣ್ಯದಲ್ಲಿ ಅಲೆದಾಡುತ್ತಿದ್ದಾಗ ಬಿತ್ತುವುದು ಮತ್ತು ಕೊಯ್ಯುವುದು ಇರಲಿಲ್ಲ.

ವಸಂತಕಾಲದಲ್ಲಿ ಆಚರಿಸಲಾಗುವ ಈ ಹಬ್ಬವು ಸುಗ್ಗಿಯ ಪ್ರಥಮಫಲಗಳ ಸಿವುಡನ್ನು ಯೆಹೋವನ ಸನ್ನಿಧಿಯಲ್ಲಿ ನೈವೇದ್ಯವಾಗಿ ನಿವಾಳಿಸುವುದರ ಸುತ್ತ ಕೇಂದ್ರೀಕೃತವಾಗಿತ್ತು. ಪ್ರಥಮಪಲಗಳು ಯಾವಾಗಲೂ ಅತ್ಯುತ್ತಮವಾದದ್ದನ್ನು ಪ್ರತಿನಿಧಿಸುತ್ತದೆ. ಈ ಒಂದು ಸಿವುಡು ಇಡೀ

ಸುಗ್ಗಿಯನ್ನು ಪ್ರತಿನಿಧಿಸಿತು ಮತ್ತು ಮುಂಬರುವ ಸುಗ್ಗಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುವ ಸಮಯವಾಗಿತ್ತು.

ಅಪೋಸ್ತಲನಾದ ಪೌಲನು ಯೇಸುವನ್ನು ಪುನರುತ್ಥಾನದ ಪ್ರಥಮಫಲ ಎಂದು ಉಲ್ಲೇಖಿಸುತ್ತಾನೆ.

**1 ಕೊರಿಂಥ 15:20,21 ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದನು. ಸತ್ತುಹೋದವರಲ್ಲಿ ಪ್ರಥಮಫಲವಾದನು. ಮನುಷ್ಯನ ಮೂಲಕ ಮರಣ ಉಂಟಾದ ಕಾರಣ, ಮನುಷ್ಯನ ಮೂಲಕವೇ ಸತ್ತವರಿಗೆ ಪುನರುತ್ಥಾನವುಂಟಾಗಿದೆ.**

ಯೇಸು ಪರಲೋಕವನ್ನು ಪ್ರವೇಶಿಸಿದಾಗ, ಅವರು ತನ್ನ ನಂತರ ಪುನರುತ್ಥಾನಗೊಳ್ಳಲಿದ್ದ ಎಲ್ಲರನ್ನೂ ಪ್ರತಿನಿಧಿಸಿದರು. ಯೇಸು ಪ್ರಥಮಫಲವಾಗಿದ್ದಾರೆ ಮತ್ತು ನಾವು ಸುಗ್ಗಿಯಾಗಿದ್ದೇವೆ.

**ಪಂಚಾಶತ್ತಮ ಹಬ್ಬ (ಶವೋತ್)**

*ವಚನ ಉಲ್ಲೇಖಗಳು: ವಿಮೋ 19,20,24; ವಿಮೋ 23:16,17; ಯಾಜಕ 23:15-21; ಅರಣ್ಯ 28:26-31; ಧರ್ಮೋ 16:9-12*

ಮೋಶೆಯು ಮೊದಲು ಫರೋಹನ ಬಳಿಗೆ ಹೋದಾಗ ಇಸ್ರಾಯೇಲ್ ಜನರು ಹಬ್ಬವನ್ನು ಆಚರಿಸಲು ಅರಣ್ಯಕ್ಕೆ ಹೋಗಲು ಬಿಡಬೇಕೆಂದು ಅವನನ್ನು ಕೇಳಿಕೊಂಡನು. ಅವರು ಬಿಡುಗಡೆಗೊಂಡು ಸಿನಾಯಿ ಪರ್ವತಕ್ಕೆ ಬಂದಾಗ ಅಲ್ಲಿ ಪಾಳೆಯವನ್ನು ಹಾಕಿಕೊಂಡರು. ಅವರು ಅಲ್ಲಿರುವಾಗ ಯೆಹೋವನು ಅವರಿಗೆ ಧರ್ಮಶಾಸ್ತ್ರವನ್ನು ಮತ್ತು ಪಂಚಾಶತ್ತಮ ಹಬ್ಬವನ್ನು ಕೊಟ್ಟರು. ಅವರು ಈಜಿಪ್ಟನ್ನು ಬಿಟ್ಟ ಮೇಲೆ ಐವತ್ತು ದಿನಗಳು ಕಳೆದ ನಂತರ ಮೊದಲು ಈ ಹಬ್ಬವು ಆಚರಿಸಲಾಯಿತು.

ಪಂಚಾಶತ್ತಮ ಹಬ್ಬದ ಅರ್ಪಣೆಯು ಎರಡು ನೈವೇದ್ಯದ ರೊಟ್ಟಿಗಳಾಗಿದ್ದವು. ಗೋಧಿಯನ್ನು ಜಜ್ಜಿ ಪುಡಿಮಾಡುವದು ಯೇಸುವಿನ ಶ್ರಮೆ ಮತ್ತು ಮರಣವನ್ನು ಚಿತ್ರಿಸಿತು, ಅದರಿಂದ ಎರಡು ರೊಟ್ಟಿಗಳು ಬಂದವು - ಹಳೆ ಒಡಂಬಡಿಕೆಯ ವಿಶ್ವಾಸಿಗಳು ಮತ್ತು ಹೊಸ ಒಡಂಬಡಿಕೆಯ ವಿಶ್ವಾಸಿಗಳು.

ಹಳೆ ಒಡಂಬಡಿಕೆಯ ವಿಶ್ವಾಸಿಗಳು ತಮ್ಮ ವಿಮೋಚನೆಗಾಗಿ ಮುಂಬರುವ ಕ್ರಿಸ್ತನ ಮರಣವನ್ನು ಆತುಕೊಂಡರು. ಅವರು ಪರದೈಸಿನಿಂದ ಪರಲೋಕಕ್ಕೆ ವರ್ಗಾವಣೆಯಾಗಲು ಆತನ ಪುನರುತ್ಥಾನದ ಮೇಲೆ ಆತುಕೊಂಡರು. ಅವರ ನಂಬಿಕೆಯು ಯಾವಾಗಲೂ ಮುಂಬರುವ ಮೆಸ್ಸೀಯನ ಮೇಲಿತ್ತು. ನಮ್ಮ ನಂಬಿಕೆಯು ಹಿಂದಿರುಗಿ ನೋಡುವಂತದ್ದಾಗಿದೆ.

ಪಂಚಾಶತ್ತಮ ಹಬ್ಬವು ಪರಿಶುದ್ಧಾತ್ಮನ ಸುರಿಸಲ್ಪಡುವಿಕೆಯನ್ನು ಪ್ರತಿನಿಧಿಸುತ್ತದೆ. ಪರಿಶುದ್ಧಾತ್ಮನು ಪಂಚಾಶತ್ತಮ ದಿನದಂದು ಮಾನವಕುಲದ ಮೇಲೆ ಸುರಿಸಲ್ಪಟ್ಟಾಗ ಇದು ನೆರವೇರಿತು.

**ಅಪೋ 2:1-4 ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರೂ ಒಮ್ಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿಬಂದಿದ್ದರು. ಆಗ ಬಿರುಗಾಳಿ ಬೀಸುತ್ತಿದೆಯೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕುಳಿತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಉರಿಯುವ ಬೆಂಕಿಯೂ ವಿಂಗಡಿಸಿಕೊಳ್ಳುವ ನಾಲಿಗೆಗಳ ಹಾಗೆ ಅವರಿಗೆ ಕಾಣಿಸಿ ಕೊಂಡು ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕುಳಿತುಕೊಂಡವು. ಆಗ ಅವರೆಲ್ಲರೂ ಪವಿತ್ರಾತ್ಮಭರಿತರಾದರು, ಅವರಿಗೆ ಆ ಪವಿತ್ರಾತ್ಮನು ನೀಡಿದ ಶಕ್ತಿಯ ಪ್ರಕಾರ ಬೇರೆಬೇರೆ ಭಾಷೆಗಳಲ್ಲಿ ಮಾತನಾಡುವುದಕ್ಕೆ ಪ್ರಾರಂಭಿಸಿದರು.**

ಪರಿಶುದ್ಧಾತ್ಮನ ಆಗಮನವಾದಾಗ ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಟ್ಟಿದ್ದ ಧರ್ಮಶಾಸ್ತ್ರವು ಈಗ ನಮ್ಮ ಹೃದಯಗಳ ಮೇಲೆ ಬರೆಯಲ್ಪಟ್ಟಿತು. ಅಪೋಸ್ತಲ ಪೌಲನು ಮತ್ತು ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಇದನ್ನು ವಿವರಿಸುತ್ತಾನೆ.

**2 ಕೊರಿಂಥ 3:2,3** ಸ್ವತಃ "ನೀವೇ ನಮ್ಮ ಯೋಗ್ಯತಾ ಪತ್ರ" ಅದು ನಮ್ಮ **ಹೃದಯಗಳಲ್ಲೇ ಬರೆದಿದೆ ಆ ಪತ್ರವನ್ನು ಎಲ್ಲರೂ ಬಲ್ಲರು. ಎಲ್ಲರೂ ಓದುತ್ತಾರೆ. ನೀವು, ನಮ್ಮ ಸೇವೆಯ ಫಲವಾಗಿ, ಕ್ರಿಸ್ತನು ನಮ್ಮ ಕೈಯಿಂದ ಬರೆಸಿಕೊಟ್ಟ ಪತ್ರವಾಗಿದ್ದೀರೆಂಬದು ಪ್ರತ್ಯಕ್ಷಪಡಿಸಿದ್ದೀರಿ. ಅದು ಮಸಿಯಿಂದ ಬರೆದದ್ದಲ್ಲ. ಜೀವವುಳ್ಳ ದೇವರ ಆತ್ಮನಿಂದಲೇ ಬರೆದದ್ದು. ಕಲ್ಲಿನ ಹಲಿಗೆಯ ಮೇಲಲ್ಲಾ, ಮನುಷ್ಯನ ಹೃದಯಗಳೆಂಬ ಹಲಿಗೆಗಳ ಮೇಲೆ ಬರೆದದ್ದು.**

**ಇಬ್ರಿಯ 10:15,16 ಪವಿತ್ರಾತ್ಮನು ಸಹ ನಮಗೆ ಸಾಕ್ಷಿಕೊಡುವಾತನಾಗಿ, "ಆ ದಿನಗಳು ಬಂದ ಮೇಲೆ ನಾನು ಅವರ ಸಂಗಡ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು, ನನ್ನ ಆಜ್ಞೆಗಳನ್ನು ಅವರ ಹೃದಯಗಳಲ್ಲಿ ಇಡುವೆನು, ಅವರ ಮನಸ್ಸಿನಲ್ಲಿ ಅವುಗಳನ್ನು ಬರೆಯುವೆನು ಎಂದು ಕರ್ತನು ನುಡಿಯುತ್ತಾನೆ."**

**ತುತ್ತೂರಿಗಳ ಹಬ್ಬ (ರೊಶ್ ಹಶಾನ)**

*ವಚನ ಉಲ್ಲೇಖ: ಯಾಜಕ 23:23-25*

ತುತ್ತೂರಿಗಳ ಹಬ್ಬವನ್ನು ಅರ್ಥಮಾಡಿಕೊಳ್ಳಲು, ನಾವು ಮೊದಲು ಹಳೆಯ ಮತ್ತು ಹೊಸ ಒಡಂಬಡಿಕೆಯಲ್ಲಿ ತುತ್ತೂರಿಗಳ ಬಳಕೆಯನ್ನು ಅರ್ಥಮಾಡಿಕೊಳ್ಳಬೇಕು. ಮೋಶೆಯು ಸಿನಾಯ್ ಪರ್ವತದಿಂದ ಇಳಿದು ಬಂದಾಗ, ಜನರು ತಮ್ಮನ್ನು ತಾವು ಶುದ್ಧೀಕರಿಸಿಕೊಂಡರು. ನಂತರ ನಾವು ಹೀಗೆ ಓದುತ್ತೇವೆ,

**ವಿಮೋ 19:16 ಮೂರನೆಯ ದಿನದಲ್ಲಿ ಸೂರ್ಯೋದಯವಾಗಲು ಆ ಬೆಟ್ಟದ ಮೇಲೆ ಗುಡುಗು, ಮಿಂಚೂ, ಕಾರ್ಮುಗಿಲೂ, ತುತ್ತೂರಿಯ ಮಹಾಧ್ವನಿಯೂ ಉಂಟಾಗಲು ಪಾಳೆಯಲ್ಲಿದ್ದ ಜನರೆಲ್ಲರೂ ನಡುಗಿದರು.**

ಜನರು ಗುಡುಗು ಸಿಡಿಲಿನ ಶಬ್ಧಕ್ಕಾಗಲಿ ಅಥವಾ ಬೆಟ್ಟದ ಮೇಲೆ ಆವರಿಸಿದ ದಟ್ಟವಾದ ಮೋಡಕ್ಕಾಗಲಿ ಭಯಪಟ್ಟು ನಡುಗಲಿಲ್ಲ. ಗುಡುಗಿನ ಶಬ್ಧಕ್ಕಿಂತಲೂ ಬಲವಾಗಿ ಕೇಳಿಸುತ್ತಿದ್ದ ತುತ್ತೂರಿಯ ಶಬ್ಧಕ್ಕೆ ನಡುಗಿದರು.

ಯುದ್ಧದ ಕೋಲಾಹಲದ ನಡುವೆಯೂ ಇಡೀ ಪ್ರದೇಶಕ್ಕೆಲ್ಲಾ ಕೇಳಿಸುವಂತಹ ದೊಡ್ಡ ಶಬ್ಧವು ತುತ್ತೂರಿಗಿದೆ.

ತುತ್ತೂರಿಗಳು ಜನರನ್ನು ಆರಾಧನೆಗಾಗಿ ಕರೆಯಲು ಬಳಸಲ್ಪಡುತ್ತಿದ್ದವು. ಇಸ್ರಾಯೇಲ್ ದೇಶದಲ್ಲೆಲ್ಲಾ ತುತ್ತೂರಿಯ ಶಬ್ಧವು ಪದೇ ಪದೇ ಕೇಳಿಸಲ್ಪಡುತ್ತಿತ್ತು. ಅವುಗಳು "ಬನ್ನಿರಿ ಯೆಹೋವನನ್ನು ಆರಾಧಿಸಿರಿ" ಎಂದು ಘೋಷಿಸುತ್ತಿದ್ದವು.

ತುತ್ತೂರಿಗಳ ಶಬ್ಧವು ಯುದ್ಧದ ಕರೆಯಾಗಿ, ಸೇನೆಯು ಮುನ್ನುಗ್ಗಲು ಆದೇಶವಾಗಿ ಮತ್ತು ವಿಜಯದ ಸಂಭ್ರಮಾಚರಣೆಯಾಗಿ ಕೇಳಲ್ಪಡುತ್ತಿದ್ದವು.

ಯೆರೆಮೀಯನು ಹೀಗೆ ಬರೆದನು,

**ಯೆರೆ 51:27 ದೇಶದಲ್ಲಿ ಧ್ವಜವನ್ನೆತ್ತಿರಿ, ರಾಜ್ಯಗಳಲ್ಲೆಲ್ಲಾ ಕೊಂಬೂದಿರಿ, ಜನಾಂಗಗಳನ್ನು ಸಿದ್ಧಮಾಡಿರಿ!**

ತುತ್ತೂರಿಯ ಶಬ್ಧವು ಒಂದು ಘೋಷಣೆಯಾಗಿತ್ತು.

ಯೆಶಾಯನು ಹೀಗೆ ಬರೆದನು,

**ಯೆಶಾ 58:1** ಸ್ವರವೆತ್ತಿ ಕೂಗು, ಸಂಕೋಚಪಡಬೇಡ, **ಕೊಂಬಿನಂತೆ ಧ್ವನಿಗೈದು ನನ್ನ ಜನರಿಗೆ ಅವರ ದ್ರೋಹಗಳನ್ನು ತಿಳಿಯಪಡಿಸು. ಯಾಕೋಬ ವಂಶದವರಿಗೆ ಅವರ ಪಾಪಗಳನ್ನು ತಿಳಿಸು.**

ತುತ್ತೂರಿಗಳ ಶಬ್ಧವು ಅರ್ಥವುಳ್ಳದ್ದಾಗಿತ್ತು. ಪ್ರಕಟನೆಯ ಪುಸ್ತಕದಲ್ಲಿ ತುತ್ತೂರಿಯ ಶಬ್ಧಗಳನ್ನು ಮತ್ತು ಸ್ವರಗಳನ್ನು ಒಂದೇ ಅರ್ಥದಲ್ಲಿ ಉಪಯೋಗಿಸಲಾಗಿದೆ.

ತುತ್ತೂರಿಗಳು ಪ್ರವಾದನೆಯನ್ನು - ದೇವರ ವಾಕ್ಯವನ್ನು ಮಾತನಾಡುವುದನ್ನು - ಸೂಚಿಸುತ್ತದೆ.

ಇಂದು ತುತ್ತೂರಿಗಳ ಹಬ್ಬವು ಸುಗ್ಗಿಯ ಕರೆಯಾಗಿದೆ. ನಾವು ದೇವರ ವಾಕ್ಯವನ್ನು ನಮ್ಮ ಸುತ್ತಲಿರುವ ಜನರಿಗೆ, ನಮ್ಮ ದೇಶಕ್ಕೆ ಮತ್ತು ಪ್ರಪಂಚದ ಇತರೆ ದೇಶಗಳಿಗೆ ಹೇಳುವುದರ ಮೂಲಕ ಅದನ್ನು ಆಚರಿಸುತ್ತೇವೆ. ತುತ್ತೂರಿಯ ಶಬ್ದವು ವಿಶ್ವಾಸಿಗಳ ಧ್ವನಿಯಾಗಿದೆ. ಆ ಧ್ವನಿಯು ಯೇಸುವೇ ದೇವರ ಮಗನು - ಅವರು ನಮ್ಮ ರಕ್ಷಣೆಗಾಗಿ ಮನುಷ್ಯನಾಗಿ ಈ ಲೋಕಕ್ಕೆ ಬಂದರು - ಮತ್ತು ಅವರನ್ನು ಅಂಗೀಕರಿಸುವ ಎಲ್ಲರೂ ದೇವರ ಮಕ್ಕಳಾಗಬಹುದು ಎಂಬುದನ್ನು ಸಾರಿ ಹೇಳುತ್ತದೆ.

ಕ್ರೈಸ್ತ ವಿಶ್ವಾಸಿಗಳು ಪ್ರತಿದಿನ ಈ ಹಬ್ಬವನ್ನು ಆಚರಿಸಬೇಕು, ಆದರೂ ಒಂದು ಅಂತಿಮವಾದ ನೆರವೇರುವಿಕೆಯು ಇನ್ನೂ ಬರಲಿದೆ. ಒಂದು ಅಂತಿಮವಾದ ತುತ್ತೂರಿ ಕರೆಯು ಕೇಳಿಸಲಿದೆ. ಅಪೋಸ್ತಲನು ಇದರ ಬಗ್ಗೆ ಬರೆದನು.

**1 ಕೊರಿಂಥ 15:51-54 ನೋಡಿರಿ! ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಾನು ನಿಮಗೆ ತಿಳಿಸುತ್ತೇನೆ, ನಾವೆಲ್ಲರೂ ಸಾಯುವುದಿಲ್ಲ, ಮಾರ್ಪಡುವೆವು.**

**ಕಡೆ ತುತ್ತೂರಿಯ ಧ್ವನಿಯು ಮೊಳಗುವಲ್ಲಿ, ಕ್ಷಣಮಾತ್ರದಲ್ಲಿ, ರೆಪ್ಪೆಬಡಿಯುವಷ್ಟರೊಳಗಾಗಿ ನಾವೆಲ್ಲರೂ ಮಾರ್ಪಡುವೆವು.**

**ಹೌದು, ತುತ್ತೂರಿಯು ಮೊಳಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ರೂಪಾಂತರ ಹೊಂದುವೆವು. ನಶಿಸುವಂಥ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವುದೂ, ಮರಣಕ್ಕೆ ಅಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದೂ ಅಗತ್ಯವಾಗಿದೆ. ನಶಿಸಿಹೋಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಂಡಾಗ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ಬರೆದಿರುವ ಮಾತು ನೆರವೇರುವುದು.**

ಯೇಸು ಪಸ್ಕಹಬ್ಬದ ದಿನದಂದು ಮರಣ ಹೊಂದಿ ಪಸ್ಕಹಬ್ಬದ ನೆರವೇರುವಿಕೆಯಾದರು. ಪರಿಶುದ್ಧಾತ್ಮನು ಪಂಚಾಶತ್ತಮ ದಿನದಂದು ಬಂದು ಆ ಹಬ್ಬದ ನೆರವೇರುವಿಕೆಯಾದರು. ಯೇಸು ತುತ್ತೂರಿಗಳ ಹಬ್ಬದ ದಿನದಂದ ಹಿಂತಿರುಗಿ ಬರಲಿದ್ದಾರೆ ಎಂದು ಅನೇಕರು ನಂಬುತ್ತಾರೆ ಯಾಕೆಂದರೆ ಆ ಹಬ್ಬವು ಇನ್ನೂ ನೆರವೇರಿಲ್ಲ.

### ಪ್ರಾಯಶ್ಚಿತ್ತದ ದಿನ (ಯೊಮ್ ಕಿಪ್ಪೂರ್)

*ವಚನ ಉಲ್ಲೇಖ: ಯಾಜಕ 23:26-32*

ಪ್ರಾಯಶ್ಚಿತ್ತ ದಿನವು ಇಡೀ ವರ್ಷದ ಅತ್ಯಂತ ಅದ್ಭುತವಾದ ಪವಿತ್ರ ಹಬ್ಬವಾಗಿತ್ತು. ಅದು ಪ್ರತಿ ವರ್ಷ ಒಂದು ಬಾರಿ ಪ್ರಧಾನ ಯಾಜಕನು

ಜನರಿಗಾಗಿ ಯಜ್ಞಬಲಿ ಅರ್ಪಿಸುವದಕ್ಕಾಗಿ ಅತೀ ಪರಿಶುದ್ಧ ಸ್ಥಳವನ್ನು ಪ್ರವೇಶಿಸುವ ಸಮಯವಾಗಿತ್ತು.

✱ *ಸುರಿಸಲ್ಪಟ್ಟ ರಕ್ತ*

ಪ್ರಾಯಶ್ಚಿತ್ತ ಎಂದರೆ ಕುರಿಮರಿಯ ರಕ್ತದಿಂದ ಪಾಪಗಳು ಮುಚ್ಚಲ್ಪಡುವುದಾಗಿದೆ. ಅದು ದೇವರ ಪರಿಪೂರ್ಣವಾದ ಕುರಿಮರಿಯಾದ - ಯೇಸುವಿನ ರಕ್ತದಿಂದ ಆಗುವ ಪಾಪ ಪರಿಹಾರವನ್ನು ಎದುರು ನೋಡಿತು.

ಪ್ರತಿವರ್ಷ ಪ್ರಾಯಶ್ಚಿತ್ತ ದಿನದಂದು ಪ್ರಧಾನ ಯಾಜಕನು ಯಾವುದೇ ದೋಷ ಕಳಂಕವಿಲ್ಲದ ಒಂದು ಕುರಿಮರಿಯ ರಕ್ತವನ್ನು ಸುರಿಸುವನು. ಈ ರಕ್ತವು ಪರದೆಯೊಳಗೆ ಕೊಂಡೊಯ್ಯಲ್ಪಟ್ಟು ಜನರ ಪಾಪಗಳಿಗಾಗಿ ಕೃಪಾಸನದ ಮೇಲೆ ಚಿಮುಕಿಸಲ್ಪಡುತ್ತಿತ್ತು.

ದೋಷವಿಲ್ಲದ ಕುರಿಮರಿಯ ರಕ್ತವು ಸುರಿಸಲ್ಪಡುವುದು ಶಿಲುಬೆಯ ಮೇಲೆ ಯೇಸು ನಮಗಾಗಿ ಮಾಡಿದ ತ್ಯಾಗಬಲಿಯನ್ನು ಪ್ರತಿನಿಧಿಸುತ್ತದೆ. ದೇವರ ಕುರಿಮರಿಯಾದ ಯೇಸು ತನ್ನ ರಕ್ತವನ್ನು ಸುರಿಸಿ ನಮ್ಮನ್ನು ಪಾಪದ ಗುಲಾಮತನ ಮತ್ತು ದಂಡದಿಂದ ವಿಮೋಚಿಸಿದ್ದಾರೆ.

ಹಳೆ ಒಡಂಬಡಿಕೆಯಡಿಯಲ್ಲಿ, ಈ ಯಜ್ಞಬಲಿ ಮತ್ತು ರಕ್ತದ ಚಿಮುಕಿಸುವಿಕೆಯು ಶಿಲುಬೆಯ ಕಡೆಗೆ ನಂಬಿಕೆಯಿಂದ ಎದುರುನೋಡಿದ ಜನರಿಗಾಗಿ ಪಾಪ ಪರಿಹಾರವನ್ನು ಒದಗಿಸಿತು. ಹಳೆ ಒಡಂಬಡಿಕೆಯ ವಿಶ್ವಾಸಿಗಳು, ಅಬ್ರಹಾಮನಂತೆ, ದೇವರನ್ನು ನಂಬಿದರು ಮತ್ತು ಅದು ಅವರಿಗೆ ನೀತಿಯಾಗಿ ಎಣಿಸಲಾಯಿತು.

ಹೊಸ ಒಡಂಬಡಿಕೆಯಡಿಯಲ್ಲಿ, ಪಾಪವು ಮುಚ್ಚಲ್ಪಟ್ಟಿದೆ ಎಂಬ ಪದವನ್ನು ಇನ್ನು ಮುಂದೆ ಬಳಸಲಾಗಿಲ್ಲ. ಕ್ರಿಸ್ತನ ಶ್ರೇಷ್ಟವಾದ ಶಾಶ್ವತ ತ್ಯಾಗಬಲಿದಾನದ ಪೂರ್ಣಗೊಂಡ ಕೆಲಸದ ಆಧಾರದ ಮೇಲೆ ನಮ್ಮ ಪಾಪಗಳು ಇನ್ನು ಮುಂದೆ ಮುಚ್ಚಲ್ಪಟ್ಟಿಲ್ಲ ಬದಲಾಗಿ ಅವುಗಳು ಪರಿಹಾರವಾಗಿವೆ, ಹೊತ್ತುಕೊಳ್ಳಲ್ಪಟ್ಟಿವೆ, ತೆಗೆದುಹಾಕಲ್ಪಟ್ಟಿವೆ, ರದ್ದುಗೊಳಿಸಲ್ಪಟ್ಟಿವೆ.

**ಕೀರ್ತನೆ 103:12 ಪೂರ್ವಕ್ಕೂ, ಪಶ್ಚಿಮಕ್ಕೂ ಎಷ್ಟು ದೂರವೋ, ನಮ್ಮ ದ್ರೋಹಗಳನ್ನು ನಮ್ಮಿಂದ ತೆಗೆದು ಅಷ್ಟು ದೂರ ಮಾಡಿದ್ದಾನೆ.**

✱ *ದೋಷವನ್ನು ಹೊರುವ ಕುರಿ*

ನಮ್ಮ ಪಾಪಪರಿಹಾರವನ್ನು ಪ್ರಾಯಶ್ಚಿತ್ತ ದಿನದ ಎರಡನೆಯ ದೋಷಮುಕ್ತ ಕುರಿಮರಿಯು ಪ್ರತಿನಿಧಿಸಿತು. ಈ ಕುರಿಮರಿಯ ಮೇಲೆ ಪ್ರಧಾನ ಯಾಜಕನು ತನ್ನ ಕೈಗಳನ್ನಿರಿಸುವುದರ ಮೂಲಕ ಜನರ ಪಾಪಗಳನ್ನು ಅದರ ಮೇಲೆ ಹೊರಿಸಿದನು. ನಂತರ ಆ ಕುರಿಮರಿಯನ್ನು ತೆಗೆದುಕೊಂಡು ಹೋಗಿ ಅರಣ್ಯದಲ್ಲಿ ಬಿಡುತ್ತಿದ್ದರು. ಇದು ಜನರ ಪಾಪಗಳನ್ನು ಹೊತ್ತುಕೊಂಡು ಹೋಗಲಿದ್ದ ಮುಂಬರುವ ದೇವರ ಕುರಿಮರಿಯ ಪ್ರತಿರೂಪವಾಗಿತ್ತು.

**ಯಾಜಕ 16:10,21,22 ಯಾವ ಹೋತ ಅಜಾಜೇಲನದೆಂದು ಗೊತ್ತಾಗುವುದೋ ಅದನ್ನು ಯೆಹೋವನ ಸನ್ನಿಧಿಯಲ್ಲಿ ಸಜೀವವಾಗಿಯೇ ನಿಲ್ಲಿಸಿ, ಅದರ ಮೇಲೆ ದೋಷವನ್ನು ಹೊರಿಸಿ ಅರಣ್ಯಕ್ಕೆ ಅಜಾಜೇಲನಿಗಾಗಿ ಬಿಡಬೇಕು.**

**ಅವನು [ಆರೋನನು] ಅದರ ತಲೆಯ ಮೇಲೆ ಎರಡು ಕೈಗಳನ್ನು ಇಟ್ಟು, ಇಸ್ರಾಯೇಲರ ಎಲ್ಲಾ ಪಾಪಗಳನ್ನು, ದ್ರೋಹಗಳನ್ನು ಮತ್ತು ಅಪರಾಧಗಳನ್ನು ಯೆಹೋವನಿಗೆ ಅರಿಕೆಮಾಡಿ ಆ ಹೋತದ ತಲೆಯ ಮೇಲೆ ಹೊರಿಸಿ, ಅದನ್ನು ಆ ಕೆಲಸಕ್ಕೆ ನೇಮಕವಾದವನ ಕೈಯಿಂದ ಅರಣ್ಯಕ್ಕೆ ಕಳುಹಿಸಿಬಿಡಬೇಕು. ಆ ಹೋತ ಅವರ ಎಲ್ಲಾ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡು ನಿರ್ಜನವಾದ ಪ್ರದೇಶಕ್ಕೆ ಹೋಗುವಂತೆ ಆ ಮನುಷ್ಯನು ಅದನ್ನು ಅರಣ್ಯಕ್ಕೆ ತೆಗೆದುಕೊಂಡುಹೋಗಿ ಅಲ್ಲೇ ಬಿಟ್ಟುಬಿಡಬೇಕು.**

ಪ್ರಾಯಶ್ಚಿತ್ತ ದಿನದಂದು ತ್ಯಾಗದ ಕುರಿಮರಿಯು ಯೇಸುವಿನ ತ್ಯಾಗಬಲಿಯ ಪ್ರತಿರೂಪವಾಗಿದ್ದಂತೆಯೇ ದೋಷ ಹೊರುವ ಕುರಿಮರಿಯೂ ಸಹ ಜನರ ಪಾಪಗಳನ್ನು ಹೊರುವ ಯೇಸುವಿನ ಕಾರ್ಯದ ಪ್ರತಿರೂಪವಾಗಿತ್ತು.

**ಯೋಹಾನ 1:29b ... "ಅಗೋ, ಲೋಕದ ಪಾಪವನ್ನು ನಿವಾರಣೆ ಮಾಡಲು ದೇವರು ನೇಮಿಸಿದ ಯಜ್ಞದಕುರಿಮರಿ.**

ಯೇಸು ಶಿಲುಬೆಯ ಮೇಲೆ ನಮಗಾಗಿ ಪ್ರಾಣ ಕೊಟ್ಟದ್ದರ ಮೂಲಕ ನಮ್ಮ ಯಜ್ಞಬಲಿಯಾದರು. ಈ ಪಾಪವನ್ನು ಹೊತ್ತುಕೊಳ್ಳುವ ಕಾರ್ಯವು ಪಾಪಪ್ರಾಯಶ್ಚಿತ್ತದ ಒಂದು ಭಾಗವಾಗಿತ್ತು.

✱ *ನಮ್ಮ ಬದಲು*

ನಮ್ಮ ಸ್ಥಾನವನ್ನು ತೆಗೆದುಕೊಳ್ಳುವ ಯೇಸುವಿನ ಕಾರ್ಯವನ್ನು ಯೆಶಾಯನು ಪ್ರವಾದಿಸಿದ್ದನು.

**ಯೆಶಾಯ 53:8-12 ಹಿಂಸೆಯ ನ್ಯಾಯದಿಂದ ಕೊಲ್ಲಲ್ಪಟ್ಟನು, ಆಹಾ, ಇವನು ಜೀವಲೋಕದಿಂದ ತೆಗೆದುಹಾಕಲ್ಪಟ್ಟಿದ್ದಾನೆ.**

**ನಮ್ಮ ಜನಗಳ ದ್ರೋಹಗಳ ದೆಸೆಯಿಂದ ಈ ಪೆಟ್ಟು ಅವನ ಮೇಲೆ ಬಿತ್ತಲ್ಲಾ ಎಂದು ಅವನ ಕಾಲದವರಲ್ಲಿ ಯಾರು ಮನಮುಟ್ಟಿ ಮರುಗಿದರು? ಅವನು ಯಾವ ಅನ್ಯಾಯವನ್ನು ಮಾಡದಿದ್ದರೂ, ಅವನ ಬಾಯಲ್ಲಿ ಯಾವ ವಂಚನೆಯು ಇಲ್ಲದಿದ್ದರೂ,**

**ಅವನು ಸತ್ತಾಗ ದುಷ್ಟರ ಮಧ್ಯೆ ಪುಷ್ಟರ ನಡುವೆ ಅವನನ್ನು ಹೂಣಿಟ್ಟರು.**

**ಅವನನ್ನು ಜಜ್ಜುವುದು ಯೆಹೋವನ ಸಂಕಲ್ಪವಾಗಿತ್ತು. ಆತನು ಅವನನ್ನು ವ್ಯಾಧಿಯಿಂದ ಬಾಧಿಸಿ ಹೀಗೆಂದುಕೊಂಡನು, ಇವನು ತನ್ನ ಆತ್ಮವನ್ನು ಪ್ರಾಯಶ್ಚಿತ್ತಯಜ್ಞಕ್ಕಾಗಿ ಒಪ್ಪಿಸಿದ ಮೇಲೆ ತನ್ನ ಸಂತಾನವನ್ನು ನೋಡುವನು, ಚಿರಂಜೀವಿಯಾಗುವನು,**

**ನನ್ನ ಸಂಕಲ್ಪವು ಇವನ ಕೈಯಿಂದ ನೆರವೇರುವುದು; ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು; ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ ಮೂಲಕ ಬಹು ಜನರನ್ನು ಧರ್ಮಮಾರ್ಗಕ್ಕೆ ತರುವನು; ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು.**

**ಇವನು ಇಂಥವನಾಗಿರುವುದರಿಂದ ನಾನು ಇವನಿಗೆ ದೊಡ್ಡವರ ಸಂಗಡ ಪಾಲು ಕೊಡುವೆನು, ಇವನು ಬಲಿಷ್ಠರೊಡನೆ ಸೂರೆಯನ್ನು ಹಂಚಿಕೊಳ್ಳುವನು; ತನ್ನ ಪ್ರಾಣವನ್ನು ಧಾರೆಯೆರೆದು, ಮರಣಹೊಂದಿ, ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು, ಬಹು ಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆ ಮಾಡಿದನು.**

ಯೇಸು ನಮ್ಮ ಪಾಪಗಳನ್ನು ಪಾತಾಳದವರೆಗೂ ಹೊತ್ತುಕೊಂಡು ಹೋಗುವರು ಎಂದು ದಾವೀದನು ಸಹ ಮುಂತಿಳಿಸಿದನು.

**ಕೀರ್ತನೆ 88:3-7 ನನ್ನ ಜೀವವು ಕಷ್ಟಗಳಿಂದ ತುಂಬಿಹೋಯಿತು; ನನ್ನ ಪ್ರಾಣವು ಪಾತಾಳಕ್ಕೆ ಹತ್ತಿರವಾಯಿತು. ಸಮಾಧಿಯಲ್ಲಿ ಸೇರುವವರೊಳಗೆ ಎಣಿಸಲ್ಪಟ್ಟಿದ್ದೇನೆ;ನಿತ್ರಾಣ ಮನುಷ್ಯನಂತಿದ್ದೇನೆ.**

**ಸತ್ತವನ ಹಾಗೆ ನನ್ನನ್ನು ಹೊರಗೆ ಹಾಕಿದ್ದಾರೆ; ಹತನಾದವನಂತೆ ಸಮಾಧಿಯಲ್ಲಿ ಬಿದ್ದಿದ್ದೇನೆ. ಹತರಾದವರು ನಿನ್ನ ಪರಿಪಾಲನೆ ಇಲ್ಲದವರು; ಅಂಥವರನ್ನು ನೀನು ನೆನಪು ಮಾಡಿಕೊಳ್ಳುವುದಿಲ್ಲ.**

**ಅಧೋಲೋಕದಲ್ಲಿಯೂ, ಗಾಢಾಂಧಕಾರದಲ್ಲಿಯೂ, ಅಗಾಧ ಸ್ಥಳದಲ್ಲಿಯೂ ನನ್ನನ್ನು ತಳ್ಳಿಬಿಟ್ಟಿದ್ದಿ. ನಿನ್ನ ಕೋಪಭಾರವು ನನ್ನನ್ನು ಕುಗ್ಗಿಸಿಬಿಟ್ಟಿದೆ; ನಿನ್ನ ಎಲ್ಲಾ ತೆರೆಗಳಿಂದ ನನ್ನನ್ನು ಬಾಧಿಸಿದ್ದಿ.**

ನಮ್ಮ ಅಪರಾಧಗಳು ಅಡಗಿಸಲ್ಪಟ್ಟಿವೆ.

**ಮೀಕ 7:19 ಆತನು ಮತ್ತೊಮ್ಮೆ ನಮ್ಮನ್ನು ಕನಿಕರಿಸುವನು. ನಮ್ಮ ಅಪರಾಧಗಳನ್ನು ಅಣಗಿಸುವವನು. ದೇವರೇ, ನಿನ್ನ ಜನರ ಪಾಪಗಳನ್ನೆಲ್ಲಾ ಸಮುದ್ರದ ತಳಕ್ಕೆ ಬೀಸಾಡಿಬಿಡುವಿ.**

ನಮ್ಮ ಪಾಪಗಳನ್ನು ಯೇಸು ಪಾತಾಳಕ್ಕೆ ಹೊತ್ತುಕೊಂಡು ಹೋದಾಗ ಅವುಗಳು ಸಂಪೂರ್ಣವಾಗಿ ಅಡಗಿಸಲ್ಪಟ್ಟವು, ನಾಶವಾದವು, ಪರಿಹಾರವಾದವು ಮತ್ತು ಅಸ್ತಿತ್ವದಲ್ಲಿಲ್ಲದಂತಾದವು. ನಂತರ ಯೇಸು ಸತ್ತವರೊಳಗಿಂದ ಎದ್ದು ಬಂದು ಪರಲೋಕದಲ್ಲಿರುವ ಪರದೆಯೊಳಗೆ ಹೋಗಿ ತನ್ನ ರಕ್ತವನ್ನು ಅರ್ಪಿಸಲು ತಂದೆಯ ಬಳಿಗೆ ಏರಿ ಹೋದರು. ಆ ಕ್ಷಣದಲ್ಲಿ, ನಮ್ಮ ವಿಮೋಚನೆಯು ಪೂರ್ಣಗೊಂಡ ಕೆಲಸವಾಗಿತ್ತು.

**ಇಬ್ರಿಯ 9:11,12 ಕ್ರಿಸ್ತನಾದರೋ ಈಗ ದೊರೆತಿರುವ ಶುಭಗಳ ಮಹಾಯಾಜಕನಾಗಿ ಬಂದು, ಮನುಷ್ಯರ ಕೈಯಿಂದ ಕಟ್ಟಲ್ಪಡದಂಥದೂ, ಇಹಲೋಕದ ಸೃಷ್ಟಿಗೆ ಸಂಬಂಧಪಡದಂಥದೂ, ಶ್ರೇಷ್ಠವಾದುದೂ, ಬಹು ಪರಿಪೂರ್ಣವಾದುದೂ ಆಗಿರುವ ಗುಡಾರದಲ್ಲಿ ಸೇವೆ ಮಾಡುವವನಾಗಿ, ಹೋತಗಳ ಮತ್ತು ಹೋರಿಕರುಗಳ ರಕ್ತದ ಮೂಲಕವಲ್ಲ ತನ್ನ ಸ್ವಂತ ರಕ್ತದ ಮೂಲಕ ಒಂದೇ ಸಾರಿ ಎಲ್ಲರಿಗೋಸ್ಕರ ಪರಿಶುದ್ಧ ಸ್ಥಳದೊಳಗೆ ಪ್ರವೇಶಿಸಿ ನಿತ್ಯ ವಿಮೋಚನೆಯನ್ನು ಸಾಧಿಸಿದನು.**

- ಆತನ ತ್ಯಾಗಬಲಿಯ ಮೂಲಕ ನಮ್ಮ ರಕ್ಷಣೆಯು ಪೂರ್ಣವಾಯಿತು.
- ಆತನ ಮೂಲಕ ನಮಗೆ ಪಾಪಕ್ಷಮಾಪಣೆಯಿದೆ.
- ಆತನ ಮೂಲಕ ನಾವು ಪಾಪದ ದಂಡನೆಯಿಂದ ಬಿಡುಗಡೆ ಹೊಂದಿದ್ದೇವೆ.

ನಮ್ಮ ಪಾಪಗಳಿಗೆ ಪರಿಹಾರವನ್ನು ಒದಗಿಸುವ ಯೇಸುವಿನ ಕಾರ್ಯವು ಪೂರ್ಣವಾಗಿದೆ. ಈಗ ನಾವು ಜೀವಿಸುವಾಗ ಅದನ್ನು ನಂಬಿಕೆಯಿಂದ ಸ್ವೀಕರಿಸುತ್ತೇವೆ.

ಪ್ರಾಯಶ್ಚಿತ್ತ ದಿನವು ಇಸ್ರಾಯೇಲ್ ದೇಶವು ಯೇಸುವನ್ನು ತಮ್ಮ ಮೆಸ್ಸೀಯನಾಗಿ ಗುರುತಿಸುವ ಮುಂದೊಂದು ದಿನವನ್ನು ಎದುರುನೋಡುತ್ತದೆ, ಆಗ ಅವರು ಇದ್ದ ಒಬ್ಬ ಮಗನನ್ನು ಕಳೆದುಕೊಂಡ ವ್ಯಕ್ತಿಯಂತೆ ಆತನಿಗಾಗಿ ಗೋಳಾಡುವರು.

**ಜೆಕರ್ಯ 12:10 ದಾವೀದ ವಂಶದವರಲ್ಲಿಯೂ, ಯೆರೂಸಲೇಮಿನವರಲ್ಲಿಯೂ ದೇವರ ದಯೆಯನ್ನು ಹಂಬಲಿಸಿ ಬೇಡುವ ಭಾವವನ್ನು ಸುರಿಸುವೆನು; ತಾವು ಇರಿದವನನ್ನು ದಿಟ್ಟಿಸಿ ನೋಡುವರು; ಇದ್ದ ಒಬ್ಬ ಮಗನನ್ನು ಕಳೆದುಕೊಂಡಂತೆ ಅವನಿಗಾಗಿ ಗೋಳಾಡುವರು. ಚೊಚ್ಚಲ ಮಗನ ವಿಯೋಗಕ್ಕೋಸ್ಕರ ದುಃಖಪಟ್ಟಂತೆ ಅವನಿಗಾಗಿ ದುಃಖಿಸುವರು.**

### ಗುಡಾರಗಳ ಹಬ್ಬ (ಸುಕ್ಕೋತ್)

*ವಚನ ಉಲ್ಲೇಖ: ಯಾಜಕ 23:33-44; ಧರ್ಮೋ 16:13,14; ನೆಹೆ 8:13-18*

ಗುಡಾರಗಳ ಹಬ್ಬವು ಇಸ್ರಾಯೇಲ್ ಜನರು ವಾಗ್ದಾನ ದೇಶವನ್ನು ಪ್ರವೇಶಿಸಿದ್ದನ್ನು ಆಚರಿಸಿತು. ಅವರು ಏಳು ದಿನಗಳವರೆಗೆ ತಮ್ಮ ಮನೆಗಳನ್ನು ಬಿಟ್ಟು ತಾಳೆಗರಿಗಳಿಂದ ಮತ್ತು ಇನ್ನಿತರೆ ಎಲೆಗಳಿಂದ ಮಾಡಲ್ಪಟ್ಟ ಗುಡಾರಗಳಲ್ಲಿ ವಾಸ ಮಾಡಿದರು. ಅದು ಅರಣ್ಯದಲ್ಲಿ ಅಲೆದಾಡಿದ್ದನ್ನು ಜ್ಞಾಪಿಸಿಕೊಳ್ಳುವ ಮತ್ತು ದೇವರು ಅವರನ್ನು ತಮ್ಮ ಸ್ವಂತ ದೇಶಕ್ಕೆ ಕರೆತಂದ ವಾಸ್ತವಕ್ಕಾಗಿ ಉಲ್ಲಾಸಿಸುವ ಸಮಯವಾಗಿತ್ತು.

ಗುಡಾರಗಳ ಹಬ್ಬವು ಸುಗ್ಗಿಯ ಸಮಯದಲ್ಲಿ ಆಚರಿಸಲಾಗುತ್ತಿತ್ತು. ಹಬ್ಬದ ಕೊನೆಯ ದಿನದಲ್ಲಿ ಯೇಸು ದೇವಾಲಯದಲ್ಲಿ ನಿಂತುಕೊಂಡು ಹೀಗೆ ಘೋಷಿಸಿದರು,

**ಯೋಹಾನ 7:37b "ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ."**

ಗುಡಾರಗಳ ಹಬ್ಬವು ಕ್ರಿಸ್ತನಲ್ಲಿರುವ ನಮ್ಮ ಜೀವನದ ಒಂದು ಚಿತ್ರಣವಾಗಿದೆ. ಅದು ಆತನಲ್ಲಿ ವಿಶ್ರಮಿಸುವ ಸಮಯವಾಗಿದೆ. ಅದು ಶಾಶ್ವತವಾದ ಮನೆಗಳಲ್ಲಿ ವಾಸ ಮಾಡಿದಾಗ್ಯೂ ಇಲ್ಲಿರುವ ನಮ್ಮ ಸಮಯವು ತಾತ್ಕಾಲಿಕವಾಗಿದೆ ಎಂಬುದನ್ನು ನೆನಪಿಸಿಕೊಳ್ಳುವ ಸಮಯವಾಗಿದೆ. ಅದು ಶರೀರದಲ್ಲಿ (ದೇಶದಲ್ಲಿ) ಜೀವಿಸುವ ಸಮಯವಾಗಿದೆ ಆದಾಗ್ಯೂ ಆತ್ಮನಲ್ಲಿ ಜೀವಿಸುವ ಸಮಯವಾಗಿದೆ.

ವಿಶ್ವಾಸಿಗಳು ಸಾವಿರ ವರ್ಷಗಳ ಆಳ್ವಿಕೆಯ ಅವಧಿಯಲ್ಲಿ ಅನುಭವಿಸುವ ವಿಶ್ರಾಂತಿಯ ಚಿತ್ರಣವಾಗಿದೆ - ಅದು ಯುದ್ಧಗಳಿಲ್ಲದ ಅಥವಾ ಕಲಹಗಳಿಲ್ಲದ ಸಮಯವಾಗಿದೆ. ಯೆಹೂದ್ಯ ರಾಷ್ಟ್ರವು ಇದನ್ನು ತಮ್ಮ ಅಂತಿಮ ರಾಜ್ಯದ ವಿಶ್ರಾಂತಿಯಾಗಿ ಎದುರುನೋಡುತ್ತಿದೆ. ಇದು ಏಳನೆಯ ದಿನದ ವಿಶ್ರಾಂತಿಯನ್ನು ಪ್ರತಿನಿಧಿಸುತ್ತದೆ - ಯೆಹೋವನ ರಾಜ್ಯವು ಭೂಮಿಯಲ್ಲೆಲ್ಲಾ ಆಳುವ ದಿನ.

ಕೆಲವು ವಿಶ್ವಾಸಿಗಳು ರಕ್ಷಣೆಯೊಂದಿಗೆ ಪಸ್ಕಹಬ್ಬದಲ್ಲೇ ನಿಂತುಕೊಳ್ಳುತ್ತಾರೆ. ಇತರರು ಪಂಚಾಶತ್ತಮದ ಅನುಭವಕ್ಕೆ ಮುಂದುವರೆಯುತ್ತಾರೆ. ಅದಕ್ಕಿಂತಲೂ ಇನ್ನೂ ಹೆಚ್ಚಿನ ಅನುಭವವಿದೆ, ದೇಶವನ್ನು ಪ್ರವೇಶಿಸುವುದು, ಈ ಭೂಮಿಯ ಮೇಲೆ ದೇವರ ರಾಜ್ಯವು ಸ್ಥಾಪನೆಯಾಗುವುದು.

ಅದು ನಮಗೆ, ನಮ್ಮ ವಾಗ್ದಾನ ಬಾಧ್ಯತೆಯನ್ನು ತೆಗೆದುಕೊಳ್ಳುವ ಸಮಯವಾಗಿದೆ, ದೊರೆತನದಲ್ಲಿ ನಡೆಯುವ ಸಮಯವಾಗಿದೆ ಮತ್ತು ಈ ಭೂಮಿಯ ಮೇಲೆ ದೇವರ ರಾಜ್ಯವನ್ನು ಬಲದಿಂದ ವಿಸ್ತರಿಸುವ ಸಮಯವಾಗಿದೆ.

## ಶಾಶ್ವತವಾದ ರಾಜರುಗಳು ಮತ್ತು ಯಾಜಕರು

### ನಮ್ಮ ಆತ್ಮಿಕ ಯಜ್ಞಗಳು

* *ನಮ್ಮ ದೇಹಗಳು*

**ರೋಮಾ 12:1 ಆದ್ದರಿಂದ ಸಹೋದರರೇ, ದೇವರ ಕನಿಕರವನ್ನು ನೆನಪಿಸುತ್ತಾ, ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಸಮರ್ಪಿಸಿರೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ; ಇದೇ ವಿವೇಕ ಪೂರ್ವಕವಾದ ಆರಾಧನೆಯು.**

* *ನಮ್ಮ ಕೊಡುವಿಕೆ*

ಫಿಲಿಪ್ಪಿ **4:18** ಬೇಕಾದದ್ದೆಲ್ಲಾ ನನಗುಂಟು, ಸಮೃದ್ಧಿಹೊಂದಿದ್ದೇನೆ. ಎಪಫ್ರೊದೀತನ ಕೈಯಿಂದ ನೀವು ಕೊಟ್ಟು ಕಳುಹಿಸಿದ್ದು ನನಗೆ ತಲುಪಲಾಗಿ ನಾನು ತುಂಬಿತುಳುಕಿದವನಾಗಿದ್ದೇನೆ. ಅದು ದೇವರಿಗೆ ಮೆಚ್ಚಿಕೆಯಾದದ್ದು, ಸುಗಂಧವಾಸನೆಯೇ, ಇಷ್ಟ ಯಜ್ಞವೇ.

* *ಸ್ತುತಿ*

ಇಬ್ರಿಯ **13:15** ಆದ್ದರಿಂದ ಯೇಸುವಿನ ಮೂಲಕವಾಗಿಯೇ ದೇವರಿಗೆ ಸ್ತೋತ್ರವೆಂಬ ಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ, ಆತನನ್ನು ನಾವು ಕರ್ತನೆಂದು ನಂಬಿ ಬಾಯಿಂದ ಅರಿಕೆ ಮಾಡುವುದೇ ನಾವು ಅರ್ಪಿಸುವ ಯಜ್ಞವಾಗಿದೆ.

ಕೀರ್ತನೆ **116:17** ನಾನು ನಿನಗೆ ಕೃತಜ್ಞತಾ ಯಜ್ಞಗಳನ್ನು ಸಮರ್ಪಿಸುವೆನು; ಯೆಹೋವನ ನಾಮವನ್ನು ಪ್ರಖ್ಯಾತಿಪಡಿಸುವೆನು.

* *ಕೈಯೆತ್ತುವುದು*

ಕೀರ್ತನೆ **141:2** ನನ್ನ ಪ್ರಾರ್ಥನೆಯು ಧೂಪದಂತೆಯೂ, ನಾನು ಕೈಯೆತ್ತುವುದು ಸಂಧ್ಯಾನೈವೇದ್ಯದಂತೆಯೂ ನಿನಗೆ ಸಮರ್ಪಕವಾಗಲಿ.

* *ನೀತಿವಂತಿಕೆ*

ಕೀರ್ತನೆ **4:5** ನ್ಯಾಯವಾದ ಯಜ್ಞಗಳನ್ನು ಸಮರ್ಪಿಸಿರಿ; ಯೆಹೋವನಲ್ಲಿಯೇ ಭರವಸವಿಡಿರಿ.

* *ಆನಂದ*

ಕೀರ್ತನೆ **27:6** ಹೀಗಿರುವುದರಿಂದ ನನ್ನ ಸುತ್ತಲಿರುವ ವೈರಿಗಳ ಮೇಲೆ, ನನ್ನ ತಲೆ ಎತ್ತಲ್ಪಟ್ಟಿರುವುದು; ನಾನು ಯೆಹೋವನ ಗುಡಾರದಲ್ಲಿ, ಉತ್ಸಾಹಧ್ವನಿಯೊಡನೆ ಯಜ್ಞಗಳನ್ನು ಸಮರ್ಪಿಸುವೆನು. ಆತನನ್ನು ಹಾಡುತ್ತಾ ವಾದ್ಯಬಾರಿಸುವೆನು.

* *ಕುಗ್ಗಿದ ಮನಸ್ಸು ಮತ್ತು ಜಜ್ಜಿಹೋದ ಮನಸ್ಸು*

ಕೀರ್ತನೆ **51:17** ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟವಾದ ಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವುದಿಲ್ಲ.

ಹಳೆ ಒಡಂಬಡಿಕೆಯ ರಾಜರುಗಳ ಮತ್ತು ಯಾಜಕರುಗಳ ಸೇವೆಯನ್ನು ನಾವು ಅರ್ಥಮಾಡಿಕೊಳ್ಳುವುದು ಮುಖ್ಯವಾದದ್ದು ಯಾಕೆಂದರೆ ಇಂದು ಎಲ್ಲಾ ವಿಶ್ವಾಸಿಗಳು ರಾಜರುಗಳಾಗಿ ಮತ್ತು ಯಾಜಕರುಗಳಾಗಿ ಮಾಡಲ್ಪಟ್ಟಿದ್ದಾರೆ.

**ಪ್ರಕಟನೆ 1:5,6 ನಂಬಿಗಸ್ತ ಸಾಕ್ಷಿಯೂ, ಸತ್ತವರೊಳಗಿಂದ ಮೊದಲು ಎದ್ದುಬಂದಾತನೂ ಮತ್ತು ಭೂರಾಜರ ಅಧಿಪತಿಯೂ ಆಗಿರುವ ಯೇಸು ಕ್ರಿಸ್ತನಿಂದ ನಿಮಗೆ ಕೃಪೆಯೂ ಶಾಂತಿಯೂ ಆಗಲಿ. ನಮ್ಮನ್ನು ಪ್ರೀತಿಸುವಾತನೂ ತನ್ನ ಪವಿತ್ರವಾದ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದಾತನೂ, ನಮ್ಮನ್ನು ದೇವರ ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದಾತನಿಗೆ ಯುಗಯುಗಾಂತರಗಳಲ್ಲಿಯೂ ಮಹಿಮೆಯು ಬಲವು ಉಂಟಾಗಲಿ. ಆಮೆನ್.**

ರಾಜ-ಯಾಜಕರುಗಳಾದ ನಾವು ನಿರ್ವಹಿಸಬೇಕಾದ ಸೇವಾ ಕಾರ್ಯಗಳನ್ನು ಹೊಂದಿದ್ದೇವೆ. ರಾಜರಾಗಿ ನಾವು ಈ ಭೂಮಿಯ ಮೇಲೆ ದೊರೆತನ ನಡೆಸುವವರಾಗಿ ಜೀವಿಸಬೇಕು, ಈ ಭೂಮಿಯ ಮೇಲೆ ದೇವರ ರಾಜ್ಯವನ್ನು ಬಲವಾಗಿ ವಿಸ್ತರಿಸಬೇಕು. ನಾವು ನಮ್ಮ ಪುನಃಸ್ಥಾಪಿಸಲ್ಪಟ್ಟ ಆತ್ಮಿಕ ಅಧಿಕಾರವನ್ನು ಚಲಾಯಿಸುತ್ತಾ ಜನರ ಜೀವಿತಗಳ ಮೇಲಿರುವ ಹಾಗೂ ಈ ಲೋಕದ ಸರ್ಕಾರಗಳ ಮೇಲಿರುವ ದುಷ್ಟನ ಕೋಟೆಗಳನ್ನು ಕೆಡವಬೇಕು. ನಾವು ರಾಜರುಗಳಂತೆ ಈ ಜೀವನದಲ್ಲಿ ಆಳಬೇಕು.

**ರೋಮಾ 5:17 ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಮರಣವು ಆಳುವುದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ, ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವುದು ಮತ್ತೂ ನಿಶ್ಚಯವಲ್ಲವೇ.**

ನಾವು ನಮ್ಮ ಸಾಕ್ಷಿಯ ಮೂಲಕವಾಗಿ, ವಿಶ್ವದಾದ್ಯಂತದ ಸುವಾರ್ತೆ ಸೇವೆಯ ಮತ್ತು ಮಿಶನರಿ ಸೇವೆಗಳ ಮೂಲಕವಾಗಿ ರಾಜರಗಳಂತೆ ಆಳುತ್ತೇವೆ. ಆತನು ನಮಗೆ ರಾಷ್ಟ್ರಗಳನ್ನು ಸ್ವಾಸ್ತ್ಯವಾಗಿ ಕೊಟ್ಟಿದ್ದಾರೆ.

**ಕೀರ್ತನೆ 111:6 ಆತನು ಅನ್ಯಜನಗಳ ಸ್ವತ್ತನ್ನು ತನ್ನ ಪ್ರಜೆಗೆ ಕೊಡುವುದರ ಮೂಲಕ ಸ್ವಪ್ರತಾಪವನ್ನು ತೋರ್ಪಡಿಸಿದ್ದಾನೆ.**

ಯೇಸು ತನ್ನ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಈ ಲೋಕಕ್ಕೆ ಹಿಂತಿರುಗುವಾಗ ನಾವು ಅವರೊಂದಿಗೆ ಒಂದು ಸಾವಿರ ವರ್ಷ ಆಳುವೆವು.

**ಪ್ರಕಟನೆ 2:26,27a ಯಾವನು ಜಯಶಾಲಿಯಾಗಿ ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ಕಡೆಯವರೆಗೂ ನಡಿಸುತ್ತಾನೋ, ಅವನಿಗೆ ನಾನು ನನ್ನ ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು. 'ಅವನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು...**

**1 ಕೊರಿಂಥ 6:2,3 ದೇವಜನರು ಲೋಕಕ್ಕೆ ತೀರ್ಪುಮಾಡುವರೆಂಬುದು ನಿಮಗೆ ತಿಳಿಯದೋ? ಲೋಕವು ನಿಮ್ಮಿಂದ ತೀರ್ಪನ್ನು ಹೊಂದಬೇಕಾಗಿರುವಲ್ಲಿ ಅತ್ಯಲ್ಪವಾದ ಸಂಗತಿಗಳನ್ನು ಕುರಿತು ತೀರ್ಪುಮಾಡುವುದಕ್ಕೆ ನೀವು ಅನರ್ಹರಾಗಿದ್ದೀರೋ? ನಾವು ದೇವದೂತರಿಗೂ ತೀರ್ಪುಮಾಡುವೆವೆಂಬುದು ನಿಮಗೆ ತಿಳಿಯದೋ? ಹಾಗಾದರೆ ಇಹಲೋಕ ಜೀವನದ ವಿಷಯಗಳ ಕುರಿತು ನಾವು ಎಷ್ಟೋ ಹೆಚ್ಚಾಗಿ ತೀರ್ಪುಮಾಡಬಹುದಲ್ಲವೇ?**

ಯಾಜಕರುಗಳಾಗಿ ಅಥವಾ ಪುರೋಹಿತರುಗಳಾಗಿ ನಾವು ಆತನ ಪ್ರತಿನಿಧಿಗಳಾಗಿ ನಿರ್ವಹಿಸಬೇಕಾದ ಕಾರ್ಯಗಳಿವೆ. ನಾವು ನಿರಂತರವಾಗಿ ದೇವರಿಗೆ ಸ್ತುತಿ ಯಜ್ಞಗಳನ್ನು ಅರ್ಪಿಸಬೇಕು. ನಾವು ತ್ಯಾಗಪೂರ್ವಕವಾಗಿ ಕೊಡುವುದರ ಮೂಲಕ ಕರ್ತನಿಗೆ ಸೇವೆ ಮಾಡಬೇಕು. ನಾವು ಈ ಲೋಕದ ಕಳೆದು ಹೋದ ಜನರಿಗೆ ದೇವರ ಯಾಜಕ ಪ್ರತಿನಿಧಿಗಳಾಗಬೇಕು.

ಲೇವಿಯ ಯಾಜಕತ್ವದ ಯಾಜಕ ಸೇವೆಯು ಇಂದು ನಮ್ಮ ವಿಶ್ವಾಸಿ-ಯಾಜಕ ಸೇವೆಯ ಒಂದು ಪ್ರತಿರೂಪವಾಗಿದೆ.

### ಲೇವಿಯ ಯಾಜಕತ್ವ

ಇಸ್ರಾಯೇಲ್ ಜನರು ಈಜಿಪ್ಟಿನಿಂದ ಹೊರಗೆ ನಡೆಸಲ್ಪಟ್ಟಾಗ ದೇವರು ಅವರಿಗೆ ಧರ್ಮಶಾಸ್ತ್ರವನ್ನು ಕೊಟ್ಟರು, ಲೇವಿ ಕುಲದವರು ಯಾಜಕರಾಗಿರಲು ಪ್ರತ್ಯೇಕಿಸಲ್ಪಟ್ಟರು. ಅನೇಕ ಯಾಜಕರುಗಳಿದ್ದರೂ ಒಂದು ಕಾಲಕ್ಕೆ ಒಬ್ಬ ಪ್ರಧಾನ ಯಾಜಕನು ಮಾತ್ರ ಇದ್ದನು. ಈ ಪುರುಷರು ಲೇವಿಯ ಕುಟುಂಬದಲ್ಲಿ ಜನಿಸಿದ್ದರಿಂದ ಯಾಜಕರುಗಳಾಗಿದ್ದರು. ದೇವರು ಅವರನ್ನು ವೈಯಕ್ತಿಕವಾಗಿ ಆರಿಸಿಕೊಳ್ಳಲಿಲ್ಲ.

ಪ್ರಧಾನ ಯಾಜಕರುಗಳು ಯೇಸುವನ್ನು ಪ್ರತಿನಿಧಿಸಿದರು. ಪ್ರಧಾನ ಯಾಜಕನ ಉಡುಪುಗಳ ಬಗ್ಗೆ ಚರ್ಚಿಸಲು ಸ್ಥಳವಿಲ್ಲ ಆದರೂ ಅವನು ಧರಿಸಿದ ಪ್ರತಿಯೊಂದು ವಸ್ತುವೂ ಒಂದು ಆಳವಾದ ಅಧ್ಯಯನವಾಗಿದೆ.

ಪ್ರಧಾನ ಯಾಜಕನೇ ಪ್ರಾಯಶ್ಚಿತ್ತ ದಿನದಂದು ಅತೀ ಪವಿತ್ರ ಸ್ಥಳವನ್ನು ಪ್ರವೇಶಿಸಿ ಜನರೆಲ್ಲರ ಪಾಪಗಳ ಸಲುವಾಗಿ ಯಜ್ಞಬಲಿಯ ರಕ್ತವನ್ನು ಕೃಪಾಸನದ ಮೇಲೆ ಚಿಮುಕಿಸುತ್ತಿದ್ದನು. ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಇದನ್ನು ನಮಗಾಗಿ ಹೀಗೆ ಸಾರಾಂಶಗೊಳಿಸಿದ್ದಾನೆ.

**ಇಬ್ರಿಯ 9:7 ಆದರೆ ಎರಡನೆಯ ಕೋಣೆಯೊಳಗೆ ಮಹಾಯಾಜಕನೊಬ್ಬನೇ ವರ್ಷಕ್ಕೊಮ್ಮೆ ಪ್ರವೇಶಿಸುತ್ತಿದ್ದನು. ತನ್ನೊಡನೆ ಬಲಿರಕ್ತವನ್ನು ತೆಗೆದುಕೊಳ್ಳದೆ ಹೋಗುತ್ತಿರಲಿಲ್ಲ. ಆ ರಕ್ತವನ್ನು ತನ್ನಗಾಗಿಯೂ ಮತ್ತು ಜನರ ಉದ್ದೇಶಪೂರ್ವಕವಲ್ಲದ ಅಪರಾಧಗಳಿಗೋಸ್ಕರವೂ ಸಮರ್ಪಿಸಬೇಕಾಗಿತ್ತು.**

ಧರ್ಮಶಾಸ್ತ್ರವು ಕೊಡಲ್ಪಟ್ಟ ಸಮಯದಿಂದ ಲೇವಿಯ ಸಂತತಿಯವರು ಯಾಜಕರಾಗಿ ನೇಮಿಸಲ್ಪಟ್ಟರು. ಆದರೂ ಯೇಸು ಬಂದಾಗ, ಆತನು ಆರೋನನ ಸಂತತಿಯಾಗಿರಲಿಲ್ಲ. ಆತನು ಲೇವಿಯ ಕುಲದಲ್ಲಿ ಜನಿಸಲಿಲ್ಲ. ಅವರು ಯೂದ ಕುಲದಲ್ಲಿ - ದಾವೀದನ ವಂಶದಲ್ಲಿ ಜನಿಸಿದರು ಮತ್ತು ಅವರು ಮೆಲ್ಕಿಜೆದೇಕನ ತರಹದ ಯಾಜಕನಾಗಿದ್ದಾರೆ ಎಂದು ಹೇಳಲಾಗಿದೆ. ಯಾಕೆ ?

ಲೇವಿಯ ಯಾಜಕತ್ವವು ಕ್ರಿಯೆಗಳ ಯಾಜಕತ್ವವಾಗಿತ್ತು. ಮಾನವರು ಧರ್ಮಶಾಸ್ತ್ರದ ಕಾರ್ಯಗಳನ್ನು ನೆರವೇರಿಸುವ ಒಂದು ಯಾಜಕತ್ವವಾಗಿತ್ತು. ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಅವರು "ಶರೀರದ ಸಂಬಂಧಪಟ್ಟಿರುವ ನಿಯಮದ ಪ್ರಕಾರವಾದವರು" ಎಂದು ಹೇಳುತ್ತಾನೆ.

**ಇಬ್ರಿಯ 7:16 ಈ ಯಾಜಕನು (ಅಂದರೆ ಯೇಸು) ಶರೀರದ ಸಂಬಂಧಪಟ್ಟಿರುವ ನಿಯಮದ ಪ್ರಕಾರವಾಗಿರದೆ, ಲಯವಾಗದ ಜೀವಶಕ್ತಿಯ ಮೇರೆಗೆ, ಮೆಲ್ಕಿಜೆದೇಕನಂತೆ ಇನ್ನೊಬ್ಬ ಯಾಜಕನು ಎಳುತ್ತಾನೆಂಬುದಾದರೆ ಅದು ಇನ್ನೂ ಹೆಚ್ಚು ಸ್ಪಷ್ಟವಾಗಿ ವ್ಯಕ್ತವಾಗುತ್ತದಲ್ಲಾ.**

"ಶರೀರ ಸಂಬಂಧಪಟ್ಟ" ಎಂಬ ಪದದ ಅರ್ಥವು ತಾತ್ಕಾಲಿಕವಾದದ್ದು ಎಂದಾಗಿದೆ. ಅವರು ಒಂದು ತಾತ್ಕಾಲಿಕವಾದ ಸಮಯದ ಯಾಜಕರುಗಳಾಗಿದ್ದರು. ಅವರು ಜನರ ಪಾಪಗಳ ಸಲುವಾಗಿ ಮಾಡಿದ ಯಜ್ಞಬಲಿಗಳು ತಾತ್ಕಾಲಿಕವಾದ ಸಮಯಕ್ಕಾಗಿತ್ತು. ಅವುಗಳನ್ನು ಪದೇ ಪದೇ ಮಾಡಬೇಕಾಗಿತ್ತು.

**ಮೆಲ್ಕಿಜೆದೆಕನ ತರಹ**

✱ *ಮೆಲ್ಕಿಜೆದೆಕನು ಯಾರು ?*

ಮೆಲ್ಕಿಜೆದೆಕನ ಬಗ್ಗೆ ಮೊದಲ ಬಾರಿಗೆ ಆದಿಕಾಂಡ 14 ರಲ್ಲಿ ತಿಳಿಸಲಾಗಿದೆ.

**ಆದಿಕಾಂಡ 14:18-20 ಸಾಲೇಮಿನ ಅರಸನಾದ ಮೆಲ್ಕೀಚೆದೆಕನು ಸಹ ಬಂದು ರೊಟ್ಟಿಯನ್ನೂ ದ್ರಾಕ್ಷಾರಸವನ್ನೂ ಕೊಟ್ಟನು. ಇವನು ಪರಾತ್ಪರನಾದ ದೇವರ ಯಾಜಕನಾಗಿದ್ದನು.**

**ಇವನು ಅಬ್ರಾಮನನ್ನು ಆಶೀರ್ವದಿಸಿ, "ಭೂಮ್ಯಾಕಾಶವನ್ನು ನಿರ್ಮಾಣಮಾಡಿದ ಪರಾತ್ಪರನಾದ ದೇವರ ಆಶೀರ್ವಾದವು ಅಬ್ರಾಮನಿಗೆ ದೊರೆಯಲಿ; ಪರಾತ್ಪರನಾದ ದೇವರು ನಿನ್ನ ಶತ್ರುಗಳನ್ನು ನಿನ್ನ ಕೈಗೆ ಒಪ್ಪಿಸಿದ್ದಕ್ಕಾಗಿ ಆತನಿಗೆ ಸ್ತೋತ್ರ" ಎಂದು ಹೇಳಿದನು. ಅಬ್ರಾಮನು ತಾನು ಗೆದ್ದು ತಂದಿದ್ದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಯಾಜಕನಿಗೆ ಕೊಟ್ಟನು.**

ಮೆಲ್ಕಿಜೆದೆಕನು ಒಬ್ಬ ರಾಜನಾಗಿದ್ದನು ಮತ್ತು ಒಬ್ಬ ಯಾಜಕನಾಗಿದ್ದನು. ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಈ ಭೇಟಿಯ ಬಗ್ಗೆ ಮತ್ತು ಮೆಲ್ಕಿಜೆದೆಕನು ಯಾರು ಎಂಬದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡುತ್ತಾನೆ.

**ಇಬ್ರಿಯ 7:1-3 ಈ ಮೆಲ್ಕಿಜೆದೇಕನು ಸಾಲೇಮಿನ ಅರಸನೂ ಮಹೋನ್ನತನಾದ ದೇವರ ಯಾಜಕನೂ ಆಗಿದ್ದನು. ಈತನು ರಾಜರನ್ನು ಸಂಹಾರ ಮಾಡಿ ಹಿಂದಿರುಗಿ ಬರುತ್ತಿದ್ದ ಅಬ್ರಹಾಮನನ್ನು ಎದುರುಗೊಂಡು ಅವನನ್ನು ಆಶೀರ್ವದಿಸಿದನು. ಅವನಿಗೆ ಅಬ್ರಹಾಮನು ತಾನು ಜಯಿಸಿಕೊಂಡು ಬಂದಿದ್ದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಕೊಟ್ಟನು. "ಮೆಲ್ಕಿಜೆದೇಕ್", ಎಂಬ ಹೆಸರಿಗೆ ಮೊದಲು "ನೀತಿಯ ರಾಜ" ಎಂದೂ, ಅನಂತರ "ಸಾಲೇಮಿನ ರಾಜ" ಎಂದರೆ "ಸಮಾಧಾನದ ರಾಜ" ಎಂದೂ ಅರ್ಥ. ಅವನಿಗೆ ತಂದೆಯಿಲ್ಲ, ತಾಯಿಯಿಲ್ಲ, ವಂಶಾವಳಿಯೂ ಇಲ್ಲ. ಹುಟ್ಟು, ಸಾವು ಇಲ್ಲ. ಆತನು ದೇವರ ಕುಮಾರನಿಗೆ ಹೋಲಿಕೆಯಾಗಿದು, ನಿರಂತರವಾಗಿ ಯಾಜಕನಾಗಿರುವನು.**

ಮೆಲ್ಕಿಜೆದೇಕನಿಗೆ ಯಾವ ತಂದೆಯಾಗಲಿ ತಾಯಿಯಾಗಲಿ ಇರಲಿಲ್ಲ ಅಥವಾ ವಂಶಾವಳಿ ಇರಲಿಲ್ಲ, ಆತನಿಗೆ ಆದಿಯಾಗಲಿ ಅಥವಾ ಅಂತ್ಯವಾಗಲಿ ಇಲ್ಲ. ಈ ಕಾರಣದಿಂದಾಗಿ ಅನೇಕರು ಮೆಲ್ಕಿಜೆದೇಕನು ದೈವಪ್ರತ್ಯಕ್ಷತೆ ಎಂದು - ಅಂದರೆ ಹಳೆ ಒಡಂಬಡಿಕೆಯಲ್ಲಿ ಕ್ರಿಸ್ತನ ಪ್ರತ್ಯಕ್ಷತೆ - ಎಂದು ಅಂದುಕೊಳ್ಳುತ್ತಾರೆ.

✱ *ಅವನು ಎಷ್ಟು ದೊಡ್ಡ ವ್ಯಕ್ತಿಯಾಗಿದ್ದನು ?*

ಒಂದು ದೊಡ್ಡ ಕುಟುಂಬಕ್ಕೆ ಪಿತಾಮಹನಾಗಿ ದೇವರಿಂದ ಆರಿಸಿಕೊಳ್ಳಲ್ಪಟ್ಟ ಅಬ್ರಹಾಮನು, ಮುಂಬರಲಿದ್ದ ಮೆಸ್ಸೀಯನ ವಾಗ್ದಾನ ಹೊಂದಿದವನು, ಅಪಾರವಾದ ಸಂಪತ್ತುಳ್ಳವನು ಮೆಲ್ಕಿಜೆದೇಕನಿಂದ ಆಶೀರ್ವಾದವನ್ನು ಪಡೆದದ್ದರಲ್ಲಿ ಮೆಲ್ಕಿಜೆದೇಕನ ಹಿರಿಮೆಯನ್ನು ಅಳೆಯಬಹುದು. ಅಬ್ರಹಾಮನಲ್ಲಿ, ಮುಂಬರಲಿದ್ದ ಎಲ್ಲಾ ಲೇವಿಯ ಯಾಜಕರುಗಳು ಒಂದು ಹೆಚ್ಚಿನ ಯಾಜಕತ್ವವನ್ನು ಸ್ವೀಕರಿಸಿದರು. ಮತ್ತೊಮ್ಮೆ ನಾವು ಇಬ್ರಿಯರಿಗೆ ಬರೆದ ಪತ್ರವನ್ನು ಉಲ್ಲೇಖಿಸುತ್ತಿದ್ದೇವೆ.

**ಇಬ್ರಿಯ 7:4-7 ಈತನು ಎಷ್ಟು ಮಹಾನ್ ಆಗಿದ್ದನೆಂದು ಯೋಚಿಸಿರಿ. ನಮ್ಮ ಮೂಲಪಿತೃವಾದ ಅಬ್ರಹಾಮನು ತಾನು ಯುದ್ಧದಲ್ಲಿ ಗೆದ್ದು ತಂದ ಶ್ರೇಷ್ಠ ವಸ್ತುಗಳಲ್ಲಿ ಹತ್ತರಲ್ಲಿ ಒಂದು ಭಾಗವನ್ನು ಅವನಿಗೆ ಕೊಟ್ಟನಲ್ಲಾ. ನಿಜವಾಗಿಯೂ ಲೇವಿಯ ಕುಲದವರಲ್ಲಿ ಯಾಜಕೋದ್ಯೋಗವನ್ನು ಹೊಂದುವವರು, ಜನರಿಂದ ಅಂದರೆ ಅಬ್ರಹಾಮನ ವಂಶಸ್ಥರಾಗಿರುವ ಸಹೋದರರಿಂದಲೇ ದಶಮ ಭಾಗಗಳನ್ನು ತೆಗೆದುಕೊಳ್ಳುವುದಕ್ಕೆ ಧರ್ಮಶಾಸ್ತ್ರದಲ್ಲಿ ಅಪ್ಪಣೆಯಿದೆ. ಆದರೆ ಮೆಲ್ಕಿಜೆದೇಕನು ಲೇವಿಯ ವಂಶಾವಳಿಗೆ ಸೇರಿದವನಲ್ಲ, ಆದರೂ ಅಬ್ರಹಾಮನಿಂದ ದಶಮ ಭಾಗಗಳನ್ನು ತೆಗೆದುಕೊಂಡದ್ದಲ್ಲದೆ ದೇವರಿಂದ ವಾಗ್ದಾನಗಳನ್ನು ಹೊಂದಿದವನನ್ನು ಆಶೀರ್ವದಿಸಿದನು. ಆಶೀರ್ವಾದ ಹೊಂದುವವನಿಗಿಂತ ಆಶೀರ್ವದಿಸುವವನೇ ಹೆಚ್ಚಿನವನು ಎಂಬುದನ್ನು ನಿರಾಕರಿಸುವಂತಿಲ್ಲ.**

**ದಾವೀದನ ಪ್ರವಾದನೆ**

ದಾವೀದನು ಮೆಲ್ಕಿಜೆದೆಕನ ಯಾಜಕತ್ವದ ಬಗ್ಗೆ ಪ್ರವಾದಿಸಿದನು. ಈ ಯಾಜಕನು ದೇವರಿಂದ ಆರಿಸಲ್ಪಟ್ಟವನು - ಆಣೆಯನ್ನು ಹೊಂದಿದವನು - ಮತ್ತು ಸದಾಕಾಲವೂ ಯಾಜಕನಾಗಿರುವನು ಎಂಬುದನ್ನು ಗಮನಿಸಿರಿ.

**ಕೀರ್ತನೆ 110:4 "ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹ ಯಾಜಕನಾಗಿರುವೆ" ಎಂದು ಯೆಹೋವನು ಆಣೆಯಿಟ್ಟು ನುಡಿದಿದ್ದಾನೆ; ಪಶ್ಚಾತ್ತಾಪಡುವುದಿಲ್ಲ.**

**ಇಬ್ರಿಯರಿಗೆ ಬರೆದ ಪತ್ರದಲ್ಲಿ ದೃಢೀಕರಿಸಲ್ಪಟ್ಟಿತು**

ಈ ಪ್ರವಾದನೆಯು ಇಬ್ರಿಯರಿಗೆ ಬರೆದ ಪತ್ರದ ಲೇಖಕನಿಂದ ದೃಢೀಕರಿಸಲ್ಪಟ್ಟಿತು.

**ಇಬ್ರಿಯ 5:6-10 ಆತನು ಇನ್ನೊಂದು ಕಡೆಯಲ್ಲಿ, "ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹದ ಮಹಾಯಾಜಕನು" ಎಂದು ಹೇಳುತ್ತಾನೆ. ಕ್ರಿಸ್ತನು ತಾನೇ ಭೂಲೋಕದಲ್ಲಿ ಮನುಷ್ಯನಾಗಿ ಜೀವಿಸಿದ್ದ ಕಾಲದಲ್ಲಿ, ಮರಣದಿಂದ ತಪ್ಪಿಸಿ ಕಾಪಾಡಲು ಶಕ್ತನಾಗಿರುವಾತನಿಗೆ ಗಟ್ಟಿಯಾಗಿ ಮೊರೆಯಿಡುತ್ತಾ, ಕಣ್ಣೀರನ್ನು ಸುರಿಸುತ್ತಾ, ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿದನು. ದೇವರ ಮೇಲಣ ಭಯಭಕ್ತಿಯ ನಿಮಿತ್ತ ಆತನ ಪ್ರಾರ್ಥನೆಯನ್ನು ದೇವರು ಕೇಳಿದನು.**

**ಹೀಗೆ ಆತನು ಮಗನಾಗಿದ್ದರೂ ತಾನು ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಆತನು ಪರಿಪೂರ್ಣನಾಗಿ, ತನಗೆ ವಿಧೇಯರಾಗಿರುವ ಎಲ್ಲರಿಗೂ ನಿತ್ಯ ರಕ್ಷಣೆಗೆ ಕಾರಣನಾದನು. ಅಲ್ಲದೆ ಆತನು ಮೆಲ್ಕಿಜೆದೇಕನ ತರಹದ ಮಹಾಯಾಜಕನಾಗಿ ದೇವರಿಂದ ನೇಮಿಸಲ್ಪಟ್ಟನು.**

**ಯಾಜಕತ್ವದ ಮತ್ತು ಧರ್ಮಶಾಸ್ತ್ರದ ಬದಲಾವಣೆ**

ಯೇಸು ಸತ್ತು ಪುನರುತ್ಥಾನವಾದಾಗ ಲೇವಿಯ ಯಾಜಕತ್ವದ ಕಾರ್ಯಗಳು ಪೂರ್ಣಗೊಂಡವು. ಯೇಸು ಮಾಡಿದ ಯಜ್ಞಬಲಿಯು ಪರಿಪೂರ್ಣವಾದದ್ದಾಗಿತ್ತು. ಅವರು ಮಾಡುತ್ತಿದ್ದ ಯಜ್ಞಬಲಿಗಳ ಅಥವಾ ಲೇವಿಯ ಯಾಜಕತ್ವದ ಯಾವುದೇ ಅಗತ್ಯವಿರಲಿಲ್ಲ.

**ಇಬ್ರಿಯ 7:11,12 ಇಸ್ರಾಯೇಲರಿಗೆ ಕೊಡಲಾದ ಧರ್ಮಶಾಸ್ತ್ರ ಲೇವಿಯರ ಯಾಜಕತ್ವದ ಮೇಲೆ ಆಧಾರಗೊಂಡಿದೆ. ಲೇವಿಯರ ಈ ಯಾಜಕತ್ವದಿಂದಲೇ ಸಂಪೂರ್ಣ ಸಿದ್ಧಿ ಪ್ರಾಪ್ತವಾಗುತ್ತಿದ್ದಾದರೆ, ಆರೋನನ ಪರಂಪರೆಗೆ ಸೇರದ, ಮೆಲ್ಕಿಜೆದೇಕನ ಪರಂಪರೆಗೆ ಸೇರಿದ ಬೇರೊಬ್ಬ ಯಾಜಕನು ಬರುವುದರ ಅಗತ್ಯವೇನಿತ್ತು? ಯಾಜಕತ್ವವು ಬದಲಾಗುವುದಾದರೆ ಧರ್ಮಶಾಸ್ತ್ರವೂ ಸಹ ಬದಲಾಗುವುದು ಅಗತ್ಯವಾಗಿದೆ.**

ಆದರೆ ಮೆಲ್ಕಿಜೆದೆಕನ ತರಹದ ಯಾಜಕತ್ವವು ಶಾಶ್ವತವಾದದ್ದು. ಅದರ ಯಜ್ಞಬಲಿಯು ಶಾಶ್ವತವಾದದ್ದು.

**ಇಬ್ರಿಯ 7:24-27 ಆತನಾದರೋ ಸದಾಕಾಲ ಜೀವಿಸುವುದರಿಂದ ಆತನ ಯಾಜಕತ್ವವನ್ನು ಶಾಶ್ವತವಾದ್ದದು. ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತನಾಗಿದ್ದಾನೆ. ಯಾಕೆಂದರೆ ಅವರಿಗೋಸ್ಕರ ವಿಜ್ಞಾಪನೆ ಮಾಡುವುದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ. ಇಂಥವನೇ ನಮಗೆ ಬೇಕಾಗಿರುವ ಮಹಾಯಾಜಕನು, ಈತನು ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನು, ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು. ಮೊದಲು ತಮ್ಮ ಪಾಪಪರಿಹಾರಕ್ಕಾಗಿ ಆ ಮೇಲೆ ಜನರ ಪಾಪಪರಿಹಾರಕ್ಕಾಗಿ ಯಜ್ಞ ಸಮರ್ಪಣೆಮಾಡುವ ಲೇವಿ ಮಹಾಯಾಜಕರಂತೆ ಈತನು ಪ್ರತಿದಿನವೂ ಯಜ್ಞಗಳನ್ನು ಸಮರ್ಪಿಸಬೇಕಾದ ಅವಶ್ಯವಿಲ್ಲ. ಏಕೆಂದರೆ ಈತನು ತನ್ನನ್ನು ತಾನೇ ಸಮರ್ಪಿಸಿಕೊಂಡು ಒಂದೇ ಸಾರಿ ಆ ಕೆಲಸವನ್ನು ಮಾಡಿ ಮುಗಿಸಿದನು.**

**ಇಂದಿನ ಯಾಜಕರು**

ಹಳೆ ಒಡಂಬಡಿಕೆಯ ಕಾಲದ ಯಾಜಕರುಗಳು ನಿಜವಾದ ಯಾಜಕನ ಪ್ರತಿಬಿಂಬವಾಗಿದ್ದರು. ಯೇಸು ಸಂಪೂರ್ಣವಾಗಿ ಯಾಜಕ ಕಾರ್ಯವನ್ನು ನೆರವೇರಿಸಿದರು. ಇಂದು ಯಾಜಕರು ಯಜ್ಞಬಲಿಗಳನ್ನು ಅರ್ಪಿಸುವ ಅಗತ್ಯವಿಲ್ಲ ಅಥವಾ ನಮ್ಮ ಪರವಾಗಿ ದೇವರ ಮುಂದೆ ಹೋಗುವ ಅಗತ್ಯವಿಲ್ಲ.

ಪ್ರಕಟನೆಯ ಪುಸ್ತಕದಲ್ಲಿ ನಾವು ರಾಜರುಗಳು ಮತ್ತು ಯಾಜಕರುಗಳಾಗಿದ್ದೇವೆ ಎಂಬದನ್ನು ಕಾಣುತ್ತೇವೆ. ನಾವು ಪರಿಶುದ್ದಾತ್ಮನಲ್ಲಿ ಯಜ್ಞಬಲಿಗಳನ್ನು ಅರ್ಪಿಸಬೇಕು. ನಾವು ಕ್ರಿಸ್ತನೊಂದಿಗೆ ಆಳಬೇಕು ಮತ್ತು ದೊರೆತನ ನಡೆಸಬೇಕು.

**ಪ್ರಕಟನೆ 1:6 ನಮ್ಮನ್ನು ದೇವರ ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದಾತನಿಗೆ ಯುಗಯುಗಾಂತರಗಳಲ್ಲಿಯೂ ಮಹಿಮೆಯು ಬಲವು ಉಂಟಾಗಲಿ. ಆಮೆನ್.**

**ಪ್ರಕಟನೆ 17:14 ಅವರು ಯಜ್ಞದ ಕುರಿಮರಿಯಾದಾತನಿಗೆ ವಿರುದ್ಧವಾಗಿ ಯುದ್ಧ ಮಾಡುವರು. ಆದರೆ ಆತನು ಕರ್ತರ ಕರ್ತನೂ ರಾಜಾಧಿರಾಜನೂ ಆಗಿರುವುದರಿಂದ ಕುರಿಮರಿಯು ಅವರನ್ನು ಜಯಿಸುವನು ಮತ್ತು ದೇವರು ಕರೆದವರೂ, ದೇವರು ಆದುಕೊಂಡವರೂ, ನಂಬಿಗಸ್ತರೂ ಆಗಿರುವ ಆತನವರು ಕುರಿಮರಿಯೊಂದಿಗೆ ಜಯದಲ್ಲಿ ಪಾಲುಗಾರರಾಗುವರು."**

ವಿಶ್ವಾಸಿಗಳು ಕರ್ತರಾಗಿದ್ದಾರೆ ಮತ್ತು ಯೇಸು ಆ ಕರ್ತರ ಕರ್ತರಾಗಿದ್ದಾರೆ.

ವಿಶ್ವಾಸಿಗಳು ರಾಜರುಗಳಾಗಿದ್ದಾರೆ ಮತ್ತು ಯೇಸು ಆ ರಾಜರುಗಳ ರಾಜರಾಗಿದ್ದಾರೆ.

**ಗಮನಿಸಿರಿ:** ದೇವದರ್ಶನ ಗುಡಾರ, ಯಾಜಕತ್ವ, ಅರ್ಪಣೆಗಳು ಮತ್ತು ಯಾಜಕರುಗಳ ಬಗ್ಗೆ ಹೆಚ್ಚಿನ ಅಧ್ಯಯನಕ್ಕಾಗಿ ನಾವು ಅಲೆಕ್ಸ್. ಡಬ್ಲ್ಯೂ. ನೆಸ್ ರವರ **ಪ್ಯಾಟರ್ನ್ ಫಾರ್ ಲೀವಿಂಗ್** ಪುಸ್ತಕವನ್ನು ಓದಿರೆಂದು ಶಿಫಾರಸ್ಸು ಮಾಡುತ್ತೇವೆ.

## ವಿಮರ್ಶೆಗಾಗಿ ಪ್ರಶ್ನೆಗಳು

1. ಇಸ್ರಾಯೇಲಿನ ಏಳು ಹಬ್ಬಗಳನ್ನು ಪಟ್ಟಿ ಮಾಡಿರಿ.

2. ತುತ್ತೂರಿಗಳ ಹಬ್ಬದ ಮಹತ್ವವನ್ನು ವಿವರಿಸಿರಿ.

3. ಇಂದು ರಾಜರು ಮತ್ತು ಯಾಜಕರಾಗಿ ನಮ್ಮ ಕಾರ್ಯಗಳು ಯಾವುವು?

ಪಾಠ ಏಳು

# *ಹಳೆ ಒಡಂಬಡಿಕೆ ನಾಯಕರುಗಳು*

ಹಳೆ ಒಡಂಬಡಿಕೆಯು ವೀರ ನಾಯಕರಿಂದ ತುಂಬಿದೆ - ನಾವು ಅವರನ್ನು ತಿಳಿದುಕೊಳ್ಳಬೇಕು ಮತ್ತು ಅನುಕರಿಸಬೇಕು. ಅವರ ಜೀವಿತಗಳ ಬಗ್ಗೆ ಸತ್ಯವೇದದಲ್ಲಿರುವ ದಾಖಲೆಯನ್ನು ಓದುವ ಸ್ಥಳವನ್ನು ಯಾವ ವಿಷಯವು ತೆಗೆದುಕೊಳ್ಳಲು ಸಾಧ್ಯವಿಲ್ಲ.

ನಾವು ಹಳೆ ಒಡಂಬಡಿಕೆಯು ವೀರ ನಾಯಕರ ಜೀವಿತದ ದಾಖಲೆಗಳನ್ನು ಓದುವಾಗ ನಮಗೆ ನಾವೇ ಈ ಪ್ರಶ್ನೆಗಳನ್ನು ಕೇಳಬೇಕು - "ಯಾವ ವಿಷಯವು ಅವರ ಜೀವನವು ಅವರ ಸುತ್ತಮುತ್ತಲಿದ್ದ ಜನರಿಗಿಂತ ಭಿನ್ನವಾಗಿರುವಂತೆ ಮಾಡಿತು? ನಾನು ಅವರಿಂದ ಏನನ್ನು ಕಲಿಯಬೇಕು? " ಅವರು ಮಾಡಿದ್ದು ಮುಖ್ಯವಾದದ್ದು, ಆದರೆ ಬಹುಶಃ ಅವರ ವ್ಯಕ್ತಿತ್ವದ ಮೂಲಕ ನಾವು ಇನ್ನಷ್ಟು ತಿಳಿದುಕೊಳ್ಳಬಹುದಾಗಿದೆ.

ಇಬ್ರಿಯರಿಗೆ ಬರೆದ ಪತ್ರದ ಲೇಖಕನು ಅದೇ ಪುಸ್ತಕದ 11 ನೇ ಅಧ್ಯಾಯದಲ್ಲಿ ವೀರನಾಯಕರ ಒಂದು ಅದ್ಭುತವಾದ ಪಟ್ಟಿಯನ್ನು ಕೊಡುತ್ತಾನೆ. ಅವನು ಪದೇ ಪದೇ "ನಂಬಿಕೆಯ ಮೂಲಕ" ಎಂಬ ಪದಗಳನ್ನು ಬಳಸುತ್ತಾನೆ. ಅಂತಿಮವಾಗಿ ಅವನು ಈ ಮಾತುಗಳೊಂದಿಗೆ ಮುಗಿಸುತ್ತಾನೆ :

**ಇಬ್ರಿಯ 11:32-34 ಇನ್ನೂ ಏನು ಹೇಳಬೇಕು? ಗಿದ್ಯೋನ್, ಬಾರಾಕ ಸಂಸೋನ, ಯೆಪ್ತಾಹ, ದಾವೀದ, ಸಮುವೇಲ ಮತ್ತು ಪ್ರವಾದಿಗಳ ವಿಷಯವಾಗಿ ಹೇಳಬೇಕಾದರೆ ನನಗೆ ಸಮಯ ಸಾಲದು. ನಂಬಿಕೆಯ ಮೂಲಕ ಅವರು**

- **ರಾಜ್ಯಗಳನ್ನೂ ಸ್ವಾಧೀನ ಮಾಡಿಕೊಂಡರು,**
- **ನೀತಿಯನ್ನು ಸ್ಥಾಪಿಸಿದರು,**
- **ವಾಗ್ದಾನಗಳನ್ನು ಪಡೆದುಕೊಂಡರು,**
- **ಸಿಂಹಗಳ ಬಾಯಿ ಕಟ್ಟಿದರು,**
- **ಬೆಂಕಿಯ ಶಕ್ತಿಯನ್ನು ನಂದಿಸಿದರು,**
- **ಕತ್ತಿಯ ಬಾಯಿಂದ ತಪ್ಪಿಸಿಕೊಂಡರು,**
- **ದುರ್ಬಲರಾಗಿದ್ದು ಬಲಿಷ್ಠರಾದರು,**
- **ಯುದ್ಧದಲ್ಲಿ ಪರಾಕ್ರಮಶಾಲಿಗಳಾದರು,**
- **ಪರದೇಶದವರ ಸೈನ್ಯಗಳನ್ನು ಓಡಿಸಿಬಿಟ್ಟರು.**

ಪ್ರತಿಯೊಬ್ಬ ಸತ್ಯವೇದ ವೀರನಾಯಕರ ಜೀವನದಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದು ಅಂಶವು ನಂಬಿಕೆಯಾಗಿದೆ. ಅವರು ಸಾಮಾನ್ಯವಾದ ಸ್ತ್ರೀ ಪುರುಷರಾಗಿದ್ದರು, ಅವರಿಗೆ ಸಾಮಾನ್ಯವಾದ

ಬಲಹೀನತೆಗಳಿದ್ದವು. ಆದರೆ ಅವರು ಈ ಬಲಹೀನತೆಗಳಿಂದ ಮೇಲೇರಿ ನಂಬಿಕೆಯಿಂದ ಜೀವಿಸಿದರು.

## ಹನೋಕನು – ದೇವರೊಂದಿಗೆ ನಡೆದನು

*ವಚನ ಉಲ್ಲೇಖ: ಆದಿಕಾಂಡ 4:17,18;5:19-25; ಯೂದ 1:14*

### ಸಾವನ್ನೇ ಕಾಣಲಿಲ್ಲ !

ಜಲಪ್ರಳಯಕ್ಕೆ ಹಿಂದಿದ್ದ ಕಾಲದಲ್ಲಿ ಹನೋಕನು 365 ವರ್ಷಗಳ ಕಾಲ ಬದುಕಿದ್ದನು. ಅವನು ಜೀವಿಸಿದ್ದ ಕಾಲದಲ್ಲಿ ಮಾನವಕುಲವು ಅತ್ಯಂತ ನೀತಿಗೆಟ್ಟು ಜೀವಿಸಿತು ಮತ್ತು ತಮ್ಮ ಮೇಲೆಯೂ ಭೂಮಿಯ ಮೇಲೆಯೂ ಜಲಪ್ರಳಯದ ರೂಪದಲ್ಲಿ ದೇವರ ನ್ಯಾಯತೀರ್ಪನ್ನು ತಂದುಕೊಂಡಿತು. ಆದಾಗ್ಯೂ, ಹನೋಕನು "ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು".

**ಬಲ:**

*ದೇವರೊಂದಿಗೆ ನಿಕಟವಾದ ಸಂಬಂಧ*

**ಆದಿಕಾಂಡ 5:24 ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ಇರುವಾಗ ದೇವರು ಅವನನ್ನು ಕರೆದುಕೊಂಡ ಕಾರಣ ಕಣ್ಮರೆಯಾಗಿ ಕಾಣದೆ ಹೋದನು.**

ಹನೋಕನು ಸಾಯಲಿಲ್ಲ ! ಅವನು ಈ ಭೂಮಿಯ ಮೇಲೆ ನಡೆಯುತ್ತಿದ್ದನು ನಂತರ ಕಾಣದೆ ಹೋದನು. ಇದು ನಂಬಿಕೆಯ ಮೂಲಕ ನಡೆಯಿತೆಂದು ಇಬ್ರಿಯರಿಗೆ ಬರೆದ ಪತ್ರದ ಲೇಖಕನು ನಮಗೆ ಹೇಳುತ್ತಾನೆ.

**ಇಬ್ರಿಯ 11:5a ನಂಬಿಕೆಯಿಂದಲೇ ಹನೋಕನು ಮರಣವನ್ನು ಅನುಭವಿಸದೇ ಒಯ್ಯಲ್ಪಟ್ಟನು. ದೇವರು ಅವನನ್ನು ತೆಗೆದುಕೊಂಡು ಹೋದದ್ದರಿಂದ ಅವನು ಯಾರಿಗೂ ಕಾಣಸಿಗಲಿಲ್ಲ.**

ಸತ್ಯವೇದದ ಪ್ರಕಾರ, ಇಬ್ಬರು ಪುರುಷರು ಮಾತ್ರ ಮರಣವನ್ನು ಅನುಭವಿಸಲಿಲ್ಲ - ಹನೋಕನು ಮತ್ತು ಎಲೀಯನು.

### ಹನೋಕನ ಪ್ರವಾದನೆ

ಯೂದನ ಪುಸ್ತಕದಲ್ಲಿ, ಭವಿಷ್ಯದಲ್ಲಿ ನೆರವೇರಲಿರುವ ಹನೋಕನ ಪ್ರವಾದನೆಯು ಕೊಡಲ್ಪಟ್ಟಿದೆ. ಹನೋಕನ ಏಕೈಕ ಪ್ರವಾದನೆಯು ಕ್ರಿಸ್ತನ ಎರಡನೆಯ ಬರೋಣವನ್ನು ಪ್ರಕಟಿಸಿದ್ದು ಒಂದು ಕುತೂಹಲಕಾರವಾದ ವಿಷಯವಾಗಿದೆ.

**ಯೂದ 1:14 ಇಂಥವರ ವಿಷಯದಲ್ಲೇ ಆದಾಮನಿಂದ ಏಳನೆಯ ತಲೆಮಾರಿನವನಾದ ಹನೋಕನು ಸಹ, "ಇಗೋ, ಕರ್ತನು ತನ್ನ ಅಸಂಖ್ಯಾತ ಪರಿಶುದ್ಧರನ್ನು ಕೂಡಿಕೊಂಡು… ಬಂದಿರುವನು" ಎಂಬುದಾಗಿ ಪ್ರವಾದಿಸಿದನು.**

*ವಚನ: ಆದಿಕಾಂಡ 5:29;6-9*

**120 ವರ್ಷಗಳ ನಂಬಿಕೆ ಮತ್ತು ವಿಧೇಯತೆ**

ಭೂಮಿಯ ಮೇಲಿದ್ದ ಅತ್ಯಂತ ದುಷ್ಟ ಕಾಲದಲ್ಲಿ ನೋಹನು ನಾವೆಯನ್ನು ಕಟ್ಟುತ್ತಿರುವಾಗ 120 ವರ್ಷಗಳ ಕಾಲ ನಂಬಿಕೆಯಲ್ಲಿ ಮತ್ತು ವಿಧೇಯತೆಯಲ್ಲಿ ನಡೆದನು. ಭೂಮಿಯ ಮೇಲಿದ್ದ ಪ್ರತಿಯೊಬ್ಬ ಮನುಷ್ಯನೂ ಭ್ರಷ್ಟನಾಗಿದ್ದನು ಎಂದು ಸತ್ಯವೇದವು ನಮಗೆ ಹೇಳುತ್ತದೆ.

**ಬಲಗಳು:**

*ಧೀರ್ಘ ಶಾಂತಿ*
*ದೇವರೊಂದಿಗೆ ನಿಕಟವಾದ ಸಂಬಂಧ*

**ಬಲಹೀನತೆ:**

*ಮದ್ಯಪಾನ*

**ಆದಿಕಾಂಡ 6:5 ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನೂ, ಅವರು ತಮ್ಮ ಹೃದಯದಲ್ಲಿ ಯೋಚಿಸುವುದೆಲ್ಲವು ಯಾವಾಗಲೂ ಕೆಟ್ಟ ಆಲೋಚನೆಗಳನ್ನೇ ಮಾಡುತ್ತಿರುವುದನ್ನು ಯೆಹೋವನು ನೋಡಿದನು.**

ನೋಹನ ಸುತ್ತಲೂ ದುಷ್ಟತನ ತುಂಬಿದ್ದರೂ ಸತ್ಯವೇದವು ಹೀಗೆ ಹೇಳುತ್ತದೆ,

**ಆದಿಕಾಂಡ 6:9b ನೋಹನು ಸತ್ಯವಂತನೂ ಎಲ್ಲಾ ಜನರಲ್ಲಿ ನೀತಿವಂತನು ಆಗಿದ್ದನು; ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು.**

ನೋಹನು ದೇವರೊಂದಿಗೆ ಎಷ್ಟು ನಿಕಟವಾಗಿ ನಡೆದನೆಂದರೆ ದೇವರು ಅವನ ಕುಟುಂಬಕ್ಕೂ ಮತ್ತು ಪ್ರಾಣಿಗಳಿಗೂ ರಕ್ಷಣೆ ಕೊಡುವ ನಾವೆಯನ್ನು ನಿರ್ಮಿಸುವ ಯೋಜನೆಯನ್ನು ನೀಡಿದರು.

ನೋಹನು ನಿಜವಾದ ವ್ಯಕ್ತಿಯಾಗಿದ್ದನು. ಅವನು ನಮ್ಮಂತೆಯೇ ನಂಬಿಕೆಯಿಂದ ನಡೆಯಬೇಕಾಗಿತ್ತು. ವರ್ಷಾನುವರ್ಷ, ಎಪ್ಪತ್ತು ವರ್ಷಗಳಿಗಿಂತಲೂ ಹೆಚ್ಚಿನ ಕಾಲ ಅವನು ಮುಂದೆ ಭೂಮಿಯನ್ನೆಲ್ಲಾ ಆವರಿಸುವಷ್ಟು ಒಂದು ಮಹಾ ಜಲಪ್ರಳಯ ಬರುವಾಗ ತೇಲಬಹುದಾದ ಒಂದು ನಾವೆಯನ್ನು ಕಟ್ಟಿದನು. ಯಾವ ಮನುಷ್ಯನೂ ಎಂದಿಗೂ ಒಂದು ದೋಣಿಯನ್ನು ನೋಡಿರಲಿಲ್ಲ ಮತ್ತು ಯಾರೂ ಸಹ ಎಂದಿಗೂ ಮಳೆಯನ್ನು ಕಂಡಿರದ ಸಾಧ್ಯತೆಗಳಿವೆ. ಅವನ ಸುತ್ತಲಿದ್ದ ಜನರು ಅವನನ್ನು ಎಷ್ಟರ ಮಟ್ಟಿಗೆ ಪರಿಹಾಸ್ಯ ಮಾಡಿರಬಹುದು, ಹೀಯಾಳಿಸಿರಬಹುದು. ಅವನಿಗೆ ಹುಚ್ಚು ಹಿಡಿದಿದೆ ಎಂದು ಜನರಿಗೆ ತೋರಿರಬಹುದು.

ತಾನು ದೇವರ ಸ್ವರವನ್ನು ಕೇಳಿದ್ದೇನೆ ಮತ್ತು ಎಲ್ಲಾ ಹಿಂಸೆ ತಪ್ಪು ತಿಳುವಳಿಕೆಗಳ ಹೊರತಾಗಿಯೂ ದೇವರು ಹೇಳಿದ್ದನ್ನೇ ನಂಬುತ್ತೇನೆ ಎನ್ನುವ ವ್ಯಕ್ತಿಗೆ ನೋಹನು ಒಂದು ಒಳ್ಳೆಯ ಉದಾಹರಣೆಯಾಗಿದ್ದಾನೆ. ನೋಹನು ನಿರಂತರವಾದ ನಂಬಿಕೆಗೆ ಒಂದು ಒಳ್ಳೆಯ ಉದಾಹರಣೆಯಾಗಿದ್ದಾನೆ.

ಅವನ ಜೀವಿತವನ್ನು ಇಬ್ರಿಯರಿಗೆ ಬರೆದ ಪತ್ರದ ಲೇಖಕನು ಹೀಗೆ ಸಂಕ್ಷೇಪಿಸುತ್ತಾನೆ.

**ಇಬ್ರಿಯ 11:7 ನಂಬಿಕೆಯಿಂದಲೇ ನೋಹನು ಇನ್ನೂ ಕಾಣದಿದ್ದವುಗಳ ವಿಷಯವಾಗಿ ದೇವರಿಂದ ದೈವೋಕ್ತಿಯನ್ನು ಹೊಂದಿ, ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧಮಾಡಿದನು. ನಂಬಿಕೆಯಿಂದಲೇ ಅವನು ಲೋಕದವರು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡನು. ಆದುದ್ದರಿಂದ ನಂಬಿಕೆಯ ಫಲವಾದ ನೀತಿಗೆ ಬಾಧ್ಯನಾದನು.**

## ಅಬ್ರಹಾಮನು – ಆತ್ಮಿಕ ಯಾತ್ರಿ

*ವಚನ: ಆದಿಕಾಂಡ 12-25:10*

**ಗಮನಿಸಿರಿ:** ಅಬ್ರಾಮನು ೯೯ ವರ್ಷ ಪ್ರಾಯದವನಾಗಿದ್ದಾಗ ದೇವರು ಅವನ ಹೆಸರನ್ನು ಅಬ್ರಹಾಮನೆಂದು ಬದಲಾಯಿಸುತ್ತಾರೆ. ನಾವು ಸರಳತೆಗಾಗಿ ಇಲ್ಲಿ ಅಬ್ರಹಾಮ ಎಂಬ ಹೆಸರನ್ನು ಬಳಸುತ್ತಿದ್ದೇವೆ.

### ದೇವರ ಸ್ನೇಹಿತ – ರಾಷ್ಟ್ರಗಳ ಪಿತಾಮಹ

ಅಬ್ರಹಾಮನ ಜೀವನದ ಬಗ್ಗೆ ಅನೇಕ ಪುಸ್ತಕಗಳು ಬರೆಯಲ್ಪಟ್ಟಿವೆ. ಅಲೆದಾಟಗಳ ವರ್ಷಗಳುದ್ದಕ್ಕೂ ಅವನ ನಂಬಿಕೆ ಮತ್ತು ವಿಧೇಯತೆಗೆ ಸಮಾನವಾದದ್ದು ಮತ್ತೊಂದಿಲ್ಲ. ಅವನ ವಿಜಯಗಳನ್ನು ಮತ್ತು ಸೋಲುಗಳನ್ನು ನಿಕಟವಾಗಿ ಹಂಚಿಕೊಳ್ಳುವ ಅವಕಾಶವು ನಮಗೆ ಕೊಡಲ್ಪಟ್ಟಿದೆ. ಅಬ್ರಹಾಮನು ನಮ್ಮಂತೆಯೇ ಮನುಷ್ಯನಾಗಿದ್ದನು ಆದರೂ ಸಹ ಅವನು ರಾಷ್ಟ್ರಗಳ ಪಿತಾಮಹಾನಾಗಲು ದೇವರಿಂದ ಆರಿಸಿಕೊಳ್ಳಲ್ಪಟ್ಟನು.

ಇಬ್ರಿಯರಿಗೆ ಬರೆದ ಪತ್ರದ ಲೇಖಕನು ಅವನ ಜೀವಿತವನ್ನು ಈ ಮಾತುಗಳಲ್ಲಿ ಸಂಕ್ಷಿಪ್ತಗೊಳಿಸುತ್ತಾನೆ :

**ಬಲಗಳು:**

- *ವಿಧೇಯತೆ*
- *ಅತಿಥಿ ಸತ್ಕಾರ*
- *ದೇವರ ಮಾರ್ಗಗಳನ್ನು ಅರಿತವನು*
- *ಇತರರಿಗಾಗಿ ಪ್ರಾರ್ಥಿಸಿದನು*
- *ಉದಾರ ಮನಸ್ಸು*

**ಬಲಹೀನತೆಗಳು:**

- *ಭಯ (ಸಾರಾಳ ಸೌಂದರ್ಯದ ನಿಮಿತ್ತ ಪ್ರಾಣಭಯ)*

**ಇಬ್ರಿಯ 11:8-11 ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟಾಗ ವಿಧೇಯನಾಗಿ ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು. ತಾನು ಹೋಗುವುದು ಎಲ್ಲಿಗೆ ಎಂದು ತಿಳಿಯದೆ ಹೊರಟನು.**

**ನಂಬಿಕೆಯಿಂದಲೇ ಅವನು ವಾಗ್ದಾನದ ದೇಶಕ್ಕೆ ಬಂದಾಗ, ಅಲ್ಲಿ ಅನ್ಯ ದೇಶದವನಂತೆ ಗುಡಾರಗಳಲ್ಲಿ ಇದ್ದುಕೊಂಡು ಪ್ರವಾಸಿಯಾಗಿ ಬದುಕಿದನು. ಅದೇ ವಾಗ್ದಾನಕ್ಕೆ ಸಹಭಾಧ್ಯರಾಗಿದ್ದ ಇಸಾಕನೂ, ಯಾಕೋಬನೂ ಅವನಂತೆಯೇ ಗುಡಾರಗಳಲ್ಲಿ ವಾಸಿಸಿದರು. ಯಾಕೆಂದರೆ ಅವನು ಶಾಶ್ವತವಾದ ಅಸ್ತಿವಾರಗಳುಳ್ಳ ಪಟ್ಟಣವನ್ನು ಅಂದರೆ ದೇವರು ಸಂಕಲ್ಪಿಸಿ ನಿರ್ಮಿಸಿದ ಪಟ್ಟಣವನ್ನು ಎದುರುನೋಡುತ್ತಿದ್ದನು.**

**ಇದಲ್ಲದೆ ಸಾರಳು ವಾಗ್ದಾನ ಮಾಡಿದಾತನನ್ನು ನಂಬತಕ್ಕವನೆಂದೆಣಿಸಿ ತಾನು ಪ್ರಾಯ ಮೀರಿದವಳಾಗಿದ್ದರೂ ನಂಬಿಕೆಯಿಂದಲೇ ಗರ್ಭವತಿಯಾಗುವುದಕ್ಕೆ ಶಕ್ತಿಯನ್ನು ಹೊಂದಿದಳು.**

ನಾವು ಆಗಾಗ್ಗೆ ಅಬ್ರಹಾಮನ ನಂಬಿಕೆಯ ಬಗ್ಗೆ ಕೇಳುತ್ತೇವೆ, ಆದರೆ ಇಬ್ರಿಯರಿಗೆ ಬರೆದ ಪತ್ರದ ಲೇಖಕನು ಸಾರಳ ನಂಬಿಕೆಯ ಬಗ್ಗೆಯೂ ಪ್ರಸ್ತಾಪಿಸುವುದನ್ನು ಗಮನಿಸುವುದು ಒಳ್ಳೆಯದು.

ಪ್ರವಾದಿಯಾದ ಯೆಶಾಯನ ಮೂಲಕ ದೇವರು ನಮಗೆ ಅಬ್ರಹಾಮನು ತನ್ನ ಸ್ನೇಹಿತನಾಗಿದ್ದನೆಂದು ಹೇಳುತ್ತಾರೆ.

**ಯೆಶಾಯ 41:8 ನನ್ನ ಸೇವಕನಾದ ಇಸ್ರಾಯೇಲೇ, ನಾನು ಆರಿಸಿಕೊಂಡ ಯಾಕೋಬೇ, ನನ್ನ ಸ್ನೇಹಿತನಾದ ಅಬ್ರಹಾಮನ ಸಂತತಿಯೇ…**

**ದೇವರಿಂದ ಕರೆಯಲ್ಪಟ್ಟನು**

ಅಬ್ರಹಾಮನ ವಂಶಾವಳಿಯನ್ನು ಹೊರತುಪಡಿಸಿದರೆ ಅವನು ಎಪ್ಪತ್ತು ವರ್ಷ ಪ್ರಾಯದವನಾಗುವವರೆಗೆ ನಡೆದ ಯಾವ ವಿಷಯವನ್ನೂ ಸತ್ಯವೇದವು ಹೇಳುವುದಿಲ್ಲ. ಅವನು ಎಪ್ಪತ್ತು ವರ್ಷದವನಾದಾಗ ದೇವರು ಅವನೊಂದಿಗೆ ಊರ್ ದೇಶದಲ್ಲಿ ಮಾತನಾಡಿದರು ಮತ್ತು ಆ ದೇಶವನ್ನು ಬಿಟ್ಟು ಹೊರಗೆ ಬರಬೇಕೆಂದು ಕರೆದರು.

**ಆದಿಕಾಂಡ 12:1-3 ಯೆಹೋವನು ಅಬ್ರಾಮನಿಗೆ, "ನೀನು, ನಿನ್ನ ಸ್ವದೇಶವನ್ನೂ, ಬಂಧುಬಳಗವನ್ನೂ, ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು. ನಾನು ನಿನ್ನನ್ನು ಮಹಾ ಜನಾಂಗವಾಗುವಂತೆ ಮಾಡಿ, ಆಶೀರ್ವದಿಸಿ, ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವಾದದ ನಿಧಿಯಾಗುವಿ. ನಿನ್ನನ್ನು ಆಶೀರ್ವದಿಸುವವರನ್ನು ನಾನು ಆಶೀರ್ವದಿಸುವೆನು; ನಿನ್ನನ್ನು ಶಪಿಸುವವರನ್ನು ನಾನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಜನಾಂಗಗಳಿಗೆ ಆಶೀರ್ವಾದವುಂಟಾಗುವುದು" ಎಂದು ಹೇಳಿದನು.**

ದೇವರು ಅಬ್ರಹಾಮನಿಗೆ ಮೂರು ಪಟ್ಟು ವಾಗ್ದಾನ ಮಾಡಿದರು.

- ದೇವರು ಅವನಿಗೆ ದೇಶವನ್ನು ಕೊಡುವರು.
- ಅವನು ಒಂದು ದೊಡ್ಡ ರಾಷ್ಟ್ರದ ಪಿತಾಮಹಾನಾಗುವನು.
- ಅವನ ಮೂಲಕ ಭೂಲೋಕದ ಎಲ್ಲಾ ಕುಟುಂಬಗಳು ಆಶೀರ್ವದಿಸಲ್ಪಡುವವು.

ಈ ವಾಗ್ದಾನಗಳು ಅದ್ಭುತಕರವಾಗಿ ತೋರಿದಾಗ್ಯೂ ಅವುಗಳು ಯಾವ ನಿರ್ದಿಷ್ಟತೆಗಳನ್ನು ಕೊಡಲಿಲ್ಲ. ಅಬ್ರಹಾಮನಿಗೆ ಒಂದು ಆಯ್ಕೆಯಿತ್ತು. ಅವನು ದೇವರನ್ನು ನಂಬಿ ತನಗೆ ತಿಳಿದಿದ್ದೆಲ್ಲವನ್ನೂ ಬಿಟ್ಟು ಅನಿಶ್ಚಿತತೆಯ ಕ್ಷೇತ್ರಕ್ಕೆ ಕಾಲಿಟ್ಟು ನಂಬಿಕೆಯಿಂದ ನಡೆಯಬಹುದಿತ್ತು ಅಥವಾ ತಾನು ಇದ್ದ ಸ್ಥಳದಲ್ಲೇ ಇರಬಹುದಿತ್ತು.

**ಆದಿಕಾಂಡ 12:4a ಯೆಹೋವನು ಹೇಳಿದ ಪ್ರಕಾರ ಅಬ್ರಾಮನು ಹೊರಟುಹೋದನು...**

ಅಬ್ರಹಾಮನು ಊರ್ ದೇಶವನ್ನು ಬಿಡುವುದಕ್ಕಿಂತ ಮುಂಚೆ ಅವನಿಗೆ ಒಂದು ನಿರ್ದಿಷ್ಟ ದೇಶವನ್ನು ಕೊಡುವೆನೆಂದು ದೇವರು ಅವನಿಗೆ ಹೇಳಿರಲಿಲ್ಲ. ಬದಲಾಗಿ ಅವನು ನಂಬಿಕೆಯಿಂದ ನಡೆಯಬೇಕಾಗಿತ್ತು, ಒಬ್ಬ ಅಲೆಮಾರಿಯಂತೆ ಕಾನಾನ್ ದೇಶದಲ್ಲೆಲ್ಲಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣಿಸಬೇಕಾಗಿತ್ತು.

ದೇವರು ನಿರಂತರವಾಗಿ ಅವನನ್ನು ಆಶೀರ್ವದಿಸಿದರು ಮತ್ತು ದೊಡ್ಡ ಸಂಪತ್ತನ್ನು ಕೊಟ್ಟರು, ಆದರೆ ಅವನಿಗೆ ಪುತ್ರಸಂತಾನವಿರಲಿಲ್ಲ - ಬಾಧ್ಯಸ್ಥನರಲಿಲ್ಲ. ಅಂತಿಮವಾಗಿ, ಅವನು ಒಂದು ದೊಡ್ಡ ರಾಷ್ಟ್ರದ ಪಿತಾಮಹಾನಾಗುವನು ಎಂದು ದೇವರು ವಾಗ್ದಾನ ಮಾಡಿ ಹದಿನಾರು ವರ್ಷಗಳಾದ ನಂತರ ಹಾಗಾರಳ ಮೂಲಕ ಒಬ್ಬ ಮಗನನ್ನು - ಇಷ್ಮಾಯೇಲನನ್ನು- ಪಡೆದನು.

ಅರಾಬಿಕ್ ಜನರು ಇಷ್ಮಾಯೇಲನ ಸಂತಾನವಾಗಿದ್ದಾರೆ. ಆದರೆ ಇಷ್ಮಾಯೇಲನು ವಾಗ್ದಾನ ಮಾಡಲ್ಪಟ್ಟ ಮಗನಾಗಿರಲಿಲ್ಲ. ಅವನ ಮೂಲಕ ಲೋಕದ ಎಲ್ಲಾ ರಾಷ್ಟ್ರಗಳು ಆಶೀರ್ವದಿಸಲ್ಪಡುವವೆಂದು ದೇವರು ಹೇಳಿರಲಿಲ್ಲ.

**ಇಸಾಕನು ಜನಿಸಿದನು**

ಇನ್ನೂ ಹದಿಮೂರು ವರ್ಷಗಳು ಕಳೆದ ನಂತರ ದೇವರು ಅಬ್ರಹಾಮನೊಂದಿಗಿನ ತನ್ನ ವಾಗ್ದಾನವನ್ನು ನವೀಕರಿಸಿದರು.

**ಆದಿಕಾಂಡ 17:1,4-6 ಅಬ್ರಾಮನು ತೊಂಭತೊಂಭತ್ತು ವರ್ಷದವನಾದಾಗ ಯೆಹೋವನು ಅವನಿಗೆ ದರ್ಶನದಲ್ಲಿ, "ನಾನು ಸರ್ವಶಕ್ತನಾದ ದೇವರು; ನನ್ನೆದುರಿನಲ್ಲಿ ದೋಷ ಇಲ್ಲದವನಾಗಿ ನಡೆದುಕೊ. "ನಾನು ನಿನ್ನೊಂದಿಗೆ ಒಂದು ಒಡಂಬಡಿಕೆ ಮಾಡಿಕೊಳ್ಳುತ್ತೇನೆ; ಅದೇನೆಂದರೆ ನೀನು ಅನೇಕ ಜನಾಂಗಗಳಿಗೆ ಮೂಲಪುರುಷನಾಗುವಿ, ಇನ್ನು ಮುಂದೆ ನಿನಗೆ ಅಬ್ರಾಮ ಎಂದು ಹೆಸರಿರುವುದಿಲ್ಲ. ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲಪಿತೃವಾಗಿ ನೇಮಿಸಿರುವುದರಿಂದ ನಿನಗೆ ಇನ್ನು ಮೇಲೆ ಅಬ್ರಹಾಮ ಎಂದು ಹೆಸರಿರುವುದು. ನಿನಗೆ ಅತ್ಯಧಿಕವಾದ ಸಂತಾನವನ್ನು ಕೊಡುವೆನು ನಿನ್ನಿಂದ ಜನಾಂಗಗಳು ಉತ್ಪತ್ತಿಯಾಗಿ ಅರಸರು ಹುಟ್ಟುವರು.**

**ಆದಿಕಾಂಡ 21:5 ಇಸಾಕನು ಹುಟ್ಟಿದಾಗ ಅಬ್ರಹಾಮನು ನೂರು ವರ್ಷದವನಾಗಿದ್ದನು.**

ಅಬ್ರಹಾಮ ಎಂಬ ಹೆಸರಿನ ಅರ್ಥ ಒಂದು ದೊಡ್ಡ ಜನಾಂಗದ ತಂದೆ.

**ಯಜ್ಞಬಲಿ**

ಅಬ್ರಹಾಮನು ದೇವರ ಮೇಲಿಟ್ಟ ನಂಬಿಕೆಯಲ್ಲಿ ಮುಂದುವರೆದನು ಮತ್ತು ಇಸಾಕನು ಹುಟ್ಟುವುದಕ್ಕಾಗಿ ಮೂವತ್ತು ವರ್ಷಗಳ ಕಾಲ ಕಾದನು. ಆದರೆ ಇಸಾಕನು ಇನ್ನೂ ಯೌವ್ವನಸ್ತನಾಗಿರುವಾಗ ದೇವರು ಮತ್ತೊಮ್ಮೆ ಅಬ್ರಹಾಮನೊಂದಿಗೆ ಮಾತನಾಡಿದರು. ಯೆಹೂದಿ

ಇತಿಹಾಸಕಾರನಾದ ಜೊಸೆಫಸ್ ಇಸಾಕನಿಗೆ ಈ ಸಮಯದಲ್ಲಿ ಇಪ್ಪತ್ತೈದು ವರ್ಷವಾಗಿತ್ತೆಂದು ಹೇಳುತ್ತಾನೆ.

**ಆದಿಕಾಂಡ 22:1,2 ಈ ಸಂಗತಿಗಳು ಆದ ಮೇಲೆ ದೇವರು ಅಬ್ರಹಾಮನನ್ನು ಪರೀಕ್ಷಿಸಿದನು. ಹೇಗೆಂದರೆ ಆತನು ಅವನನ್ನು, "ಅಬ್ರಹಾಮನೇ" ಎಂದು ಕರೆಯಲು ಅವನು, "ಇಗೋ, ಇದ್ದೇನೆ" ಎಂದನು.**

**ಆಗ ಆತನು, "ನಿನಗೆ ಪ್ರಿಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನು ಕರೆದುಕೊಂಡು ಮೋರೀಯ ದೇಶಕ್ಕೆ ಹೋಗಿ ಅಲ್ಲಿ ಅವನನ್ನು ನಾನು ಹೇಳುವ ಒಂದು ಬೆಟ್ಟದ ಮೇಲೆ ಸರ್ವಾಂಗಹೋಮವಾಗಿ ಅರ್ಪಿಸಬೇಕು" ಎಂದನು.**

ಈ ಸಂದರ್ಭದಲ್ಲಿ ಅಬ್ರಹಾಮನ ಮನಸ್ಸಿನಲ್ಲಿ ಬಂದ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ. ದೇವರು... ಅವನ ಸ್ನೇಹಿತನು... ವಾಗ್ದಾನ ಪುತ್ರನಿಗಾಗಿ ಇಷ್ಟೊಂದು ವರ್ಷಗಳು ಕಾದ ನಂತರ... ತನ್ನ ವಾರಸ್ಸುದಾರನನ್ನು... ದೇವರು ಈಗ ಇಸಾಕನನ್ನು ಬಲಿ ಅರ್ಪಿಸಬೇಕೆಂದು ಹೇಳಿದರೇ ?

### ನಂಬಿಕೆ ಮತ್ತು ವಿಧೇಯತೆ

ಅಬ್ರಹಾಮನ ಪ್ರತಿಕ್ರಿಯೆ ಏನಾಗಿತ್ತು ? ಈಗಲೂ ವಿಧೇಯತೆ ಮತ್ತು ನಂಬಿಕೆ ತೋರಿಸಿದನು.

**ಆದಿಕಾಂಡ 22:3 ಅದರಂತೆ ಮುಂಜಾನೆಯೇ ಎದ್ದು ಅಬ್ರಹಾಮನು ಕತ್ತೆಗೆ ತಡಿ ಹಾಕಿಸಿ, ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ಒಡೆಸಿ ಅದನ್ನು ತೆಗೆದುಕೊಂಡು ತನ್ನ ಸೇವಕರಲ್ಲಿ ಇಬ್ಬರನ್ನೂ, ತನ್ನ ಮಗನಾದ ಇಸಾಕನನ್ನೂ ಕರೆದುಕೊಂಡು ದೇವರು ಹೇಳಿದ ಸ್ಥಳಕ್ಕೆ ಹೊರಟನು.**

ಅವನು ತನ್ನ ಸೇವಕರಿಗೆ ನೀವು ಇಲ್ಲೇ ಇರ್ರಿ ಎಂದು ಹೇಳಿದಾಗ ಅವನ ನಂಬಿಕೆಯನ್ನು ನಾವು ಕಾಣಬಹುದು.

**ಆದಿಕಾಂಡ 22:4,5 ಮೂರನೆಯ ದಿನದಲ್ಲಿ ಅಬ್ರಹಾಮನು ಕಣ್ಣೆತ್ತಿ ನೋಡುವಾಗ ಆ ಸ್ಥಳವು ದೂರದಲ್ಲಿ ಕಾಣಿಸಲು ಅವನು ತನ್ನ ಸೇವಕರಿಗೆ, "ನೀವು ಇಲ್ಲೇ ಕತ್ತೆಯ ಬಳಿಯಲ್ಲಿರಿ; ನಾನೂ ನನ್ನ ಮಗನೂ ಅಲ್ಲಿಗೆ ಹೋಗಿ ದೇವಾರಾಧನೆ ಮಾಡಿಕೊಂಡು ನಿಮ್ಮ ಬಳಿಗೆ ಬರುತ್ತೇವೆ" ಎಂದು ಅಬ್ರಹಾಮನು ಹೇಳಿದನು.**

*ನಿಮ್ಮ ಬಳಿಗೆ ಹಿಂತಿರುಗಿ ಬರುತ್ತೇವೆ,* ಅಬ್ರಹಾಮನು ದೇವರು ಹೇಳಿದಂತೆ ಯಜ್ಞಬಲಿಯನ್ನು ಅರ್ಪಿಸಲಿದ್ದನು ; ಆದರೂ ದೇವರು ತನಗೆ ಈ ವಾಗ್ದಾನ ಪುತ್ರನನ್ನು ಕೊಟ್ಟಿದ್ದಾರೆ ಎಂಬುದನ್ನು ತಿಳಿದಿದ್ದನು ಮತ್ತು ತಾನು ಅನೇಕ ರಾಷ್ಟ್ರಗಳಿಗೆ ಪಿತಾಮಹಾನಾಗುವೆನೆಂದೂ ತಿಳಿದಿದ್ದನು.

ಅವನು ಇಸಾಕನೊಂದಿಗೆ ಮಾತನಾಡುವಾಗ ಅವನ ನಂಬಿಕೆಯನ್ನು ಕೇಳಿಸಿಕೊಳ್ಳುತ್ತೇವೆ :

**ಆದಿಕಾಂಡ 22:8a ಅಬ್ರಹಾಮನು, "ಮಗನೇ, ಹೋಮಕ್ಕೆ ಬೇಕಾದ ಕುರಿಮರಿಯನ್ನು ದೇವರೇ ಒದಗಿಸುವನು" ಎಂದನು.**

ಕೊನೆ ಗಳಿಗೆಯಲ್ಲಿ, ದೇವರು ನಿಜವಾಗಲೂ ಒಂದು ಪರ್ಯಾಯ ಬಲಿಯನ್ನು ಒದಗಿಸಿದರು.

**ಆದಿಕಾಂಡ 22:11-13 ಆಗ ಯೆಹೋವನ ದೂತನು ಆಕಾಶದೊಳಗಿನಿಂದ, "ಅಬ್ರಹಾಮನೇ, ಅಬ್ರಹಾಮನೇ" ಎಂದು ಅವನನ್ನು ಕರೆದನು. ಅದಕ್ಕೆ ಅಬ್ರಹಾಮನು, "ಇಗೋ, ಇದ್ದೇನೆ" ಎಂದನು.**

**ಆ ದೂತನು ಅವನಿಗೆ, "ಹುಡುಗನ ಮೇಲೆ ಕೈ ಹಾಕಬೇಡ, ಅವನಿಗೆ ಏನೂ ಮಾಡಬೇಡ. ನೀನು ನಿನ್ನ ಒಬ್ಬನೇ ಮಗನನ್ನು ನನಗೆ ಸಮರ್ಪಿಸುವುದಕ್ಕೆ ಹಿಂಜರಿಯಲಿಲ್ಲ. ಈಗ ನೀನು ದೇವರಲ್ಲಿ ಭಯಭಕ್ತಿಯುಳ್ಳವನು ಎಂದು ನನಗೆ ಗೊತ್ತಾಯಿತು" ಎಂದು ಹೇಳಿದನು.**

**ಅಬ್ರಹಾಮನು ಕಣ್ಣೆತ್ತಿ ನೋಡಲಾಗಿ ತನ್ನ ಹಿಂದೆ, ಒಂದು ಟಗರು ಪೊದೆಯಲ್ಲಿ ಕೊಂಬುಗಳಿಂದ ಸಿಕ್ಕಿ ಹಾಕಿಕೊಂಡಿರುವುದನ್ನು ಕಂಡನು. ಅವನು ಹೋಗಿ ಅದನ್ನು ಹಿಡಿದು ತಂದು ತನ್ನ ಮಗನಿಗೆ ಬದಲಾಗಿ ಹೋಮಮಾಡಿದನು.**

ಈ ಯಜ್ಞಬಲಿಯಲ್ಲಿ, ದೇವರು ಇಡೀ ಲೋಕಕ್ಕಾಗಿ ತನ್ನ ಮಗನನ್ನು ತ್ಯಾಗಬಲಿಯಾಗಿ ಕೊಡುತ್ತಿರುವ ಒಂದು ಸುಂದರವಾದ ಚಿತ್ರಣವನ್ನು ನಾವು ಕಾಣುತ್ತೇವೆ. ನಾವು ಭೂಗೋಳಶಾಸ್ತ್ರದ ಅಧ್ಯಯನಕ್ಕೆ ಹೋಗುವುದಾದರೆ, ಈ ಟಗರು ಯಜ್ಞಬಲಿಯಾಗಿ ಅರ್ಪಿಸಲ್ಪಟ್ಟ ಅದೇ ಸ್ಥಳದಲ್ಲಿ ಸಾವಿರಾರು ವರ್ಷಗಳ ನಂತರ ಯೇಸು ಶಿಲುಬೆಗೆ ಹಾಕಲ್ಪಟ್ಟಿರುವ ಸಾಧ್ಯತೆಗಳಿವೆ.

## ಯಾಕೋಬ – ವಂಚಕನಿಂದ ರಾಜಕುಮಾರ

*ವಚನ: ಆದಿಕಾಂಡ 25:21-49:33*

### ಯಾಕೋಬನಿಂದ ಇಸ್ರಾಯೇಲ್

ಯಾಕೋಬನ ಜೀವಿತವು ತದ್ವಿರೋಧಗಳ ಜೀವನವಾಗಿದೆ. ಅವನ ಹೆಸರಿನ ಅರ್ಥ ವಂಚಕ ಮತ್ತು ಅವನ ಜೀವನವು ಹಾಗೆಯೇ ಆರಂಭವಾಯಿತು. ಆದರೂ ದೇವರು ''ನಾನು ಯಾಕೋಬನನ್ನು ಪ್ರೀತಿಸಿದೆನು''ಎಂದು ಹೇಳುತ್ತಾರೆ.

ಸ್ತ್ರೀ ಪುರುಷರು ದೇವರ ಯೋಜನೆಗಳನ್ನು ತಾವೇ ಮಾಡಲು ಯತ್ನಿಸುವ ಕಥೆ ಅವನದು. ಆತ್ಮದಿಂದ ದೇವರು ಮಾಡಲು ಬಯಸುವುದನ್ನು ಶಾರೀರಿಕವಾಗಿ ಮಾಡಲು ಯತ್ನಿಸುವ ಜನರ ಕಥೆ ಅದು. ಎಲ್ಲಾ ಬಲ್ಲ ದೇವರ ಜೀವನ ಬದಲಾಯಿಸುವ ಶಕ್ತಿಯ ಒಂದು ಉತ್ತಮವಾದ ಉದಾಹರಣೆಯೂ ಸಹ ಅದಾಗಿದೆ.

**ಬಲಗಳು:**

*ದೇವರ ಮಾರ್ಗಗಳನ್ನು ಅರಿತವನು*

**ಬಲಹೀನತೆ:**

*ವಂಚನೆ*

ಅವಳಿ ಮಕ್ಕಳಾದ ಏಸಾವ ಮತ್ತು ಯಾಕೋಬರು ಜನಿಸುವುದಕ್ಕಿಂತ ಮುಂಚೆ ದೇವರು ಅವರ ಬಗ್ಗೆ ಹೀಗೆ ಮಾತನಾಡಿದರು.

**ಆದಿಕಾಂಡ 25:23 ಯೆಹೋವನು ಆಕೆಗೆ, "ನಿನ್ನ ಗರ್ಭದಲ್ಲಿ ಎರಡು ಜನಾಂಗಗಳು ಇವೆ; ಆ ಎರಡು ಜನಾಂಗಗಳು ಹುಟ್ಟಿನಿಂದಲೇ ಭಿನ್ನವಾಗಿರುವವು; ಅವುಗಳಲ್ಲಿ ಒಂದು ಮತ್ತೊಂದಕ್ಕಿಂತ ಬಲಿಷ್ಠವಾಗುವುದು; ಹಿರಿಯವನು ಕಿರಿಯವನಿಗೆ ಸೇವೆ ಮಾಡುವನು" ಎಂದು ಹೇಳಿದನು.**

"ಹಿರಿಯವನು ಕಿರಿಯವನಿಗೆ ಸೇವೆ ಮಾಡುವನು" ಎಂದು ದೇವರು ಹೇಳಿದರು, ಆದರೆ ಆದಕಾಂಡ 25 ರಲ್ಲಿ, ಏಸಾವನು ತನ್ನ ಜೇಷ್ಠ ಪುತ್ರನ ಹಕ್ಕನ್ನು ತನಗೆ ಕೊಡುವಂತೆ ಯಾಕೋಬನು ಹೇಗೆ ಮನವೊಲಿಸಿದನೆಂದು ಕಾಣುತ್ತೇವೆ. ಆದಿಕಾಂಡ 27 ರಲ್ಲಿ, ಜೇಷ್ಠಪುತ್ರನಾದ ಏಸಾವನಿಂದ ಜನ್ಮಹಕ್ಕನ್ನು ಕದ್ದುಕೊಳ್ಳಲು ರೆಬೆಕ್ಕಳು ಮತ್ತು ಯಾಕೋಬರು ಹೇಗೆ ಹೊಂಚು ಹಾಕಿದರೆಂಬ ಕಥೆಯನ್ನು ಓದುತ್ತೇವೆ. ಯಾಕೋಬನು ವಂಚಿಸಿದನು, ತಂದೆಗೆ ಸುಳ್ಳು ಹೇಳಿದನು ಮತ್ತು ತನ್ನ ಸುಳ್ಳುಗಳಲ್ಲಿ ಯೆಹೋವನ ಹೆಸರನ್ನು ಸಹ ಬಳಸಿದನು. ಅವನು ಏಸಾವನಿಗೆ ಸಿಗಬೇಕಿದ್ದ ಆಶೀರ್ವಾದವನ್ನು ಪಡೆದನು, ಆದರೆ ಪ್ರಾಣಭಯದ ಸಲುವಾಗಿ ಅಲ್ಲಿಂದ ಓಡಿಹೋದನು.

**ಬೆತೇಲ್ ನಲ್ಲಿ ದರ್ಶನ**

ಯಾಕೋಬನು ತನ್ನ ಅಣ್ಣನ ಕೋಪದಿಂದ ತಪ್ಪಿಸಿಕೊಂಡು ಓಡುತ್ತಿದ್ದಾಗಲೂ ಬೆತೇಲ್ ನಲ್ಲಿ ದರ್ಶನವನ್ನು ಕಂಡನು.

**ಆದಿಕಾಂಡ 28:12-15 ಆ ರಾತ್ರಿ ಅವನು ಒಂದು ಕನಸು ಕಂಡನು. ಆ ಕನಸಿನಲ್ಲಿ ಒಂದು ಏಣಿಯು ಭೂಮಿಯ ಮೇಲೆ ನಿಂತಿತು. ಅದರ ತುದಿ ಆಕಾಶವನ್ನು ಮುಟ್ಟಿತು. ಅದರ ಮೇಲೆ ದೇವ ದೂತರು ಏರುತ್ತಾ ಇಳಿಯುತ್ತಾ ಇದ್ದರು.**

**ಇದಲ್ಲದೆ ಯೆಹೋವನು ಅದರ ಮೇಲೆ ನಿಂತುಕೊಂಡು, "ನಿನ್ನ ತಂದೆಯಾದ ಅಬ್ರಹಾಮನ ದೇವರೂ, ಇಸಾಕನ ದೇವರೂ ಆಗಿರುವ ಯೆಹೋವನು ನಾನೇ. ನೀನು ಮಲಗಿರುವ ಭೂಮಿಯನ್ನು ನಿನಗೂ, ನಿನ್ನ ಸಂತತಿಗೂ ಕೊಡುವೆನು. ನಿನ್ನ ಸಂತತಿಯು ಭೂಮಿಯ ಧೂಳಿನಷ್ಟು ಅಸಂಖ್ಯವಾಗುವುದು. ನೀನು ಪೂರ್ವ, ಪಶ್ಚಿಮ, ದಕ್ಷಿಣ ಉತ್ತರ ದಿಕ್ಕುಗಳಿಗೆ ಹರಡಿಕೊಳ್ಳುವಿ. ನಿನ್ನಿಂದಲೂ, ನಿನ್ನ ಸಂತತಿಯಿಂದಲೂ, ಭೂಮಿಯ ಎಲ್ಲಾ ಕುಲದವರು ಆಶೀರ್ವಾದ ಹೊಂದುವರು. ಇಗೋ, ನಾನು ನಿನ್ನ ಸಂಗಡ ಇದ್ದು ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಪಾಡಿ, ಪುನಃ ಈ ದೇಶಕ್ಕೆ ಬರಮಾಡುವೆನು. ಏಕೆಂದರೆ ನಾನು ನಿನಗೆ ಹೇಳಿದ್ದನ್ನೆಲ್ಲಾ ನೆರವೇರಿಸದ ಹೊರತು ಬಿಡುವುದಿಲ್ಲ" ಎಂದನು.**

ದೇವರು ಅಬ್ರಹಾಮನಿಗೆ ನೀಡಿದ್ದ ವಾಗ್ದಾನವನ್ನು ನವೀಕರಿಸಿದರು. ಮೆಸ್ಸೀಯನು ಯಾಕೋಬನ ಮೂಲಕ ಬರುವನು.

**ಆದಿಕಾಂಡ 28:20-22 ಯಾಕೋಬನು ಅಲ್ಲಿ ಪ್ರಮಾಣ ಮಾಡಿ, "ದೇವರು ನನ್ನ ಸಂಗಡ ಇದ್ದು ನಾನು ಹೋಗುವ ಈ ಮಾರ್ಗದಲ್ಲಿ ನನ್ನನ್ನು ಕಾಪಾಡಿ ಉಣ್ಣುವುದಕ್ಕೆ ಆಹಾರವನ್ನೂ, ಉಡುವುದಕ್ಕೆ ವಸ್ತ್ರವನ್ನೂ, ನನಗೆ ಕೊಟ್ಟು, ತಿರುಗಿ ನನ್ನನ್ನು ನನ್ನ ತಂದೆಯ ಮನೆಗೆ ಸುರಕ್ಷಿತವಾಗಿ ಬರಮಾಡಿದರೆ ಯೆಹೋವನೇ ನನಗೆ ದೇವರಾಗಿರುವನು. ಇದಲ್ಲದೆ ನಾನು ಸ್ತಂಭವಾಗಿ ನಿಲ್ಲಿಸಿದ ಈ ಕಲ್ಲು ದೇವರ ಮನೆಯಾಗುವುದು. ಆಗ ನೀನು ನನಗೆ ಕೊಡುವುದರಲ್ಲೆಲ್ಲಾ ಹತ್ತರಲ್ಲಿ ಒಂದು ಭಾಗವನ್ನು ನಿನಗೆ ನಾನು ಖಂಡಿತವಾಗಿ ಕೊಡುವೆನು" ಎಂದು ಹರಕೆಮಾಡಿಕೊಂಡನು..''**

### ವಂಚಕನಿಗೇ ವಂಚನೆ

ಯಾಕೋಬನ ಜೀವನವು ಇದ್ದಕ್ಕಿದ್ದಂತೆ ಪರಿಪೂರ್ಣವಾಗಲಿಲ್ಲ. ಅವನು ತನ್ನ ತಂದೆಯನ್ನು ವಂಚಿಸಿದ್ದನು, ಮತ್ತು ಈಗ ಅವನು ತನ್ನ ಮಾವನಾಗಿರುವ ಲಾಬಾನನಿಂದ ವಂಚಿಸಲ್ಪಟ್ಟನು. ರಾಹೇಲಳನ್ನು ತನ್ನ ಹೆಂಡತಿಯಾಗಿ ಪಡೆಯಲು ಏಳು ವರ್ಷ ಕೆಲಸ ಮಾಡಲು ಅವನು ಒಪ್ಪಂದ ಮಾಡಿಕೊಂಡನು, ಆದರೆ ರಾಹೇಲಳ ಸಹೋದರಿಯಾದ ಲೇಹಳು ಮತ್ತು ಲಾಬಾನನು ಅವನನ್ನು ವಂಚಿಸಿದರು ಮತ್ತು ರಾಹೇಲಳನ್ನು ಪಡೆಯಲು ಅವನು ಇನ್ನೂ ಏಳು ವರ್ಷ ಕೆಲಸ ಮಾಡಬೇಕಾಯಿತು.

ಅಂತಿಮವಾಗಿ, ಯಾಕೋಬನು ಲಾಬಾನನೊಂದಿಗೆ ಇಪ್ಪತ್ತು ಪ್ರಕ್ಷುಬ್ಧ ವರ್ಷಗಳ ಕಾಲ ಇದ್ದ ನಂತರ, ಲಾಬಾನನು ನಿರಂತರವಾಗಿ ಅವನನ್ನು ದುರುಪಯೋಗಪಡಿಸಿಕೊಂಡ ನಂತರ, ದೇವರು ಅವನು ತನ್ನ ಸ್ವಂತ ನಾಡಿಗೆ ಮರಳಲು ಹೇಳಿದನು.

**ಆದಿಕಾಂಡ 31:13 ನೀನು ಸ್ತಂಭವನ್ನು ಅಭಿಷೇಕಿಸಿ ನನಗೆ ಪ್ರಮಾಣ ಮಾಡಿದ ಬೇತೇಲಿನ ದೇವರು ನಾನೇ. ಈಗ ನೀನೆದ್ದು ಈ ದೇಶವನ್ನು ಬಿಟ್ಟು ನೀನು ಹುಟ್ಟಿದ ದೇಶಕ್ಕೂ ಬಂಧುಗಳ ಬಳಿಗೂ ಹಿಂತಿರುಗಿ ಹೋಗು'" ಎಂದು ಹೇಳಿದನು.**

ಯಾಕೋಬನು ದೇವರಿಗೆ ವಿಧೇಯನಾದನು, ಆದರೆ ಅವನು ಈಗಲೂ ತನ್ನ ಅಣ್ಣನಾದ ಏಸಾವನಿಗೆ ಹೆದರುತ್ತಿದ್ದನು; ಏಸಾವನು ನಾಲ್ಕು ನೂರು ಜನರೊಂದಿಗೆ ಅವನನ್ನು ಭೇಟಿಯಾಗಲು ಬರುತ್ತಿದ್ದಾನೆಂದು ಕೇಳಿದಾಗ ಅವನು ಪ್ರಾರ್ಥಿಸಲು ಪ್ರಾರಂಭಿಸಿದನು! ದೇವರು ತನಗೆ ನೀಡಿದ ವಾಗ್ದಾನಗಳನ್ನು ದೇವರಿಗೆ ನೆನಪಿಸಿದನು. ಅವನು ತನ್ನ ಹೆಂಡತಿ ಮತ್ತು ಮಕ್ಕಳ ರಕ್ಷಣೆಗಾಗಿ ಪ್ರಾರ್ಥಿಸಿದನು.

**ಪೆನಿಯೇಲಿನಲ್ಲಿ ಭೇಟಿ**

ಅವನು ಪೆನಿಯೇಲಿನಲ್ಲಿ ಪ್ರಾರ್ಥನೆಯನ್ನು ಮುಂದುವರಿಸುತ್ತಿದ್ದಂತೆ ದೇವರೊಂದಿಗೆ ಒಂದು ವೈಯಕ್ತಿಕ ಭೇಟಿಯನ್ನು ಹೊಂದಿದನು. ಅವನ ಹೆಸರು ಮತ್ತು ಜೀವನವೆರಡೂ ಬದಲಾಯಿತು.

**ದೇವರೊಂದಿಗೆ ಹೋರಾಡಲು ಅನುಮತಿ ಇದೆಯೇ?**

*ಹೌದು, ಸದುದ್ದೇಶದಿಂದ ನಂಬಿಕೆಯೊಂದಿಗೆ ಮಾಡುವುದಾದರೆ ಹೌದು*

**ಉದಾಹರಣೆಗಳು:**

***ಅಬ್ರಹಾಮ***
*ದೇವರೊಂದಿಗೆ ಸೊದೊಮ್ ಮತ್ತು ಗೊಮರಕ್ಕಾಗಿ ಹೋರಾಡಿದನು*

***ಯಾಕೋಬ***
*ಆಶೀರ್ವಾದಕ್ಕಾಗಿ ದೇವರೊಂದಿಗೆ ಹೋರಾಡಿದನು*

***ಮೋಶೆ***
*ಇಸ್ರಾಯೇಲ್ ಜನರಿಗಾಗಿ ದೇವರೊಂದಿಗೆ ಹೋರಾಡಿದನು*

**ಆದಿಕಾಂಡ 32:24-30 ಯಾಕೋಬನು ಒಂಟಿಯಾಗಿ ಹಿಂದೆ ನಿಂತಿರಲು ಯಾರೋ ಒಬ್ಬ ಪುರುಷನು ಬೆಳಗಾಗುವ ತನಕ ಅವನ ಸಂಗಡ ಹೋರಾಡಿದನು. ಆ ಪುರುಷನು ತಾನು ಗೆಲ್ಲದೆ ಇರುವುದನ್ನು ಕಂಡು ಯಾಕೋಬನ ತೊಡೆಯ ಕೀಲನ್ನು ಮುಟ್ಟಿದ್ದರಿಂದ ಯಾಕೋಬನು ಅವನ ಸಂಗಡ ಹೋರಾಡುತ್ತಿರುವಾಗಲೇ ಅವನ ತೊಡೆಯ ಕೀಲು ತಪ್ಪಿತು. ಆ ಪುರುಷನು, "ನನ್ನನ್ನು ಬಿಡು, ಬೆಳಗಾಗುತ್ತಿದೆ" ಎನ್ನಲು, ಯಾಕೋಬನು, "ನೀನು ನನ್ನನ್ನು ಆಶೀರ್ವದಿಸದ ಹೊರತು ನಾನು ನಿನ್ನನ್ನು ಬಿಡುವುದಿಲ್ಲ" ಎಂದನು.**

**ಆ ಪುರುಷನು, "ನಿನ್ನ ಹೆಸರೇನು?" ಎಂದು ಕೇಳಿದ್ದಕ್ಕೆ ಅವನು, "ಯಾಕೋಬನು"ಎಂದಾಗ, ಅವನು ಯಾಕೋಬನಿಗೆ, "ಇನ್ನು ಮೇಲೆ ನೀನು ಯಾಕೋಬನೆಂದು ಕರೆಯಲ್ಪಡುವುದಿಲ್ಲ; ನೀನು ದೇವರ ಸಂಗಡಲೂ, ಮನುಷ್ಯರ ಸಂಗಡಲೂ ಹೋರಾಡಿ ಗೆದ್ದವನಾದುದರಿಂದ ನಿನಗೆ 'ಇಸ್ರಾಯೇಲ್' ಎಂದು ಹೆಸರಾಗುವುದು" ಎಂದು ಹೇಳಿದನು.**

**ಯಾಕೋಬನು, "ನೀನು ನಿನ್ನ ಹೆಸರನ್ನು ನನಗೆ ತಿಳಿಸಬೇಕು" ಎಂದು ಅವನನ್ನು ಕೇಳಿಕೊಂಡಾಗ ಆತನು, "ನನ್ನ ಹೆಸರನ್ನು ವಿಚಾರಿಸುವುದೇಕೆ?" ಎಂದು ಹೇಳಿ ಅಲ್ಲಿ ಅವನನ್ನು ಆಶೀರ್ವದಿಸಿದನು.**

**ಆಗ ಯಾಕೋಬನು, "ನಾನು ದೇವರನ್ನು ಪ್ರತ್ಯಕ್ಷವಾಗಿ ನೋಡಿದೆನಲ್ಲಾ; ಆದರೂ ನನ್ನ ಪ್ರಾಣ ಉಳಿದಿದೆ" ಎಂದು ಹೇಳಿ ಆ ಸ್ಥಳಕ್ಕೆ ಪೆನೀಯೇಲ್ ಎಂದು ಹೆಸರಿಟ್ಟನು.**

ವಂಚಕನಾದ ಯಾಕೋಬನು ಇಸ್ರಾಯೇಲನಾಗಿದ್ದನು, ದೇವರ ಸೈನಿಕನಾಗಿದ್ದನು. ಅವನ ಸಂತಾನವು ಇಸ್ರಾಯೇಲರೆಂದು ಕರೆಯಲ್ಪಟ್ಟರು. ಅವರು ಇಂದಿಗೂ ಹಾಗೆಯೇ ಕರೆಯಲ್ಪಡುತ್ತಾರೆ.

**ಯೋಸೇಫ – ರಾಷ್ಟ್ರಗಳ ರಕ್ಷಕ**

---

*ವಚನ: ಆದಿಕಾಂಡ 37-50*

**ಸಿರಿತನದಿಂದ ಬಡತನಕ್ಕೆ – ಎರಡೆರಡು ಬಾರಿ**

ಯೋಸೇಫನ ಜೀವನದ ಬಗ್ಗೆ ಸತ್ಯವೇದ ಕೊಡುವ ದಾಖಲೆಯಿಂದ ಅವನ ಬಾಲ್ಯಜೀವನವು ಒಂದು ಸುಂದರವಾದ ಗೀತೆಯಂತೆ ತೋರುತ್ತದೆ. ಅವನ ತಂದೆಯಾದ ಯಾಕೋಬನು ಬಹಳ ಶ್ರೀಮಂತನಾಗಿದ್ದನು ಮತ್ತು ಯೋಸೇಫನು ಅವನ ಪ್ರಿಯವಾದ ಪುತ್ರನಾಗಿದ್ದನು. ಯೋಸೇಫನು ಸಣ್ಣ ಹುಡುಗನಾಗಿರುವಾಗಲೇ ನಿರ್ದಿಷ್ಟ ಕನಸುಗಳಲ್ಲಿ ದೇವರ ಸ್ವರವನ್ನು ಕೇಳಿದನು.

ಈ ಕನಸುಗಳು, ತನ್ನ ತಂದೆಯ ಪ್ರೇಮ ಮತ್ತು ಬಹುಶಃ ತನ್ನ ಗರ್ವದಿಂದ ತನ್ನ ಸಹೋದರರ ದ್ವೇಷವನ್ನು ಸಂಪಾದಿಸಿಕೊಂಡನು. ಅವರು ಅವನನ್ನು ಒಂದು ಗುಂಡಿಯಲ್ಲಿ ಎಸೆದರು, ನಂತರ ಅಲ್ಲಿಂದ ಮೇಲೆತ್ತಿ ಗುಲಾಮನಾಗಿ ಮಾರಿದರು.

**ಆದಿಕಾಂಡ 37:28 ಅಷ್ಟರಲ್ಲಿ ಮಿದ್ಯಾನ್ಯರಾದ ವರ್ತಕರು ಹಾದುಹೋಗುತ್ತಿದ್ದರು. ಅವರು ಯೋಸೇಫನನ್ನು ಗುಂಡಿಯೊಳಗಿಂದ ಮೇಲೆ ಎತ್ತಿ ಆ ಇಷ್ಮಾಯೇಲ್ಯರಿಗೆ ಇಪ್ಪತ್ತು ಬೆಳ್ಳಿಯ ನಾಣ್ಯಗಳಿಗೆ ಅವನನ್ನು ಮಾರಿದರು. ಅವರು ಅವನನ್ನು ಐಗುಪ್ತ ದೇಶಕ್ಕೆ ಕರೆದುಕೊಂಡು ಹೋದರು.**

ಯೋಸೇಫನು ಈಜಿಪ್ಟಿನಲ್ಲಿ ಒಬ್ಬ ಶ್ರೀಮಂತನಾದ ಪೋಟಿಫರನ ಮನೆಯ ಮತ್ತು ವಸ್ತುಗಳ ಮೇಲೆ ಮೇಲ್ವಿಚಾರಕನಾದನು. ಒಬ್ಬ ಗುಲಾಮನಿಗೆ ಹೋಲಿಸುವುದಾದರೆ ಅವನು ಒಂದು ಗೌರವಯುತ ಸ್ಥಾನಕ್ಕೆ ಏರಿದನು. ಆದರೆ ಪೋಟಿಫರನ ಹೆಂಡತಿಯು ಅವನನ್ನು ತನ್ನೊಂದಿಗೆ ಪಾಪ ಮಾಡುವಂತೆ ಯತ್ನಿಸಿದಳು.

**ಬಲಗಳು:**

*ಕ್ಷಮಿಸುವ ಹೃದಯ*

*ಸೃಜನಶೀಲ, ಕ್ರಮಬದ್ಧ ಮನಸ್ಸು*

*ಸುಂದರ*

*ಸೇವಕನ ಹೃದಯ*

**ಬಲಹೀನತೆ:**

*ಗರ್ವ – ತನ್ನ ಕುಟುಂಬದ ಮುಂದೆ ಕನಸುಗಳ ಬಗ್ಗೆ ಹೊಗಳಿಕೊಂಡನು*

ಆದಿಕಾಂಡ **39:7-9** ಹೀಗಿರುವಲ್ಲಿ ಯೋಸೇಫನ ದಣಿಯ ಹೆಂಡತಿಯು ಅವನನ್ನು ಮೋಹಿಸಿ "ನನ್ನ ಸಂಗಡ ಸಂಗಮಿಸಲು ಬಾ" ಎಂದಳು.

ಆದರೆ ಅವನು ಒಪ್ಪದೆ, "ನನ್ನ ದಣಿಯು ತನ್ನ ಆಸ್ತಿಯನ್ನೆಲ್ಲಾ ನನ್ನ ವಶಕ್ಕೆ ಒಪ್ಪಿಸಿರುವುದಲ್ಲದೆ ನಾನು ಇಲ್ಲಿ ಇರುವುದರಿಂದ ಮನೆಯೊಳಗೆ ನಡೆಯುವ ಯಾವ ಕೆಲಸವನ್ನೂ ಚಿಂತಿಸದೇ ಇದ್ದಾನೆ. ಈ ಮನೆಯಲ್ಲಿ ನನಗಿಂತ ಯಾರೂ ದೊಡ್ಡವರಲ್ಲ. ನೀನು ಅವನ ಧರ್ಮಪತ್ನಿಯಾದುದರಿಂದ ನಿನ್ನನ್ನು ಮಾತ್ರ ನನಗೆ ಅಧೀನ ಮಾಡಲಿಲ್ಲ. ಹೀಗಿರುವಲ್ಲಿ ನಾನು ಇಂಥಾ ಮಹಾ ದುಷ್ಟ ಕಾರ್ಯವನ್ನು ಮಾಡಿ ದೇವರಿಗೆ ವಿರೋಧವಾಗಿ ಹೇಗೆ ಪಾಪ ಮಾಡಲಿ?" ಎಂದು ತನ್ನ ದಣಿಯ ಹೆಂಡತಿಗೆ ಉತ್ತರ ಹೇಳಿದನು.

ಯೋಸೇಫನನ್ನು ಮೋಹಿಸಲು ಆಗದಿದ್ದಾಗ ಪೋಟಿಫರನ ಹೆಂಡತಿಯು ಅವನ ಮೇಲೆ ಸುಳ್ಳು ಆರೋಪವನ್ನು ಹೊರಿಸಿ ಜೈಲಿಗೆ ಕಳುಹಿಸಿದಳು.

ಆದಿಕಾಂಡ **39:19,20** ನಿನ್ನ ಸೇವಕನು ಹೀಗೆ ನನಗೆ ಮಾಡಿದನೆಂಬುದಾಗಿ ತನ್ನ ಹೆಂಡತಿ ಹೇಳಿದ ಮಾತುಗಳನ್ನು ಯೋಸೇಫನ ದಣಿಯು ಕೇಳಿದಾಗ ಬಹಳ ಸಿಟ್ಟುಗೊಂಡನು. ಆಗ ಯೋಸೇಫನ ದಣಿಯು ಅವನನ್ನು ಹಿಡಿದು ಅರಸನ ಕೈದಿಗಳನ್ನಿಡುವ ಸೆರೆಮನೆಯಲ್ಲಿ ಹಾಕಿಸಿದನು. ಅಲ್ಲಿ ಯೋಸೇಫನು ಸೆರೆಯಲ್ಲಿ ಇರಬೇಕಾಯಿತು.

**ದೇವರು ಕಾರಣವಿಲ್ಲದೆ ಯೋಸೇಫನನ್ನು ಗುಲಾಮಗಿರಿಗೆ ಮಾರಲ್ಪಡಲು ಮತ್ತು ಜೈಲಿಗೆ ಹಾಕಲ್ಪಡಲು ಬಿಟ್ಟರೇ?**

*ದೇವರು ನಮ್ಮ ಜೀವನಕ್ಕಾಗಿ ಒಂದು ದೊಡ್ಡ ಯೋಜನೆಯನ್ನು ಹೊಂದಿರುವಾಗ, ನಾವು ಕಲಿಯಬೇಕಾದ "ಕಲಿಕೆಯ ಅವಧಿಗಳು' ಇವೆ. ದೇವರು ಯೋಸೆಫನ ಜೀವನದಲ್ಲಿ ಶಿಸ್ತನ್ನು ತರಬೇಕಾಗಿತ್ತು, ಇದರಿಂದಾಗಿ ಅವನು ಆಡಳಿತದ ಜವಾಬ್ದಾರಿಗಳನ್ನು ನಿಭಾಯಿಸಲು ಸಾಧ್ಯವಾಯಿತು.*

ಯೋಸೇಫನು ಅಚ್ಚುಮೆಚ್ಚಿನ ಮಗನಿಂದ ಅಚ್ಚುಮೆಚ್ಚಿನ ಗುಲಾಮನಾದನು. ಈಗ ಅವನು ಕೈದಿಯಾಗಿದ್ದನು. ಅವನ ಹಿಂದಿನ ಕನಸುಗಳೆಲ್ಲವೂ ಎಷ್ಟೋ ದೂರದಲ್ಲಿದ್ದಂತೆ ತೋರಿತು. ದೇವರು ನಿಜವಾಗಲೂ ತನಗೆ ಈ ಕನಸುಗಳನ್ನು ಕೊಟ್ಟರೋ ಎಂಬದಾಗಿ ಅವನು ಯೋಚಿಸಿರಬಹುದು. ಸಾಂಕೇತಿಕವಾಗಿ, ಅವನು ತನ್ನ ಅಣ್ಣಂದಿರು ತನಗೆ ಅಡ್ಡಬೀಳುವುದನ್ನು ಕಂಡಿದ್ದನು, ಆದರೆ ಈಗ ಅವನು ಜೈಲಿನಲ್ಲಿದ್ದ ಒಬ್ಬ ಗುಲಾಮನಾಗಿದ್ದನು. ಅವನು ದೇವರಿಗೆ ಹೀಗೆ ಕೇಳಿರಬಹುದು, "ದೇವರೇ ನಾನು ಯಾವ ತಪ್ಪು ಮಾಡುತ್ತಿದ್ದೇನೆ? "

ಆದರೂ ಯೋಸೇಫನು ದೇವರ ಸ್ವರವನ್ನು ಕೇಳುತ್ತಲೇ ಇದ್ದನು ಮತ್ತು ಜೈಲಿನಲ್ಲಿದ್ದ ಇತರರ ಕನಸುಗಳ ಅರ್ಥಗಳನ್ನು ಹೇಳುತ್ತಿದ್ದನು. ನಂತರ ದೇವರು ಫರೋಹನಿಗೆ ಒಂದು ಕನಸನ್ನು ಕೊಟ್ಟರು ಮತ್ತು ಅದರ ಅರ್ಥವನ್ನು ಯಾರೂ ವಿವರಿಸಲಾಗಲಿಲ್ಲ - ಯೋಸೇಫನನ್ನು ಹೊರತುಪಡಿಸಿ. ಅವನನ್ನು ಜೈಲಿನಿಂದ ಕರೆತಂದರು ಮತ್ತು ದೇವರು ಆ ಕನಸಿನ ಅರ್ಥವನ್ನು ತಿಳಿಸಿದರು. ಕನಸಿನ ಮೂಲಕ ಮತ್ತು ಬರಗಾಲದ ಅದರ ಅರ್ಥವನ್ನು ಹೇಳಿದಾಗ ಅವನು ಫರೋಹನ ಕೆಳಗಿನ ಸ್ಥಾನಕ್ಕೇರಿದನು.

ಯೋಸೇಫನು ಮುಂತಿಳಿಸಿದಂತೆ ಬರಗಾಲವು ಬಂದಿತು ಮತ್ತು ಅನೇಕ ಕುಲಗಳವರು ಯೋಸೇಫನ ಅಪ್ಪಣೆಗೆ ಅನುಸಾರವಾಗಿ ಶೇಖರಿಸಲಾದ ಆಹಾರಕ್ಕಾಗಿ ಈಜಿಪ್ಟಿಗೆ ಬಂದರು. ಬಂದವರಲ್ಲಿ ಯೋಸೇಫನ ಸಹೋದರರು ಸೇರಿದ್ದರು. ಅವನು ಕನಸು ಕಂಡಂತೆಯೇ ಅವರು ಅವನಿಗೆ ನಮಸ್ಕರಿಸಿದರು.

**ಕಲಿಯಬೇಕಾದ ಪಾಠಗಳು**

ನಾವು ಯೋಸೇಫನ ಜೀವನದಿಂದ ಏನನ್ನು ಕಲಿಯಬೇಕು?

ದೇವರು ನಮಗೆ ಒಂದು ಕನಸನ್ನು ಅಥವಾ ದರ್ಶನವನ್ನು ಕೊಡುವಾಗ ಅದನ್ನು ನೆರವೇರಿಸುವರು. ಕೆಲವೊಮ್ಮೆ, ನಾವು ದೇವರ ಸಮಯವನ್ನು ಕಾಣುವುದಿಲ್ಲ ಮತ್ತು ನಮ್ಮ ಜೀವನದ ಕಠಿಣ ಸ್ಥಳಗಳು ಬಹುಶಃ ನಮ್ಮನ್ನು ದೇವರು ಉಪಯೋಗಿಸಬಲ್ಲ ವ್ಯಕ್ತಿಗಳನ್ನಾಗಿ ಬದಲಾಯಿಸಿ ದೇವರು ಬಯಸುವ ಸ್ಥಳದಲ್ಲಿ ಇರಿಸಲು ಆಗಿರಬಹುದು.

ಯೋಸೇಫನು ಒಬ್ಬ ವಿಶ್ವಾಸಿಯ ಜೀವನದಲ್ಲಿ ಕಾರ್ಯಮಾಡುವ ಕ್ಷಮಾಪಣೆಗೆ ಒಂದು ಒಳ್ಳೆಯ ಉದಾಹರಣೆಯಾಗಿದ್ದಾನೆ.

### ಕ್ರಿಸ್ತನ ಪ್ರತಿರೂಪ

ಯೋಸೇಫನು ಕ್ರಿಸ್ತನ ಒಂದು ಹಳೆ ಒಡಂಬಡಿಕೆಯ ಪ್ರತಿರೂಪವಾಗಿದ್ದಾನೆ.

* ಅವನು ತನ್ನ ಶ್ರೀಮಂತಿಕೆಯ ಸ್ಥಾನವನ್ನು ಬಿಟ್ಟು ಒಂದು ದೂರದ ಸ್ಥಳಕ್ಕೆ ಹೋದನು.
* ಅವನು ಅನೇಕ ದೇಶಗಳಿಗೆ ರಕ್ಷಣೆಯನ್ನು ತಂದನು.
* ಅವನು ತನ್ನ ಸಹೋದರರನ್ನು ಮುಕ್ತವಾಗಿ ಕ್ಷಮಿಸಿದನು.

ಯೋಸೇಫನು ತನ್ನ ಅನುಭವವನ್ನೆಲ್ಲಾ ಈ ಮಾತುಗಳಲ್ಲಿ ಸಂಕ್ಷಿಪ್ತಗೊಳಿಸುತ್ತಾನೆ,

**ಆದಿಕಾಂಡ 50:19,20 ಯೋಸೇಫನು ಅವರಿಗೆ, "ಹೆದರಬೇಡಿರಿ, ನಾನೇನು ದೇವರ ಸ್ಥಾನದಲ್ಲಿ ಇದ್ದೇನೋ? ನೀವಂತೂ ನನಗೆ ಕೇಡಾಗಬೇಕೆಂದು ಎಣಿಸಿದಿರಿ. ಆದರೆ ದೇವರು ನನ್ನನ್ನು ಮೇಲಾಗಬೇಕೆಂದು ಸಂಕಲ್ಪಿಸಿದನು; ಆದುದರಿಂದ ಇಂದು ನೀವು ಕಾಣುವಂತೆ, ಅನೇಕ ಜನರ ಪ್ರಾಣವು ಸಂರಕ್ಷಿಸಲ್ಪಟ್ಟಿತ್ತು" ಎಂದನು.''**

## ಮೋಶೆ – ಬಂಧನದಿಂದ ಬಿಡಿಸುವವನು

*ವಚನ: ವಿಮೋಚನಕಾಂಡ – ಧರ್ಮೋಪದೇಶಕಾಂಡ*

### 40 ವರ್ಷಗಳು ಫರೋಹನ ಮನೆತನದಲ್ಲಿ

ಮೋಶೆಯು ಒಬ್ಬ ಗುಲಾಮನಾಗಿ ಜನಿಸಿದ್ದನು, ಆದರೆ ಅವನ ಪ್ರಾಣವನ್ನು ಉಳಿಸುವುದಕ್ಕಾಗಿ ಅವನ ತಾಯಿಯು ಅವನನ್ನು ಒಂದು ಪುಟ್ಟಿಯಲ್ಲಿರಿಸಿ ನೈಲ್ ನದಿಯಲ್ಲಿ ತೇಲಿಬಿಟ್ಟಳು ಮತ್ತು ಅದು ಫರೋಹನ ಮಗಳ ಕೈಗೆ ಸಿಕ್ಕಿತು. ಅವನು ಫರೋಹನ ಮಗನಾಗಿ ಬೆಳೆದನು, ಆದರೆ ಸಮಯ ಬಂದಾಗ ಅವನು ತನ್ನ ಜನರಂದಗೆ ತನ್ನನ್ನು ಗುರುತಿಸಿಕೊಂಡನು. ಇಬ್ರಿಯರಿಗೆ ಬರೆದ ಪತ್ರದ ಲೇಖಕನು ಇದನ್ನು ವಿವರಿಸುತ್ತಾನೆ.

**ಇಬ್ರಿಯ 11:24-27 ನಂಬಿಕೆಯಿಂದಲೇ ಮೋಶೆಯು ದೊಡ್ಡವನಾದ ಮೇಲೆ ಫರೋಹನ ಪುತ್ರಿಯ ಮಗನೆನಿಸಿಕೊಳ್ಳುವುದು ಬೇಡವೆಂದುಕೊಂಡನು. ಸ್ವಲ್ಪ ಕಾಲದಲ್ಲಿ ಗತಿಸಿ ಹೋಗುವ ಪಾಪಭೋಗಗಳನ್ನು ಅನುಭವಿಸುವುದಕ್ಕಿಂತ, ದೇವಜನರೊಂದಿಗೆ ಕಷ್ಟವನ್ನು ಅನುಭವಿಸುವುದೇ ಮೇಲೆಂದು ತೀರ್ಮಾನಿಸಿಕೊಂಡನು. ಐಗುಪ್ತದೇಶದ ಸರ್ವಐಶ್ವರ್ಯಕ್ಕಿಂತಲೂ, ಕ್ರಿಸ್ತನ ನಿಮಿತ್ತವಾಗಿ ಉಂಟಾಗುವ ನಿಂದೆಯೇ ಶ್ರೇಷ್ಠ ಭಾಗ್ಯವೆಂದೆಣಿಸಿಕೊಂಡನು. ಏಕೆಂದರೆ ಮುಂಬರುವ ಪ್ರತಿಫಲದ ಮೇಲೆ ಕಣ್ಣಿಟ್ಟಿದ್ದನು. ನಂಬಿಕೆಯಿಂದಲೇ ಅವನು ಅರಸನ ರೌದ್ರಕ್ಕೆ ಭಯಪಡದೇ ಐಗುಪ್ತದೇಶವನ್ನು ಬಿಟ್ಟುಹೋದನು. ಏಕೆಂದರೆ ಅವನು ಅದೃಶ್ಯನಾಗಿರುವಾತನನ್ನು ದೃಷ್ಟಿಸುವವನಂತೆ ದೃಢಚಿತ್ತನಾಗಿದ್ದನು.**

## 40 ವರ್ಷಗಳು ಮರುಭೂಮಿಯಲ್ಲಿ

**ಬಲಗಳು:**

*ದೀನತೆ*

*ದೇವರ ಮಾರ್ಗವನ್ನು ಅರಿತವನು*

**ಬಲಹೀನತೆಗಳು:**

*ಆವೇಗದ ಕ್ರಿಯೆಗಳಿಗೆ ನಡೆಸುವ ಕೋಪ:*

*ಈಜಿಪ್ಟಿನವನನ್ನು ಕೊಂದನು*

*ಕುರುಬರೊಂದಿಗೆ ಜಗಳವಾಡಿದನು*

*ಕಲ್ಲಿನ ಹಲಿಗೆಗಳನ್ನು ಒಡೆದನು*

*ಬಂಡೆಯನ್ನು ಎರಡನೆಯ ಬಾರಿ ಹೊಡೆದನು*

ಮೋಶೆ ಮರುಭೂಮಿಗೆ ಓಡಿ ಹೋದನು ಮತ್ತು ತನ್ನ ಜೀವನದ ನಾಲ್ವತ್ತು ವರ್ಷಗಳನ್ನು ಅಲ್ಲಿ ಕಳೆದನು. ನಂತರ ದೇವರು ಅವನಿಗೆ ಬೆಂಕಿಯಿಂದ ಉರಿಯುವ ಪೊದೆಯಲ್ಲಿ ಕಾಣಿಸಿಕೊಂಡನು ಮತ್ತು ತನ್ನ ಜನರನ್ನು ಗುಲಾಮತನದಿಂದ ಹೊರಗೆ ತರಬೇಕೆಂದು ಅವನನ್ನು ಕರೆದನು.

**ವಿಮೋ 3:2,4,6,9,10 ಆಗ ಯೆಹೋವನ ದೂತನು ಮುಳ್ಳಿನ ಪೊದೆಯೊಳಗಿನಿಂದ ಉರಿಯುವ ಬೆಂಕಿ ಜ್ವಾಲೆಯಲ್ಲಿ ಅವನಿಗೆ ಕಾಣಿಸಿಕೊಂಡನು. ಮೋಶೆಯು ಕಣ್ಣೆತ್ತಿ ನೋಡಿದಾಗ, ಆ ಮುಳ್ಳಿನ ಪೊದೆಯು ಬೆಂಕಿಯಿಂದ ಉರಿಯುತ್ತಿತ್ತು; ಆದರೆ ಅದು ಸುಟ್ಟು ಹೋಗಲಿಲ್ಲ.**

**ಅವನು ಅದನ್ನು ನೋಡುವುದಕ್ಕೆ ಹತ್ತಿರ ಬರುವುದನ್ನು ಯೆಹೋವನು ಕಂಡನು. ಆಗ ದೇವರು ಆ ಪೊದೆಯೊಳಗಿಂದ "ಮೋಶೆಯೇ, ಮೋಶೆಯೇ" ಎಂದು ಅವನನ್ನು ಕರೆದನು. ಅದಕ್ಕೆ ಮೋಶೆ, "ಇಗೋ ಇದ್ದೇನೆ" ಅಂದನು.**

**ಇದಲ್ಲದೆ ಆತನು ಅವನಿಗೆ, "ನಾನು ನಿನ್ನ ತಂದೆಯಾದ, ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರೂ ಆಗಿದ್ದೇನೆ" ಎಂದು ಹೇಳಿದನು. ಮೋಶೆಯು ದೇವರನ್ನು ನೋಡುವುದಕ್ಕೆ ಭಯಪಟ್ಟು ಮುಖವನ್ನು ಮುಚ್ಚಿಕೊಂಡನು.**

**ಈಗ ಇಸ್ರಾಯೇಲರ ಕೂಗು ನನಗೆ ಮುಟ್ಟಿದೆ. ಐಗುಪ್ತ್ಯರು ಅವರಿಗೆ ಕೊಡುವ ಉಪದ್ರವವನ್ನು ನಾನು ನೋಡಿದ್ದೇನೆ.**

**ಆದುದರಿಂದ ಈಗ ಬಾ, ನನ್ನ ಜನರಾದ ಇಸ್ರಾಯೇಲರನ್ನು ಐಗುಪ್ತ ದೇಶದಿಂದ ಹೊರಗೆ ಬರಮಾಡುವುದಕ್ಕೆ ನಿನ್ನನ್ನು ಫರೋಹನ ಬಳಿಗೆ ಕಳುಹಿಸುತ್ತೇನೆ" ಅಂದನು.**

## 40 ವರ್ಷಗಳು – ಇಸ್ರಾಯೇಲರ ನಾಯಕ

ದೇವರ ಅಧಿಕಾರದಲ್ಲಿ ನಡೆಯುವ ವ್ಯಕ್ತಿಯ ವಿಷಯದಲ್ಲಿ ಮೋಶೆಗಿಂತ ಉತ್ತಮವಾದ ಮಾದರಿ ಇನ್ನೊಬ್ಬರಿಲ್ಲ. ಅವನು ಫರೋಹನ ಮನೆತನದ ಮೇಲೆ ಬಾಧೆಗಳನ್ನು ತಂದನು. ಅವನು ತನ್ನ ಕೋಲನ್ನು ಎತ್ತಿ ಹಿಡಿದಾಗ ಸಮುದ್ರವು ಎರಡು ಭಾಗವಾಯಿತು. ಅವನು ಒಂದು ಕೊಂಬೆಯನ್ನು ನೀರಿನಲ್ಲಿ ಹಾಕಲು ಕಹಿ ನೀರು ಸಿಹಿಯಾಯಿತು. ಅವನು ದೇವರಂದಿಗೆ ಮಾತನಾಡಿದನು. ಅವನು ತನ್ನ ಜನರಿಗಾಗಿ ದೇವರೊಂದಿಗೆ ತರ್ಕ ಮಾಡಿದನು. ಅವನು ಹತ್ತು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆಯಿದ್ದ ಒಂದು ಜನಾಂಗವನ್ನು ನಾಲ್ವತ್ತು ವರ್ಷಗಳ ಕಾಲ ಮರುಭೂಮಿಯಲ್ಲಿ ನಡೆಸಿದನು. ಅವನ ಮೂಲಕ ನಮಗೆ ದೇವದರ್ಶನ ಗುಡಾರ ಮತ್ತು ಧರ್ಮಶಾಸ್ತ್ರವು ಕೊಡಲ್ಪಟ್ಟಿತು. ಆದರೂ ಅರಣ್ಯಕಾಂಡದಲ್ಲಿ ಮೋಶೆಯು ಭೂಮಿಯ ಮೇಲಿರುವ ಎಲ್ಲರಿಗಿಂತಲೂ ಬಹಳ ಸಾತ್ವಿಕನಾಗಿದ್ದನು ಎಂದು ಓದುತ್ತೇವೆ.

**ಅರಣ್ಯ 12:3 ಮೋಶೆಯು ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತಲೂ ಬಹು ಸಾತ್ವಿಕನು.**

ನಾವು ಮೋಶೆಯಿಂದ ಯಾವ ನಾಯಕತ್ವ ಗುಣವನ್ನು ಕಲಿತುಕೊಳ್ಳಬಹುದು? ನಿಜವಾದ ದೀನತೆ ಮತ್ತು ಅಧಿಕಾರ. ದೇವರ ಅಧಿಕಾರವು ದೀನತೆಯುಳ್ಳ ವ್ಯಕ್ತಿಗಳ ಮೂಲಕ ಕಾರ್ಯ ಮಾಡುತ್ತದೆ. ದೀನತೆ ಎಂದರೆ ನಿಮ್ಮ ಬಗ್ಗೆ ನೀವು ಗರ್ವ ಇಲ್ಲದವರಾಗಿ ಇರುವುದಲ್ಲ. ಅದು ನಿಮ್ಮ ಬಗ್ಗೆ ಸ್ವಲ್ಪವೂ ಯೋಚಿಸದೆ ಇರುವುದಾಗಿದೆ.

ಮೋಶೆಯು ದೇವರಿಂದ ಹೂಣಲ್ಪಟ್ಟ ಏಕೈಕ ವ್ಯಕ್ತಿಯಾಗಿದ್ದಾನೆ.

**ಧರ್ಮೋ 34:4-7 "ನಾನು ಅಬ್ರಹಾಮ್, ಇಸಾಕ್ ಮತ್ತು ಯಾಕೋಬರಿಗೆ ಪ್ರಮಾಣಮಾಡಿ ಅವರ ಸಂತತಿಯವರಿಗೆ ಕೊಡುವೆನೆಂದು ವಾಗ್ದಾನಮಾಡಿದ ದೇಶವು ಇದೇ; ನಿನಗೆ ಪ್ರತ್ಯಕ್ಷವಾಗಿ ತೋರಿಸಿದ್ದೇನೆ. ಆದರೆ ನೀನು ನದಿ ದಾಟಿ ಅಲ್ಲಿಗೆ ಹೋಗಕೂಡದು" ಎಂದು ಹೇಳಿದನು.**

**ಯೆಹೋವನ ಮಾತಿನಂತೆ ಆತನ ಸೇವಕನಾದ ಮೋಶೆ ಅಲ್ಲೇ ಮೋವಾಬ್ಯರ ದೇಶದಲ್ಲಿ ಮರಣ ಹೊಂದಿದನು. ಮೋವಾಬ್ಯರ ದೇಶದಲ್ಲಿ ಬೇತ್‌ಪೆಗೋರದ ಎದುರಾಗಿರುವ ಕಣಿವೆಯಲ್ಲಿ (ಯೆಹೋವನು) ಅವನ ದೇಹವನ್ನು ಸಮಾಧಿಮಾಡಿದನು; ಅವನ ಸಮಾಧಿ ಎಲ್ಲಿದೆಯೋ ಇಂದಿನ ವರೆಗೆ ಯಾರಿಗೂ ತಿಳಿಯದು. ಮೋಶೆ ಸಾಯುವಾಗ ನೂರಿಪ್ಪತ್ತು ವರ್ಷದವನಾಗಿದ್ದನು. ಅವನ ಕಣ್ಣು ಮೊಬ್ಬಾಗಲಿಲ್ಲ, ಅವನ ಜೀವಕಳೆ ಕುಂದಿಹೋಗಿರಲಿಲ್ಲ..**

## ದಾವೀದ – ಇಸ್ರಾಯೇಲಿನ ಶ್ರೇಷ್ಠ ರಾಜ

ದಾವೀದನು ಇತಿಹಾಸದುದ್ದಕ್ಕೂ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದಾನೆ. ಅವನ ಆಳ್ವಿಕೆಯ ಅಡಿಯಲ್ಲಿ ಇಸ್ರಾಯೇಲ್ ದೇಶವು ಅತ್ಯಂತ ವಿಸ್ತಾರವಾಗಿತ್ತು. ಹಳೆ ಒಡಂಬಡಿಕೆಯ ನಾಲ್ಕು ಪುಸ್ತಕಗಳಲ್ಲಿ - 1 ಮತ್ತು 2 ಸಮುವೇಲ, 1 ಪೂರ್ವಕಾಲ ಮತ್ತು ಕೀರ್ತನೆಗಳಲ್ಲಿ - ಪ್ರಮುಖ ವ್ಯಕ್ತಿಯಾಗಿದ್ದಾನೆ. ಇತಿಹಾಸದಲ್ಲಿನ ಅವನ ಪ್ರಾಮುಖ್ಯತೆಯ ಕಾರಣದಿಂದಾಗಿ ಯೇಸುವನ್ನು ಅಬ್ರಹಾಮನ ಮಗನೆಂದು ಉಲ್ಲೇಖಿಸಲಾಗಲಿಲ್ಲ ಬದಲಾಗಿ ದಾವೀದನ ಮಗನೆಂದು ಉಲ್ಲೇಖಿಸಲಾಗಿದೆ.

### ಅವನ ಅಭಿಷೇಕ

ದಾವೀದನು ಎಂಟು ಗಂಡುಮಕ್ಕಳಲ್ಲಿ ಎಲ್ಲರಿಗಿಂತ ಕಿರಿಯವನಾಗಿದ್ದನು ಆದರೂ ತನ್ನ ತಂದೆ ಮನೆಯ ಕುರಿಗಳನ್ನು ಮೇಯಿಸುತ್ತಿದ್ದಾಗ ದೇವರು ಅವನನ್ನು ಇಸ್ರಾಯೇಲಿನ ಮುಂದಿನ ರಾಜನಾಗಿ ಅಭಿಷೇಕಿಸಲು ಸಮುವೇಲನನ್ನು ಅವನ ಬಳಿಗೆ ಕಳುಹಿಸಿದರು.

**1 ಸಮು 16:12b,13 ಯೆಹೋವನು ಸಮುವೇಲನಿಗೆ, "ಎದ್ದು ಇವನನ್ನು ಅಭಿಷೇಕಿಸು; ನಾನು ಆರಿಸಿಕೊಂಡವನು ಇವನೇ" ಎಂದು ಆಜ್ಞಾಪಿಸಲು ಸಮುವೇಲನು ಎಣ್ಣೆಯ ಕೊಂಬನ್ನು ತೆಗೆದುಕೊಂಡು ಅವನನ್ನು, ಅವನ ಸಹೋದರರ ಮಧ್ಯದಲ್ಲೇ ಅಭಿಷೇಕಿಸಿದನು. ಕೂಡಲೆ ಯೆಹೋವನ ಆತ್ಮವು ದಾವೀದನ ಮೇಲೆ ಬಂದು ನೆಲೆಗೊಂಡಿತು. ಅನಂತರ ಸಮುವೇಲನು ರಾಮಕ್ಕೆ ಹೊರಟುಹೋದನು.**

ತಕ್ಷಣವಾಗಿ, ದಾವೀದನು ರಾಜನಾದ ಸೌಲನ ಮನೆಗೆ ಕಿನ್ನರಿಯನ್ನು ಬಾರಿಸಲು ಕರೆಸಲ್ಪಟ್ಟನು. ಅವನು ಆ ಸ್ಥಾನದಲ್ಲಿ ಎಷ್ಟು ಕಾಲ ಇದ್ದನೆಂಬುದು ತಿಳಿದಿಲ್ಲ. ಆದರೆ ಅವನು ಗೋಲ್ಯಾತನನ್ನು ಎದುರಿಸುವುದಕ್ಕಿಂತ ಮುಂಚೆ ಮನೆಗೆ ಹಿಂತಿರುಗಿದ್ದನು ಎಂಬುದು ನಮಗೆ ಗೊತ್ತಿದೆ.

ಅವನ ಧೈರ್ಯ

ದಾವೀದನು ತನ್ನ ತಂದೆಯ ಕುರಿಗಳನ್ನು ಮೇಯಿಸುವಾಗ ಬಂದ ಸಿಂಹ ಮತ್ತು ಕರಡಿಯನ್ನು ಕೊಂದ ಸಮಯದಿಂದಲೇ ಧೈರ್ಯಶಾಲಿಯಾಗಿದ್ದನು.

**ಬಲಗಳು:**

*ಆರಾಧಕನಾಗಿದ್ದನು*

*ಅಭಿಷೇಕಕ್ಕೆ ಗೌರವ ಹೊಂದಿದ್ದನು*

*ದೇವರ ಮಾರ್ಗಗಳನ್ನು ಅರಿತಿದ್ದನು*

*ತಿದ್ದುವಿಕೆಯನ್ನು ಸ್ವೀಕರಿಸಿ ಪಶ್ಚಾತ್ತಾಪಪಟ್ಟನು*

**ಬಲಹೀನತೆಗಳು:**

*ಸುಂದರವಾದ ಸ್ತ್ರೀಯರು*

*ಕುಟುಂಬಸ್ಥರನ್ನು ಮತ್ತು ನಿಕಟವಾದ ಸ್ನೇಹಿತರನ್ನು ಶಿಸ್ತುಪಡಿಸುವಲ್ಲಿ ವೈಫಲ್ಯ*

**1 ಸಮು 17:34,35 ಆಗ ದಾವೀದನು ಅವನಿಗೆ, "ನಿನ್ನ ಸೇವಕನಾದ ನಾನು ನನ್ನ ತಂದೆಯ ಕುರಿಗಳನ್ನು ಕಾಯುತ್ತಿರುವಾಗ ಸಿಂಹವಾಗಲಿ, ಕರಡಿಯಾಗಲಿ ಹಿಂಡಿನಲ್ಲಿನ ಕುರಿಮರಿಯನ್ನು ಹಿಡಿದುಕೊಂಡು ಹೋಗಲು ಬಂದರೆ ನಾನು ಒಡನೇ ಬೆನ್ನಟ್ಟಿ, ಅದನ್ನು ಹೊಡೆದು, ಕುರಿಮರಿಯನ್ನು ಕಿತ್ತುಕೊಳ್ಳುತ್ತಿದ್ದೆನು. ಅದು ಹಿಂದಿರುಗಿ ನನ್ನ ಮೇಲೆ ಬೀಳಲು ಬಂದಾಗ ಅದರ ಗದ್ದಹಿಡಿದು ಬಡಿದು ಕೊಂದುಹಾಕುತ್ತಿದ್ದೆನು."**

ದಾವೀದನು ದೇವರಲ್ಲಿರುವ ತನ್ನ ನಂಬಿಕೆಯನ್ನು ಮತ್ತು ಧೈರ್ಯವನ್ನು ಈ ಸನ್ನಿವೇಶಗಳಲ್ಲಿ ಪರೀಕ್ಷಿಸಿದ್ದನು ಮತ್ತು ಅವನು ದೈತ್ಯಶರೀರಿಯಾದ ಗೊಲ್ಯಾತನನ್ನು ಕೊಲ್ಲಲು ಬೇಕಾದ ನಂಬಿಕೆಯನ್ನು ಅವುಗಳು ಒದಗಿಸಿದವು.

**1 ಸಮು 17:26 ದಾವೀದನು, "ಜೀವಸ್ವರೂಪನಾದ ದೇವರ ಸೈನ್ಯವನ್ನು ಹೀಯಾಳಿಸುವುದಕ್ಕೆ ಸುನ್ನತಿಯಿಲ್ಲದ ಈ ಫಿಲಿಷ್ಟಿಯನು ಎಷ್ಟರವನು? ಇವನನ್ನು ಕೊಂದು ಇಸ್ರಾಯೇಲ್ಯರಿಗೆ ಬಂದಿರುವ ನಿಂದೆಯನ್ನು ತೆಗೆದುಹಾಕುವವನಿಗೆ ಏನು ಸಿಕ್ಕುವುದು ಹೇಳಿರಿ" ಎಂದು ತನ್ನ ಬಳಿಯಲ್ಲಿ ನಿಂತಿದ್ದ ಮನುಷ್ಯರನ್ನು ಕೇಳಿದನು.**

**1 ಸಮು 17:45-47 ಆಗ ದಾವೀದನು ಅವನಿಗೆ, "ನೀನು ಈಟಿ, ಕತ್ತಿ, ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ. ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ, ಇಸ್ರಾಯೇಲ್ಯರ ಯುದ್ಧಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬಂದಿದ್ದೇನೆ. ಆತನು ಈ ಹೊತ್ತು ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಡುವನು. ನಾನು ನಿನ್ನನ್ನು ಕೊಂದು ನಿನ್ನ ತಲೆಯನ್ನು ಕಡಿದು ಹಾಕಿ ಫಿಲಿಷ್ಟಿಯ ಸೈನ್ಯದ ಶವಗಳನ್ನು ಮೃಗ ಪಕ್ಷಿಗಳಿಗೆ ಹಂಚಿಕೊಡುವೆನು. ಇದರಿಂದ ಇಸ್ರಾಯೇಲರೊಳಗೆ ದೇವರಿದ್ದಾನೆಂಬುದು ಭೂಲೋಕದವರಿಗೆಲ್ಲಾ ತಿಳಿದುಬರುವುದು. ಯೆಹೋವನು ಈಟಿಕತ್ತಿಗಳಿಲ್ಲದೇ ರಕ್ಷಿಸಬಲ್ಲನೆಂಬುದು ಇಲ್ಲಿ ಕೂಡಿರುವವರಿಗೆಲ್ಲಾ ತಿಳಿದುಬರುವುದು. ಯಾಕೆಂದರೆ ಯುದ್ಧಫಲವು ಯೆಹೋವನ ಕೈಯಲ್ಲಿದೆ. ಆತನು ನಿಮ್ಮನ್ನು ನಮ್ಮ ಕೈಗೆ ಒಪ್ಪಿಸಿಕೊಡುವನು" ಅಂದನು.**

ನಮಗೆ ಕಥೆಯ ಉಳಿದ ಭಾಗ ಗೊತ್ತಿದೆ. ದಾವೀದನಿಗೆ ರಾಜನ ರಕ್ಷಾಕವಚಗಳನ್ನು ಧರಿಸಲು ಆಗಲಿಲ್ಲ ಬದಲಾಗಿ ಐದು ಸಣ್ಣ ಕಲ್ಲುಗಳನ್ನು ಮತ್ತು ಕವಣೆಯನ್ನು ತೆಗೆದುಕೊಂಡು ದೈತ್ಯಶರೀರಿಯ ವಿರುದ್ಧ ಹೋದನು. ಆ ದೈತ್ಯನನ್ನು ಅವನು ಕೊಂದು ಎಲ್ಲಾ ಜನರಿಗೆ ವೀರನಾದನು.

**ಅವನ ಸಹನೆ**

ದಾವೀದನು ಒಬ್ಬ ದೀನ ಕುರುಬನಾಗಿರುವಾಗ ದೇವರಿಂದ ಇಸ್ರಾಯೇಲಿನ ಮುಂದಿನ ರಾಜನಾಗಿ ಅಭಿಷೇಕಿಸಲ್ಪಟ್ಟನು. ನಂತರ ಅವನು ಸೌಲನ ಕಿನ್ನರಿ ವಾದ್ಯಗಾರನ ಸ್ಥಾನದಿಂದ ಸೇನಾಧಿಕಾರಿಯಾಗಿ ನಂತರ ಅವನ ಅಳಿಯನಾದಾಗ ಎಷ್ಟು ದೈವಾನುಗ್ರಹವೆನಿಸಿರಬಹುದು. ಅವನು ಸೌಲನ ಮಗನಾದ ಹಾಗೂ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದ ಯೋನಾತಾನನ ಸ್ನೇಹಿತನೂ ಸಹ ಆದನು.

ಆದರೆ ಸೌಲನು ಅವನ ಮೇಲೆ ಅಸೂಯೆಪಟ್ಟು ಅವನ ಜನಪ್ರಿಯತೆಯನ್ನು ಕಂಡು ಭಯಪಟ್ಟನು. ಅವನು ಸುಲಭವಾಗಿ ಮುಂದಿನ ರಾಜನಾಗಬಹುದು ಎಂಬುದನ್ನು ಸೌಲನು ಕಂಡು ಅವನನ್ನು ಅನೇಕ ಬಾರಿ ಕೊಲ್ಲಲು ಪ್ರಯತ್ನಿಸಿದನು. ದಾವೀದನು ತನ್ನ ಪ್ರಾಣವನ್ನು ಉಳಿಸಕೊಳ್ಳಲು ಓಡಿಹೋಗಿ ಒಬ್ಬ ದುಷ್ಕರ್ಮಿಯಂತೆ ಗವಿಗಳಲ್ಲಿ ವಾಸಿಸಿದನು. ಅವನಿಗೆ ಸೌಲನನ್ನು ಕೊಲ್ಲಲು ಎರಡು ಅವಕಾಶಗಳು ಸಿಕ್ಕರೂ ಅವನು ನಿರಾಕರಿಸಿದನು.

**1 ಸಮು 24:10 " ಈ ಹೊತ್ತು ಯೆಹೋವನು ಗವಿಯಲ್ಲಿ ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಟ್ಟಿದ್ದಾನೆಂಬುದು ಈಗ ನಿನಗೆ ಗೊತ್ತಾಯಿತಲ್ಲವೋ? ನಿನ್ನನ್ನು ಕೊಂದುಬಿಡಬೇಕೆಂದು ಕೆಲವರು ನನಗೆ ಹೇಳಿದರು. ಆದರೆ ನಾನು ಅವರಿಗೆ, 'ಯೆಹೋವನ ಅಭಿಷಿಕ್ತನಾದ ನನ್ನ ಒಡೆಯನ ಮೇಲೆ ಕೈಹಾಕುವುದಿಲ್ಲ' ಎಂದು ಹೇಳಿ ನಿನ್ನನ್ನು ಉಳಿಸಿದೆನು. "**

**1 ಸಮು 26:8,9 ಅಬೀಷೈಯು ದಾವೀದನಿಗೆ, "ದೇವರು ಈ ಹೊತ್ತು ನಿನ್ನ ವೈರಿಯನ್ನು ನಿನ್ನ ಕೈಗೆ ಒಪ್ಪಿಸಿದ್ದಾನೆ, ಅಪ್ಪಣೆಯಾಗಲಿ ನಾನು ಬರ್ಜಿಯಿಂದ ಒಂದೇ ಪೆಟ್ಟಿನಲ್ಲಿ ಅವನನ್ನು ನೆಲಕ್ಕೆ ಹತ್ತಿಕೊಳ್ಳುವಂತೆ ತಿವಿಯುವೆನು. ಎರಡನೆಯ ಸಾರಿ ಹೊಡೆಯುವಂತ**

**ಅವಕಾಶವಿರುವುದಿಲ್ಲ" ಎಂದು ಹೇಳಿದನು. 9ಆದರೆ ದಾವೀದನು, "ಅವನನ್ನು ಕೊಲ್ಲಬೇಡ, ಯೆಹೋವನ ಅಭಿಷಿಕ್ತನಿಗೆ ವಿರೋಧವಾಗಿ ಕೈಯೆತ್ತುವ ಯಾವನಾದರೂ ನಿರಪರಾಧಿಯೆಂದು ಪರಿಗಣಿಸಲ್ಪಡುವುದಿಲ್ಲ?" ಅಂದನು.**

ಸೌಲನು ಮರಣ ಹೊಂದಿದನು ಮತ್ತು ದಾವೀದನು ಯೆಹೂದದ ರಾಜನಾಗಿ ಮಾಡಲ್ಪಟ್ಟನು. ನಂತರ ಸೌಲನ ಮಗನು ತೀರಿದಾಗ ದಾವೀದನು ಇಡೀ ಇಸ್ರಾಯೇಲ್ ದೇಶಕ್ಕೆ ರಾಜನಾದನು.

**ಅವನ ಆಳ್ವಿಕೆ**

* ದಾವೀದನ ಆಳ್ವಿಕೆಯಲ್ಲಿ ಅನೇಕ ಗಮನಾರ್ಹ ಘಟನೆಗಳು ನಡೆದವು. ಅವನು ಯೆರೂಸಲೇಮನ್ನು ವಶಪಡಿಸಿಕೊಂಡನು ಮತ್ತು ಅದನ್ನು ಇಸ್ರಾಯೇಲಿನ ರಾಜಧಾನಿಯನ್ನಾಗಿ ಮಾಡಿದನು.
* ಅವನು ಮಂಜೂಷವನ್ನು ಯೆರೂಸಲೇಮಿಗೆ ತಂದನು ಮತ್ತು ದಾವೀದನ ಗುಡಾರವನ್ನು ಸ್ಥಾಪಿಸಿದನು.
* ಅವನು ರಾಜ್ಯವನ್ನು ವಿಸ್ತರಿಸಿದನು.
* ಅವನು ಊರೀಯನ ಹೆಂಡತಿಯಾದ ಬತ್ಷೇಬಳನ್ನು ತನ್ನ ಹೆಂಡತಿಯನ್ನಾಗಿಸಿಕೊಂಡನು, ನಂತರ ತನ್ನ ಪಾಪಕ್ಕಾಗಿ ಸಾರ್ವಜನಿಕವಾಗಿ ಪಶ್ಚಾತ್ತಾಪಪಟ್ಟನು.
* ಅವನಿಗೆ ಮಹಾ ದೇವಾಲಯದ ಯೋಜನೆಗಳನ್ನು ನೀಡಲಾಯಿತು, ಅದನ್ನು ಅವನ ಮಗನಾದ ಸೊಲೊಮೋನನು ಕಟ್ಟಿದನು.

**ದೇವರ ಆರಾಧಕನು**

ದಾವೀದನು ನಮಗೆ ಬಿಟ್ಟು ಹೋಗಿರುವ ದೊಡ್ಡ ಪರಂಪರೆಯು ಒಬ್ಬ ನುರಿತ ಸಂಗೀತಗಾರನಾಗಿದ್ದಾಗಿದೆ. ಅವನು ದೇವರ ಆರಾಧಕನಾಗಿದ್ದನು. ಅವನು ಕೀರ್ತನೆ ಪುಸ್ತಕದ ಬಹುತೇಕ ಭಾಗವನ್ನು ಬರೆದನು, ಅವುಗಳು ಇಂದು ನಿರುತ್ಸಾಹಗೊಂಡಿರುವ, ಕಷ್ಟದಲ್ಲಿರುವ ಅಥವಾ ಕಳವಳಗೊಂಡಿರುವ ವಿಶ್ವಾಸಿಗಳಿಗೆ ಬಹಳ ಉತ್ತೇಜನವನ್ನು ಕೊಡುವಂತಹ ಮಾತುಗಳಾಗಿವೆ. ಅವನು ಬರಲಿದ್ದ ಮೆಸ್ಸೀಯನ ಬಗ್ಗೆ ಅತ್ಯಂತ ಅದ್ಭುತವಾದ ಪ್ರವಾದನೆಗಳನ್ನು ಬರೆದನು.

ದಾವೀದನು ತನ್ನ ದೇವದರ್ಶನ ಗುಡಾರದ ಮೂಲಕ ಇಂದು ಸ್ತುತಿ ಆರಾಧನೆ ಹೇಗಿರಬೇಕೆಂಬುದರ ಒಂದು ಅದ್ಭತವಾದ ಚಿತ್ರಣವನ್ನು ಕೊಡುತ್ತಾನೆ.

ದಾವೀದನು ಒಬ್ಬ ಯುದ್ಧಶೂರನಾಗಿದ್ದನು, ಒಬ್ಬ ರಾಜನಾಗಿದ್ದನು ಒಬ್ಬ ಪ್ರವಾದಿಯಾಗಿದ್ದನು ಮತ್ತು ಒಬ್ಬ ಕೀರ್ತನೆಗಾರನಾಗಿದ್ದನು. ಅವನು ದೇವರ ಹೃದಯಕ್ಕೆ ಒಪ್ಪುವ ಮನುಷ್ಯನಾಗಿದ್ದನು.

**ಅಪೋ 13:22 ಆ ಮೇಲೆ ದೇವರು ಅವನನ್ನು ತೆಗೆದುಹಾಕಿ ದಾವೀದನನ್ನು ಅವರ ಮೇಲೆ ಅರಸನನ್ನಾಗಿ ನೇಮಕಮಾಡಿ; 'ಇಷಯನ ಮಗನಾದ ದಾವೀದನು ನನಗೆ ಸಿಕ್ಕಿದನು, ಅವನು ನನ್ನ ಹೃದಯಕ್ಕೆ ಒಪ್ಪುವ ಮನುಷ್ಯನು, ಅವನು ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವನು' ಎಂಬುದಾಗಿ ಅವನ ವಿಷಯವಾಗಿ ಸಾಕ್ಷಿಹೇಳಿದನು.**

**ಸಾರಾಂಶ**

- ಯೆಹೋವನ ಸೈನಿಕನಾದ - ಯೆಹೋಶುವನ, ಬಲವಾದ ಶೌರ್ಯಪುರುಷನಾದ - ಗಿದ್ಯೋನ, ನೀತಿವಂತ ನ್ಯಾಯಾಸ್ಥಾಪಕನಾದ - ಸಮುವೇಲ, ಅಥವಾ ಸೊಲೊಮೊನ, ಎಲೀಯ, ಎಲೀಷ, ದಾನಿಯೇಲ, ಎಜ್ರ ಅಥವಾ ನೆಹೆಮೀಯನ ಜೀವಿತಗಳ ಬಗ್ಗೆ ಇಲ್ಲಿ ವಿವರಿಸಲು ಸ್ಥಳವಿಲ್ಲ. ಸಾರ, ಎಸ್ತೇರ್, ರೂತ್ ಅಥವಾ ದೆಬೋರರ ಬಗ್ಗೆ ಅಧ್ಯಯನ ಮಾಡಲು ಇಲ್ಲಿ ಸ್ಥಳವಿಲ್ಲ. ಆದರೆ ನಾವು ಹಳೆ ಒಡಂಬಡಿಕೆಯುದ್ದಕ್ಕೂ ಎಲ್ಲೆಡೆ ನೋಡುವಾಗ ದೇವರು ತನ್ನ ಚಿತ್ತವನ್ನು ನೆರವೇರಿಸುವ ಸ್ತ್ರೀ ಅಥವಾ ಪುರುಷನನ್ನು ಹೊಂದಿದ್ದರು. ಅದಲ್ಲದೆ ಯೆಹೋವನಿಗಾಗಿ ನಿಂತುಕೊಳ್ಳುವ ಗಣನೆಗೆ ಬರುವ ಒಬ್ಬ ವೀರ ವ್ಯಕ್ತಿಯು ಎಲ್ಲಾ ಕಾಲದಲ್ಲೂ ಇರುತ್ತಿದ್ದರು.
- ಈ ವೀರರು ನಿಜವಾದ ಸ್ತ್ರೀ ಪುರುಷರಾಗಿದ್ದರು ಮತ್ತು ನಮ್ಮಂತೆ ಅವರಿಗೂ ಬಲಗಳು ಮತ್ತು ಬಲಹೀನತೆಗಳಿದ್ದವು. ನಾವು ಅವರನ್ನು ನಿಜವಾದ ಜನರೆಂದು ಕಂಡು ಪ್ರಶಂಸಿಸುವಾಗ, ಅವರು ಮಾಡಿದವುಗಳನ್ನು ಸ್ವತಃ ನಾವೂ ಸಹ ಮಾಡಲು ಸಾಧ್ಯವೆಂಬಂತೆ ನಮ್ಮನ್ನು ಕಾಣಬಹುದು. ನಾವು ನಮ್ಮನ್ನು ನಮ್ಮ ಕಾಲದ ಗಿದ್ಯೋನರಾಗಿ ಅಥವಾ ದೆಬೋರರಾಗಿ ಕಾಣಬಹುದು.

**ವಿಮರ್ಶೆಗಾಗಿ ಪ್ರಶ್ನೆಗಳು**

1. ಇಬ್ರಿಯ 11 ರಲ್ಲಿ ಪಟ್ಟಿ ಮಾಡಲಾದ ಪ್ರತಿಯೊಬ್ಬ ಹಳೆಯ ಒಡಂಬಡಿಕೆಯ ಸತ್ಯವೇದ ವೀರರ ಜೀವನದಲ್ಲಿ ಕಂಡುಬರುವ ಸಾಮಾನ್ಯ ಅಂಶ ಯಾವುದು?

2. ಅಬ್ರಹಾಮನ ವಿಧೇಯತೆ ಮತ್ತು ನಂಬಿಕೆಯ ಬಗ್ಗೆ ಸತ್ಯವೇದದ ಉದಾಹರಣೆಗಳನ್ನು ನೀಡಿರಿ.

3. ಯೋಸೇಫನು ಯಾವ ರೀತಿಗಳಲ್ಲಿ ಕ್ರಿಸ್ತನ ಪ್ರತಿರೂಪವಾಗಿದ್ದನು?

# ಹಳೆ ಒಡಂಬಡಿಕೆಯ ಅದ್ಭುತಗಳು

## *(ಒಂದು ಭಾಗಶಃ ಪಟ್ಟಿ)*

**ಸೃಷ್ಟಿ** **ಆದಿಕಾಂಡ**

ಭೂಮಿಯ ಸೃಷ್ಟಿ ........................................Ch 1

ಮಾನವಕುಲದ ಸೃಷ್ಟಿ..................................1:26,27

2:7,21,22

**ಹನೋಕನ ಆರೋಹಣ** ................................ 5:19-24

**ಜಲಪ್ರಳಯ**..................................................7:9-12,17-24

**ಬಾಬೆಲ್ ಗೋಪುರ**..........................................11:1.5-9

**ಅಬ್ರಹಾಮ**

ಫರೋಹ ಮತ್ತು ಅವನ ಮನೆಯ ಮೇಲೆ ಬಾಧೆ..12:10-20

ಹೊಗೆಹಾಯುವ ಒಲೆ ಮತ್ತು ಉರಿಯುವ ದೀಪ..15:17,18

ಸಾರಾಳ ಗರ್ಭದಾರಣೆ .................................17:15-19

18:10-14;21:1-3

ಸೊದೊಮಿನವರು ಕುರುಡಾದದ್ದು ....................10:9-11

ಸೊದೊಮ್ ಮತ್ತು ಗೊಮೊರದ ನಾಶನ...........19:15-25,28,29

ಲೋಟನ ಪತ್ನಿ ಉಪ್ಪುಕಂಬವಾದದ್ದು ...............19:24-28

ಹಾಗಾರಳ ಬಾವಿ ........................................21:14-21

**ಮೋಶೆ** **ವಿಮೋಚನಕಾಂಡ**

ಉರಿಯುವ ಪೊದೆ .......................................3:1-14

ಮೋಶೆಯ ಕೋಲು......................................4:1-5;7:8-13

ಕುಷ್ಠಹಿಡಿದ ಕೈ...........................................4:6-12

ಈಜಿಪ್ಟಿನ ಹತ್ತು ಬಾಧೆಗಳು

ನೈಲ್ ನದಿ ...........................................4:9,14-24

ಕಪ್ಪೆಗಳು ..............................................8:1-6

ಹೇನುಗಳು ..........................................8:16-19

ನೊಣಗಳು ...........................................8:20-31

ದನಕರುಗಳಿಗೆ ಉಂಟಾದ ಬಾಧೆ ...............9:1-7

ಬೊಬ್ಬೆಗಳು..........................................9:8-11

ಆನೆಕಲ್ಲಿನ ಮಳೆ ...................................9:13-25

ಮಿಡಿತೆಗಳು .........................................10:1-20

ಕಾರ್ಗತ್ತಲೆ...........................................10:21-29

ಚೊಚ್ಚಲ ಮಗುವಿನ ಸಂಹಾರ ..................Ch 11;12:29-33

ಮರುಭೂಮಿಯಲ್ಲಿ ಪ್ರಯಾಣ

ಮೇಘ ಮತ್ತು ಅಗ್ನಿ ................................13:21 ರಿಂದ

ಕೆಂಪು ಸಮುದ್ರ ಇಬ್ಭಾಗವಾದದ್ದು..............14:21-31

ಮಾರಾದ ನೀರು ಸೌಖ್ಯವಾದದ್ದು ..............15:22-27

ಮನ್ನಾ ................................................ 16:1-5 ರಿಂದ

ಲಾವಕ್ಕಿ............................................... 16:8,11-13

ಬಂಡೆಯಿಂದ ನೀರು ................................ 17:1-9

ಅಮಾಲೇಕ್ಯರ ವಿರುದ್ಧ ಜಯ .................... 17:8-16

ಸಿನಾಯಿಯಲ್ಲಿ : ಬೆಂಕಿ - ದಟ್ಟ ಮೋಡ ...... 19:16-25

ಸಿಡಿಲು – ಗುಡುಗು – ಭೂಕಂಪ................ ಧರ್ಮೋ. 5:22-26

ತುತ್ತೂರಿಯ ಶಬ್ಧ – ದಶಾಜ್ಞೆಗಳು

ಬರೆಯಲ್ಪಟ್ಟದ್ದು

ನಾದಾಬ್ ಮತ್ತು ಅಬೀಹುರ ಮೇಲೆ ನ್ಯಾಯತೀರ್ಪು-ಯಾಜಕ 10:1-7

**ಅರಣ್ಯಕಾಂಡ**

ಗುಣಗುಟ್ಟಿದವರು ಬೆಂಕಿಯಿಂದ ದಹಿಸಲ್ಪಟ್ಟರು... 11:1-3

ಮಿರ್ಯಾಮಳ ಕುಷ್ಠ ....................................... Ch 12;20:1

ಕೋರಹ ಮತ್ತು ಇತರರ ನಾಶನ ..................... Ch 16;26:9-11

ಆರೋನನ ಕೋಲು...................................... Ch 17

ತಾಮ್ರದ ಸರ್ಪ .......................................... 21:4-9

ಬೀರ್ ನಲ್ಲಿ ಬಾವಿ........................................ 21:13-18

ಬಿಳಾಮನ ಕತ್ತೆ ........................................... 22:20-35

ಮಿದ್ಯಾನರ ವಿರುದ್ಧ ಜಯ ............................ Ch 25;31

ಮೋಶೆಯ ಹೂಣಿಡುವಿಕೆ .............................. ಧರ್ಮೋ 34

**ಯೆಹೋಶುವ** **ಯೆಹೋ**

ಯೊರ್ದಾನ್ ನದಿ ಇಬ್ಭಾಗವಾದದ್ದು................. 3:7-17:4

ಅದ್ಭುತಕರವಾದ ಕಾಣಿಸಿಕೊಳ್ಳುವಿಕೆ............... 5:13-15

ಯೆರಿಕೊವಿನ ವಶ....................................... Ch 6

ಸೂರ್ಯನು ನಿಂತಿದ್ದು .................................. 10:12-15

**ಗಿದ್ಯೋನ** **ನ್ಯಾಯ**

ಬಂಡೆಯಿಂದ ಬೆಂಕಿ ಬಂದದ್ದು......................... 6:19-24

ಉಣ್ಣೆ ......................................................... 6:36-40

ಮಿದ್ಯಾನರ ಸೋಲು ..................................... Ch 7

**ಎಲೀಯ** **1 ಅರಸು**

ದೀರ್ಘಕಾಲ ಬರ..........................17:1; ಯಾಕೋ 5:17

ಕಾಗೆಗಳಿಂದ ಪೋಷಣೆ................................. 17:2-7

ವಿಧವೆಯ ಮಗನ ಪುನರುತ್ಥಾನ ..................... 17:17-24

ಅದ್ಭುತಕರವಾದ ಯಜ್ಞಬಲಿ ........................... 18:1-39

ಅದ್ಭುತಕರವಾದ ಮಳೆ ................................. 18:1,2

ದೇವದೂತರ ಉಪಹಾರ............................... 19:1-18
ದೈವಿಕ ಪ್ರಕಟನೆ .......................................... 19:9-18

**2 ಅರಸು**

ಪರಲೋಕದಿಂದ ಬೆಂಕಿ ................................. 1:9-15
ಯೊರ್ದಾನ್ ಇಬ್ಭಾಗವಾದದ್ದು ........................ 2:1-8
ಎಲೀಯನು ಅಗ್ನಿರಥಗಳಲ್ಲಿ ಕೊಂಡೊಯ್ಯಲ್ಪಟ್ಟನು 2:9-11

**ಎಲೀಷ**

ಯೊರ್ದಾನ್ ಇಬ್ಭಾಗವಾದದ್ದು ........................ 2:12-14
ನೀರನ್ನು ಸೌಖ್ಯಪಡಿಸಿದ್ದು.............................. 2:19-22
ಅಗೌರವಕ್ಕೆ ದಂಡನೆ..................................... 2:23-25
ನೀರು ತುಂಬಿದ ಹಳ್ಳಗಳು ............................ 3:1-22
ವಿಧವೆಯ ಎಣ್ಣೆ ........................................... 4:1-7
ಶುನ್ಯಾಮಳ ಮಗನ ಪುನರುತ್ಥಾನ .................. 4:8-37
ನಾಮಾನನ ಸೌಖ್ಯ .....................................5:1-19
ಗೆಹಜಿಯ ಕುಷ್ಠ ...........................................5:26,27
ತೇಲುವ ಕೊಡಲಿ..........................................6:1-7
ಕುರುಡಾದ ಮತ್ತು ತೆರೆಯಲ್ಪಟ್ಟ ಕಣ್ಣುಗಳು.........6:8-23

**ಯೋನ** **ಯೋನ**

ಹಾನಿಯಿಲ್ಲದೆ ತಿಮಿಂಗಲದಿಂದ ನುಂಗಲ್ಪಟ್ಟದ್ದು...1:17;2:10

**ದಾನಿಯೇಲ** **ದಾನಿ**

ಸಿಂಹದ ಗವಿಯಿಂದ ರಕ್ಷಿಸಲ್ಪಟ್ಟದ್ದು ..................6:16-23
ಕನಸುಗಳನ್ನು ಬಹಿರಂಗಪಡಿಸುವವನು ............2:15-23

**ಶದ್ರಾಕ್, ಮೇಶಕ್, ಅಬೇದ್ ನಿಗೊ**

ಬೆಂಕಿಯ ಕೊಂಡದಿಂದ ರಕ್ಷಿಸಲ್ಪಟ್ಟದ್ದು .............3:19-29

## ಪಾಠ ಎಂಟು

# *ಸೃಷ್ಟಿ ಮತ್ತು ನ್ಯಾಯತೀರ್ಪಿನ ಅದ್ಭುತಗಳು*

ಅದ್ಭುತ ಎಂದರೆ ದೇವರ ಉದ್ದೇಶಗಳಿಗೆ ಅನುಗುಣವಾಗಿ ಪ್ರಕೃತಿ ನಿಯಮಗಳ ಮೇಲೆ ಒಂದು ಅಲೌಕಿಕ ಮಧ್ಯ ಪ್ರವೇಶವು ನಡೆದು ವಿಧೇಯತೆಯಿರುವಲ್ಲಿ ಅಲೌಕಿಕ ಆಶೀರ್ವಾದಗಳನ್ನು ತರುವುದು ಅಥವಾ ಅವಿಧೇಯತೆಯಿರುವಲ್ಲಿ ನ್ಯಾಯತೀರ್ಪನ್ನು ತರುವುದು ಆಗುವುದಾಗಿದೆ.

### ಸೃಷ್ಟಿಯ ಅದ್ಭುತಗಳು

---

**ಆಕಾಶ ಮತ್ತು ಭೂಮಿಯ ಅದ್ಭುತಗಳು**

* *ದೇವರು ಮಾತನಾಡಿದರು*

ಆಕಾಶಗಳ ಮತ್ತು ಭೂಮಿಯ ಸೃಷ್ಟಿಯು ದೇವರ ಅದ್ಭುತಕಾರ್ಯಗಳನ್ನು ನಡೆಸುವ ಬಲವಾದ ಶಕ್ತಿಯ ಒಂದು ಒಳ್ಳೆಯ ಉದಾಹರಣೆಗಳಾಗಿವೆ. ದೇವರು ಮಾತನಾಡಿದರು ಮತ್ತು ಆತನು ಹೇಳಿದಂತೆಯೇ ಎಲ್ಲವೂ ಆಯಿತು! ಸೃಷ್ಟಿಯ ಬಗೆಗಿನ ಆದಿಕಾಂಡದ ದಾಖಲೆಯು "ದೇವರು ಹೇಳಿದನು" ಎಂಬ ಪದವನ್ನು ಪದೇ ಪದೇ ಬಳಸುತ್ತದೆ. ದಾವೀದನು ಮತ್ತು ಇಬ್ರಿಯರಿಗೆ ಬರೆದ ಪತ್ರದ ಲೇಖಕನು "ದೇವರ ಮಾತಿನಿಂದಲೇ" ಎಂಬ ಪದಗಳನ್ನು ಬಳಕೆ ಮಾಡುತ್ತಾರೆ.

**ಇಬ್ರಿಯ 11:3 ವಿಶ್ವವು ದೇವರ ಮಾತಿನಿಂದಲೇ ನಿರ್ಮಿತವಾಯಿತೆಂದು ನಾವು ನಂಬಿಕೆಯಿಂದಲೇ ತಿಳಿದುಕೊಂಡಿದ್ದೇವೆ. ಈ ಕಾರಣದಿಂದ ಕಾಣಿಸುವ ಈ ಜಗತ್ತು ದೃಶ್ಯವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ.**

**ಕೀರ್ತನೆ 33:6 ಯೆಹೋವನ ಅಪ್ಪಣೆಯಿಂದಲೇ ಆಕಾಶವು ಉಂಟಾಯಿತು; ಅದರಲ್ಲಿರುವುದೆಲ್ಲವೂ ಆತನ ಶ್ವಾಸದಿಂದ ನಿರ್ಮಿತವಾಯಿತು.**

**ಪುರುಷನ ಮತ್ತು ಸ್ತ್ರೀಯ ಅದ್ಭುತ**

**ಆದಿಕಾಂಡ 1:26,27 ಆಮೇಲೆ ದೇವರು, ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ. ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ, ಪ್ರಾಣಿಗಳ ಮೇಲೆಯೂ, ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನಮಾಡಲಿ ಅಂದನು. ಹೀಗೆ ದೇವರು;**

**"ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು. ದೇವರ ಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು. ಅವರನ್ನು ಗಂಡುಹೆಣ್ಣಾಗಿ ಸೃಷ್ಟಿ ಮಾಡಿದನು."**

**ಆದಿಕಾಂಡ 2:7 ಹೀಗಿರಲು ಯೆಹೋವನಾದ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ಸೃಷ್ಟಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು. ಆಗ ಮನುಷ್ಯನು ಬದುಕುವ ಪ್ರಾಣಿಯಾದನು.**

ಯೋಬನ ಪುಸ್ತಕವು ಸತ್ಯವೇದದಲ್ಲಿರುವ ಅತ್ಯಂತ ಹಳೆಯ ಪುಸ್ತಕವೆಂದು ಹೇಳಲಾಗುತ್ತದೆ. ಯೋಬನಿಗೆ ತನ್ನ ಮೂಲದ ಬಗ್ಗೆ ಯಾವ ಸಂದೇಹವಿರಲಿಲ್ಲ.

**ಯೋಬ 10:8a** ನೀನು ನನ್ನನ್ನು ನಿರ್ಮಿಸಿ ರೂಪಿಸಿದ್ದರೂ...

**ಸೃಷ್ಟಿಯ ಉದ್ದೇಶ**

✳ *ತಂದೆಯ ಹೃದಯವನ್ನು ನೆರವೇರಿಸುವುದು*

ಒಂದು ಶಾಶ್ವತವಾದ ಕುಟುಂಬವನ್ನು ಬಯಸಿದ ತಂದೆಯ ಹೃದಯದ ಬಯಕೆಯನ್ನು ನೆರವೇರಿಸಲು ದೇವರು ಮಾನವನ ಸೃಷ್ಟಿಯನ್ನು ಯೋಜಿಸಿದರು. ದೇವರು ತನ್ನ ಮಗನಿಗಾಗಿ ಒಂದು ವಧುವನ್ನು ಬಯಸಿದರು ಮತ್ತು ಒಂದು ಶಾಶ್ವತವಾದ ಕುಟುಂಬದ ಮೂಲಕ ತನ್ನನ್ನು ಅವರಲ್ಲಿ ಕಾಣಲು ಬಯಸಿದನು. ಎಲ್ಲಾ ಸ್ತ್ರೀ ಪುರುಷರು ತನ್ನೊಂದಿಗೆ ಒಂದು ಶಾಶ್ವತವಾದ ಪ್ರೀತಿಯ ಸಂಬಂಧವನ್ನು ಮತ್ತು ನಿಕಟ ಅನ್ಯೋನ್ಯತೆಯನ್ನು ಹೊಂದಬೇಕೆಂದು ದೇವರು ಅವರನ್ನು ಸೃಷ್ಟಿ ಮಾಡಿದನು.

**ಎಫೆಸ 2:4-7 ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮನ್ನು ಪ್ರೀತಿಸಿದ ಮಹಾ ಪ್ರೀತಿಯ ನಿಮಿತ್ತ, ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. ಕೃಪೆಯಿಂದಲೇ ನೀವು ರಕ್ಷಣೆ ಹೊಂದಿದವರಾಗಿದ್ದೀರಿ. ಆತನು ಕ್ರಿಸ್ತ ಯೇಸುವಿನಲ್ಲಿ ನಮ್ಮೊಂದಿಗಿರುವ ದಯೆಯ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಿನ ಯುಗಗಳಲ್ಲಿ ನಮಗೆ ತೋರಿಸಬೇಕೆಂದು ಕ್ರಿಸ್ತಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ, ಪರಲೋಕದಲ್ಲಿ ಯೇಸುಕ್ರಿಸ್ತನೊಂದಿಗೆ ನಮ್ಮನ್ನು ಕೂರಿಸಿದ್ದಾನೆ.**

✳ *ಆತನ ಶಾಶ್ವತವಾದ ಉದ್ದೇಶಗಳನ್ನು ನೆರವೇರಿಸುವುದು*

ದೇವರು ತನ್ನ ಶಾಶ್ವತವಾದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಮಾನವರನ್ನು ಸೃಷ್ಟಿಸಿದನು.

**ಎಫೆಸ 1:9-11 ದೇವರು ಆತನಲ್ಲಿ ಮೊದಲೇ ನಿರ್ಣಯಿಸಿಕೊಂಡಿದ್ದ ಕೃಪೆಯುಳ್ಳ ಸಂಕಲ್ಪದ ಪ್ರಕಾರ ತನ್ನ ಚಿತ್ತದ ರಹಸ್ಯವನ್ನು ನಮಗೆ ತಿಳಿಯಪಡಿಸಿದ್ದಾನೆ. ಕಾಲವು ಪರಿಪೂರ್ಣವಾದಾಗ, ಆತನು ಭೂಪರಲೋಕಗಳಲ್ಲಿರುವ ಸಮಸ್ತವನ್ನು ಕ್ರಿಸ್ತನಲ್ಲಿ ಒಂದುಗೂಡಿಸುವುದೇ ಆ ಸಂಕಲ್ಪವಾಗಿತ್ತು. ಇದಲ್ಲದೆ ತನ್ನ ಚಿತ್ತದ ಉದ್ದೇಶಕ್ಕನುಸಾರವಾಗಿ ಎಲ್ಲಾ ಕಾರ್ಯಗಳನ್ನು ನಡೆಸುವಾತನು ತನ್ನ ಸಂಕಲ್ಪದ ಪ್ರಕಾರ ಮೊದಲೇ ನೇಮಿಸಲ್ಪಟ್ಟವರಾದ ನಮ್ಮನ್ನು ಕ್ರಿಸ್ತನಲ್ಲಿ ತನ್ನ ಸ್ವಕೀಯ ಜನರನ್ನಾಗಿ ಆರಿಸಿಕೊಂಡನು.**

✳ *ಸ್ತುತಿ ಮತ್ತು ಆರಾಧನೆಯಲ್ಲಿ ತನ್ನನ್ನು ನೆರವೇರಿಸುವುದು*

ಮಾನವರು ಸ್ತುತಿ ಮತ್ತು ಆರಾಧನೆಯಲ್ಲಿ ತನಗೆ ಸೇವೆ ಮಾಡುವುದಕ್ಕಾಗಿ ದೇವರು ಅವರನ್ನು ಸೃಷ್ಟಿಸಿದರು.

**ಯೆಶಯ 43:7,21 ನನ್ನ ಮಹಿಮೆಗಾಗಿ ನಾನು ಸೃಷ್ಟಿಸಿ ರೂಪಿಸಿ ಉಂಟುಮಾಡಿದ ನನ್ನ ಹೆಸರಿನವರೆಲ್ಲರನ್ನೂ ಬರಮಾಡಬೇಕೆಂದು ಅಪ್ಪಣೆಕೊಡುವೆನು**

**ನನ್ನ ಸ್ತೋತ್ರವನ್ನು ಪ್ರಚುರಪಡಿಸಲಿ ಎಂದು ನಾನು ಈ ಜನರನ್ನು ಸೃಷ್ಟಿಸಿಕೊಂಡಿದ್ದೇನೆ.**

ದೇವರು ಮಾನವ ಕುಲವನ್ನು ಸೃಷ್ಟಿಸಿದಾಗ ಒಂದು ದೊಡ್ಡ ಶಾಶ್ವತವಾದ ಉದ್ದೇಶವನ್ನು ಹೊಂದಿದ್ದರು. ಆದರೆ ದೇವರ ಸೃಜನಶೀಲ ಅದ್ಭುತಗಳು ಆಕಾಶಗಳ ಮತ್ತು ಭೂಮಿಯ

ಸೃಷ್ಟಿಯೊಂದಿಗೆ ಅಥವಾ ಮಾನವಕುಲದ ಸೃಷ್ಟಿಯೊಂದಿಗೆ ನಿಲ್ಲಲಿಲ್ಲ. ಅವುಗಳು ಹಳೆಯ ಒಡಂಬಡಿಕೆಯುದ್ದಕ್ಕೂ ಮುಂದುವರೆದವು. ದೇವರು ಮರುಭೂಮಿಯಲ್ಲಿ ಮನ್ನಾ ಮತ್ತು ನೀರನ್ನು ಸೃಷ್ಟಿಸಿದರು. ಜರೆಪ್ತದ ವಿಧವೆಗಾಗಿ ಎಣ್ಣೆಯನ್ನು ಮತ್ತು ಹಿಟ್ಟನ್ನು ಸೃಷ್ಟಿಸಿದರು.

## ನ್ಯಾಯತೀರ್ಪಿನ ಅದ್ಭುತಗಳು

ಸತ್ಯವೇದದಲ್ಲಿ ದೇವರ ನ್ಯಾಯತೀರ್ಪುಗಳ ಅನೇಕ ಉದಾಹರಣೆಗಳಿವೆ.

- ಜಲಪ್ರಳಯವು ಇಡೀ ಭೂಮಿಯ ಮೇಲೆ ಬಂದ ನ್ಯಾಯತೀರ್ಪಾಗಿತ್ತು.
- ಸೊದೊಮ್ ಮತ್ತು ಗೊಮೊರದ ನಾಶನವು ಒಂದು ಪ್ರದೇಶದ ಮೇಲೆ ಬಂದ ನ್ಯಾಯತೀರ್ಪಾಗಿತ್ತು.
- ನಾದಾಬ್ ಮತ್ತು ಅಬೀಹುನ ಮೇಲೆ ಬಂದ ನ್ಯಾಯತೀರ್ಪು ಅನಧಿಕೃತವಾದ ವಿಚಿತ್ರ ಬೆಂಕಿಯನ್ನು ಯಜ್ಞವೇದಿಯ ಮೇಲೆ ಅರ್ಪಿಸಿದ ಆ ಪುರುಷರ ಮೇಲೆ ಬಂದ ನ್ಯಾಯತೀರ್ಪಾಗಿತ್ತು.ಈ ಪುರುಷರು ದೇವರ ಅಭಿಷಿಕ್ತ ನಾಯಕರುಗಳ ವಿರುದ್ಧ ನಿಂತರು ಮತ್ತು ಬೆಂಕಿಯಿಂದ ನಾಶವಾದರು.
- ಎಲೀಷನ ಸೇವಕನಾದ ಗೆಹಜಿಯ ಮೇಲೆ ಬಂದ ಕುಷ್ಠವು ಒಬ್ಬ ವ್ಯಕ್ತಿಯ ಮೇಲೆ ಬಂದ ನ್ಯಾಯತೀರ್ಪಾಗಿತ್ತು.

ಪಾಪಕ್ಕೆ ಆಗುವ ಶಿಕ್ಷೆಯು ಪಶ್ಚಾತ್ತಾಪ ಪಡುವುದಕ್ಕೆ ಒಂದು ಅವಕಾಶವಾಗಿದೆ.

## ನ್ಯಾಯತೀರ್ಪು ಯಾಕೆ ಬರುತ್ತದೆ

ನ್ಯಾಯತೀರ್ಪು ಬರಲು ಮೂರು ಕಾರಣಗಳಿವೆ.

- ಪಾಪಕ್ಕೆ ಶಿಕ್ಷೆಯಾಗಿ

  **2 ಪೇತ್ರ 2:9,10a ಕರ್ತನು ಭಕ್ತರನ್ನು ಕಷ್ಟಗಳಿಂದ ರಕ್ಷಿಸುವುದಕ್ಕೂ ಅನೀತಿವಂತರನ್ನು ಶಿಕ್ಷಿಸುವುದಕ್ಕಾಗಿ ನ್ಯಾಯತೀರ್ಪಿನ ದಿನದ ತನಕ ಇಡುವುದಕ್ಕೂ ಬಲ್ಲವನಾಗಿದ್ದಾನೆ. ಮುಖ್ಯವಾಗಿ ಶಾರೀರಿಕ ಬಂಡುತನದ ದುರಾಶೆಗಳಲ್ಲಿ ನಡೆದು ಪ್ರಭುತ್ವವನ್ನು ತಿರಸ್ಕಾರ ಮಾಡುವವರನ್ನು ಹೀಗೆ ಶಿಕ್ಷಿಸುವನು.**

- ಮುಂಬರುವ ತಲೆಮಾರುಗಳಿಗೆ ಉದಾಹರಣೆಯಾಗಿ

  **2 ಪೇತ್ರ 2:6 … ಆತನು ಸೊದೋಮ್ ಗೊಮೋರ ಪಟ್ಟಣಗಳನ್ನು ಸುಟ್ಟು ಬೂದಿಮಾಡಿ ಇನ್ನು ಮೇಲೆ ಭಕ್ತಿಹೀನರಾಗಿ ಬದುಕುವವರಿಗೆ ಬರುವ ದುರ್ಗತಿಯನ್ನು ಸೂಚಿಸುವುದಕ್ಕಾಗಿ ದೃಷ್ಟಾಂತವಾಗಿ ಅವುಗಳಿಗೆ ದಂಡನೆಯನ್ನು ವಿಧಿಸಿದನು….**

- ಪಶ್ಚಾತ್ತಾಪಪಡುವದಕ್ಕೆ ಒಂದು ಅವಕಾಶವಾಗಿ

  **ಪ್ರಕಟನೆ 9:20,21 ಉಪದ್ರವಗಳಿಂದ ಸಾಯದೆ ಉಳಿದ ಜನರು ತಾವೇ ಮಾಡಿಕೊಂಡ ವಿಗ್ರಹಗಳನ್ನು ಬಿಟ್ಟು ದೇವರ ಕಡೆಗೆ ತಿರುಗಲಿಲ್ಲ. ಅವರು ಭೂತ, ಪ್ರೇತಗಳ ಪೂಜೆಯನ್ನೂ ಬಂಗಾರ, ಬೆಳ್ಳಿ, ತಾಮ್ರ, ಕಲ್ಲು, ಮರ ಮೊದಲಾದವುಗಳಿಂದ ಮಾಡಲ್ಪಟ್ಟ ನೋಡಲಾರದೆ, ಕೇಳಲಾರದೆ, ನಡೆಯಲಾರದೆ ಇರುವ ವಿಗ್ರಹಗಳ ಪೂಜೆಯನ್ನೂ ಬಿಡಲಿಲ್ಲ. ಇದಲ್ಲದೆ ತಾವು ನಡೆಸುತ್ತಿದ್ದ ಕೊಲೆ, ಮಾಟ, ಜಾರತ್ವ, ಕಳ್ಳತನ ಇವುಗಳೊಳಗೆ ಒಂದನ್ನೂ ಬಿಡದೆ ಮಾನಸಾಂತರಪಡಲಿಲ್ಲ.**

ಅಪೋಸ್ತಲನಾದ ಪೇತ್ರನು ಅನೇಕ ಅದ್ಭುತವಾದ ನ್ಯಾಯತೀರ್ಪುಗಳನ್ನು ತಿಳಿಸುತ್ತಾ ಅವುಗಳನ್ನು ನ್ಯಾಯತೀರ್ಪಿನ ಕಾಲದಲ್ಲಿ ನೀತಿವಂತರನ್ನು ಕಾಪಾಡುವ ದೇವರ ಸಾಮರ್ಥ್ಯದ ಉದಾಹರಣೆಯನ್ನಾಗಿ ಬಳಸುತ್ತಾನೆ.

**2 ಪೇತ್ರ 2:5-9 ಆತನು ಭಕ್ತಿಹೀನರಾದ ಪುರಾತನ ಲೋಕವನ್ನು ಸುಮ್ಮನೆ ಬಿಡದೆ ಅವರ ಮೇಲೆ ಜಲಪ್ರಳಯವನ್ನು ಬರಮಾಡಿದನು. ಆದರೆ ಸುನೀತಿಯನ್ನು ಸಾರುತ್ತಿದ್ದ ನೋಹನನ್ನೂ ಮತ್ತು ಅವನೊಂದಿಗಿದ್ದ ಇತರ ಏಳು ಜನರನ್ನು ಮಾತ್ರ ಉಳಿಸಿದನು.ಆತನು ಸೊದೋಮ್ ಗೊಮೋರ ಪಟ್ಟಣಗಳನ್ನು ಸುಟ್ಟು ಬೂದಿಮಾಡಿ ಇನ್ನು ಮೇಲೆ ಭಕ್ತಿಹೀನರಾಗಿ ಬದುಕುವವರಿಗೆ ಬರುವ ದುರ್ಗತಿಯನ್ನು ಸೂಚಿಸುವುದಕ್ಕಾಗಿ ದೃಷ್ಟಾಂತವಾಗಿ ಅವುಗಳಿಗೆ ದಂಡನೆಯನ್ನು ವಿಧಿಸಿದನು. ಆದರೆ ದೇವರು ಆ ದುಷ್ಟರ ಅನೈತಿಕ ನಡತೆಗೆ ನೊಂದುಕೊಂಡಿದ್ದ ನೀತಿವಂತನಾದ ಲೋಟನನ್ನು ಕಾಪಾಡಿದನು. ಏಕೆಂದರೆ ಆ ನೀತಿವಂತನು ಅವರ ಮಧ್ಯದಲ್ಲಿ ಇದ್ದುಕೊಂಡು ಅವರ ಅನ್ಯಾಯ ಕೃತ್ಯಗಳನ್ನು ನೋಡುತ್ತಾ ಕೇಳುತ್ತಾ ಅವುಗಳ ನಿಮಿತ್ತ ದಿನೇ ದಿನೇ ತನ್ನ ನೀತಿಯುಳ್ಳ ಆತ್ಮದಲ್ಲಿ ಬಹಳವಾಗಿ ನೊಂದುಕೊಂಡನು. 9ಕರ್ತನು ಭಕ್ತರನ್ನು ಕಷ್ಟಗಳಿಂದ ರಕ್ಷಿಸುವುದಕ್ಕೂ ಅನೀತಿವಂತರನ್ನು ಶಿಕ್ಷಿಸುವುದಕ್ಕಾಗಿ ನ್ಯಾಯತೀರ್ಪಿನ ದಿನದ ತನಕ ಇಡುವುದಕ್ಕೂ ಬಲ್ಲವನಾಗಿದ್ದಾನೆ...**

## ನ್ಯಾಯತೀರ್ಪು - ಜಲಪ್ರಳಯ

*ವಚನ: ಆದಿಕಾಂಡ 6,7*

ದೇವರ ಅದ್ಭುತಗಳು ಆಶ್ಚರ್ಯಕರವಾದ ಘಟನೆಗಳಾಗಿರಬಹುದು ಅಥವಾ ಅವುಗಳು ನ್ಯಾಯತೀರ್ಪಿನ ಭಯಂಕರ ಕಾರ್ಯಗಳಾಗಿರಬಹುದು. ಮಾನವಕುಲದ ಪಾಪದ ನಿಮಿತ್ತ ದೇವರು ಜಲಪ್ರಳಯವನ್ನು ಭೂಮಿಯ ಮೇಲೆ ಆವರಿಸುವಂತೆ ಮಾಡಿದರು. ಆದರೂ ಈ ಭಯಂಕರವಾದ ನ್ಯಾಯತೀರ್ಪಿನ ಮಧ್ಯದಲ್ಲೂ ದೇವರು ಕರುಣೆಯನ್ನು ತೋರಿಸಿ ತನ್ನ ಸೃಷ್ಟಿಗಳನ್ನು - ಪ್ರಾಣಿ ಪಕ್ಷಿಗಳನ್ನು ಸ್ತ್ರೀ ಪುರುಷರನ್ನು - ಜೀವದಿಂದುಳಿಸಿದರು.

ಜಲಪ್ರಳಯವು ಇಡೀ ಭೂಮಿಯ ಮೇಲೆ ಮತ್ತು ಮಾನವಕುಲದ ಮೇಲೆ ಬಂದ ನ್ಯಾಯತೀರ್ಪಾಗಿದೆ.

**ಆದಿಕಾಂಡ 7:19-23 ನೀರು ಭೂಮಿಯ ಮೇಲೆ ಅತ್ಯಧಿಕವಾಗಿ ಪ್ರಬಲವಾಗಿದ್ದರಿಂದ ಆಕಾಶಮಂಡಲದ ಕೆಳಗಿರುವ ಎಲ್ಲಾ ದೊಡ್ಡ ಬೆಟ್ಟಗಳೂ ಮುಚ್ಚಿಹೋದವು. ನೀರು ಆ ಬೆಟ್ಟಗಳಿಂತಲೂ ಹದಿನೈದು ಮೊಳ ಮೇಲಕ್ಕೆ ಹೆಚ್ಚಲು ಅವುಗಳು ಸಂಪೂರ್ಣ ಮುಚ್ಚಿಹೋದುದರಿಂದ, ಪಶು, ಪಕ್ಷಿ, ಮೃಗ, ಕ್ರಿಮಿಕೀಟಗಳು ಮನುಷ್ಯರ ಸಹಿತವಾಗಿ ಭೂಮಿಯ ಮೇಲೆ ಚಲಿಸುವ ಸಕಲ ಭೂಜಂತುಗಳೆಲ್ಲವೂ ನಾಶವಾದವು.**

**ಮೂಗಿನಿಂದ ಉಸಿರಾಡುವ ಭೂಜಂತುಗಳೆಲ್ಲವೂ ಸತ್ತವು. ಮನುಷ್ಯ ಮೊದಲುಗೊಂಡು ಪಶು, ಪಕ್ಷಿ, ಕ್ರಿಮಿಕೀಟಗಳ ವರೆಗೂ ಭೂಮಿಯ ಮೇಲಿದ್ದದ್ದೆಲ್ಲಾ ನಾಶವಾಯಿತು; ನೋಹನೂ ಅವನೊಂದಿಗೆ ನಾವೆಯಲ್ಲಿದ್ದ ಜೀವಿಗಳೂ ಮಾತ್ರ ಉಳಿದುಕೊಂಡವು..**

## ಮಾನವಕುಲದ ವಿಕೃತಿ

ಪ್ರೀತಿಯುಳ್ಳ ಪರಲೋಕದ ತಂದೆಯು ಯಾಕೆ ತನ್ನ ಅಷ್ಟೊಂದು ಸೃಷ್ಟಿಗಳನ್ನು ನಾಶಮಾಡಿದರು ? ದೇವರು ಪಾಪಿಷ್ಟ ಜನರೊಂದಿಗೆ ಬೇಸತ್ತು ಹೋಗಿದ್ದರೋ ಅಥವಾ ಅದನ್ನು ತಾನು ಬಲವಂತವಾಗಿ ಮಾಡಬೇಕಾಯಿತೋ ?

ದೇವರು ಸ್ತ್ರೀಯ ಸಂತಾನವು ಸೈತಾನನ ತಲೆಯನ್ನು ಜಜ್ಜುವನೆಂದು ವಾಗ್ದಾನ ಮಾಡಿದಾಗಿನಿಂದ ಸೈತಾನನ ಯೋಜನೆಗಳು ಮತ್ತು ಉದ್ದೇಶಗಳು ಆ ಸ್ತ್ರೀಯ ಎಲ್ಲಾ ಸಂತಾನವನ್ನು ನಾಶ ಮಾಡಬೇಕೆಂಬುದಾಗಿತ್ತು. ನಾವು ಆದಿಕಾಂಡ ೬ ರಲ್ಲಿ ಭೂಮಿಯ ಮೇಲಿದ್ದ ವಿಕೃತಿಯ ಬಗ್ಗೆ ಓದುತ್ತೇವೆ.

**ಆದಿಕಾಂಡ 6:1,2,4 ಭೂಮಿಯ ಮೇಲೆ ಮನುಷ್ಯರ ಸಂಖ್ಯೆ ಹೆಚ್ಚಾಯಿತು. ಇವರಿಗೆ ಹುಟ್ಟಿದ ಹೆಣ್ಣುಮಕ್ಕಳು ಸೌಂದರ್ಯವುಳ್ಳವರಾಗಿರುವುದನ್ನು ನೋಡಿ ದೇವಪುತ್ರರು ತಮಗೆ ಇಷ್ಟವಾದವರನ್ನು ಹೆಂಡತಿಯರನ್ನಾಗಿ ಮಾಡಿಕೊಂಡರು.**

**ಅನಂತರ ದೇವಪುತ್ರರು ಮನುಷ್ಯ ಪುತ್ರಿಯರೊಂದಿಗೆ ಸಂಗಮಿಸಿದಾಗ ಮಕ್ಕಳು ಹುಟ್ಟಿದರು. ಆ ಕಾಲದಿಂದಲೂ ಅದಾದ ನಂತರವೂ ಜಗದಲ್ಲಿ ನೆಫೀಲಿಯರು ಇದ್ದರು. ಇವರೇ ಪೂರ್ವಕಾಲದಲ್ಲಿ ಪ್ರಸಿದ್ಧರಾಗಿದ್ದ ಪರಾಕ್ರಮಶಾಲಿಗಳು ಎಂದು ಹೆಸರಾದವರು.**

"ದೇವಪುತ್ರರು" ಎಂಬದು ಮಾನವ ಪುತ್ರರಲ್ಲ ಬದಲಾಗಿ ದೇವದೂತ ಸೃಷ್ಟಿಗಳಾಗಿದ್ದಾರೆ ಎಂದು ನಂಬುವುದಕ್ಕೆ ಎಲ್ಲಾ ಕಾರಣಗಳಿವೆ. ಯೋಬ 1-6 ಮತ್ತು 38:7 ರಲ್ಲಿ "ದೇವಪುತ್ರರು" ಎಂಬದು ದೇವದೂತ ಮತ್ತು ದುರಾತ್ಮ ಸೃಷ್ಟಿಗಳನ್ನು ಉಲ್ಲೇಖಿಸುತ್ತದೆ ಹೊರತು ಮಾನವರನ್ನಲ್ಲ.

ಆದಿಕಾಂಡದ ದಾಖಲೆಯು ಹೀಗೆ ಮುಂದುವರೆಯುತ್ತದೆ,

**ಆದಿಕಾಂಡ 6:5,7 ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನೂ, ಅವರು ತಮ್ಮ ಹೃದಯದಲ್ಲಿ ಯೋಚಿಸುವುದೆಲ್ಲವು ಯಾವಾಗಲೂ ಕೆಟ್ಟ ಆಲೋಚನೆಗಳನ್ನೇ ಮಾಡುತ್ತಿರುವುದನ್ನು ಯೆಹೋವನು ನೋಡಿದನು.**

**ಇದಲ್ಲದೆ ಯೆಹೋವನು, "ನಾನು ಸೃಷ್ಟಿಸಿದ ಮನುಷ್ಯ ಜಾತಿಯನ್ನು ಭೂಮಿಯ ಮೇಲಿನಿಂದ ಅಳಿಸಿಬಿಡುವೆನು; ಮನುಷ್ಯರೊಂದಿಗೆ ಸಕಲ ಕಾಡುಮೃಗ, ಕ್ರಿಮಿ, ಕೀಟ, ಪಕ್ಷಿಗಳನ್ನೂ ನಾಶ ಮಾಡುವೆನು. ನಾನು ಅವರನ್ನು ಸೃಷ್ಟಿಮಾಡಿದ್ದಕ್ಕೆ ದುಃಖವಾಗುತ್ತಿದೆ" ಎಂದು ದುಃಖಿಸಿದನು."**

## ನೋಹ ಮತ್ತು ಅವನ ಕುಟುಂಬವು ಉಳಿಸಲ್ಪಟ್ಟರು

ನೋಹ ಮತ್ತು ಅವನ ಕುಟುಂಬವು ಯಾಕೆ ಜೀವದಿಂದುಳಿಸಲ್ಪಟ್ಟರು? ಸತ್ಯವೇದವು ಹೇಳುತ್ತದೆ,

**ಆದಿಕಾಂಡ 6:8,9 ಆದರೆ ನೋಹನ ನಡವಳಿಕೆ ಯೆಹೋವನಿಗೆ ಮೆಚ್ಚುಗೆಯಾದುದರಿಂದ ನೋಹನಿಗೆ ಯೆಹೋವನ ದಯೆ ದೊರಕಿತು.**

**ನೋಹನ ಚರಿತ್ರೆ: ನೋಹನು ಸತ್ಯವಂತನೂ ಎಲ್ಲಾ ಜನರಲ್ಲಿ ನೀತಿವಂತನು ಆಗಿದ್ದನು; ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು.**

"ಎಲ್ಲಾ ಜನರಲ್ಲಿ ನೀತಿವಂತನು ಆಗಿದ್ದನು" ಎಂಬ ಪದಗಳನ್ನು ಗಮನಿಸಿರಿ. ಅವನ ವಂಶಾವಳಿಯಲ್ಲಿ ಯಾರೂ ಭ್ರಷ್ಟರಾಗಿರಲಿಲ್ಲ..

ದೇವರು ಸ್ತ್ರೀ ಪುರುಷರ ಮೇಲೆ ಕೋಪಗೊಂಡಿದ್ದರಿಂದ ಜಲಪ್ರಳಯವು ಬರಲಿಲ್ಲ. ಮಾನವ ಕುಲವು ವಿಕೃತವಾಗಿದ್ದರಿಂದ ಅದು ಬಂದಿತು. ಸೈತಾನನ ಯೋಜನೆಯನ್ನು ತಡೆಹಿಡಿಯದಿದ್ದಿದ್ದರೆ, "ಸ್ತ್ರೀಯ ಸಂತಾನವು" ಬರಲಿಕ್ಕೆ ಯಾವ ಪವಿತ್ರ ತಲೆಮಾರು ಇರುತ್ತಿರಲಿಲ್ಲ.

**ನ್ಯಾಯತೀರ್ಪನ ಸಮಯದಲ್ಲಿ ಸಂರಕ್ಷಣೆ**

✳ *ವಿಧೇಯತೆಯ ಮೂಲಕ*

ದೇವರು ನೋಹನ ಜೊತೆಗೆ ಮಾತನಾಡಿದರು ಮತ್ತು ನೋಹನು ಅದಕ್ಕೆ ವಿಧೇಯನಾದನು. ನೋಹನ ಸುತ್ತಲಿದ್ದ ಜನರು ಅವನನ್ನು ಅಪಹಾಸ್ಯ ಮಾಡುತ್ತಿದ್ದಾಗ ಅವನು ದೇವರಿಗೆ ವಿಧೇಯನಾಗುತ್ತಲೇ ಮುಂದುವರೆದನು. ಅವನು ದೇವರು ಕೊಟ್ಟ ಸೂಚನೆಗಳಿಗೆ ಅನುಸಾರವಾಗಿಯೇ ನಾವೆಯನ್ನು ಕಟ್ಟಿದನು. ಆದಿಕಾಂಡ 6:14-16 ನಮಗೆ ಈ ಸೂಚನೆಗಳನ್ನು ತಿಳಿಸುತ್ತದೆ.

✳ *ಪ್ರಾಣಿಗಳು ಬಂದವು*

ಪ್ರಪಂಚದ ಎಲ್ಲಾ ಪ್ರಾಣಿಗಳಲ್ಲಿ ಎರಡು ತಮ್ಮ ಸ್ಥಳದಿಂದ ನಾವೆಯ ಕಡೆಗೆ ಸಾಗಲು ಪ್ರಾರಂಭಿಸಿದಾಗ ನೋಹನನ್ನು ಅಪಹಾಸ್ಯ ಮಾಡಿದ ಜನರು ಏನು ಯೋಚಿಸಿರಬೇಕು ಎಂದು ನೀವು ಎಂದಾದರೂ ಯೋಚಿಸಿದ್ದೀರಾ? ದೇವರು ಪ್ರಾಣಿಗಳನ್ನು ನಾವೆಗೆ ಕರೆದರು ಮತ್ತು ಅವುಗಳು ಹಾದುಹೋಗಬೇಕಾದ ದುಷ್ಟ ಸಮಾಜದಿಂದ ಅವುಗಳನ್ನು ಸಂರಕ್ಷಿಸಿದರು. ಅದು ಎಷ್ಟು ಅದ್ಭುತವಾಗಿತ್ತು, ಮತ್ತು ಅವರು ಒಂದು ವೇಳೆ ನಂಬಿದ್ದರೆ ನಂಬಿಕೆಯಿಲ್ಲದ ಜಗತ್ತಿಗೆ ಎಂತಹ ಒಂದು ಸೂಚಕವಾಗಿತ್ತು.

**ನೀರು ಏರಿತು**

**ಆದಿಕಾಂಡ 7:4 ಏಳು ದಿನಗಳ ನಂತರ ನಾನು ಭೂಮಿಯ ಮೇಲೆ ನಲ್ವತ್ತು ದಿನ ಹಗಲಿರುಳು ಮಳೆಯನ್ನು ಸುರಿಸಿ, ನಾನು ಸೃಷ್ಟಿಮಾಡಿದ ಜೀವರಾಶಿಗಳನ್ನೆಲ್ಲಾ ಭೂಮಿಯ ಮೇಲಿನಿಂದ ನಾಶಮಾಡುತ್ತೇನೆ" ಎಂದು ಹೇಳಿದನು.**

**ಆದಿಕಾಂಡ 7:12 ನಲ್ವತ್ತು ದಿನ ಹಗಲಿರುಳು ಭೂಮಿಯ ಮೇಲೆ ಬಿರುಮಳೆ ಸುರಿಯಿತು.**

**ಅದ್ಭುತಕರವಾದ ಗಾಳಿ**

**ಆದಿಕಾಂಡ 8:1 ತರುವಾಯ ದೇವರು ನೋಹನನ್ನೂ ಅವನ ಸಂಗಡ ನಾವೆಯಲ್ಲಿದ್ದ ಎಲ್ಲಾ ಮೃಗಪಶುಗಳನ್ನೂ ನೆನಪಿಗೆ ತಂದುಕೊಂಡು ಭೂಲೋಕದ ಮೇಲೆ ಗಾಳಿ ಬೀಸುವಂತೆ ಮಾಡಲಾಗಿ ನೀರು ತಗ್ಗಿತು.**

**ಆದಿಕಾಂಡ 8:2 ಭೂಮಿಯ ಅಡಿಯಲ್ಲಿದ್ದ ಸಾಗರದ ಸೆಲೆಗಳೂ ಆಕಾಶದ ತೂಬುಗಳೂ ಮುಚ್ಚಿಕೊಂಡವು. ಆಕಾಶದಿಂದ ಸುರಿಯುತ್ತಿದ್ದ ಮಳೆ ನಿಂತು ಹೋಯಿತು. ಭೂಮಿಯ ಮೇಲಿದ್ದ ನೀರು ಕ್ರಮೇಣವಾಗಿ ತಗ್ಗುತ್ತಾ ಬಂತು.**

**ದೇವರ ವಾಗ್ದಾನ - ಮುಗಿಲುಬಿಲ್ಲು**

ಸುಳ್ಳು ಧರ್ಮಗಳು ಮುಗಿಲುಬಿಲ್ಲನ್ನು ತಮ್ಮ ಸಂಕೇತವಾಗಿ ಮಾಡಿಕೊಳ್ಳಲು ಯತ್ನಿಸಿದ್ದಾರೆ ಆದರೆ ದೇವರು ಎಲ್ಲಾ ಮಾನವಕುಲಕ್ಕಾಗಿ ಮುಗಿಲುಬಿಲ್ಲನ್ನು ಒಂದು ವಾಗ್ದಾನವಾಗಿ ಕೊಟ್ಟರು.

**ಆದಿಕಾಂಡ 8:22 ಭೂಮಿಯು ಇರುವವರೆಗೆ ಬಿತ್ತುವ ಕಾಲವೂ ಕೊಯ್ಯುವ ಕಾಲವೂ ಚಳಿಯೂ, ಮಳೆಯೂ, ಬೇಸಿಗೆ ಕಾಲವೂ, ಹಿಮಕಾಲವೂ, ಹಗಲೂ, ಇರುಳೂ ಇವುಗಳ ಕ್ರಮ ನಿಂತುಹೋಗುವುದಿಲ್ಲ" ಎಂದನು.**

**ಆದಿಕಾಂಡ 9:11-13 ಆ ಒಡಂಬಡಿಕೆ ಯಾವುದೆಂದರೆ, ಇನ್ನು ಮೇಲೆ ಯಾವ ಪ್ರಾಣಿಗಳೂ ಜಲಪ್ರಳಯದಿಂದ ನಾಶವಾಗುವುದಿಲ್ಲ; ಇನ್ನು ಮುಂದೆ ಭೂಮಿಯನ್ನು ಹಾಳುಮಾಡುವ ಜಲಪ್ರಳಯವು ಬರುವುದೇ ಇಲ್ಲ" ಎಂದು ಹೇಳಿದನು. ದೇವರು ಪುನಃ ಹೇಳಿದ್ದೇನಂದರೆ, "ನಾನು ನಿಮ್ಮನ್ನೂ ನಿಮ್ಮ ಸಂಗಡ ಇರುವ ಸಮಸ್ತ ಜೀವರಾಶಿಗಳನ್ನೂ ಕುರಿತು ತಲತಲಾಂತರಗಳಲ್ಲಿಯೂ ಮಾಡುವ ಈ ಒಡಂಬಡಿಕೆಗೆ ಮೇಘಗಳಲ್ಲಿ ನಾನು ಇಟ್ಟಿರುವ ಈ ಕಾಮನಬಿಲ್ಲೇ ಗುರುತಾಗಿರುವುದು. ನನಗೂ ಭೂಜೀವಿಗಳಿಗೂ ಮಾಡಿಕೊಂಡ ಒಡಂಬಡಿಕೆಗೆ ಇದೇ ಗುರುತಾಗಿರಲಿ."**

## ನ್ಯಾಯತೀರ್ಪು – ಸೊದೊಮ್ ಮತ್ತು ಗೊಮೊರದ ನಾಶನ

*ವಚನ: ಆದಿಕಾಂಡ 18:17-19*

ಸೊದೊಮ್ ಮತ್ತು ಗೊಮೊರ ನಾಶ್ಆಗುವುದಕ್ಕಿಂತ ಮುಂಚೆ ಅನೇಕ ಸಂಗತಿಗಳು ನಡೆದವು, ಅವುಗಳು ಈ ಘಟನೆಯ ಮುಖ್ಯ ಭಾಗಗಳಾಗಿವೆ. ದೇವರು ಅಬ್ರಹಾಮನಿಗೆ ಭೇಟಿ ಕೊಟ್ಟರು.

### ದೇವರು ಅಬ್ರಹಾಮನೊಂದಿಗೆ ಮಾತನಾಡಿದರು

**ಆದಿಕಾಂಡ 18:17,18 ಆಗ ಯೆಹೋವನು ತನ್ನೊಳಗೆ, "ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವುದು ಸರಿಯೋ? ಅವನಿಂದ ಬಲಿಷ್ಠವಾದ ಮಹಾ ಜನಾಂಗವು ಹುಟ್ಟಬೇಕಲ್ಲಾ; ಅವನ ಮೂಲಕ ಭೂಮಿಯ ಎಲ್ಲಾ ಜನಾಂಗಗಳಿಗೂ ಆಶೀರ್ವಾದ ಉಂಟಾಗುವುದಲ್ಲಾ."**

ಮುಂದೆ ಏನಾಗಲಿದೆ ಎಂದು ದೇವರು ಅಬ್ರಹಾಮನಿಗೆ ತಿಳಿಸಲು ಪ್ರಾರಂಭಿಸುತ್ತಿದ್ದಂತೆ, ದೇವರು ತನ್ನ ಸ್ಥಾನವನ್ನು ಅಬ್ರಹಾಮನಿಗೆ ನೆನಪಿಸಿದರು - ಭೂಮಿಯ ಎಲ್ಲಾ ಜನಾಂಗಗಳು ಅವನಲ್ಲಿ ಆಶೀರ್ವದಿಸಲ್ಪಡಬೇಕಾಗಿತ್ತು. ಯೆಹೋವನು ಹೀಗೆ ಮುಂದುವರೆಸಿದರು,

**ಆದಿಕಾಂಡ 18:20,21 ಇದಲ್ಲದೆ ಯೆಹೋವನು, "ಸೊದೋಮ್ ಗೊಮೋರಗಳ ದೊಡ್ಡ ಮೊರೆ ನನಗೆ ಮುಟ್ಟಿತು; ಆ ಊರಿನವರ ಮೇಲೆ ಹೊರಿಸಿರುವ ಪಾಪವು ಎಷ್ಟೋ ಘೋರವಾದದ್ದು, ನಾನು ಇಳಿದು ಹೋಗಿ, ನನಗೆ ಮುಟ್ಟಿದ ಮೊರೆಯಂತೆಯೇ ಅವರು ಮಾಡಿರುವರೋ ಇಲ್ಲವೋ ಎಂದು ನೋಡಿ ತಿಳಿದುಕೊಳ್ಳುತ್ತೇನೆ" ಎಂದನು."**

ದೇವರು ಯಾಕೆ ಅಬ್ರಹಾಮನಿಗೆ ತಾನು ಮಾಡಲಿದ್ದ ವಿಷಯವನ್ನು ಹೇಳಿದರು ?

ಯಾಕೆಂದರೆ ಅಬ್ರಹಾಮನು ರಾಷ್ಟ್ರಗಳಿಗೆ ಒಂದು ಆಶೀರ್ವಾದವಾಗುವ ತನ್ನ ಸ್ಥಾನಕ್ಕೆ ಬಂದು ಪಟ್ಟಣಗಳಲ್ಲಿರುವ ನೀತಿವಂತರ ಸಂರಕ್ಷಣೆಗಾಗಿ ಪ್ರಾರ್ಥಿಸಲು ಆರಂಭಿಸಬೇಕಿತ್ತು. ದೇವರು ತಾನು ಒಂದು ದೇಶವನ್ನು ನಾಶಮಾಡಲಿದ್ದೇನೆ ಎಂಬುದನ್ನು ಹೇಳಲು ದೇವರು ಒಡಂಬಡಿಕೆ ಬದ್ಧರಾಗಿದ್ದರು.

### ತಪ್ಪುತಿಳಿಯಲ್ಪಟ್ಟ ಲೋಟನು

ಲೋಟನನ್ನು ಖಂಡಿಸಲು ಹಲವರು ಶೀಘ್ರವಾಗಿ ಮುಂದಾಗಿದ್ದಾರೆ. ಅವನು ಯಾಕೆ ಅಷ್ಟೊಂದು ದುಷ್ಟ ನಗರಗಳಲ್ಲಿ ವಾಸಿಸಿದನು? ಅವನು ಅಬ್ರಹಾಮನ ಸೋದರಳಿಯನಾಗಿದ್ದರಿಂದ ಸಂರಕ್ಷಿಸಲ್ಪಟ್ಟನು ಎಂದು ಹಲವರು ಭಾವಿಸಿದ್ದಾರೆ. ಆದರೆ ಅಪೊಸ್ತಲ ಪೇತ್ರನು ಸೊದೊಮ್ ಮತ್ತು ಗೊಮೊರಗಳ ನಾಶನದ ಬಗ್ಗೆ ಮತ್ತು ಲೋಟನ ಬಗ್ಗೆ ಕೆಲವು ಆಸಕ್ತಿದಾಯಕ ಮಾತುಗಳನ್ನು ಬರೆದನು.

**2 ಪೇತ್ರ 2:6-8 ಆತನು ಸೊದೋಮ್ ಗೊಮೋರ ಪಟ್ಟಣಗಳನ್ನು ಸುಟ್ಟು ಬೂದಿಮಾಡಿ ಇನ್ನು ಮೇಲೆ ಭಕ್ತಿಹೀನರಾಗಿ ಬದುಕುವವರಿಗೆ ಬರುವ ದುರ್ಗತಿಯನ್ನು ಸೂಚಿಸುವುದಕ್ಕಾಗಿ ದೃಷ್ಟಾಂತವಾಗಿ ಅವುಗಳಿಗೆ ದಂಡನೆಯನ್ನು ವಿಧಿಸಿದನು. ಆದರೆ ದೇವರು ಆ ದುಷ್ಟರ ಅನೈತಿಕ ನಡತೆಗೆ ನೊಂದುಕೊಂಡಿದ್ದ ನೀತಿವಂತನಾದ ಲೋಟನನ್ನು ಕಾಪಾಡಿದನು. ಏಕೆಂದರೆ ಆ ನೀತಿವಂತನು ಅವರ ಮಧ್ಯದಲ್ಲಿ ಇದ್ದುಕೊಂಡು ಅವರ ಅನ್ಯಾಯ ಕೃತ್ಯಗಳನ್ನು ನೋಡುತ್ತಾ ಕೇಳುತ್ತಾ ಅವುಗಳ ನಿಮಿತ್ತ ದಿನೇ ದಿನೇ ತನ್ನ ನೀತಿಯುಳ್ಳ ಆತ್ಮದಲ್ಲಿ ಬಹಳವಾಗಿ ನೊಂದುಕೊಂಡನು.**

ದೇವರು ಅಬ್ರಹಾಮನೊಂದಿಗೆ ಮಾತಾಡಿದಾಗ ನೆನಪಿಸಿಕೊಳ್ಳಿರಿ, ಈ ನಗರಗಳ ವಿರುದ್ಧ ಕೂಗು ಬಹಳ ದೊಡ್ಡದಾಗಿದೆ ಏಕೆಂದರೆ ಅವರ ಪಾಪವು ಬಹು ಘೋರವಾಗಿದೆ ಎಂದು ಹೇಳಿದರು. ಆ ಕೂಗು ಯಾರದ್ದಾಗಿತ್ತು?

ಯೆಹೆಜ್ಕೇಲನು *ಪಟ್ಟಣವನ್ನು ದಂಡಿಸತಕ್ಕವರೇ* ಎಂದು ಯೆಹೆ 9:1,2 ರಲ್ಲಿ ಉಲ್ಲೇಖಿಸುತ್ತಾನೆ. ದಾನಿಯೇಲ 4:13 ಮತ್ತು 17 ರಲ್ಲಿ ಅನಿಮಿಷ ದೂತನು ಎಂಬದಾಗಿದೆ. ಸೊದೊಮ್ ಮತ್ತು ಗೊಮೊರಕ್ಕೆ ನಿಯೋಜಿಸಲಾದ ದೇವದೂತರು ಕೂಗಿರಬಹುದು. ಲೋಟನನ್ನ ಮತ್ತು ಅವನ ಕುಟುಂಬವನ್ನು ಹೊರಗೆ ಕರೆತರಲು ಅವರೇ ನಗರಕ್ಕೆ ಬಂದವರಾಗಿರಬಹುದು.

ಆದರೂ ಲೋಟನು ಒಬ್ಬ ನೀತಿವಂತ ಮನುಷ್ಯನಾಗಿದ್ದು ಆ ಜನರ ದುಷ್ಟ ಕೃತ್ಯಗಳನ್ನು ಕೇಳಿ ಕಂಡು ದಿನನಿತ್ಯ ಯಾತನೆ ಪಡುತ್ತಿದ್ದನು ಎಂದು ಪೇತ್ರನು ಹೇಳುತ್ತಾನೆ.

ದೇವದೂತರು ನಗರಕ್ಕೆ ಬಂದಾಗ ಲೋಟನು ಅವರ ಒಳ್ಳೆಯತನವನ್ನು ಗುರುತಿಸಿ ಅವರು ಸಂರಕ್ಷಣೆಗಾಗಿ ತಮ್ಮ ಮನೆಗೆ ಬರಬೇಕೆಂದು ಒತ್ತಾಯಿಸಿದನು.

**ಆದಿಕಾಂಡ 19:2,3a "ಸ್ವಾಮಿಗಳೇ, ನಿಮ್ಮ ದಾಸನ ಮನೆಗೆ ಬಂದು ಇಳಿದುಕೊಂಡು ಕಾಲುಗಳನ್ನು ತೊಳೆದುಕೊಳ್ಳಿರಿ; ಬೆಳಿಗ್ಗೆ ನಿಮ್ಮ ಮಾರ್ಗ ಹಿಡಿದುಕೊಂಡು ಹೋಗಬಹುದು" ಅಂದನು. ಅವರು, "ಹಾಗಲ್ಲ, ಬೀದಿಯಲ್ಲೇ ರಾತ್ರಿ ಕಳೆಯುತ್ತೇವೆ" ಎನ್ನಲು 3ಅವನು ಅವರನ್ನು ಬಹಳ ಬಲವಂತ ಮಾಡಿದ್ದರಿಂದ ಅವರು ಅವನ ಬಳಿಯಲ್ಲಿ ಇಳಿದುಕೊಳ್ಳುವುದಕ್ಕೆ ಒಪ್ಪಿದರು.**

**ಆದಿಕಾಂಡ 19:4 ಅವರು ಮಲಗುವುದಕ್ಕಿಂತ ಮುಂಚೆ ಹುಡುಗರು ಮುದುಕರು ಸಹಿತವಾಗಿ ಸೊದೋಮಿನ ಪಟ್ಟಣದವರೆಲ್ಲರೂ ಒಗ್ಗಟ್ಟಾಗಿ ಮನೆಯನ್ನು ಮುತ್ತಿಗೆ ಹಾಕಿದರು.**

ಈ ದಾಖಲೆಯಲ್ಲಿ ಎಲ್ಲಾ ಪ್ರದೇಶಗಳಿಂದ ವೃದ್ಧರು ಮತ್ತು ಯುವಕರು ಮನೆಯ ಸುತ್ತಲೂ ಸುತ್ತುವರೆದರು ಎಂಬುದನ್ನು ದೇವರು ಸ್ಪಷ್ಟಪಡಿಸಿದ್ದಾರೆ. ಸಲಿಂಗಕಾಮದ ಪಾಪ ನಗರದಾದ್ಯಂತ ಇತ್ತು.

**ಆದಿಕಾಂಡ 19:8 ಕೇಳಿರಿ, ನನಗೆ ಪುರುಷನನ್ನು ಅರಿಯದ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ; ಅವರನ್ನಾದರೂ ನಿಮಗೆ ತಂದು ಒಪ್ಪಿಸುತ್ತೇನೆ; ಅವರನ್ನು ಮನಸ್ಸು ಬಂದಂತೆ ಮಾಡಬಹುದು; ಆದರೆ ಆ ಮನುಷ್ಯರು ನನ್ನ ಆಶ್ರಯಕ್ಕೆ ಬಂದವರು; ಅವರಿಗೆ ಏನೂ ಮಾಡಕೂಡದು" ಎಂದು ಹೇಳಿದನು.**

ಲೋಟನು ಅವರ ಬದಲಾಗಿ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಕೊಡುವೆನೆಂದು ಹೇಳುತ್ತಾನೆ. ಅವನು ಯಾಕೆ ಹೀಗೆ ಮಾಡಿದನು ಎಂಬ ದಾಖಲೆ ಇಲ್ಲ. ಬಹುಶಃ ಈ ಮನುಷ್ಯರು ಎಷ್ಟು

ದುಷ್ಟರಾಗಿದ್ದರು ಎಂಬುದನ್ನು ಅವನು ತಿಳಿದಿದ್ದನು ಮತ್ತು ಅವನು ಈ ಜನರು ಇದನ್ನೂ ತಿರಸ್ಕರಿಸುತ್ತಾರೆ ಎಂಬುದನ್ನು ತಿಳಿದಿದ್ದನು.

ಅವರು ಕೊಟ್ಟ ಪ್ರತ್ಯುತ್ತರವು ಆಸಕ್ತಿಕರವಾಗಿದೆ.

**ಆದಿಕಾಂಡ 19:9a ಅವರು ದಾರಿ ಬಿಡು ಎಂದು ಹೇಳಿ, "ಇವನು ಯಾರೋ ಒಬ್ಬ ಪರದೇಶಿಯಾಗಿ ಬಂದು ಈಗ ನ್ಯಾಯಾಧಿಪತಿಯಾಗಬೇಕೆಂದಿದ್ದಾನೆ ..."**

ಅವರು ಲೋಟನ ನಿಲುವನ್ನು ತಿಳಿದಿದ್ದರು. ಅವನು ನ್ಯಾಯಧಿಪತಿಯಂತೆ ಆಡುತ್ತಾನೆ ಎಂದರು. ದೇವರು ಸೊದೊಮ್ ಮತ್ತು ಗೊಮೊರವನ್ನು ನಾಶ ಮಾಡುವುದಕ್ಕಿಂತ ಮುಂಚೆ ಅಲ್ಲಿ ಒಬ್ಬ ಸಾಕ್ಷಿಯನ್ನು ಹೊಂದಿದ್ದರು. ಆ ಸಾಕ್ಷಿಯು ನಿರ್ಲಕ್ಷಿಸಲಾಯಿತು, ತುಳಿತಕ್ಕೊಳಗಾಯಿತು ಮತ್ತು ಪೀಡಿಸಲಾಯಿತು.

ನ್ಯಾಯತೀರ್ಪಿನ ಸಮಯದಲ್ಲಿ ಸಂರಕ್ಷಣೆ

**ಆದಿಕಾಂಡ 19:15,16 ಹೊತ್ತು ಮೂಡುವುದಕ್ಕೆ ಮುಂಚೆ ಆ ದೂತರು ಲೋಟನಿಗೆ, "ನೀನೆದ್ದು ಇಲ್ಲಿರುವ ನಿನ್ನ ಹೆಂಡತಿಯನ್ನೂ ನಿನ್ನ ಇಬ್ಬರು ಹೆಣ್ಣುಮಕ್ಕಳನ್ನೂ ಬೇಗ ಕರೆದುಕೊಂಡು ಹೋಗು; ಊರಿಗೆ ಉಂಟಾಗುವ ದಂಡನೆಯಿಂದ ನಿನಗೂ ನಾಶವುಂಟಾದೀತು" ಎಂದು ಹೇಳಿ ತ್ವರೆಪಡಿಸಿದರು.**

**ಅವನು ತಡಮಾಡಲು ಯೆಹೋವನು ಅವನನ್ನು ಕನಿಕರಿಸಿದ್ದರಿಂದ ಆ ಮನುಷ್ಯರು ಅವನನ್ನೂ ಅವನ ಹೆಂಡತಿ ಮಕ್ಕಳನ್ನೂ ಕೈಹಿಡಿದು ಹೊರಗೆ ತಂದು ಪಟ್ಟಣದ ಆಚೆಗೆ ಬಿಟ್ಟರು.**

ಯಾಕೆ ಲೋಟ, ಅವನ ಹೆಂಡತಿ ಮತ್ತು ಹೆಣ್ಣುಮಕ್ಕಳನ್ನು ನಗರದ ಹೊರಗೆ ಸಾಗಿಸಲಾಯಿತು? ಯಾಕಂದರೆ ಲೋಟನು ನೀತಿವಂತನಾಗಿದ್ದನು ಮತ್ತು ಅಬ್ರಹಾಮನು ಅವರಿಗಾಗಿ ಮಧ್ಯಸ್ಥಿಕೆ ವಹಿಸಿ ಪ್ರಾರ್ಥಿಸಿದನು.

**ಆದಿಕಾಂಡ 19:29 ದೇವರು ಆ ಪ್ರದೇಶದ ಪಟ್ಟಣಗಳನ್ನು ನಾಶಮಾಡಿದಾಗ, ಅಬ್ರಹಾಮನನ್ನು ನೆನಪುಮಾಡಿಕೊಂಡನು. ಲೋಟನು ವಾಸವಾಗಿದ್ದ ಪಟ್ಟಣಗಳನ್ನು ಹಾಳುಮಾಡಿ ಆ ಸ್ಥಳದೊಳಗಿಂದ ಲೋಟನನ್ನು ಹೊರಗೆ ಕಳುಹಿಸಿ ಪಾರುಮಾಡಿದನು.**

ಮುಂದೆ ಏನಾಗಲಿದೆ ಎಂದು ದೇವರು ಅಬ್ರಹಾಮನಿಗೆ ಹೇಳಿದರು ಮತ್ತು ಅಬ್ರಹಾಮನು ಲೋಟನಿಗಾಗಿ ಮಧ್ಯಸ್ಥಿಕೆ ವಹಿಸಿ ಪ್ರಾರ್ಥಿಸಿದನು. ಇಂದು, ನಾವು ದೇವರಿಂದ ಕೇಳುವುದು ಮತ್ತು ಇತರರಿಗಾಗಿ ಮಧ್ಯಸ್ಥಿಕೆ ವಹಿಸಿ ಪ್ರಾರ್ಥಿಸುವುದು ಅಷ್ಟೇ ಪ್ರಾಮುಖ್ಯವಾದದ್ದು.

ನಗರಗಳು ನಾಶವಾದವು

**ಆದಿಕಾಂಡ 19:24,26 ಆಗ ಯೆಹೋವನು ಸೊದೋಮ್ ಗೊಮೋರಗಳ ಮೇಲೆ ಆಕಾಶದಿಂದ ಅಗ್ನಿಗಂಧಕಗಳನ್ನು ಸುರಿಸಿ ಆ ಪಟ್ಟಣಗಳನ್ನೂ ಸುತ್ತಲಿರುವ ಸೀಮೆಯೆಲ್ಲವನ್ನೂ ಊರುಗಳಲ್ಲಿದ್ದ ಜನರೆಲ್ಲರನ್ನೂ ಭೂಮಿಯ ಮೇಲಣ ಎಲ್ಲಾ ಬೆಳೆಯನ್ನೂ ಹಾಳುಮಾಡಿದನು. ಲೋಟನ ಹೆಂಡತಿ ಅವನ ಹಿಂದೆ ಬರುತ್ತಿರುವಾಗ ಹಿಂತಿರುಗಿ ನೋಡಿದ್ದರಿಂದ ಉಪ್ಪಿನ ಕಂಬವಾದಳು.**

ಈ ನಗರಗಳ ಸಂಪೂರ್ಣ ವಿನಾಶದಲ್ಲೂ ಸಹ, ದೇವರಿಗೆ ಅವುಗಳ ವಿನಾಶವನ್ನು ಹೊರತುಪಡಿಸಿ ಒಂದು ಉದ್ದೇಶವಿತ್ತು. ಭಕ್ತಿಹೀನ ಜೀವನವನ್ನು ನಡೆಸುವವರ ಮೇಲೆ ದೇವರ ನ್ಯಾಯತೀರ್ಪು ಬರುವುದೆಂಬದಕ್ಕೆ ಅವರು ಉದಾಹರಣೆಯಾಗಬೇಕಾಗಿತ್ತು.

**2 ಪೇತ್ರ 2:6 ಆತನು ಸೊದೋಮ್ ಗೊಮೋರ ಪಟ್ಟಣಗಳನ್ನು ಸುಟ್ಟು ಬೂದಿಮಾಡಿ ಇನ್ನು ಮೇಲೆ ಭಕ್ತಿಹೀನರಾಗಿ ಬದುಕುವವರಿಗೆ ಬರುವ ದುರ್ಗತಿಯನ್ನು ಸೂಚಿಸುವುದಕ್ಕಾಗಿ ದೃಷ್ಟಾಂತವಾಗಿ ಅವುಗಳಿಗೆ ದಂಡನೆಯನ್ನು ವಿಧಿಸಿದನು.**

### ಯೇಸು ಈ ಘಟನೆಯನ್ನು ಪ್ರಸ್ತಾಪಿಸಿದರು

ದೇವರ ರಾಜ್ಯವು ಯಾವಾಗ ಬರುತ್ತದೆ ಎಂದು ಯೇಸುವನ್ನು ಕೇಳಿದಾಗ, ಅವರು ಸೊದೊಮ್ ಮತ್ತು ಗೊಮೊರದ ಸಮಯವನ್ನು ಉಲ್ಲೇಖಿಸಿದರು.

**ಲೂಕ 17:28-30 ಲೋಟನ ದಿನಗಳಲ್ಲಿ ನಡೆದ ಪ್ರಕಾರ ನಡೆಯುವುದು. ಅವರು ಊಟಮಾಡುತ್ತಿದ್ದರು, ಕುಡಿಯುತ್ತಿದ್ದರು, ಕೊಂಡುಕೊಳ್ಳುತ್ತಿದ್ದರು, ಮಾರಾಟಮಾಡುತ್ತಿದ್ದರು, ನೆಡುತ್ತಿದ್ದರು ಮತ್ತು ಕಟ್ಟುತ್ತಿದ್ದರು. ಆದರೆ ಲೋಟನು ಸೊದೋಮ್ ಊರನ್ನು ಬಿಟ್ಟುಹೋದ ದಿನದಲ್ಲಿ, ಆಕಾಶದಿಂದ ಬೆಂಕಿ ಗಂಧಕಗಳು ಸುರಿದು ಅವರೆಲ್ಲರನ್ನು ನಾಶಮಾಡಿದವು. ಮನುಷ್ಯಕುಮಾರನು ಪ್ರತ್ಯಕ್ಷವಾಗುವ ದಿನದಲ್ಲಿ ಅದೇ ರೀತಿಯಾಗಿ ಇರುವುದು.**

### ಬರಲಿರುವ ನ್ಯಾಯತೀರ್ಪು

ದೇವರು ನಾಯತೀರ್ಪನ್ನು ಬರಮಾಡುವುದಕ್ಕಿಂತ ಮುಂಚೆ, ಅವರು ಯಾವಾಗಲೂ ಜನರನ್ನು ಎಚ್ಚರಿಸುತ್ತಾರೆ. ನೂರು ವರ್ಷಗಳಿಂಗಲೂ ಹೆಚ್ಚಿನ ಕಾಲ ನೋಹನು ನಾವೆಯನ್ನು ಕಟ್ಟಿದನು. ಅವನು ಜಲಪ್ರಳಯ ಬರಲಿದೆ ಮತ್ತು ಭೂಮಿಯೆಲ್ಲಾ ನಾಶವಾಗಲಿದೆ ಎಂದು ಹೇಳಿದಾಗ ಜನರು ಅವನನ್ನು ಪರಿಹಾಸ್ಯ ಮಾಡಿದರು. ಪ್ರಾಣಿಗಳು ಸಹ ಅಲೌಕಿಕವಾಗಿ ಒಟ್ಟಾಗಿ ಸೇರಿ ದೇಶದಲ್ಲೆಲ್ಲಾ ನಡೆದು ಬಂದಾಗ ಜನರು ನಂಬಲಿಲ್ಲ.

ಲೋಟನು ದುಷ್ಟತನ ತುಂಬಿದ ನಗರಗಳಾದ ಸೊದೊಮ್ ಮತ್ತು ಗೊಮೊರದಲ್ಲಿ ವಾಸಿಸಿದನು ಮತ್ತು ಜನರು ಅವನನ್ನು ನೋಡಿ ಪರಿಹಾಸ್ಯ ಮಾಡಿದರು. ಆ ನಗರಗಳ ಕೊನೆಯ ದಿನದಲ್ಲಿ ಅವನು ತನ್ನ ಹೆಣ್ಣುಮಕ್ಕಳ ಮನೆಗೆ ಹೋದಾಗ ಅವನ ಅಳಿಯಂದರೂ ಸಹ ಅವನನ್ನು ನೋಡಿ ಅವನು ತಮಾಷೆ ಮಾಡುತ್ತಿದ್ದಾನೆಂಬ ರೀತಿಯಲ್ಲಿ ನಕ್ಕರು.

ಮತ್ತೊಮ್ಮೆ, ನೋಹನ ಮತ್ತು ಲೋಟನ ಕಾಲದಲ್ಲಿನ ದುಷ್ಟತನವು ನಮ್ಮ ದೇಶಗಳಲ್ಲಿ ಹೆಚ್ಚುತ್ತಿದೆ. ನಾವು ನಮ್ಮ ತಲೆಮಾರಿಗೆ ಸಾಕ್ಷಿಗಳಾಗಿದ್ದೇವೆ. ನಾವೂ ಸಹ ಬರಲಿರುವ ದೇವರ ನ್ಯಾಯತೀರ್ಪಿನ ಬಗ್ಗೆ ಜನರನ್ನು ಎಚ್ಚರಿಸುವ ಜವಾಬ್ದಾರಿಯನ್ನು ಹೊಂದಿದ್ದೇವೆ.

**ಯೆಹೆ 3:18 ನಾನು ದುಷ್ಟನಿಗೆ, 'ನೀನು ಖಂಡಿತವಾಗಿ ಸಾಯುವೆ' ಎಂದು ನುಡಿಯುವಾಗ ನೀನು ಅವನನ್ನು ಎಚ್ಚರಿಸದೆಯೂ, ಅವನು ತನ್ನ ಕೆಟ್ಟಮಾರ್ಗವನ್ನು ಬಿಟ್ಟು ತನ್ನ ಪ್ರಾಣವನ್ನು ಉಳಿಸಿಕೊಳ್ಳುವಂತೆ ಅವನಿಗೆ ಬುದ್ಧಿಹೇಳದೆಯೂ ಇದ್ದರೆ ಆ ದುಷ್ಟನು ತನ್ನ ಅಪರಾಧದಿಂದ ಸಾಯಬೇಕಾಗುವುದು; ಅವನ ಮರಣಕ್ಕೆ ನೀನು ಹೊಣೆಯಾಗುವೆ.**

ನ್ಯಾಯತೀರ್ಪಿನ ಸಮಯಗಳಲ್ಲೂ ದೇವರು ನೋಹ ಮತ್ತು ಲೋಟರನ್ನು ಸಂರಕ್ಷಿಸಿದಂತೆ ನಮ್ಮನ್ನೂ ಸಂರಕ್ಷಿಸುವರು. ನಾವು ಪ್ರವಾದಿಯಾದ ಹಬಕ್ಕೂಕನೊಂದಿಗೆ ಹೀಗೆ ಹೇಳಬಹುದು.

**ಹಬಕ್ಕೂಕ 3:17-19 ಆಹಾ, ಅಂಜೂರವು ಚಿಗುರದಿದ್ದರೂ, ದ್ರಾಕ್ಷಾಲತೆಗಳಲ್ಲಿ ಹಣ್ಣು ಸಿಕ್ಕದಿದ್ದರೂ, ಎಣ್ಣೆ ಮರಗಳ ಉತ್ಪತ್ತಿಯು ಶೂನ್ಯವಾದರೂ, ಹೊಲಗದ್ದೆಗಳು ಆಹಾರ ಧಾನ್ಯಗಳನ್ನು ಉತ್ಪತ್ತಿಮಾಡದಿದ್ದರೂ, ಕುರಿಹಟ್ಟಿಗಳು ಬರಿದಾಗಿ ಹೋದರೂ, ಕೊಟ್ಟಿಗೆಗಳಲ್ಲಿ ದನಕರುಗಳು ಇಲ್ಲವಾದರೂ, ನಾನು ಯೆಹೋವನಲ್ಲಿ ಉಲ್ಲಾಸಿಸುವೆನು, ನನ್ನ ರಕ್ಷಕನಾದ ದೇವರಲ್ಲಿ ಆನಂದಿಸುವೆನು. ನನ್ನ ಕರ್ತನಾದ ಯೆಹೋವನೇ ನನ್ನ ಬಲ; ಆತನು ನನ್ನ ಕಾಲನ್ನು ಜಿಂಕೆಯಂತೆ ಚುರುಕುಗೊಳಿಸುತ್ತಾನೆ, ಬೆಟ್ಟ ಗುಡ್ಡಗಳನ್ನು ಚುರುಕಾಗಿ ಓಡಲು ನನ್ನನ್ನು ಸಮರ್ಥನನ್ನಾಗಿಸುತ್ತಾನೆ.**

## ವಿಮರ್ಶೆಗಾಗಿ ಪ್ರಶ್ನೆಗಳು

1. ಈ ಪಾಠದ ಪ್ರಕಾರ, ಅದ್ಭುತ ಎಂದರೇನು?

2. ಮಾನವಕುಲವನ್ನು ಸೃಷ್ಟಿಸುವಲ್ಲಿ ದೇವರ ಉದ್ದೇಶವೇನು?

3. ಜಲಪ್ರಳಯದಲ್ಲಿ ನೋಹ ಮತ್ತು ಅವನ ಕುಟುಂಬವನ್ನು ಹೊರತುಪಡಿಸಿ ಎಲ್ಲಾ ಮಾನವಕುಲದ ನಾಶಕ್ಕೆ ಲೇಖಕರು ಯಾವ ಕಾರಣವನ್ನು ನೀಡಿದರು?

ಪಾಠ ಒಂಭತ್ತು

# *ಒದಗಿಸುವಿಕೆಯ ಅದ್ಭುತಗಳು*

ದೇವರ ಅದ್ಭುತಗಳು ಇಡೀ ಪ್ರಪಂಚ, ರಾಷ್ಟ್ರ, ಪರಿಸ್ಥಿತಿ, ಕುಟುಂಬ ಅಥವಾ ವ್ಯಕ್ತಿಯ ಮೇಲೆ ಪರಿಣಾಮ ಬೀರಬಹುದು. ಅವು ಆಶ್ಚರ್ಯಕರವೆನಿಸಬಹುದು ಅಥವಾ ಸಾಮಾನ್ಯವೆನಿಸಬಹುದು. ನಾವು ಈಗಾಗಲೇ ನೋಡಿದಂತೆ, ಅವುಗಳು ತೀರ್ಪನ್ನು ತರಬಹುದು, ಆದರೆ ಅವುಗಳು ಒದಗಿಸುವುದಕ್ಕಾಗಿಯೂ ಆಗಿವೆ.

ದೇವರ ಅದ್ಭುತಕರವಾದ ಒದಗಿಸುವಿಕೆಗಳನ್ನು ಸ್ವೀಕರಿಸಲು ನಾವು ಎರಡು ಕೆಲಸಗಳನ್ನು ಮಾಡಬೇಕು. ನಾವು ದೇವರಿಂದ ಕೇಳಬೇಕು ಮತ್ತು ನಂತರ ಅವರು ಹೇಳಿದ ವಿಷಯದ ಮೇಲೆ ನಾವು ನಂಬಿಕೆಯಿಂದ ವರ್ತಿಸಬೇಕು.

## ಮರುಭೂಮಿಯಲ್ಲಿ ಇಸ್ರಾಯೇಲರು

ದೇವರ ಅದ್ಭುತಕರವಾದ ಒದಗಿಸುವಿಕೆಗಳ ಬಗ್ಗೆ ಇಸ್ರಾಯೇಲರ ಅರಣ್ಯದಲ್ಲಿನ ಅಲೆದಾಟವನ್ನು ಅಧ್ಯಯನ ಮಾಡುವುದಕ್ಕಿಂತ ಹೆಚ್ಚು ಸ್ಪಷ್ಟ ಚಿತ್ರಣ ಬೇರೆಡೆ ಸಿಗುವುದಿಲ್ಲ. ಈ ಪ್ರಯಾಣದಲ್ಲಿ ಒಂದು ದಶಲಕ್ಷಕ್ಕೂ ಹೆಚ್ಚು ಜನರು ಇದ್ದರು. ಅರಣ್ಯಕಾಂಡದಲ್ಲಿ ಲೇವಿಯ ಗೋತ್ರ, ಮಹಿಳೆಯರು ಮತ್ತು ಮಕ್ಕಳನ್ನು ಹೊರತುಪಡಿಸಿ ಕೇವಲ ಪುರುಷರ ಸಂಖ್ಯೆಯೇ 603,550 ಕ್ಕೂ ಅಧಿಕವಾಗಿತ್ತು ಎಂದು ನಮಗೆ ತಿಳಿಸಲಾಗಿದೆ.

**ಅರಣ್ಯ 1:46,47b ಗಂಡಸರ ಒಟ್ಟು ಸಂಖ್ಯೆ - 6,03,550 ಮಂದಿ. ಆದರೆ ಅವರೊಡನೆ ಲೇವಿ ಕುಲದ ಕುಟುಂಬಗಳು ಲೆಕ್ಕಿಸಲ್ಪಡಲಿಲ್ಲ.**

### ಅಲೌಕಿಕ ಮಾರ್ಗದರ್ಶನ

ಇಸ್ರಾಯೇಲರು ಈಜಿಪ್ಟನ್ನು ಬಿಟ್ಟು ತಮ್ಮ ಪ್ರಯಾಣವನ್ನು ಆರಂಭಿಸಿದಾಗ ದೇವರು ಅವರ ಮುಂದೆ ರಾತ್ರಿಯಲ್ಲಿ ಅಗ್ನಿಸ್ತಂಭವಾಗಿಯೂ ಮತ್ತು ಹಗಲಲ್ಲಿ ಮೇಘಸ್ತಂಭವಾಗಿಯೂ ಹೋದರು.

**ವಿಮೋ 13:21,22 ಯೆಹೋವನು ಹಗಲು ಹೊತ್ತಿನಲ್ಲಿ ದಾರಿತೋರಿಸುವುದಕ್ಕೆ ಮೇಘಸ್ತಂಭದಲ್ಲಿಯೂ, ರಾತ್ರಿವೇಳೆಯಲ್ಲಿ ಬೆಳಕುಕೊಡುವುದಕ್ಕೆ ಅಗ್ನಿಸ್ತಂಭದಲ್ಲಿಯೂ ಇದ್ದು ಅವನ್ನು ನಡೆಸುತಿದ್ದನು. ಈ ರೀತಿಯಲ್ಲಿ ಅವರು ಹಗಲಿರುಳು ಪ್ರಯಾಣಮಾಡಿದರು. ಹಗಲಿನಲ್ಲಿ ಮೇಘಸ್ತಂಭವಾಗಿ, ರಾತ್ರಿಯಲ್ಲಿ ಅಗ್ನಿಸ್ತಂಭವಾಗಿ ಜನರನ್ನು ಬಿಟ್ಟು ಹೋಗದೆ ಅಲ್ಲಿಯೇ ಇರುತ್ತಿದ್ದನು.**

ಅದು ಎಷ್ಟು ಅದ್ಭುತಕರವಾಗಿದ್ದಿರಬೇಕು ಎಂಬುದನ್ನು ಊಹಿಸಿಕೊಳ್ಳಿರಿ. ಅವರು ರಾತ್ರಿಯ ಹೊತ್ತಿಗೆ ಪ್ರಯಾಣಿಸುತ್ತಿದ್ದಾಗ, ಅವರು ಯಾವ ಕಡೆ ಹೋಗುತ್ತಿದ್ದಾರೆಂದು ಅವರು ಕಾಣಬಹುದಾಗಿತ್ತು. ಅವರು

ಪಾಳೆಯವನ್ನು ಹಾಕಿದಾಗ ಅಡುಗೆ ಮಾಡಲು ಬೆಳಕು ಕಾಣಿಸುತ್ತಿತ್ತು. ರಾತ್ರಿಯಲ್ಲಿ ಮರುಭೂಮಿಯು ತುಂಬಾ ತಂಪಾಗಿರುತ್ತದೆ ಮತ್ತು ಅವರನ್ನು ಬೆಚ್ಚಗೆ ಮಾಡುವದಕ್ಕೆ ಶಾಖವೂ ಇತ್ತು.

ಹಗಲಿನಲ್ಲಿ, ಸಹಿಸಲಾರದಷ್ಟು ಮರುಭೂಮಿಯ ಸೂರ್ಯನ ಬಿಸಿಲು ಬಡಿಯುವಾಗ ಅವು ಮೋಡದ ಅಡಿಯಲ್ಲಿ ತಂಪಾಗಿರುತ್ತಿದ್ದರು. ದಾವೀದನು ಇದನ್ನು ವಿವರಿಸುತ್ತಾನೆ.

**ಕೀರ್ತನೆ 105:39 ಅವರಿಗೆ ಹಗಲಲ್ಲಿ ನೆರಳಿಗೋಸ್ಕರ ಮೋಡವನ್ನು, ಇರುಳಲ್ಲಿ ಬೆಳಕಿಗೋಸ್ಕರ ಬೆಂಕಿಯನ್ನು ಮೇಲೆ ಹರಡಿದನು.**

ಮೋಡವನ್ನು ಒಂಸು ಸ್ತಂಭವಾಗಿಯೂ ಒಂದು ರೀತಿಯ ಕೊಡೆಯಾಗಿಯೂ ವರ್ಣಿಸಲ್ಪಟ್ಟಿರುವುದರಿಂದ ಅದು ಬಹುಶಃ ಅನೇಕ ಚಿತ್ರಗಳಲ್ಲಿ ಕಾಣುವಂತೆ ಅಣಬೆಯ ರೀತಿಯಲ್ಲಿ ಇದ್ದಿರಬಹುದು.

**ಅಲೌಕಿಕವಾದ ಸಂರಕ್ಷಣೆ**

* *ಮೇಘ ತಡೆಗೋಡೆ*

ಈಜಿಪ್ಟಿಯನ್ನರು ತಮ್ಮ ಮನಸ್ಸುಗಳನ್ನು ಬದಲಾಯಿಸಿಕೊಂಡು ಅವರನ್ನು ಬೆನ್ನಟ್ಟಿ ಬಂದಾಗ ಇಸ್ರಾಯೇಲರ ಎಡಬಲಕ್ಕೆ ಬೆಟ್ಟಗಳು ಮುಂದಕ್ಕೆ ಕೆಂಪು ಸಮುದ್ರವಿದ್ದದ್ದರಿಂದ ಅವರು ಸಿಕ್ಕಿ ಹಾಕಿಕೊಂಡರು. ಅವರು ಮೇಘವನ್ನು ನೋಡಿ ದೇವರು ಸರಿಯಾದ ಸ್ಥಳದಲ್ಲಿ ಅಂದರೆ ದೇವರ ಸಂರಕ್ಷಣೆಯ ಅಡಿಯಲ್ಲಿ ಇದ್ದೇವೆಂಬುದನ್ನು ತಿಳಿದುಕೊಳ್ಳುವ ಬದಲು ಭಯಪಟ್ಟು ಮೋಶೆಯ ವಿರುದ್ಧ ಕೂಗಿದರು.

**ವಿಮೋ 14:13,14 ಆದರೆ ಮೋಶೆ ಆ ಜನರಿಗೆ, "ನೀವು ಅಂಜಬೇಡಿರಿ. ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ. ನೀವು ಈ ಹೊತ್ತು ನೋಡುವ ಐಗುಪ್ತ್ಯರನ್ನು ಇನ್ನು ಮುಂದೆ ಎಂದಿಗೂ ನೋಡುವುದಿಲ್ಲ. ಯೆಹೋವನೇ ನಿಮಗಾಗಿ ಯುದ್ಧಮಾಡುವನು. ನೀವಂತು ಸುಮ್ಮನೇ ನಿಂತುಕೊಂಡಿರಿ" ಎಂದು ಹೇಳಿದನು."**

ದೇವರು ಏನು ಮಾಡಿದರು ? ಅವರು ಮೇಘವನ್ನು ಈಜಿಪ್ಟಿಯನ್ನರ ಮತ್ತು ಇಸ್ರಾಯೇಲರ ಮಧ್ಯೆ ಇರಿಸಿದರು. ಒಂದು ಕಡೆ ಇಸ್ರಾಯೇಲರಿಗೆ ಬೆಳಕಿತ್ತು ಇನ್ನೊಂದು ಕಡೆ ಈಜಿಪ್ಟಿಯನ್ನರಿಗೆ ಕತ್ತಲಿತ್ತು. ನಂತರ ದೇವರು ಸಮುದ್ರವನ್ನು ಇಬ್ಭಾಗ ಮಾಡಿದರು ಮತ್ತು ತನ್ನ ಜನರು ಆ ಕಡೆಯ ದಡದವರೆಗೆ ಒಣಭೂಮಿಯ ಮೇಲೆ ನಡೆದು ಸಾಗಿದರು.

**ವಿಮೋ 14:19-22 ಆಗ ಇಸ್ರಾಯೇಲರ ದಂಡಿನ ಮುಂದೆ ಹೋಗುತ್ತಿದ್ದ ದೇವದೂತನು ತನ್ನ ಸ್ಥಳವನ್ನು ಬಿಟ್ಟು ಅವರ ಹಿಂದಕ್ಕೆ ಬಂದನು. ಅವರ ಮುಂದಾಗಿ ಹೋಗುತ್ತಿದ್ದ ಮೇಘಸ್ತಂಭವು ಅಲ್ಲಿಂದ ಬಂದು ಅವರ ಹಿಂದೆ ನಿಂತುಕೊಂಡಿತು. ಆ ಮೇಘಸ್ತಂಭವು ಐಗುಪ್ತ್ಯರ ಪಾಳೆಯಕ್ಕೂ, ಇಸ್ರಾಯೇಲರ ಪಾಳೆಯಕ್ಕೂ ನಡುವೆ ಬಂದಿತು. ಅದು ಐಗುಪ್ತ್ಯರಿಗೆ ಕತ್ತಲನ್ನೂ, ಇಸ್ರಾಯೇಲರಿಗೆ ರಾತ್ರಿಯಲ್ಲಿ ಬೆಳಕನ್ನು ಕೊಟ್ಟಿದ್ದರಿಂದ ಆ ರಾತ್ರಿಯೆಲ್ಲಾ ಒಬ್ಬರ ಹತ್ತಿರಕ್ಕೆ ಒಬ್ಬರು ಬರಲಾಗಲಿಲ್ಲ.**

✳ *ಸಮುದ್ರ ಎರಡು ಭಾಗವಾಯಿತು*

**ಮೋಶೆ ಸಮುದ್ರದ ಮೇಲೆ ಕೈಚಾಚಿದಾಗ, ಯೆಹೋವನು ಆ ರಾತ್ರಿಯೆಲ್ಲಾ ಮೂಡಣ ದಿಕ್ಕಿನಿಂದ ಬಲವಾದ ಬಿರುಗಾಳಿಯನ್ನು ಬೀಸುವಂತೆ ಮಾಡಿ ಸಮುದ್ರದ ನೀರನ್ನು ಒಂದು ಕಡೆಗೆ ನೂಕಿ ಅದರ ತಳದಲ್ಲಿ ಒಣನೆಲವು ಕಾಣಿಸುವಂತೆ ಮಾಡಿದನು. ನೀರು ಇಬ್ಭಾಗವಾಯಿತು. ಇಸ್ರಾಯೇಲರು ಸಮುದ್ರದ ಮಧ್ಯದಲ್ಲಿ ಒಣನೆಲದಲ್ಲಿ ನಡೆದುಹೋದರು. ನೀರು ಅವರ ಎಡಗಡೆ ಮತ್ತು ಬಲಗಡೆಗಳಲ್ಲಿ ಗೋಡೆಯಂತೆ ನಿಂತುಕೊಂಡಿತು.**

ದೇವರು ತನ್ನ ಜನರು ಕೇವಲ ಈಜಿಪ್ಟಿಯನ್ನರ ಕೈಯಿಂದ ತಪ್ಪಿಕೊಳ್ಳುವಂತೆ ಮಾಡಲಿಲ್ಲ. ಈಜಿಪ್ಟಿಯನ್ನರು ಇನ್ನೆಂದೂ ಇಸ್ರಾಯೇಲರನ್ನು ಬೆನ್ನಟ್ಟದಂತೆ ಅವರ ಮೇಲೆ ನ್ಯಾಯತೀರ್ಪನ್ನು ಬರಮಾಡಿದರು.

**ವಿಮೋ 14:23,24 ಐಗುಪ್ತ್ಯರೂ ಅಂದರೆ ಫರೋಹನ ಕುದುರೆಗಳೂ, ರಥಗಳೂ, ರಾಹುತರೂ ಅವರನ್ನು ಬೆನ್ನಟ್ಟುವವರಾಗಿ ಅವರ ಹಿಂದೆಯೇ ಸಮುದ್ರದೊಳಗೆ ಬಂದರು.**

**ಬೆಳಗಿನ ಜಾವದಲ್ಲಿ ಯೆಹೋವನು ಆ ಅಗ್ನಿ ಸ್ತಂಭ ಮತ್ತು ಮೇಘ ಸ್ತಂಭದೊಳಗಿನಿಂದ ಐಗುಪ್ತ್ಯರ ದಂಡಿನ ಕಡೆಗೆ ನೋಡಿ ಅವರಲ್ಲಿ ಗಲಿಬಿಲಿಯನ್ನು ಉಂಟುಮಾಡಿದನು. .**

✳ *ವಿಳಂಬ ತಂತ್ರಗಳು*

ಈಜಿಪ್ಟಿಯನ್ನರು ಸಮುದ್ರ ಮಧ್ಯೆ ಇದ್ದಾಗ ದೇವರು ಅವರ ರಥಗಳ ಚಕ್ರಗಳು ಕಳಚಿ ಹೋಗುವಂತೆ ಮಾಡಿ ಅವರನ್ನು ತಡೆ ಮಾಡಿದರು.

**ವಚನಗಳು. 25-28 ಯೆಹೋವನು ಅವರ ರಥಗಳ ಚಕ್ರದ ಕೀಲುಗಳಲ್ಲಿ ವ್ಯತ್ಯಾಸ ಮಾಡಿಬಿಟ್ಟದ್ದರಿಂದ ಐಗುಪ್ತರು ಬಹು ಕಷ್ಟದಿಂದ ರಥಗಳನ್ನು ಸಾಗಿಸಿಕೊಂಡು ಹೋಗಬೇಕಾಯಿತು. ಆಗ ಐಗುಪ್ತ್ಯರು, "ನಾವು ಇಸ್ರಾಯೇಲರ ಮುಂದೆ ನಿಲ್ಲಲಾರೆವು, ಓಡಿ ಹೋಗೋಣ, ಯೆಹೋವನು ಅವರಿಗೋಸ್ಕರ ನಮಗೆ ವಿರೋಧವಾಗಿ ಯುದ್ಧಮಾಡುತ್ತಿದ್ದಾನೆ" ಎಂದು ಹೇಳಿಕೊಂಡರು.**

**ಅಷ್ಟರಲ್ಲಿ ಯೆಹೋವನು ಮೋಶೆಗೆ, "ಸಮುದ್ರದ ಮೇಲೆ ನಿನ್ನ ಕೈಚಾಚು, ಆಗ ಅದರ ನೀರು ಮೊದಲಿನಂತೆ ಬಂದು ಐಗುಪ್ತ್ಯರನ್ನೂ, ಅವರ ರಥಗಳನ್ನೂ, ರಾಹುತರನ್ನೂ ಮುಳುಗಿಸುವುದು" ಎಂದು ಹೇಳಿದನು. ಮೋಶೆ ಸಮುದ್ರದ ಮೇಲೆ ಕೈಚಾಚಿದನು. ಬೆಳಗಾಗುವಾಗಲೇ ಸಮುದ್ರದ ನೀರು ಮೊದಲಿದ್ದಂತೆಯೇ ತುಂಬಿಕೊಂಡಿತು. ಐಗುಪ್ತ್ಯರು ಓಡಿಹೋಗುತ್ತಾ ಅದರ ಎದುರಾಗಿಯೇ ಬಂದರು. ಹೀಗೆ ಯೆಹೋವನು ಐಗುಪ್ತ್ಯರನ್ನು ಸಮುದ್ರದೊಳಗೆ ತಳ್ಳಿಬಿಟ್ಟನು. ನೀರು ಮೊದಲಿನಂತೆ ಬಂದು ಆ ರಥಗಳನ್ನೂ, ರಾಹುತರನ್ನೂ, ಅವರ ಹಿಂದೆ ಸಮುದ್ರದೊಳಗೆ ಹೋಗಿದ್ದ ಫರೋಹನ ಸೈನ್ಯದವರೆಲ್ಲರನ್ನೂ ಮುಳುಗಿಸಿಬಿಟ್ಟಿತ್ತು, ಅವರಲ್ಲಿ ಒಬ್ಬರಾದರೂ ಉಳಿಯಲಿಲ್ಲ.**

ಆಗಾಗ್ಗೆ ಒಂದು ಅದ್ಭುತಕ್ಕೆ ಎರಡು ಮುಖಗಳಿರುತ್ತವೆ. ಯೆಹೋವನಿಗೆ ಸೇರಿದವರಿಗೆ ಸಂರಕ್ಷಣೆಯಿದೆ. ಯೆಹೋವನಿಗೆ ವಿರುದ್ಧ ಹೋರಾಡುವವರಿಗೆ ನ್ಯಾಯತೀರ್ಪಿದೆ.

✱ *ದೇವರ ಶಕ್ತಿಯ ಗುಣಮಟ್ಟ*

ಈ ಅದ್ಭುತವು ದೇವರ ಶಕ್ತಿಯ ಗುಣಮಟ್ಟವಾಗಿದ್ದು ಹಳೆ ಒಡಂಬಡಿಕೆಯುದ್ದಕ್ಕೂ ಉಲ್ಲೇಖಿಸಲ್ಪಟ್ಟಿದೆ.

**2 ಅರಸುಗಳು 17:36 ... ನಿಮ್ಮನ್ನು ಮಹಾಶಕ್ತಿ, ಭುಜಬಲಪರಾಕ್ರಮ ಇವುಗಳ ಮೂಲಕವಾಗಿ ಐಗುಪ್ತ ದೇಶದಿಂದ ಕರೆದುಕೊಂಡು ಬಂದ ಯೆಹೋವನಾದ ನನ್ನಲ್ಲಿ ಭಯಭಕ್ತಿಯುಳ್ಳವರಾಗಿ, ನನಗೊಬ್ಬನಿಗೇ ಕೈಮುಗಿದು ಯಜ್ಞವರ್ಪಿಸಬೇಕು.**

**ಅಲೌಕಿಕವಾದ ಆರೋಗ್ಯ**

ಯೆಹೋವ ಅಂದರೆ ತನ್ನನ್ನೇ ಪ್ರಕಟಪಡಿಸಿಕೊಳ್ಳುವ ದೇವರು. ಇಸ್ರಾಯೇಲರು ಕಂಪು ಸಮುದ್ರವನ್ನು ದಾಟಿದ ತಕ್ಷಣವೇ ದೇವರು ತನ್ನನ್ನು ಯೆಹೋವ-ರಾಫನಾಗಿ ಪ್ರಕಟಪಡಿಸಿಕೊಂಡರು.

**ವಿಮೋ 15:25b,26 ಅಲ್ಲಿ ಯೆಹೋವನು ಇಸ್ರಾಯೇಲರಿಗಾಗಿ ಒಂದು ನಿಯಮವನ್ನು ಮಾಡಿ ಅವರನ್ನು ಪರೀಕ್ಷಿಸಿದನು. ಯೆಹೋವನು ಅವರಿಗೆ, "ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ, ಆತನ ದೃಷ್ಟಿಗೆ ಸರಿಬೀಳುವುದನ್ನು ಮಾಡಿ, ಆತನ ಆಜ್ಞೆಗಳಿಗೆ ವಿಧೇಯರಾಗಿದ್ದು, ಆತನ ಕಟ್ಟಳೆಗಳನ್ನೆಲ್ಲಾ ಅನುಸರಿಸಿ ನಡೆದರೆ, ನಾನು ಐಗುಪ್ತ್ಯರಿಗೆ ಉಂಟುಮಾಡಿದ ವ್ಯಾಧಿಗಳಲ್ಲಿ ಒಂದನ್ನೂ ನಿಮಗೆ ಬರಗೊಡಿಸುವುದಿಲ್ಲ. ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನೂ, ನಿಮ್ಮನ್ನು ಗುಣಪಡಿಸುವವನೂ ಆಗಿದ್ದೇನೆ" ಎಂದನು."**

ಧರ್ಮೋಪದೇಶಕಾಂಡದಲ್ಲಿ ಅವರು ಮರುಭೂಮಿಯಲ್ಲಿ ನಡೆದರೂ ಸಹ ಕಾಲುಗಳು ಬಾತುಹೋಗಲಿಲ್ಲ ಎಂಬದನ್ನು ಕಾಣುತ್ತೇವೆ.

**ದರ್ಮೋ 8:4b ಆ ನಲವತ್ತು ವರ್ಷ... ನಿಮ್ಮ ಕಾಲುಗಳು ಬಾತುಹೋಗಲಿಲ್ಲ.**

ನಂತರ, ದಾವೀದನು ಅವರ ಯಾವ ಕುಲದಲ್ಲೂ ಒಬ್ಬ ವ್ಯಕ್ತಿಯೂ ನಿಶಕ್ತಿಯುಳ್ಳವನಾಗಿರಲಿಲ್ಲ ಎಂದು ಬರೆದನು.

**ಕೀರ್ತನೆ 105:37b ಅವರ ಕುಲಗಳಲ್ಲಿ ಒಬ್ಬನಾದರೂ [ನಿಶಕ್ತಿಯಿಂದ] ಎಡವುವವನಿರಲಿಲ್ಲ.**

**ಅಲೌಕಿಕವಾದ ಆಹಾರ**

✱ *ಮನ್ನ ಮತ್ತು ಲಾವಕ್ಕಿ*

ದೇವರು ಅಲೌಕಿಕವಾಗಿ ಪ್ರಯಾಣಕ್ಕೆ ಬೇಕಾದ ಆಹಾರವನ್ನು ಒದಗಿಸಿದರು.

**ವಿಮೋ 16:12b,15 ಇಸ್ರಾಯೇಲ್ಯರ ಗುಣುಗುಟ್ಟುವಿಕೆಯು ನನಗೆ ಕೇಳಿಸಿತು. ನೀನು ಅವರಿಗೆ - ಸಾಯಂಕಾಲದಲ್ಲಿ ಮಾಂಸವನ್ನೂ ಹೊತ್ತಾರೆಯಲ್ಲಿ ಬೇಕಾದಷ್ಟು ರೊಟ್ಟಿಯನ್ನೂ ತಿನ್ನುವಿರಿ; ಇದರಿಂದ ನಾನು ನಿಮ್ಮ ದೇವರಾದ ಯೆಹೋವನೆಂಬದು ನಿಮಗೆ ಗೊತ್ತಾಗುವದೆಂದು ಹೇಳಬೇಕು ಎಂಬದೇ. ಸಾಯಂಕಾಲವಾಗುತ್ತಲೇ ಲಾವಕ್ಕಿಗಳು ಬಂದು ಅವರ ಪಾಳೆಯವನ್ನು ಮುಚ್ಚಿಕೊಂಡವು. ಅದಲ್ಲದೆ ಹೊತ್ತಾರೆಯಲ್ಲಿ ಮಂಜು ಪಾಳೆಯದ ಸುತ್ತಲೂ ಬಿದ್ದಿತು; ಆ ಮಂಜು ಆರಿಹೋದನಂತರ ಅರಣ್ಯದ ನೆಲದಲ್ಲಿ ಮಂಜಿನ ಹನಿಗಳಂತೆ ಏನೋ ಸಣ್ಣಸಣ್ಣ ರವೆಗಳು ಕಾಣಿಸಿದವು.**

**ಇಸ್ರಾಯೇಲ್ಯರು ಅದನ್ನು ಕಂಡು ಇಂಥದೆಂದು ತಿಳಿಯದೆ ಒಬ್ಬರಿಗೊಬ್ಬರು ಇದೇನಿರಬಹುದು ಎಂದು ಹೇಳಿಕೊಂಡರು. ಮೋಶೆ ಅವರಿಗೆ - ಇದು ಯೆಹೋವನು ನಿಮಗೋಸ್ಕರ ಕೊಟ್ಟ ಆಹಾರವು;**

ಈ ಅಲೌಕಿಕವಾದ ಆಹಾರದ ಒದಗಿಸುವಿಕೆಯು ನಲ್ವತ್ತು ವರ್ಷಗಳವರೆಗೆ ಮುಂದುವರೆಯಿತು.

**ವಿಮೋ 16:35 ಇಸ್ರಾಯೇಲ್ಯರು ಜನವಾಸವಿರುವ ಪ್ರದೇಶಕ್ಕೆ ಬರುವ ತನಕ ಅಂದರೆ ಕಾನಾನ್ ದೇಶದ ಮೇರೆಯನ್ನು ಸೇರುವ ತನಕ** ನಾಲ್ವತ್ತು ವರುಷ ಮನ್ನವನ್ನೇ ಊಟಮಾಡುತ್ತಿದ್ದರು.

ಅಲೌಕಿಕವಾದ ನೀರು

ದೇವರು ಅಲೌಕಿಕವಾಗಿ ಅವರಿಗೆ ನೀರನ್ನು ಒದಗಿಸಿದರು. ಮೊದಲ ಬಾರಿ ಮಾರಾದ ಬಳಿ ಒದಗಿಸಿದರು, ಅಲ್ಲಿನ ನೀರು ಕಹಿಯಾಗಿತ್ತು ಮತ್ತು ದೇವರು ಮೋಶೆಗೆ ಒಂದು ಗಿಡವನ್ನು ಅದರಲ್ಲಿ ಹಾಕಲು ಹೇಳಿದರು.

**ವಿಮೋ 15:25a ಆಗ ಯೆಹೋವನು ಅವನಿಗೆ ಒಂದು ಗಿಡವನ್ನು ತೋರಿಸಿದನು. ಅದನ್ನು ಆ ನೀರಿನಲ್ಲಿ ಹಾಕಿದಾಗ ನೀರು ಸಿಹಿಯಾಯಿತು.**

ದವರು ಇನ್ನೊಂದು ಬಾರಿ ರೆಫಿದಿಮಿನಲ್ಲಿ ನೀರನ್ನು ಒದಗಿಸಿದರು. ಈ ಬಾರಿ, ಮೋಶೆಯು ಬಂಡೆಗೆ ಹೊಡೆಯಬೇಕೆಂದು ಸೂಚನೆ ನೀಡಿದರು.

**ವಿಮೋ 17:6 ಅಲ್ಲಿ ಹೋರೇಬಿನಲ್ಲಿರುವ ಬಂಡೆಯ ಮೇಲೆ ನಾನೇ ನಿನ್ನೆದುರಾಗಿ ನಿಲ್ಲುವೆನು. ನೀನು ಆ ಬಂಡೆಯನ್ನು ಹೊಡೆದಾಗ ಅದರಿಂದ ನೀರು ಹೊರಡುವದು, ಜನರು ಕುಡಿಯುವರು ಎಂದು ಮೋಶೆಗೆ ಅಪ್ಪಣೆ ಕೊಡಲಾಗಿ ಮೋಶೆ ಇಸ್ರಾಯೇಲ್ಯರ ಹಿರಿಯರ ಎದುರಿನಲ್ಲಿ ಹಾಗೆಯೇ ಮಾಡಿದನು.**

ನಾಲ್ವತ್ತು ವರ್ಷಗಳ ಕಾಲ ಇಸ್ರಾಯೇಲರಿಗೆ ಮರುಭೂಮಿಯಲ್ಲಿ ನೀರು ಇತ್ತು. ಕೆಲವೊಮ್ಮೆ ನೀರನ್ನು ಸೌಖ್ಯಪಡಿಸಲಾಯಿತು ಇನ್ನೂ ಕೆಲವೊಮ್ಮೆ ಬಂಡೆಯಿಂದ ನೀರು ಬಂದಿತು, ಇತರೆ ಸಮಯದಲ್ಲಿ ಅವರು ಬಾವಿಗಳನ್ನು ಅಗೆದರು.

ಅಪೋಸ್ತಲ ಪೌಲನು ಈ ಕಾಲದ ಒಂದು ಸಾರಾಂಶವನ್ನು ನಮಗೆ ನೀಡುತ್ತಾನೆ. ಅವನು ಅದರ ನಂತರ ಬಂದ ಆತ್ಮಿಕ ನೀರನ್ನು ಉಲ್ಲೇಖಿಸುತ್ತಾನೆ.

**1 ಕೊರಿಂಥ 10:1-4** ಸಹೋದರರೇ, ಮುಂದಿನ ಸಂಗತಿಯಲ್ಲಿ ನೀವು ಲಕ್ಷ್ಯವಿಡಬೇಕೆಂದು ನಾನು ಅಪೇಕ್ಷಿಸುತ್ತೇನೆ. ಅದೇನಂದರೆ, ನಮ್ಮ ಪಿತೃಗಳೆಲ್ಲರೂ ಮೇಘದ ನೆರಳಿನಲ್ಲಿದ್ದರು; ಅವರೆಲ್ಲರೂ ಸಮುದ್ರವನ್ನು ದಾಟಿಹೋದರು; ಅವರೆಲ್ಲರೂ ಮೋಶೆಯ ಶಿಷ್ಯರಾಗುವದಕ್ಕಾಗಿ ಮೇಘದಲ್ಲಿಯೂ ಸಮುದ್ರದಲ್ಲಿಯೂ ದೀಕ್ಷಾಸ್ನಾನವನ್ನು ಹೊಂದಿದರು. ಅವರೆಲ್ಲರೂ ದೈವಿಕವಾದ ಒಂದೇ ಆಹಾರವನ್ನು ತಿಂದರು; ಅವರೆಲ್ಲರೂ ದೈವಿಕವಾದ ಒಂದೇ ನೀರನ್ನು ಕುಡಿದರು; ಹೇಗಂದರೆ ಅವರ ಹಿಂದೆ ಹೋಗುತ್ತಿದ್ದ ದೈವಿಕವಾದ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು; ಆ ಬಂಡೆ ಕ್ರಿಸ್ತನೇ.

**ಅಲೌಕಿಕವಾದ ಉಡುಪು**

ಇಸ್ರಾಯೇಲಿನ ಗೋತ್ರವು ಒಂದು ಬಡಪಾಯಿಯಾದ, ಅರೆಹೊಟ್ಟೆಯಿಂದ ಬಳಲುತ್ತಿರುವ ಜನರ ಗುಂಪಾಗಿರಲಿಲ್ಲ. ಅವರು ಈಜಿಪ್ಟನ್ನು ಬಿಟ್ಟು ಬರುವಾಗ ಆ ದೇಶದ ಸಂಪತ್ತಿನೊಂದಿಗೆ ಹೊರಬಂದರು.

ದೇವರು ಮೊದಲು ಮೋಶೆಯೊಂದಿಗೆ ಮಾತಾಡಿದಾಗ, ತನ್ನ ಜನರು ಬರಿಗೈಯಲ್ಲಿ ಹೊರಗೆ ಬರುವುದಿಲ್ಲ ಎಂದು ಆತನು ಅವನಿಗೆ ವಾಗ್ದಾನ ಮಾಡಿದನು. ಅವರು "ದೇಶವನ್ನು ಲೂಟಿ ಮಾಡಿದರು" ಎಂದು ಸತ್ಯವೇದವು ಹೇಳುತ್ತದೆ. ಅಂದರೆ ಅವರು ವಿಜಯಶಾಲಿಗಳಂತೆ, ಲೂಟಿಗಳನ್ನು ತೆಗೆದುಕೊಂಡರು.

**ವಿಮೋ 3:21,22 "ಇದಲ್ಲದೆ ಈ ನನ್ನ ಜನರ ಮೇಲೆ ಐಗುಪ್ತ್ಯರಿಗೆ ದಯೆಯುಂಟಾಗುವಂತೆ ಮಾಡುವೆನು. ಆದ್ದರಿಂದ ನೀವು ಹೊರಡುವಾಗ ಬರಿಗೈಯಲ್ಲಿ ಬರಬೇಕಾಗುವುದಿಲ್ಲ. 22ನಿಮ್ಮಲ್ಲಿನ ಪ್ರತಿಯೊಬ್ಬ ಸ್ತ್ರೀಯು ನೆರೆಹೊರೆಯ ಹೆಂಗಸರಿಂದಲೂ, ನಿಮ್ಮ ಮನೆಗಳ ಅತಿಥಿಗಳಾಗಿ ತಂಗಿರುವ ಹೆಂಗಸರಿಂದಲೂ ಬೆಳ್ಳಿ ಬಂಗಾರದ ಒಡವೆಗಳನ್ನೂ, ಬಟ್ಟೆಗಳನ್ನೂ ಕೇಳಿಕೊಳ್ಳಲಿ. ನೀವು ಅವುಗಳನ್ನು ನಿಮ್ಮ ಗಂಡು ಹೆಣ್ಣು ಮಕ್ಕಳಿಗೆ ತೊಡಿಸಿರಿ. ಹೀಗೆ ನೀವು ಐಗುಪ್ತ್ಯರನ್ನು ಸುಲಿಗೆ ಮಾಡಿಹೊರಟು ಬರುವಿರಿ" ಅಂದನು."**

ಉಡುಪುಗಳ ಬಗ್ಗೆ ಏನು ಮಾಡಬೇಕೆಂದು ದೇವರು ಅವರಿಗೆ ಹೇಳಿದನು? ಅದನ್ನು ಅವರ ಪುತ್ರ ಮತ್ತು ಪುತ್ರಿಯರ ಮೇಲೆ ಹಾಕುವಂತೆ ಹೇಳಿದನು. ಅಲೌಕಿಕವಾಗಿ ಮರುಭೂಮಿಯಲ್ಲಿ ಸವೆದು ಹೋಗದ ಬಟ್ಟೆಯು ಗುಲಾಮಗಿರಿಯ ಚಿಂದಿ ಬಟ್ಟೆಯಾಗಿರಲಿಲ್ಲ, ಬದಲಾಗಿ ಈಜಿಪ್ಟ್‌ನ ಶ್ರೀಮಂತರ ಉಡುಪುಗಳಾಗಿದ್ದವು.

**ಧರ್ಮೋ 8:4a ಆ ನಲವತ್ತು ವರ್ಷ ನಿಮ್ಮ ಮೈಮೇಲಿದ್ದ ಉಡುಪು ಹಳೆಯದಾಗಲಿಲ್ಲ.**

ಇಸ್ರಾಯೇಲರು ಈಜಿಪ್ಟಿನ ಲೂಟಿಯೊಂದಿಗೆ ಮಾತ್ರ ಹೊರಬರಲಿಲ್ಲ, ಅವರು ಹಿಂದುಗಳೊಂದಿಗೆ ಮಂದೆಗಳೊಂದಿಗೆ ಹೊರಬಂದರು.

**ವಿಮೋ 12:31,32 ಫರೋಹನು ಆ ರಾತ್ರಿಯಲ್ಲೇ ಮೋಶೆ ಮತ್ತು ಆರೋನರನ್ನು ಕರೆಯಿಸಿ ಅವರಿಗೆ, "ನೀವು ಎದ್ದು ನನ್ನ ಜನರ ಮಧ್ಯದಿಂದ ಹೊರಟುಹೋಗಿರಿ. ನೀವು ಕೇಳಿಕೊಂಡ ಮೇರೆಗೆ ಯೆಹೋವನನ್ನು ಆರಾಧಿಸುವುದಕ್ಕೆ ನೀವು ಮತ್ತು ಇಸ್ರಾಯೇಲರು ಹೊರಟುಹೋಗಿರಿ. ನೀವು ಕೇಳಿಕೊಂಡಂತೆ ನಿಮ್ಮ ಕುರಿದನಗಳ ಹಿಂಡುಗಳನ್ನು ತೆಗೆದುಕೊಂಡು ಹೋಗಿರಿ. ಅದಲ್ಲದೆ ನನ್ನನ್ನೂ ಸಹ ಆಶೀರ್ವದಿಸಿರಿ" ಎಂದನು."**

**ಸ್ಪಷ್ಟವಾಗಿ ಎದ್ದುಕಾಣುವ ಚಿಹ್ನೆ**

ನಲವತ್ತು ವರ್ಷಗಳಿಂದ ದಶಲಕ್ಷಕ್ಕೂ ಹೆಚ್ಚು ಜನರು ಮರುಭೂಮಿಯ ಮೂಲಕ ಪ್ರಯಾಣಿಸುತ್ತಿದ್ದಂತೆ, ದೇವರ ಆಶೀರ್ವಾದದ ಸ್ಪಷ್ಟವಾಗಿ ಎದ್ದುಕಾಣುವ ಚಿಹ್ನೆಗಳು ಕಂಡುಬಂದವು. ಮೇಘಸ್ತಂಭ ಮತ್ತು ಅಗ್ನಿಸ್ತಂಭ, ಮನ್ನ ಮತ್ತು ಲಾವಕ್ಕಿಗಳು ಕೆಲವು ಉದಾಹರಣೆಗಳಾಗಿವೆ.

ನಾವು ಅರಿತುಕೊಳ್ಳಬೇಕಾದ ಪ್ರಮುಖ ವಿಷಯವೆಂದರೆ ದೇವರು ತನ್ನ ಜನರನ್ನು ಆರೈಕೆ ಮಾಡಬಲ್ಲನು ಮತ್ತು ಆರೈಕೆ ಮಾಡುತ್ತಾನೆ. ಕಷ್ಟಕಾಲದಲ್ಲಿ ದೇವರು ಬದಲಾಗುವುದಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ದೇವರು ತನ್ನ ಜನರು ನಂಬುವದಾದರೆ ಅಗತ್ಯವು ಬಂದ ಕಾಲದಲ್ಲಿ ಅಲೌಕಿಕವಾದ ರೀತಿಯಲ್ಲಿ ಆಗಲೂ ಒದಗಿಸುವರು.

## ಎಲೀಯನ ಮೂಲಕ ಅದ್ಭುತಗಳು

ಸತ್ಯವೇದದುದ್ದಕ್ಕೂ ಅದ್ಭುತಗಳು ಮುಂದುವರೆಯುತ್ತವೆ. 1 ಅರಸುಗಳಲ್ಲಿ, ಎಲೀಯನ ಅದ್ಭುತಗಳ ಬಗ್ಗೆ ತಿಳಿಸಲಾಗಿದೆ. ನಾವು ಕೆಲವೊಂದನ್ನು ಮಾತ್ರ ನೋಡೋಣ.

**ಕಾಗೆಗಳಿಂದ ಪೋಷಣೆ**

ಎಲೀಯನು ದೇಶದ ಮೇಲೆ ನ್ಯಾಯತೀರ್ಪನ್ನು ಹೇಳುತ್ತಾ ಬರಗಾಲವುಂಟಾಗುವದೆಂದು ಘೋಷಿಸಿದರು. ನಂತರ ಅವನು ಕೆರೀತ್ ಹಳ್ಳದ ಬಳಿಯಲ್ಲಿ ಅಡಗಿಕೊಳ್ಳುವಂತೆ ದೇವರು ನಡೆಸಿದರು, ಅಲ್ಲಿ ಅವನಿಗೆ ಅಲೌಕಿಕವಾಗಿ ಕಾಗೆಗಳಿಂದ ಆಹಾರವನ್ನು ನೀಡಲಾಯಿತು.

**1** ಅರಸು **17:1-4,6** ಗಿಲ್ಯಾದಿನ ತಿಷ್ಬೀಯ ಊರಿನವನಾದ ಎಲೀಯ ಎಂಬುವವನು ಅಹಾಬನಿಗೆ, **"ನಾನು ಸನ್ನಿಧಿಸೇವೆ ಮಾಡುತ್ತಿರುವ ಇಸ್ರಾಯೇಲ್ ದೇವರಾದ ಯೆಹೋವನಾಣೆ, ನಾನು ಸೂಚಿಸಿದ ಹೊರತು ಇಂದಿನಿಂದ ಕೆಲವು ವರ್ಷಗಳ ವರೆಗೆ ಮಳೆಯಾಗಲಿ ಮಂಜಾಗಲಿ ಬೀಳುವುದಿಲ್ಲ"** ಅಂದನು.

**ತರುವಾಯ ಯೆಹೋವನು ಎಲೀಯನಿಗೆ, "ನೀನು ಈ ಸ್ಥಳವನ್ನು ಬಿಟ್ಟು ಪೂರ್ವದಿಕ್ಕಿಗೆ ಹೋಗಿ ಯೊರ್ದನ್ ಹೊಳೆಯ ಆಚೆಯಲ್ಲಿರುವ ಕೆರೀತ್ ಹಳ್ಳದಲ್ಲಿ ಅಡಗಿಕೋ. ಆ ಹಳ್ಳದ ನೀರು ನಿನಗೆ ಕುಡಿಯುವ ಪಾನವಾಗಿರುವುದು. ನಿನಗೆ ಆಹಾರ ತಂದು ಕೊಡಬೇಕೆಂದು ಕಾಗೆಗಳಿಗೆ ಆಜ್ಞಾಪಿಸಿದ್ದೇನೆ" ಎಂದು ಹೇಳಿದನು."**

**ಕಾಗೆಗಳು ಅವನಿಗೆ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ರೊಟ್ಟಿ ಮತ್ತು ಮಾಂಸಗಳನ್ನು ತಂದುಕೊಡುತ್ತಿದ್ದವು. ಅವನು ಇವುಗಳನ್ನು ತಿನ್ನುತ್ತಿದ್ದನು. ಹಳ್ಳದ ನೀರು ಅವನಿಗೆ ಪಾನವಾಗಿತ್ತು.**

**ಅದ್ಭುತಕರವಾದ ಹಿಟ್ಟು ಮತ್ತು ಎಣ್ಣೆ**

ಹಳ್ಳವು ಬತ್ತಿ ಹೋದಾಗ ದೇವರು ಅವನನ್ನು ಚೆರಪ್ತದಲ್ಲಿರುವ ಒಬ್ಬ ವಿಧವೆಯ ಬಳಿಗೆ ಕಳುಹಿಸಿದರು. ಅವಳು ತನಗಾಗಿ ನೀರು ಮತ್ತು ಆಹಾರವನ್ನು ಸಿದ್ಧಪಡಿಸುವಂತೆ ಅವನು ಹೇಳಿದನು ಮತ್ತು ಯೆಹೋವನಿಂದ ಈ ವಾಗ್ದಾನವನ್ನು ಅವಳಿಗೆ ಕೊಟ್ಟನು.

**1 ಅರಸು 17:14 "ಇಸ್ರಾಯೇಲ್ ದೇವರಾದ ಯೆಹೋವನು ನಿನಗೆ, 'ನಾನು ದೇಶಕ್ಕೆ ಮಳೆಯನ್ನು ಕಳುಹಿಸುವವರೆಗೆ ನಿನ್ನ ಮಡಿಕೆಯಲ್ಲಿರುವ ಹಿಟ್ಟು ತೀರುವುದಿಲ್ಲ ಮತ್ತು ಮೊಗೆಯಲ್ಲಿರುವ ಎಣ್ಣೆಯು ಮುಗಿದುಹೋಗುವುದಿಲ್ಲ'" ಎಂದು ಹೇಳುತ್ತಾನೆ.'**

ಬರಗಾಲವು ಮೂರು ವರ್ಷ ಆರು ತಿಂಗಳುಗಳ ಕಾಲ ಮುಂದುವರೆಯಿತು ಮತ್ತು ಎಲೀಯನಿಗಾಗಿ, ಆ ವಿಧವೆಗಾಗಿ ಮತ್ತು ಅವಳ ಮಗನಿಗಾಗಿ ದೇವರ ಅಲೌಕಿಕವಾದ ಒದಗಿಸುವಿಕೆಯು ಮುಂದುವರೆಯಿತು. ಅವಳ ಮಗನು ಈ ಸಮಯದಲ್ಲಿ ಸಾವನ್ನಪ್ಪಿದಾಗಲೂ ದೇವರು ಅವನ ಜೀವವನ್ನು ಹಿಂದಿರುಗಿಸಿದರು.

**ಯಾಕೋಬ 5:17 ಎಲೀಯನು ನಮಗೆ ಸಮಾನವಾದ ಸ್ವಭಾವವುಳ್ಳವನಾಗಿದ್ದನು, ಅವನು ಮಳೆ ಬರಬಾರದೆಂದು ಭಕ್ತಿಯಿಂದ ಪ್ರಾರ್ಥಿಸಲು ಮೂರು ವರ್ಷ ಆರು ತಿಂಗಳವರೆಗೂ ಭೂಮಿಯ ಮೇಲೆ ಮಳೆ ಬೀಳಲಿಲ್ಲ.**

ಎಲೀಯನು ನಮ್ಮಂತಹ ಸ್ವಭಾವವುಳ್ಳವನಾಗಿದ್ದನು ಎಂದು ಅಪೊಸ್ತಲನಾದ ಯಾಕೋಬನು ಹೇಳುತ್ತಾನೆ. ಎಲೀಯನು ಒಬ್ಬ ಸಾಮಾನ್ಯ ಮನುಷ್ಯನಾಗಿದ್ದು ಅಲೌಕಿಕವಾಗಿ ಕಾರ್ಯಮಾಡಿದನು ಎಂಬುದನ್ನು ತಿಳಿದುಕೊಳ್ಳುವುದು ನಮಗೆ ಎಷ್ಟೊಂದು ಪ್ರೋತ್ಸಾಹವನ್ನು ಕೊಡುತ್ತದೆ. ನಾವೂ ಸಹ ಹಾಗೆಯೇ ನಡೆದುಕೊಳ್ಳಬೇಕು !

**ಅಲೌಕಿಕವಾದ ಯಜ್ಞಬಲಿ**

ಮೂರು ವರ್ಷ ಮತ್ತು ಆರು ತಿಂಗಳುಗಳ ಕಾಲ ಎಲೀಯನು ಅಡಗಿಕೊಂಡಿದ್ದನು. ಅಹಾಬನು ಅವನನ್ನು ಕೊಲ್ಲುವುದಕ್ಕಾಗಿ ಅವನನ್ನು ಎಲ್ಲಾ ಕಡೆ ಹುಡುಕಿದನು. ಈ ಸಮಯದಲ್ಲಿ ಅಹಾಬನು ಯೆಹೋವನ

ಪ್ರವಾದಿಗಳಲ್ಲಿ ಅನೇಕರನ್ನು ಕೊಂದಿದ್ದನು ಆದರೂ ದೇವರು ಎಲೀಯನನ್ನು ಅಹಾಬನ ಬಳಿಗೆ ಕಳುಹಿಸಿದನು.

**1 ಅರಸು 18:17-20 ಅವನನ್ನು ಕಂಡಕೂಡಲೆ, "ಇಸ್ರಾಯೇಲರಿಗೆ ಆಪತ್ತನ್ನು ಬರಮಾಡಿದವನೇ, ನೀನು ಬಂದಿಯಾ?" ಅಂದನು. ಅದಕ್ಕೆ ಅವನು, "ಇಸ್ರಾಯೇಲರಿಗೆ ಆಪತ್ತನ್ನು ಬರಮಾಡಿದವನು ನಾನಲ್ಲ. ಯೆಹೋವನ ಆಜ್ಞೆಗಳನ್ನು ಉಲ್ಲಂಘಿಸಿ ಬಾಳನ ವಿಗ್ರಹಗಳನ್ನು ಪೂಜಿಸಿದ ನೀನೂ ಮತ್ತು ನಿನ್ನ ಮನೆಯವರೂ ಅದಕ್ಕೆ ಕಾರಣರು. ನೀನು ಈಗ ಎಲ್ಲಾ ಇಸ್ರಾಯೇಲರನ್ನೂ, ಈಜೆಬೆಲಳಿಂದ ಪೋಷಣೆ ಹೊಂದುವ ಬಾಳನ ನಾನೂರೈವತ್ತು ಪ್ರವಾದಿಗಳನ್ನು ಮತ್ತು ಅಶೇರ ದೇವತೆಯ ನಾನೂರು ಪ್ರವಾದಿಗಳನ್ನು ಕರ್ಮೆಲ್ ಬೆಟ್ಟಕ್ಕೆ ಕರೆಯಿಸು" ಎಂದು ಹೇಳಿದನು. ಅಹಾಬನು ಇಸ್ರಾಯೇಲರನ್ನೂ ಎಲ್ಲಾ ಪ್ರವಾದಿಗಳನ್ನೂ ಅಲ್ಲಿಗೆ ಕರೆಯಿಸಿದನು.**

* *ಒಂದು ಕಡೆ 850 ಜನರು ಇನ್ನೊಂದು ಕಡೆ ಒಬ್ಬನು*

ಕಾರ್ಮೆಲ್ ಪರ್ವತವು ಉತ್ತರ ಇಸ್ರಾಯೇಲಿನ ಬಯಲಿನಲ್ಲಿರುವ ಒಂದು ಸಣ್ಣ ಪರ್ವತವಾಗಿದೆ. ಜನರು ಅದರ ಬದಿಗಳಲ್ಲಿ ನಿಂತಾಗ, ಸಮತಟ್ಟಾದ ಪರ್ವತದ ತುದಿಯಲ್ಲಿ ನಡೆಯುವ ಎಲ್ಲವನ್ನೂ ಸುಲಭವಾಗಿ ನೋಡಬಹುದಾಗಿತ್ತು.

ಸತ್ಯವೇದದ ದಾಖಲೆಯು ಬಹಳ ಕುತೂಹಲಕರವಾಗಿದೆ (1 ಅರಸು 18 ನ್ನು ನೋಡಿರಿ)! ಸುಳ್ಳು ಪ್ರವಾದಿಗಳು ತಮ್ಮ ಯಜ್ಞಬಲಿಗಳನ್ನು ಮುಂಜಾನೆಯಲ್ಲಿ ಸಿದ್ಧಪಡಿಸಿ ಬೆಂಕಿಯನ್ನು ಕಳುಹಿಸಿ ಅದನ್ನು ದಹಿಸಬೇಕೆಂದು ತಮ್ಮ ದೇವರುಗಳಿಗೆ ಬೇಡಿಕೊಂಡರು. ಅವರು ಮಧ್ಯಾಹ್ನದ ಹೊತ್ತಿಗೆ ಪರವೇಶರಾಗಿ ತಮ್ಮನ್ನು ಕೊಯ್ದುಕೊಳ್ಳುತ್ತಾ ಪ್ರಾರ್ಥನೆಗೆ ಉತ್ತರ ನೀಡೆಂದು ತಮ್ಮ ದೇವರಿಗೆ ಬೇಡಿಕೊಂಡರು. 850 ಪುರೋಹಿತರುಗಳು ಇದನ್ನು ಮಾಡುತ್ತಿರುವಾಗ ಒಬ್ಬ ಮನುಷ್ಯನು, ಅಂದರೆ ಎಲೀಯನು ಏಕಾಂತವಾಗಿ ನಿಂತುಕೊಂಡು ಅವರನ್ನು ಪರಿಹಾಸ್ಯ ಮಾಡಿದನು.

ಸಾಯಂಕಾಲದಲ್ಲಿ ಎಲೀಯನು ತನ್ನ ಯಜ್ಞಬಲಿಯನ್ನು ಸಿದ್ಧಪಡಿಸಿ ಅದರ ಮೇಲೆ ಮೂರು ಬಾರಿ ನೀರನ್ನು ಹೊಯ್ಯಬೇಕೆಂದು ಜನರಿಗೆ ಅಪ್ಪಣೆ ನೀಡಿದನು. ಅದರ ಮೇಲೆ ಎಷ್ಟೊಂದು ನೀರು ಸುರಿಸಲ್ಪಟ್ಟಿತ್ತೆಂದರೆ ಆ ಯಜ್ಞವೇದಿಯ ಸುತ್ತಲೂ ತೋಡಲಾಗಿದ್ದ ಗುಂಡಿಯೂ ಸಹ ನೀರಿನಿಂದ ತುಂಬಲ್ಪಟ್ಟಿತು. ನಂತರ ಎಲೀಯನು ಒಂದು ಸಣ್ಣ ಪ್ರಾರ್ಥನೆಯನ್ನು ಮಾಡಿದನು.

**1 ಅರಸು 18:36,37 ಸಂಧ್ಯಾನೈವೇದ್ಯದ ಹೊತ್ತಿಗೆ ಪ್ರವಾದಿಯಾದ ಎಲೀಯನು ಯಜ್ಞವೇದಿಯ ಹತ್ತಿರ ಬಂದು, "ಅಬ್ರಹಾಮ, ಇಸಾಕ ಇಸ್ರಾಯೇಲರ ದೇವರೇ, ಯೆಹೋವನೇ, ನೀನೊಬ್ಬನೇ ಇಸ್ರಾಯೇಲರ ದೇವರಾಗಿರುತ್ತೀ ಎಂಬುದನ್ನೂ, ನಾನು ನಿನ್ನ ಸೇವಕನಾಗಿರುತ್ತೇನೆ ಎಂಬುದನ್ನೂ ಮತ್ತು ಇದನ್ನೆಲ್ಲಾ ನಿನ್ನ ಅಪ್ಪಣೆಯ ಮೇರೆಗೆ ಮಾಡಿದೆನೆಂಬುದನ್ನೂ ಈ ಹೊತ್ತು ತೋರಿಸಿಕೊಡು. ಕಿವಿಗೊಡು, ಯೆಹೋವನೇ ಕಿವಿಗೊಡು, ಯೆಹೋವನಾದ ನೀನೊಬ್ಬನೇ ದೇವರೂ! ಈ ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವವನೂ ನೀನೇ ಆಗಿರುತ್ತೀ ಎಂಬುದನ್ನು ಇವರಿಗೆ ತಿಳಿಯಪಡಿಸು" ಎಂದು ಪ್ರಾರ್ಥಿಸಿದನು.**

✱ *ಯೆಹೋವನೇ ದೇವರು!*

ಏನಾಯಿತು ? ಯೆಹೋವನ ಕಡೆಯಿಂದ ಬೆಂಕಿ ಬಿದ್ದು ಯಜ್ಞಮಾಂಸವನ್ನೂ, ಕಟ್ಟಿಗೆ, ಕಲ್ಲು ಮಣ್ಣುಗಳನ್ನೂ ದಹಿಸಿಬಿಟ್ಟು ಕಾಲುವೆಯಲ್ಲಿದ್ದ ನೀರನ್ನೆಲ್ಲಾ ಹೀರಿಬಿಟ್ಟಿತು. ಇಸ್ರಾಯೇಲ್ ಜನರೆಲ್ಲರೂ ಅದನ್ನು ನೋಡಿ ಸಾಷ್ಟಾಂಗವೆರಗಿ ಯೆಹೋವನನ್ನು ಆರಾಧಿಸಿದರು.

**1 ಅರಸು 18:38,39 ಕೂಡಲೇ ಯೆಹೋವನ ಕಡೆಯಿಂದ ಬೆಂಕಿಬಿದ್ದು ಯಜ್ಞಮಾಂಸವನ್ನೂ, ಕಟ್ಟಿಗೆ, ಕಲ್ಲು ಮಣ್ಣುಗಳನ್ನೂ ದಹಿಸಿಬಿಟ್ಟು ಕಾಲುವೆಯಲ್ಲಿದ್ದ ನೀರನ್ನೆಲ್ಲಾ ಹೀರಿಬಿಟ್ಟಿತು. ಜನರೆಲ್ಲರೂ ಅದನ್ನು ಕಂಡು ಬೋರ್ಲಬಿದ್ದು, "ಯೆಹೋವನೇ ದೇವರು! ಯೆಹೋವನೇ ದೇವರು!" ಎಂದು ಕೂಗಿದರು."**

ಎಂತಹ ಒಂದು ಅದ್ಭುತಗಳ ಸರಣಿ ! ಮೊದಲು ದೇವರು ಎಲೀಯನ ಮೂಲಕ ಮಾತನಾಡಿ ಬರಗಾಲವನ್ನು ಘೋಷಿಸಿದರು. ನಂತರ ಮೂರು ವರ್ಷಗಳಿಗಿಂತಲೂ ಹೆಚ್ಚಿನ ಕಾಲ ದೇವರು ಅವನನ್ನು ಬರಗಾಲದಲ್ಲಿಯೂ ಸಂರಕ್ಷಿಸಿದರು. ನಂತರ ಬೆಂಕಿಯನ್ನು ಕಳುಹಿಸಿಕೊಡುವುದರ ಮೂಲಕ ತನ್ನನ್ನು ತಾನು ಸಾಬೀತುಪಡಿಸಿಕೊಂಡನು.

ಮೊದಲ ಅರಸುಗಳ ಪುಸ್ತಕವು ಎಲೀಯನ ಮೂಲಕ ನಡೆಸಲ್ಪಟ್ಟ ಅದ್ಭುತಗಳಿಂದ ತುಂಬಿದೆ.

## ಎಲೀಷನ ಮೂಲಕ ಅದ್ಭುತಗಳು

ಎಲೀಷನು ಎಲೀಯನ ಶಿಷ್ಯನಾಗಿದ್ದನು ಮತ್ತು ಎಲೀಯನು ಈ ಲೋಕವನ್ನು ಬಿಟ್ಟು ಹೋಗುತ್ತಿರುವಾಗ ಎಲೀಷನು ಅವನಿಂದ ಎರಡರಷ್ಟು ಬಲವನ್ನು ಕೇಳಿಕೊಂಡನು. ಅವನಿಂದಲೂ ಅದ್ಭುತಗಳು ಅಡೆತಡೆಗಳಿಲ್ಲದೆ ಮುಂದುವರೆದವು ಮತ್ತು ಅವನು ಕೇಳಿಕೊಂಡಂತೆಯೇ ಎರಡರಷ್ಟು ಅದ್ಭುತಗಳು ದಾಖಲಾಗಿವೆ.

ಎಲೀಯನು ಯೊರ್ದಾನ್ ನದಿಯನ್ನು ಇಬ್ಭಾಗ ಮಾಡಿದನು, ಎಲೀಷನೂ ಯೊರ್ದಾನ್ ನದಿಯನ್ನು ಇಬ್ಭಾಗ ಮಾಡಿದನು. ಎಲೀಯನಿಗೆ ಹಿಟ್ಟು ಮತ್ತು ಎಣ್ಣೆ ಉಕ್ಕಿತು, ಎಲೀಷನಿಗೂ ಅದ್ಭುತಕರವಾಗಿ ಎಣ್ಣೆ ಉಕ್ಕಿತು.

**ವಿಧವೆಯ ಎಣ್ಣೆ ಉಕ್ಕಿದ್ದು**

**2 ಅರಸು 4:1-7 ಒಂದು ದಿನ ಪ್ರವಾದಿ ಮಂಡಳಿಯಲ್ಲಿನ ಒಬ್ಬನ ಹೆಂಡತಿಯು ಎಲೀಷನ ಹತ್ತಿರ ಬಂದು ಅವನಿಗೆ, "ನಿನ್ನ ಸೇವಕನಾದ ನನ್ನ ಗಂಡನು ಮರಣಹೊಂದಿದನು. ಅವನು ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿದ್ದನು ಎಂಬುದು ನಿನಗೆ ಗೊತ್ತಿದೆಯಲ್ಲಾ. ಸಾಲಕೊಟ್ಟವನು, ನನ್ನ ಇಬ್ಬರು ಮಕ್ಕಳನ್ನು ದಾಸರನ್ನಾಗಿ ಕರೆದುಕೊಂಡು ಹೋಗುವುದಕ್ಕೆ ಬಂದಿದ್ದಾನೆ" ಎಂದು ಮೊರೆಯಿಟ್ಟಳು. ಎಲೀಷನು ಆಕೆಗೆ, "ನಾನು ನಿನಗೇನು ಮಾಡಬೇಕೆನ್ನುತ್ತೀ? ನಿನ್ನ ಮನೆಯಲ್ಲಿ ಏನಿರುತ್ತದೆ? ಹೇಳು ಎಂದನು." ಅದಕ್ಕೆ ಆಕೆಯು, "ನಿನ್ನ ದಾಸಿಯ ಮನೆಯಲ್ಲಿ ಒಂದು ಮೊಗೆ ಎಣ್ಣೆ ಹೊರತಾಗಿ ಏನೂ ಇಲ್ಲ" ಎಂದು ಉತ್ತರ ಕೊಟ್ಟಳು.**

**ಆಗ ಎಲೀಷನು ಆಕೆಗೆ, "ಹೋಗಿ, ನಿನ್ನ ನೆರೆಯವರಿಂದ ಸಿಕ್ಕುವಷ್ಟು ಬರಿದಾದ ಪಾತ್ರೆಗಳನ್ನು ಕೇಳಿ ತೆಗೆದುಕೊಂಡು ಬಾ. ಅನಂತರ, ನೀನು, ನಿನ್ನ ಮಕ್ಕಳನ್ನು ಒಳಗೆ ಕರೆದುಕೊಂಡು ಬಾಗಿಲನ್ನು ಮುಚ್ಚಿ, ಎಣ್ಣೆಯನ್ನು ಪಾತ್ರೆಗಳಲ್ಲಿ ಹೊಯ್ದು ತುಂಬಿದವುಗಳನ್ನೆಲ್ಲಾ ಒಂದು ಕಡೆಯಿಡು" ಎಂದು ಹೇಳಿದನು.**

**ಆಕೆಯು ಹೋಗಿ ಮಕ್ಕಳನ್ನು ಒಳಗೆ ಕರೆದುಕೊಂಡು, ಬಾಗಿಲನ್ನು ಮುಚ್ಚಿ, ಅವರು ಮುಂದಿಟ್ಟ ಪಾತ್ರೆಗಳಲ್ಲೆಲ್ಲಾ ಎಣ್ಣೆ ಹೊಯ್ದಳು. ಪಾತ್ರೆಗಳೆಲ್ಲಾ ತುಂಬಿದಾಗ ಆಕೆಯು ಮಗನಿಗೆ, "ಇನ್ನೊಂದು ಪಾತ್ರೆಯನ್ನು ತಂದಿಡು" ಎನ್ನಲು ಅವನು, "ಪಾತ್ರೆಗಳೆಲ್ಲ ಮುಗಿದು ಹೋದವು" ಎಂದು ಉತ್ತರಕೊಟ್ಟನು. ಕೂಡಲೇ ಎಣ್ಣೆ ಉಕ್ಕುವುದು ನಿಂತುಹೋಯಿತು.**

**ತರುವಾಯ ಆಕೆಯು ದೇವರ ಮನುಷ್ಯನ ಹತ್ತಿರ ಬಂದು ನಡೆದದ್ದನ್ನೆಲ್ಲಾ ತಿಳಿಸಿದಳು. ಅವನು ಆಕೆಗೆ, "ಹೋಗಿ, ಎಣ್ಣೆಯನ್ನು ಮಾರಿ ಸಾಲತೀರಿಸು. ಉಳಿದ ಹಣದಿಂದ ನೀನೂ, ನಿನ್ನ ಮಕ್ಕಳು ಜೀವನಮಾಡಿರಿ" ಎಂದನು."**

ಈ ಒದಗಿಸುವಿಕೆಯ ಅದ್ಭುತದಲ್ಲಿ ಆ ಸ್ತ್ರೀಯು ನಂಬಿದಷ್ಟೇ ಹೊಂದಿಕೊಂಡಳು. ಅವಳಿಗೆ ಸಿಕ್ಕುವಷ್ಟು ಪಾತ್ರೆಗಳನ್ನು ಎರವಲು ಪಡೆ ಅವುಗಳು ಎಣ್ಣೆಯಿಂದ ತುಂಬಲ್ಪಡುವವು ಎಂದು ಹೇಳಲಾಗಿತ್ತು. ಅವಳು ನಂಬಿಕೆಯಿಂದ ಎಷ್ಟು ಪಾತ್ರೆಗಳನ್ನು ತಂದಳೋ ಅಷ್ಟು ಎಣ್ಣೆಯನ್ನು ಅವಳು ಪಡೆದಳು.

ಎರಡನೆಯ ಅರಸುಗಳ ಪುಸ್ತಕವು ಎಲೀಷನ ಕಾಲದಲ್ಲಿ ನಡೆದ ಅದ್ಭುತಗಳಿಂದ ತುಂಬಿದೆ.

ಹಳೆ ಒಡಂಬಡಿಕೆಯುದ್ದಕ್ಕೂ ಸೌಖ್ಯದ ಅದ್ಭುತಗಳ ಒಂದು ನಿರಂತರವಾದ ದಾಖಲೆಯಿದೆ.

**ಮಿರ್ಯಾಮಳ ಕುಷ್ಠ**

ಮಿರ್ಯಾಮಳು ಮೋಶೆ ಮತ್ತು ಆರೋನರ ಸಹೋದರಿಯಾಗಿದ್ದಳು. ಅವಳು ಇಸ್ರಾಯೇಲರ ನಾಯಕರಲ್ಲಿ ಒಬ್ಬಳಾಗಿದ್ದಳು. ದೇವರು ತಮ್ಮನ್ನು ಕೆಂಪು ಸಮುದ್ರದ ಮೂಲಕ ನಡೆಸಿ ತಮ್ಮ ವೈರಿಗಳನ್ನು ನಾಶಮಾಡಿದ್ದಕ್ಕಾಗಿ ಆತನನ್ನು ಜನರು ಸ್ತುತಿಸುವಂತೆ ಅವಳು ಮುನ್ನಡೆಸಿದಳು. ಆದರೆ ಮಿರ್ಯಾಮಳು, ಆರೋನನೊಂದಿಗೆ ಸೇರಿ ಒಂದು ಖಂಡಿಸುವ ಆತ್ಮನಿಗೆ ಅವಕಾಶವನ್ನು ಕೊಟ್ಟು ಎರಡು ರೀತಿಯಲ್ಲಿ ಮೋಶೆಯ ವಿರುದ್ಧ ಮಾತನಾಡಿದಳು. ಒಂದು ಅವನು ಇಥಿಯೋಪ್ಯದ ಸ್ತ್ರೀಯನ್ನು ಮದುವೆಯಾಗಿದ್ದರ ಬಗ್ಗೆ. ಇನ್ನೊಂದು ಇಸ್ರಾಯೇಲರ ಮೇಲೆ ಅವನಿಗಿದ್ದ ನಾಯಕತ್ವದ ಬಗ್ಗೆ.

ಅವಳ ಪಾಪದ ಪರಿಣಾಮವಾಗಿ ಅವಳಿಗೆ ಕುಷ್ಠವು ಬಂದಿತೆಂದು ಸತ್ಯವೇದವು ಸ್ಪಷ್ಟಪಡಿಸುತ್ತದೆ.

**ಅರಣ್ಯ 12:1,2 ಮೋಶೆ ಕೂಷ್ ದೇಶದ ಸ್ತ್ರೀಯನ್ನು ಮದುವೆ ಮಾಡಿಕೊಂಡಿದ್ದನು. ಆ ಕಾರಣಕ್ಕಾಗಿ ಮಿರ್ಯಾಮಳೂ ಹಾಗೂ ಆರೋನನೂ ಅವನಿಗೆ ವಿರುದ್ಧವಾಗಿ ಮಾತನಾಡಿದರು.** 2**ಅವರು, "ಯೆಹೋವನು ಮೋಶೆಯ ಮೂಲಕವಾಗಿ ಮಾತ್ರವೇ ಮಾತನಾಡುತ್ತಾನೋ? ನಮ್ಮ ಮೂಲಕ ಆತನು ಮಾತನಾಡುವುದಿಲ್ಲವೇ?" ಎಂದು ಹೇಳಿಕೊಂಡರು. ಅವರು ಆಡಿದ ಮಾತು ಯೆಹೋವನಿಗೆ ಕೇಳಿಸಿತು.**

**ವಚನಗಳು. 9,10 ನಂತರ ಯೆಹೋವನು ಅವರ ಮೇಲೆ ಕೋಪಗೊಂಡು ಹೊರಟುಹೋದನು. ಆ ಮೇಘವು ದೇವದರ್ಶನದ ಗುಡಾರದ ಮೇಲಿನಿಂದ ಬಿಟ್ಟುಹೋಯಿತು. ಪಕ್ಕನೆ ಮಿರ್ಯಾಮಳಿಗೆ ತೊನ್ನು ಹತ್ತಿದ್ದರಿಂದ ಆಕೆಯ ಚರ್ಮ ಹಿಮದಂತೆ ಬೆಳ್ಳಗಾಗಿ ಹೋಯಿತು. ಆರೋನನು ಮಿರ್ಯಾಮಳನ್ನು ನೋಡಿದಾಗ ಆಕೆಗೆ ತೊನ್ನು ಹಿಡಿದಿದೆ ಎಂದು ತಿಳಿದುಕೊಂಡನು.**

ಮಿರ್ಯಾಮಳು ಮತ್ತು ಆರೋನರು ಕುಷ್ಠವನ್ನು ನೋಡಿದಾಗ ಏನು ಮಾಡಿದರು ? ಆರೋನನು ತಕ್ಷಣವೇ ತಮ್ಮ ಪಾಪವನ್ನು ಅರಿಕೆ ಮಾಡಿ ಅವಳ ಸೌಖ್ಯಕ್ಕಾಗಿ ಪ್ರಾರ್ಥಿಸಿದನು.

**ಅರಣ್ಯ 12:11-14 ಆಗ ಆರೋನನು ಮೋಶೆಗೆ, "ನನ್ನ ಒಡೆಯನೇ, ನಾವು ವಿವೇಕವಿಲ್ಲದೆ ನಡೆದು ದೋಷಿಗಳಾದೆವು. ಈ ದೋಷದ ಫಲವನ್ನು ನಾವು ಅನುಭವಿಸುವಂತೆ ಮಾಡಬೇಡ ಎಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ಅರ್ಧ ಮಾಂಸ ಕೊಳೆತುಹೋಗಿ ಹುಟ್ಟಿದ ಶಿಶುವಿನಂತೆ ಈಕೆ ಆಗಬಾರದು" ಎಂದು ಬೇಡಿದನು. ಆಗ ಮೋಶೆ ಯೆಹೋವನಿಗೆ, "ದೇವಾ, ಆಕೆಯನ್ನು ವಾಸಿಮಾಡಬೇಕೆಂದು ಬೇಡುತ್ತೇನೆ" ಎಂದು ಮೊರೆಯಿಟ್ಟನು.**

**ಅದಕ್ಕೆ ಯೆಹೋವನು ಮೋಶೆಗೆ, "ಆಕೆಯ ತಂದೆ ಆಕೆಯ ಮುಖದ ಮೇಲೆ ಉಗುಳಿದರೆ, ಆಕೆ ಏಳು ದಿನ ನಾಚಿಕೆಯಿಂದ ಮರೆಯಾಗುತ್ತಿದ್ದಳಲ್ಲವೇ? ಹಾಗಾದರೆ ಆಕೆ ಏಳು ದಿನ ಪಾಳೆಯದ ಹೊರಗೆ ಇರಲಿ, ತರುವಾಯ ನೀನು ಆಕೆಯನ್ನು ಪಾಳೆಯದೊಳಗೆ ಸೇರಿಸಿಕೊಳ್ಳಬಹುದು" ಎಂದು ಉತ್ತರಕೊಟ್ಟನು.."**

ನಾಮಾನನ ಕುಷ್ಟ

ನಾಮಾನನ ಕುಷ್ಟರೋಗವು ಸೌಖ್ಯವಾದದ್ದು ಹಳೆ ಒಡಂಬಡಿಕೆಯಲ್ಲಿರುವ ಒಂದು ಅತ್ಯಂತ ಆಸಕ್ತಿಕರವಾದ ಅದ್ಭುತಗಳಲ್ಲಿ ಒಂದಾಗಿದೆ. ಎಲೀಷನು ಯಾಕೆ ಅವನನ್ನು ಕಾಣಲು ನಿರಾಕರಿಸಿದನು ಮತ್ತು ತನ್ನ ಸೇವಕನ ಮೂಲಕ ಯೊರ್ದಾನ್ ನದಿಯಲ್ಲಿ ಏಳು ಬಾರಿ ಮುಳುಗಬೇಕೆಂದು ಹೇಳಿ ಕಳುಹಿಸಿದನು ?

ನಾಮಾನನು ಮಹಾಪುರುಷನೂ ಸನ್ಮಾನಯೋಗ್ಯನೂ ಪರಾಕ್ರಮಶಾಲಿಯೂ ಆಗಿದ್ದನೆಂದು ನಮಗೆ ತಿಳಿದಿದೆ. ಅವನು ಸಿರಿಯಾ ದೇಶದ ಸೇನಾಧಿಪತಿಯಾಗಿದ್ದನು ಮತ್ತು ಅವನ ಸಲುವಾಗಿ ಯೆಹೋವನು ಸಿರಿಯನ್ ಸೇನೆಗೆ ಜಯವನ್ನು ಕೊಟ್ಟಿದ್ದರು.

**2 ಅರಸು 5:1 ಅರಾಮ್ಯರ ಅರಸನಿಗೆ ನಾಮಾನನೆಂಬ ಒಬ್ಬ ಸೇನಾಧಿಪತಿಯಿದ್ದನು. ಯೆಹೋವನು ಇವನ ಮುಖಾಂತರವಾಗಿ ಅರಾಮ್ಯರಿಗೆ ಜಯವನ್ನು ಅನುಗ್ರಹಿಸಿದ್ದದರಿಂದ ಅರಸನು ಇವನನ್ನು ಮಹಾ ಪುರುಷನೆಂದೂ ಸನ್ಮಾನಯೋಗ್ಯನೆಂದೂ ಗೌರವಿಸುತ್ತಿದ್ದನು. ಆದರೆ ಪರಾಕ್ರಮಶಾಲಿಯಾದ ಇವನು ಕುಷ್ಠರೋಗಿಯಾಗಿದ್ದನು.**

ನಾಮಾನನ ಹೆಂಡತಿಗೆ ಇಸ್ರಾಯೇಲಿನ ಒಬ್ಬ ಗುಲಾಮ ಹುಡುಗಿಯಿದ್ದಳು. ಅವಳಿಗೆ ಇಸ್ರಾಯೇಲಿನ ಪ್ರವಾದಿಯ ಬಗ್ಗೆ ಮತ್ತು ಅವನ ಮಹಾ ಶಕ್ತಿಯ ಬಗ್ಗೆ ತಿಳಿದಿತ್ತು.

**2 ಅರಸು 5:3 ಆಕೆಯು ಒಂದು ದಿನ ತನ್ನ ಯಜಮಾನಿಯ ಬಳಿ, "ನಮ್ಮ ದಣಿಯು ಸಮಾರ್ಯದಲ್ಲಿರುವ ಪ್ರವಾದಿಯ ಹತ್ತಿರ ಇದ್ದಿದ್ದರೆ ಎಷ್ಟೋ ಒಳ್ಳೆಯದಾಗುತ್ತಿತ್ತು. ಅವನು ನನ್ನ ಯಜಮಾನನನ್ನು ಕುಷ್ಠರೋಗದಿಂದ ವಾಸಿಮಾಡುತ್ತಿದ್ದನು" ಎಂದು ಹೇಳಿದಳು.**

ನಾಮಾನನು ತನ್ನ ರಾಜನ ಬಳಿಗೆ ಹೋಗಿ ಇಸ್ರಾಯೇಲಿನ ಪ್ರವಾದಿಯ ಬಳಿಗೆ ಹೋಗಲು ಅನಮತಿಯನ್ನು ಪಡೆದುಕೊಂಡನು. ಆದರೆ ಅವನು ಸಿರಿಯಾ ದೇಶದ ರಾಜನಿಂದ ಶಿಫಾರಸ್ಸು ಪತ್ರವನ್ನು ಇಸ್ರಾಯೇಲಿನ

ರಾಜನಿಗೆ ಕೊಟ್ಟಾಗ ಅವನು ಯದ್ಧಕ್ಕೆ ಕಾರಣವನ್ನು ಹುಡುಕುತ್ತಿದ್ದಾರೆಂದು ನೆನೆಸಿಕೊಂಡನು. ಹೇಗೋ ಎಲೀಷನು ನಾಮಾನನ ಬಗ್ಗೆ ಕೇಳಿಸಿಕೊಂಡನು ಮತ್ತು ಅವನನ್ನು ಕರೆಕಳುಹಿಸಿದನು.

**2 ಅರಸು 5:8-12 ಇಸ್ರಾಯೇಲರ ಅರಸನು ತನ್ನ ಬಟ್ಟೆಗಳನ್ನು ಹರಿದುಕೊಂಡನೆಂಬುದನ್ನು ದೇವರ ಮನುಷ್ಯನಾದ ಎಲೀಷನು ಕೇಳಿ ದೂತರ ಮುಖಾಂತರವಾಗಿ ಅವನಿಗೆ, "ನೀನು, ನಿನ್ನ ಬಟ್ಟೆಗಳನ್ನು ಹರಿದುಕೊಂಡದ್ದೇಕೆ? ಅವನನ್ನು ನನ್ನ ಬಳಿಗೆ ಕಳುಹಿಸು, ಇಸ್ರಾಯೇಲರಲ್ಲಿ ಒಬ್ಬ ಪ್ರವಾದಿಯಿದ್ದಾನೆಂಬುದು ಅವನಿಗೆ ಗೊತ್ತಾಗಲಿ" ಎಂದು ಹೇಳಿ ಕಳುಹಿಸಿದನು. ನಾಮಾನನು ರಥಾಶ್ವಗಳೊಡನೆ ಎಲೀಷನ ಮನೆಗೆ ಹೋಗಿ ಬಾಗಿಲಿನ ಮುಂದೆ ನಿಂತನು. ಎಲೀಷನು ಅವನಿಗೆ, "ಹೋಗಿ ಯೊರ್ದನ್ ನದಿಯಲ್ಲಿ ಏಳು ಸಾರಿ ಮುಳುಗಿ ಬಾ, ಆಗ ನಿನ್ನ ದೇಹವು ಮೊದಲಿನಂತಾಗುವುದು; ನೀನು ಶುದ್ಧನಾಗುವಿ" ಎಂದು ಹೇಳಿ ಕಳುಹಿಸಿದನು.**

**ನಾಮಾನನು ಇದನ್ನು ಕೇಳಿ ಕೋಪಗೊಂಡು, "ಇದೇನು? ಅವನು ಹೊರಗೆ ಬಂದು ತನ್ನ ದೇವರಾದ ಯೆಹೋವನ ಹೆಸರನ್ನು ಹೇಳಿ ನನ್ನ ಕುಷ್ಠದ ಮೇಲೆ ಕೈಯಾಡಿಸಿ ವಾಸಿಮಾಡುವನೆಂದು ನೆನಸಿದೆನು. ದಮಸ್ಕದ ಅಬಾನಾ ಮತ್ತು ಪರ್ಪರ್ ಎಂಬ ನದಿಗಳು ಇಸ್ರಾಯೇಲರ ಎಲ್ಲಾ ನದಿ ಹೊಳೆಹಳ್ಳಗಳಿಗಿಂತ ಉತ್ತಮವಾಗಿವೆಯಲ್ಲವೋ? ಸ್ನಾನದಿಂದ ಶುದ್ಧನಾಗುವ ಹಾಗಿದ್ದರೆ ನಾನು ಅವುಗಳಲ್ಲಿಯೇ ಸ್ನಾನಮಾಡಬಹುದಲ್ಲವೇ?" ಎಂದು ಹೇಳಿ, ಬಲು ಸಿಟ್ಟಿನಿಂದ ಹೊರಟುಹೋದನು.**

ನಾಮಾನನು ತನ್ನ ಮನಸ್ಸಿನಲ್ಲಿ ಹೀಗೆ ಸೌಖ್ಯವಾಗುವೆನು ಎಂಬ ಒಂದು ಚಿತ್ರಣವನ್ನು ಹೊಂದಿದ್ದನು. ತನ್ನ ಸ್ಥಾನಕ್ಕೆ ಅರ್ಹವಾದ ಒಂದು ಚಿತ್ರಣವನ್ನು ಹೊಂದಿದ್ದನು. ಅವನಿಗೆ ತನ್ನದೇ ಆದ ಒಂದು ಮಾದರಿಯಿತ್ತು ಆದರೆ ದೇವರು ಎಲೀಷನೊಂದಿಗೆ ಮಾತನಾಡಿ ಅವನು ಏನು ಮಾಡಬೇಕು ಮತ್ತು ಏನು ಹೇಳಬೇಕೆಂದು ಅವನಿಗೆ ತಿಳಿಸಿದರು.

**ವ. 13,14 ಆಗ ಅವನ ಸೇವಕರು ಹತ್ತಿರ ಬಂದು ಅವನಿಗೆ, "ಸ್ವಾಮೀ, ಪ್ರವಾದಿಯು ಒಂದು ಕಠಿಣವಾದ ಕೆಲಸ ಹೇಳಿದ್ದರೆ, ಅದನ್ನು ನೀವು ಮಾಡುತ್ತಿದ್ದಿರಲ್ಲವೇ? ಹಾಗಾದರೆ 'ಸ್ನಾನಮಾಡಿ ಶುದ್ಧನಾಗು' ಎಂದು ಹೇಳಿದರೆ ಯಾಕೆ ಅದರಂತೆ ಮಾಡಬಾರದು" ಎಂದು ಹೇಳಿದರು. ಅವನು ಯೊರ್ದನ್ ನದಿಗೆ ಹೋಗಿ ಏಳು ಸಾರಿ ಅದರಲ್ಲಿ ಮುಳುಗಿ ಎದ್ದನು. ಕೂಡಲೆ ದೇವರ ಮನುಷ್ಯನ ಮಾತಿಗನುಸಾರವಾಗಿ ಅವನ ದೇಹವು ಕೂಸಿನ ದೇಹದಂತೆ ಶುದ್ಧವಾಯಿತು.**

ನಾಮಾನನು ಪ್ರವಾದಿಯ ಬಳಿಗೆ ಬರುವಷ್ಟು ನಂಬಿಕೆಯನ್ನು ಹೊಂದಿದ್ದರೂ ತನ್ನ ಜೊತೆಗಾರರೊಂದಿಗೆ ಗರ್ವದಲ್ಲಿ ಬಂದಿದ್ದಿರಬಹುದು. ಅವನು ಪ್ರವಾದಿಗೆ ಕ್ರಯ ಕೊಡುವುದಕ್ಕಾಗಿ ಸಂಪತ್ತನ್ನು ತಂದಿದ್ದನೆಂಬುದು ನಮಗೆ ಗೊತ್ತಿದೆ.

**2 ಅರಸು 5:5b ನಾಮಾನನು ಹತ್ತು ತಲಾಂತು ಬೆಳ್ಳಿ, (ಮೂವತ್ತು ಸಾವಿರ) ಆರು ಸಾವಿರ ತೊಲೆ ಬಂಗಾರ, ಹತ್ತು ಜೊತೆ ಬಟ್ಟೆಗಳು ಇವುಗಳನ್ನು ತೆಗೆದುಕೊಂಡು...**

ಅವನು ಸೌಖ್ಯವಾಗಬೇಕಿದ್ದರೆ ವಿಧೇಯನಾಗುವುದು ಮತ್ತು ತನ್ನನ್ನು ತಗ್ಗಿಸಿಕೊಳ್ಳುವುದು ಅವನಿಗೆ ಅವಶ್ಯಕವಾಗಿತ್ತು. ಅದರ ಪರಿಣಾಮವಾಗಿ ಅವನು ದೈಹಿಕವಾಗಿ ಪೂರ್ಣ ಸೌಖ್ಯವನ್ನು ಹೊಂದಿದ್ದು ಮಾತ್ರವಲ್ಲದೆ ಅದಕ್ಕಿಂತಲೂ ಮುಖ್ಯವಾಗಿ ಯೆಹೋವನನ್ನು ತನ್ನ ದೇವರಾಗಿ ಸ್ವೀಕರಿಸಿಕೊಂಡನು.

**2 ಅರಸು 5:17 ಆಗ ನಾಮಾನನು ಎಲೀಷನಿಗೆ, "ನೀನು ನನ್ನ ಕಾಣಿಕೆಯನ್ನು ಸ್ವೀಕರಿಸದಿದ್ದರೆ, ನಿನ್ನ ಸೇವಕನಾದ ನನಗೆ ಎರಡು ಹೇಸರಗತ್ತೆಯ ಹೊರುವಷ್ಟು ಮಣ್ಣನ್ನು ಕೊಡಿಸಬೇಕೆಂದು ಬೇಡಿಕೊಳ್ಳುತ್ತೇನೆ. ನಾನು ಇನ್ನು ಮುಂದೆ ಎಲ್ಲಾ ದೇವತೆಗಳನ್ನು ಬಿಟ್ಟು ಯೆಹೋವನೊಬ್ಬನಿಗೇ ಸರ್ವಾಂಗಹೋಮಯಜ್ಞಗಳನ್ನು ಸಮರ್ಪಿಸಬೇಕೆಂದಿದ್ದೇನೆ.**

ರಾಜನಾದ ಹಿಜ್ಕೀಯನು

ಹಿಜ್ಕೀಯನು ಯೆಹೂದದ ರಾಜನಾದಾಗ ಇಸ್ರಾಯೇಲ್ ದೇಶವು ವಿಭಜನೆಯಾಗಿತ್ತು. ಸತ್ಯವೇದವು ಅವನ ಆಳ್ವಿಕೆಯ ಒಂದು ಅತ್ಯಂತ ವಿವರಣಾತ್ಮಕ ಸಾರಾಂಶವನ್ನು ಕೊಡುತ್ತದೆ.

**2 ಅರಸು 18:5-7a ಹಿಜ್ಕೀಯನು ಇಸ್ರಾಯೇಲರ ದೇವರಾದ ಯೆಹೋವನಲ್ಲಿ ಭರವಸವಿಟ್ಟಿದ್ದನು. ಯೆಹೂದ್ಯರಲ್ಲಿ ಇವನಿಗೆ ಸಮಾನನಾದ ಅರಸನು ಹಿಂದೆಯೂ ಇರಲಿಲ್ಲ, ಆಮೇಲೂ ಇರಲಿಲ್ಲ. ಇದಲ್ಲದೆ, ಇವನು ಯೆಹೋವನನ್ನೇ ಆಶ್ರಯಿಸಿಕೊಂಡು ಆತನನ್ನು ಬಿಡದೆ ಹಿಂಬಾಲಿಸಿ, ಮೋಶೆಯ ಮುಖಾಂತರವಾಗಿ ಅನುಗ್ರಹಿಸಿದ ಆಜ್ಞೆಗಳನ್ನು ಕೈಕೊಂಡು ನಡೆದನು. ಯೆಹೋವನು ಹಿಜ್ಕೀಯನ ಸಂಗಡ ಇದ್ದುದರಿಂದ ಅವನು ಹೋದ ಎಲ್ಲ ಕಡೆ ಅಭಿವೃದ್ಧಿ ಹೊಂದಿದನು. ಇವನು ಅಶ್ಶೂರದ ಅರಸನಿಗೆ ವಿರುದ್ಧವಾಗಿ ದಂಗೆ ಎದ್ದು ಸ್ವತಂತ್ರನಾದನು.**

ಅವನು ರಾಜನಾಗಿ ಹದಿನಾಲ್ಕು ವರ್ಷಗಳು ಕಳೆದ ನಂತರ ಮರಣಕರವಾದ ರೋಗವೊಂದು ಅವನನ್ನು ಬಾಧಿಸಿತು.

**2 ಅರಸು 20:1 ಆ ಕಾಲದಲ್ಲಿ ಹಿಜ್ಕೀಯನನ್ನು ಮರಣಕರವಾದ ರೋಗವು ಬಾಧಿಸಿತು. ಆಗ ಆಮೋಚನ ಮಗನೂ ಪ್ರವಾದಿಯೂ ಆದ ಯೆಶಾಯನು ಅವನ ಬಳಿಗೆ ಬಂದು ಅವನಿಗೆ, "'ನಿನ್ನ ಮನೆಯ ಕಾರ್ಯಗಳನ್ನೆಲ್ಲಾ ಕ್ರಮಪಡಿಸಿ ಸೂಕ್ತಮಾಡಿಕೋ, ನೀನು ಮರಣ ಹೊಂದುವಿ' ಎಂದು ಯೆಹೋವನು ತಿಳಿಸಿದ್ದಾನೆ" ಎಂದು ಹೇಳಿದನು.**

ತಾನು ಸಾಯಲಿದ್ದೇನೆ ಎಂದು ಹಿಜ್ಕೀಯನು ಕೇಳಿದಾಗ ತಾನು ಹೇಗೆ ಒಬ್ಬ ಒಳ್ಳೆಯ ರಾಜನಾಗಿ ಸತ್ಯತೆಯಲ್ಲಿಯೂ ನಿಷ್ಠೆಯಲ್ಲಿಯೂ ಯೆಹೋವನ ಮುಂದೆ ನಡೆದುಕೊಂಡನೆಂಬುದನ್ನು ಆತನಿಗೆ ನೆನಪಿಸಿದನು.

**2 ಅರಸು 20:2,3** ಇದನ್ನು ಕೇಳಿದೊಡನೆ ಹಿಜ್ಕೀಯನು ಗೋಡೆಯ ಕಡೆಗೆ ತಿರುಗಿಕೊಂಡು ಯೆಹೋವನಿಗೆ ಪ್ರಾರ್ಥಿಸಿ, ಹೀಗೆ ವಿಜ್ಞಾಪಿಸಿಕೊಂಡನು. "ಯೆಹೋವನೇ, ದಯವಿಟ್ಟು ನಾನು ನಂಬಿಗಸ್ತನಾಗಿಯೂ ನಿನಗೆ, ಪ್ರಾಮಾಣಿಕನಾಗಿಯೂ ಶ್ರದ್ಧೆಯಿಂದಲೂ ನಡೆದುಕೊಂಡು ನಿನ್ನ ದೃಷ್ಟಿಯಲ್ಲಿ ಒಳ್ಳೆಯವನಾಗಿದ್ದುದನ್ನು ನೆನಪುಮಾಡಿಕೋ" ಎಂದು ಹೇಳಿ ಹಿಜ್ಕೀಯನು ಬಹಳವಾಗಿ ಕಣ್ಣೀರಿಟ್ಟು ಪ್ರಾರ್ಥಿಸಿದನು.

ವ. **4-6** ಯೆಶಾಯನು ಅರಮನೆಯ ಮಧ್ಯಪ್ರಾಕಾರವನ್ನು ದಾಟುವುದಕ್ಕೆ ಮೊದಲು ಯೆಹೋವನಿಂದ ಅಪ್ಪಣೆಯಾಯಿತು. "ನೀನು ಹಿಂದಿರುಗಿ ಹೋಗಿ, ನನ್ನ ಜನಗಳ ಪ್ರಭುವಾಗಿರುವ ಹಿಜ್ಕೀಯನಿಗೆ, 'ನಿನ್ನ ಪಿತೃವಾದ ದಾವೀದನ ದೇವರಾದ ಯೆಹೋವನು ಹೇಳಿದ್ದೇನೆಂದರೆ, ನಾನು ನಿನ್ನ ಪ್ರಾರ್ಥನೆಯನ್ನು ಕೇಳಿದ್ದೇನೆ, ನಿನ್ನ ಕಣ್ಣೀರನ್ನು ನೋಡಿದ್ದೇನೆ. ನೀನು ಗುಣಹೊಂದಿ ಮೂರನೆಯ ದಿನ ನನ್ನ ಆಲಯಕ್ಕೆ ಬರುವೆ. ಇದಲ್ಲದೆ, ನಿನ್ನ ಆಯುಷ್ಯಕ್ಕೆ ಹದಿನೈದು ವರ್ಷಗಳನ್ನು ಹೆಚ್ಚಿಸಿದ್ದೇನೆ, ನಿನ್ನನ್ನೂ, ಈ ಪಟ್ಟಣವನ್ನೂ ಅಶ್ಶೂರನ ಅರಸನ ಕೈಗೆ ಬೀಳದಂತೆ ತಪ್ಪಿಸುವೆನು. ನನಗಾಗಿಯೂ, ನನ್ನ ಸೇವಕನಾದ ದಾವೀದನಿಗಾಗಿಯೂ ಈ ಪಟ್ಟಣವನ್ನು ಉಳಿಸಿ ಕಾಪಾಡುವೆನು' ಎಂಬುದಾಗಿ ನಿನ್ನ ಪೂರ್ವಿಕನಾದ ದಾವೀದನ ದೇವರಾಗಿರುವ ಯೆಹೋವನು ಹೇಳುತ್ತಾನೆ ಎಂದು ತಿಳಿಸು" ಅಂದನು. "

ಕೇವಲ ಯೆಶಾಯನ ಮೂಲಕ ಬಂದ ದೇವರ ವಾಕ್ಯದಲ್ಲಿ ಹಿಜ್ಕೀಯನಿಗೆ ತೃಪ್ತಿಯಾಗಲಿಲ್ಲ ಅವನಿಗೆ ಒಂದು ಸೂಚಕ ಬೇಕಾಗಿತ್ತು. ನಂತರ ಅವನು ಇನ್ನೂ ಅಸಾಧ್ಯವಾದ ಸೂಚಕವನ್ನು ಬಯಸಿದನು. ಹಿಜ್ಕೀಯನು ತನ್ನಿಂದ ಬಯಸಿದ್ದೆಲ್ಲವನ್ನೂ ದೇವರು ಮಾಡಿದರು - ಸೂರ್ಯನ ನೆರಳು ಸಹ ನೆರಳು ಗಡಿಯಾರದಲ್ಲಿ ಹಿಂದಕ್ಕೆ ಹೋಗುವಂತೆ ಮಾಡಿದರು.

**2 ಅರಸು 20:8-11** ಹಿಜ್ಕೀಯನು ಯೆಶಾಯನಿಗೆ, "ಯೆಹೋವನು ನನ್ನನ್ನು ಗುಣಪಡಿಸುವನೆಂಬುವುದಕ್ಕೂ, ನಾನು ಮೂರನೆಯ ದಿನ ಆತನ ಆಲಯಕ್ಕೆ ಹೋಗುವೆನೆಂಬುವುದಕ್ಕೂ, ಇರುವ ಗುರುತು ಏನು?" ಎಂದು ಕೇಳಿದನು. ಅದಕ್ಕೆ ಯೆಶಾಯನು, "ಯೆಹೋವನು ನುಡಿದಿದ್ದನ್ನು ನೆರವೇರಿಸುವನು ಎಂಬುದಕ್ಕೆ ಯೆಹೋವನಿಂದ ಉಂಟಾದ ಗುರುತು ಕೇಳುತ್ತಿರುವೆ, ಹಾಗಾದರೆ ನೆರಳು ಹತ್ತು ಮೆಟ್ಟಲು ಮುಂದೆ ಹೋಗಬೇಕೋ? ಹಿಂದೆ ಬರಬೇಕೋ? ಹೇಳು ಹಿಂದೆ ಹೋಗಬೇಕೋ ಹೇಳು?" ಎಂದು ಕೇಳಿದನು.

ಅದಕ್ಕೆ ಹಿಜ್ಕೀಯನು, "ನೆರಳು ಮುಂದೆ ಹೋಗುವುದು ಸುಲಭ, ಆದುದರಿಂದ ಹತ್ತು ಮೆಟ್ಟಲು ಹಿಂದೆ ಬರುವಂತೆ ಮಾಡು" ಎಂದು ಹೇಳಿದನು. ಆಗ ಪ್ರವಾದಿಯಾದ ಯೆಶಾಯನು ಯೆಹೋವನಿಗೆ ಮೊರೆಯಿಡಲು ಆತನು ಆಹಾಜನ ಗಡಿಯಾರದ ವೇಳಾನುಸಾರ ಹತ್ತು ಮೆಟ್ಟಲು ಮುಂದೆ ಹೋಗಿದ್ದ ನೆರಳನ್ನು ಹತ್ತು ಮೆಟ್ಟಲು ಹಿಂದೆ ಬರುವಂತೆ ಮಾಡಿದನು.

## ಸಾರಾಂಶ

ಹೀಗೆ ಹಳೆ ಒಡಂಬಡಿಕೆಯಲ್ಲಿ ಅನೇಕ ಅದ್ಭುತಗಳು ಹೇಳಲ್ಪಟ್ಟಿವೆ. ಸತ್ತ ಜನರು ಜೀವಂತವಾಗಿ ಎಬ್ಬಿಸಲ್ಪಟ್ಟರು. ಜನರು ಅಲೌಕಿಕವಾಗಿ ಸಂರಕ್ಷಿಸಲ್ಪಟ್ಟರು, ಉದಾಹರಣೆಗೆ ಸಿಂಹದ ಗವಿಯಲ್ಲಿ ಹಾಕಲ್ಪಟ್ಟ ದಾನಿಯೇಲ, ಬೆಂಕಿ ಕೊಂಡದಲ್ಲಿ ಹಾಕಲ್ಪಟ್ಟ ಮೂರು ಪುರುಷರು. ದೇವರು ಶತ್ರುಗಳ ಕಣ್ಣುಗಳನ್ನು ಕುರುಡಾಗಿ ಮಾಡುವುದರ ಮೂಲಕ ಮಾಡಿದ ಅದ್ಭುತವಾದ ಸಂರಕ್ಷಣೆಯಿದೆ. ಒದಗಿಸುವಿಕೆಯ ಅದ್ಭುತಗಳಿವೆ. ಒಮ್ಮೆ ದೇವರು ಕತ್ತೆಯ ಮೂಲಕವೂ ಮಾತನಾಡಿದರು.

ಹಳೆ ಒಡಂಬಡಿಕೆಯು ಅದ್ಭುತಗಳ ಒಂದು ಪುಸ್ತಕವಾಗಿದೆ. ಹಳೆ ಒಡಂಬಡಿಕೆಯ ದೇವರು ಅದ್ಭುತವನ್ನು ನಡೆಸುವ ದೇವರಾಗಿದ್ದಾರೆ. ದೇವರಲ್ಲಿ ನಂಬಿದ ಜನರು ಅಲೌಕಿಕವಾದ ಶಕ್ತಿಯಲ್ಲಿ ನಡೆದರು.

ದೇವರು ನಿನ್ನೆ ಇದ್ದ ಹಾಗೆಯೇ ಇಂದಿಗೂ ಎಂದೆಂದಿಗೂ ಇರುವರು ಎಂದು ಇಬ್ರಿಯರಿಗೆ ಬರೆದ ಪುಸ್ತಕದ ಲೇಖಕನು ಹೇಳುತ್ತಾನೆ.

**ಇಬ್ರಿಯ 13:8 ಯೇಸು ಕ್ರಿಸ್ತನು ನಿನ್ನೇ ಇದ್ದ ಹಾಗೆಯೇ, ಈ ಹೊತ್ತು, ನಿರಂತರವೂ ಇರುವನು.**

ಆತನು ಈಗಲೂ ಸಹ ಅದ್ಭುತ ನಡೆಸುವ ದೇವರಾಗಿದ್ದಾರೆ. ಈಗಲೂ ನಾವು ನಂಬುವುದಾದರೆ ನಮ್ಮ ಕಾಲದ ಸವಾಲುಗಳನ್ನು ಎದುರಿಸಲು ಆತನ ಅಲೌಕಿಕ ಶಕ್ತಿಯಲ್ಲಿ ನಾವು ನಡೆಯಬಹುದು.

## ವಿಮರ್ಶೆಗಾಗಿ ಪ್ರಶ್ನೆಗಳು

1. ಇಸ್ರಾಯೇಲರು ಮರುಭೂಮಿಯ ಮೂಲಕ ಪ್ರಯಾಣಿಸುವಾಗ ದೇವರ ಅಲೌಕಿಕ ಆಶೀರ್ವಾದದ ಸ್ಪಷ್ಟ ಚಿಹ್ನೆಗಳಾಗಿದ್ದ ಕೆಲವು ಅದ್ಭುತಗಳನ್ನು ಪಟ್ಟಿ ಮಾಡಿರಿ.

2. ಎಲೀಯನ ಜೀವನ ಮತ್ತು ಸೇವೆಯಲ್ಲಿ ಸಂಭವಿಸಿದ ಕೆಲವು ಅಲೌಕಿಕ ಅದ್ಭುತಗಳನ್ನು ಪಟ್ಟಿ ಮಾಡಿರಿ.

3. ಎಲೀಷನ ಜೀವನ ಮತ್ತು ಸೇವೆಯಲ್ಲಿ ಸಂಭವಿಸಿದ ಕೆಲವು ಅಲೌಕಿಕ ಅದ್ಭುತಗಳನ್ನು ಪಟ್ಟಿ ಮಾಡಿರಿ.

## ಪಾಠ ಹತ್ತು

# *ನಮ್ಮ ಬಾಧ್ಯತೆಯನ್ನು ಸ್ವಾಧೀನಪಡಿಸಿಕೊಳ್ಳುವುದು*

### ಕಾನಾನಿಗೆ ಪ್ರವೇಶ

---

ದಿನವಾದ ನಂತರ ದಿನ ಇಸ್ರಾಯೇಲ್ ಜನರು ತಮ್ಮ ಪರವಾಗಿ ಕಾರ್ಯ ಮಾಡಿದ ದೇವರ ಶಕ್ತಿಯನ್ನು ಕಂಡರು ಮತ್ತು ಅನುಭವಿಸಿದರು. ಕೊನೆಗೂ ಅವರು ಕಾನಾನಿನ ಗಡಿಪ್ರದೇಶಕ್ಕೆ ಬಂದು ಅಲ್ಲಿ ಪಾಳೆಯವನ್ನು ಹಾಕಿಕೊಂಡರು.

### ಗಡಿಭಾಗದಲ್ಲಿ

ದೇವರು ಅವರಿಗೆ ಕಾನಾನ್ ದೇಶವನ್ನು ಕೊಟ್ಟಿದ್ದರು ಆದರೆ ಅವರು ಅದರೊಳಕ್ಕೆ ಹೋಗಿ ಅದನ್ನು ವಶಪಡಿಸಿಕೊಳ್ಳಬೇಕಾಗಿತ್ತು.

**ಅರಣ್ಯ 13:1-3 ಯೆಹೋವನು ಮೋಶೆಯ ಸಂಗಡ ಮಾತನಾಡಿ ಹೇಳಿದ್ದೇನೆಂದರೆ, "ನಾನು ಇಸ್ರಾಯೇಲರಿಗೆ ಕೊಡುವ ಕಾನಾನ್ ದೇಶವನ್ನು ಸಂಚರಿಸಿ ನೋಡುವುದಕ್ಕೆ ನೀನು ಒಂದೊಂದು ಕುಲದಿಂದ ಒಬ್ಬೊಬ್ಬ ಮುಖ್ಯಸ್ಥನನ್ನು ಕಳುಹಿಸಬೇಕು" ಎಂದು ಆಜ್ಞಾಪಿಸಿದನು. ಯೆಹೋವನ ಅಪ್ಪಣೆಯ ಮೇರೆಗೆ ಮೋಶೆ ಪಾರಾನ್ ಅರಣ್ಯದಿಂದ ಇಸ್ರಾಯೇಲರ ಮುಖ್ಯಸ್ಥರನ್ನು ಕಳುಹಿಸಿದನು.**

### ವರದಿ

ದೇವರು ಆಜ್ಞಾಪಿಸಿದಂತೆಯೇ, ಮೋಶೆಯು ಪ್ರತಿಯೊಂದು ಗೋತ್ರದಿಂದ ಒಬ್ಬ ನಾಯಕನನ್ನು ಆರಿಸಿಕೊಂಡು ದೇಶವನ್ನು ಬೇಹುಗಾರಿಕೆ ಮಾಡಲು ಕಳುಹಿಸಿದನು. ಅವರು ದೇಶವನ್ನೆಲ್ಲಾ ಸುತ್ತುತ್ತಾ ನಾಲ್ವತ್ತು ದಿನಗಳನ್ನು ಕಳೆದ ನಂತರ ತಮ್ಮ ವರದಿಗಳನ್ನು ಮೋಶೆ ಮತ್ತು ಇಸ್ರಾಯೇಲ್ ಜನರಿಗೆ ತಿಳಿಸಿದರು,

**ಅರಣ್ಯ 13:27-29 ಅವರು ಮೋಶೆಗೆ, "ನೀನು ನಮ್ಮನ್ನು ಕಳುಹಿಸಿದ ದೇಶಕ್ಕೆ ಹೋದೆವು; ಅದು ನಿಜವಾಗಿಯೂ ಹಾಲೂ ಮತ್ತು ಜೇನೂ ಹರಿಯುವ ದೇಶವೇ; ಅಲ್ಲಿನ ಹಣ್ಣುಗಳು ಇಂಥವು. ಆದರೆ ಆ ದೇಶದ ನಿವಾಸಿಗಳು ಬಲಿಷ್ಠರು: ಅವರಿರುವ ಪಟ್ಟಣಗಳು ದೊಡ್ಡದಾಗಿಯೂ, ಕೋಟೆ ಕೊತ್ತಲುಗಳುಳ್ಳದ್ದಾಗಿಯೂ ಇದೆ. ಅದಲ್ಲದೆ ಅಲ್ಲಿ ಉನ್ನತ ಪುರುಷರನ್ನು ನೋಡಿದೆವು. ದಕ್ಷಿಣ ಸೀಮೆಯಲ್ಲಿ ಅಮಾಲೇಕ್ಯರು, ಬೆಟ್ಟದ ಸೀಮೆಯಲ್ಲಿ ಹಿತ್ತಿಯರು, ಯೆಬೂಸಿಯರು, ಅಮೋರಿಯರು ಸಮುದ್ರತೀರದಲ್ಲಿ ಮತ್ತು ಯೊರ್ದನ್ ಹೊಳೆಯ ಬಳಿಯಲ್ಲಿ ಕಾನಾನ್ಯರೂ ವಾಸವಾಗಿದ್ದಾರೆ" ಎಂದು ತಿಳಿಸಿದರು."**

ಕಾಲೇಬನು ಯೆಹೋವನು ಮಾಡಿದ್ದೆಲ್ಲವನ್ನೂ ನೆನೆಪಿಸಿಕೊಂಡನು.

**ಅರಣ್ಯ 13:30** ಇಸ್ರಾಯೇಲರು ಮೋಶೆಗೆ ವಿರುದ್ಧವಾಗಿ ಗುಣುಗುಟ್ಟಿದರು. ಕಾಲೇಬನು ಅವರನ್ನು ಸುಮ್ಮನಿರಿಸಿ, "ನಾವು ನಿರ್ಭಯವಾಗಿ ಆ ಬೆಟ್ಟದ ಸೀಮೆಗೆ ಹತ್ತಿಹೋಗಿ ಅದನ್ನು ಸ್ವಾಧೀನಪಡಿಸಿಕೊಳ್ಳೋಣ. ಅದನ್ನು ಜಯಿಸಲು ನಾವು ಶಕ್ತರಾಗಿದ್ದೇವೆ" ಎಂದು ಹೇಳಿದನು.

ಗೂಢಾಚಾರರಲ್ಲಿ ಹತ್ತು ಜನರು ಹೀಗೆ ಪ್ರತ್ಯುತ್ತರ ಕೊಟ್ಟರು,

**ಅರಣ್ಯ 13:31b-33** "ಆ ಜನರು ನಮಗಿಂತ ಬಲಿಷ್ಠರು; ಅವರನ್ನು ಜಯಿಸಲು ನಮಗೆ ಶಕ್ತಿ ಸಾಲುವುದಿಲ್ಲ" ಎಂದು ಹೇಳಿದರು. ಅದಲ್ಲದೆ ಇವರು ತಾವು ಸಂಚರಿಸಿ ನೋಡಿದ ದೇಶದ ವಿಷಯವಾಗಿ ಇಸ್ರಾಯೇಲರಿಗೆ ಅಶುಭ ಸಮಾಚಾರವನ್ನು ಹೇಳುವವರಾಗಿ, "ನಾವು ಸಂಚರಿಸಿ ನೋಡಿದ ದೇಶವು ತನ್ನಲ್ಲಿ ವಾಸಿಸುವವರನ್ನು ನುಂಗಿಬಿಡುತ್ತದೆ. ಅದಲ್ಲದೆ ನಾವು ಅದರಲ್ಲಿ ನೋಡಿದ ಜನರೆಲ್ಲರೂ ಬಹಳ ಎತ್ತರವಾದವರು. 33ಅಲ್ಲಿ ನೆಫೀಲಿಯರನ್ನು ಅಂದರೆ ನೆಫೀಲಿಯ ವಂಶದವರಾದ ಉನ್ನತ ಪುರುಷರನ್ನು ನೋಡಿದೆವು. ನಾವು ಅವರ ಮುಂದೆ ಮಿಡತೆಗಳಂತೆ ಇದ್ದೇವೆ ಎಂದು ತಿಳಿದುಕೊಂಡೆವು. ಅವರಿಗೂ ನಾವು ಹಾಗೆಯೇ ಕಾಣಿಸಿದೆವು" ಎಂದು ಹೇಳಿದರು"

ನಂತರ ಯೆಹೋಶುವ ಮತ್ತು ಕಾಲೇಬರು ಯೆಹೋವನ ಮೇಲೆ ನಂಬಿಕೆಯಿಡುವಂತೆ ಜನರನ್ನು ಪ್ರೋತ್ಸಾಹಿಸಿದರು.

**ಅರಣ್ಯ 14:6-11** ಕಾನಾನ್ ದೇಶವನ್ನು ಸಂಚರಿಸಿ ನೋಡಿದವರಲ್ಲಿ ನೂನನ ಮಗನಾದ ಯೆಹೋಶುವನು ಮತ್ತು ಯೆಫುನ್ನೆಯ ಮಗನಾದ ಕಾಲೇಬನೂ ತಮ್ಮ ಬಟ್ಟೆಗಳನ್ನು ಹರಿದುಕೊಂಡರು. 7ಅವರು ಇಸ್ರಾಯೇಲರ ಸರ್ವಸಮೂಹದವರಿಗೆ ಹೀಗೆ ಹೇಳಿದರು, "ನಾವು ಸಂಚರಿಸಿ ನೋಡಿದ ದೇಶವು ಅತ್ಯುತ್ತಮವಾದದ್ದು. 8ಯೆಹೋವನು ನಮ್ಮನ್ನು ಮೆಚ್ಚಿಕೊಂಡರೆ ಹಾಲೂ, ಜೇನೂ ಹರಿಯುವ ಆ ದೇಶಕ್ಕೆ ನಮ್ಮನ್ನು ಸೇರಿಸಿ ಅದನ್ನು ನಮ್ಮ ಸ್ವಾಧೀನಕ್ಕೆ ಕೊಡುವನು. 9ಹೀಗಿರುವುದರಿಂದ ಯೆಹೋವನಿಗೆ ತಿರುಗಿಬೀಳಬೇಡಿರಿ. ಇದಲ್ಲದೆ ಆ ದೇಶದ ಜನರಿಗೆ ಭಯಪಡಬೇಡಿರಿ. ಏಕೆಂದರೆ ನಾವು ಅವರನ್ನು ಸುಲಭವಾಗಿ ಜಯಿಸಿಬಿಡುವೆವು. ಅವರಿಗೆ ನೆರಳಾಗಿದ್ದ ದೇವರು ಅವರನ್ನು ಕೈಬಿಟ್ಟಿದ್ದಾನೆ, ಯೆಹೋವನು ನಮ್ಮ ಸಂಗಡ ಇದ್ದಾನೆ. ಅವರಿಗೆ ಭಯಪಡಬೇಡಿರಿ" ಎಂದರು"

**ಆಯ್ಕೆ**

ಜನರು ಈಗ ಒಂದು ಆಯ್ಕೆ ಮಾಡಬೇಕಾಗಿತ್ತು? ಅವರು ಯಾರನ್ನು ನಂಬಬೇಕು ? ಅವರ ನಂಬಿಕೆ ಎಲ್ಲಿತ್ತು ?

ಅವರು ದೇವರ ಶಕ್ತಿಯ ಮೇಲೆ ನಂಬಲು ಆಯ್ಕೆ ಮಾಡಲಿಲ್ಲ. ಬದಲಾಗಿ ಅವರು ನಂಬಿದವರನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದರು. ಅವರು ಮೋಶೆ, ಕಾಲೇಬ ಮತ್ತು ಯೆಹೋಶುವರನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದರು. ಅವರು ಈಜಿಪ್ಪಿನ ಗುಲಾಮತನಕ್ಕೆ ಹಿಂದಿರುಗಬೇಕೆಂದಿದ್ದರು.

**ಅರಣ್ಯ 14:10,11 ಆದರೆ ಜನಸಮೂಹದವರೆಲ್ಲರೂ ಅವರ ಮಾತುಗಳನ್ನು ಕೇಳದೆ, ಅವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಹೇಳಿಕೊಳ್ಳುತ್ತಿರುವಾಗ, ಯೆಹೋವನ ತೇಜಸ್ಸು ದೇವದರ್ಶನದ ಗುಡಾರದಲ್ಲಿ ಪ್ರಕಾಶಿಸಿ ಇಸ್ರಾಯೇಲರೆಲ್ಲರಿಗೂ ಕಾಣಿಸಿಕೊಂಡಿತು.**

**ಯೆಹೋವನು ಮೋಶೆಗೆ, "ಈ ಜನರು ಇನ್ನು ಎಷ್ಟರವರೆಗೆ ನನ್ನನ್ನು ಅಲಕ್ಷ್ಯ ಮಾಡುವರು? ನಾನು ನಡೆಸಿದ ಎಲ್ಲಾ ಮಹತ್ಕಾರ್ಯಗಳನ್ನು ಇವರು ಪ್ರತ್ಯಕ್ಷವಾಗಿ ನೋಡಿದಾಗ್ಯೂ ಇನ್ನು ಎಷ್ಟು ದಿನ ನನ್ನನ್ನು ನಂಬದೆ ಇರುವರು?"**

ನಾಲ್ವತ್ತು ವರ್ಷಗಳ ಕಾಲ, ದೇವರು ತನ್ನ ಮೇಲೆ ಮತ್ತು ತನ್ನ ಶಕ್ತಿಯ ಮೇಲೆ ನಂಬಿಕೆಯಿಡಲು ನಿರಾಕರಿಸಿದವರು ಮರಣ ಹೊಂದುವವರೆಗೆ ಅವರು ಮರುಭೂಮಿಯಲ್ಲಿ ಅಲೆದಾಡುವಂತೆ ಬಿಟ್ಟನು. ಯೆಹೋಶುವ ಮತ್ತು ಕಾಲೇಬರು ಮರಣ ಹೊಂದಲಿಲ್ಲ. ಮತ್ತೊಮ್ಮೆ ಅವರು ಕಾನಾನಿನ ಗಡಿಭಾಗಕ್ಕೆ ಬಂದರು. ಈಗ ಯೆಹೋಶುವನು ಅಧಿಕಾರದಲ್ಲಿದ್ದನು.

ಇಂದಿಗೂ ಸಹ, ಅನೇಕ ವಿಶ್ವಾಸಿಗಳು ದೇವರು ಅವರನ್ನು ನಡೆಸುವಂತೆ ಮಾಡಲು ಮನಸ್ಸಿಲ್ಲದವರಾಗಿದ್ದಾರೆ. ಅವರಲ್ಲಿ ನಂಬಿಕೆಯ ಕೊರತೆಯಿದೆ ಅಥವಾ ದೇವರ ಚಿತ್ತದ ಅರಿವಿಲ್ಲ ಮತ್ತು ಅವರು ದೇವರನ್ನು ಹೆಚ್ಚಾಗಿ ತಿಳಿದುಕೊಳ್ಳುವಂತೆ ಅವರನ್ನು ತಮ್ಮ ಸ್ವಂತ ಮರುಭೂಮಿಯಲ್ಲಿ ಅಲೆದಾಡಲು  ದೇವರು ಬಿಡುತ್ತಾರೆ. ನಂತರ ಆತನು ಅವರನ್ನು ಮತ್ತೆ ಅದೇ ಆಯ್ಕೆಯ ಸ್ಥಳಕ್ಕೆ ತರುತ್ತಾರೆ.

ನಾವು ನಂಬಿಕೆಯಲ್ಲಿ ಕಾರ್ಯ ನಿರ್ವಹಿಸಲು ಕಲಿತುಕೊಳ್ಳಬೇಕು ಮತ್ತು ಯೆಹೋವನು ನಮಗೆ ಕೊಟ್ಟಿರುವದನ್ನು ನಂಬಿಕೆಯಿಂದ ತೆಗೆದುಕೊಳ್ಳಬೇಕು. ಅಪನಂಬಿಕೆಯು ಯಾವಾಗಲೂ ಸೋಲನ್ನು ತರುತ್ತದೆ.

### ಎರಡನೆಯ ಬಾರಿ

ಮತ್ತೊಮ್ಮೆ ಇಸ್ರಾಯೇಲ್ ಜನರು ಕಾನಾನ್ ದೇಶದ ಗಡಿಭಾಗಕ್ಕೆ ಬಂದಿದ್ದರು ಮತ್ತು ದೇವರು ಯೆಹೋಶುವನಿಗೆ ಹೇಳಿದರು,

**ಯಶಸ್ವಿಯನ್ನು ನಿಶ್ಚಯವಾಗಿ ಹೊಂದಲು:**

*ಧರ್ಮಶಾಸ್ತ್ರವನ್ನು ರಾತ್ರಿ ಹಗಲು ಧ್ಯಾನಿಸು*

*ಬಲವಾಗಿರು*

*ಭಯಪಡಬೇಡ,*

*ನಿರಾಶೆಗೊಳ್ಳಬೇಡ*

**ಆಗ ನಿನಗೆ ಒಳ್ಳೆಯ ಯಶಸ್ಸು ಸಿಕ್ಕುವುದು.**

**ಯೆಹೋಶುವ 1:6-9** ನಿನ್ನನ್ನು ಕೈಬಿಡುವುದಿಲ್ಲ, ತೊರೆಯುವುದಿಲ್ಲ, ಸ್ಥಿರಚಿತ್ತನಾಗಿರು, ಧೈರ್ಯದಿಂದಿರು. ಏಕೆಂದರೆ ನಾನು ಈ ಜನರ ಪೂರ್ವಿಕರಿಗೆ ವಾಗ್ದಾನಮಾಡಿದ ದೇಶವನ್ನು ಇವರಿಗಾಗಿ ನೀನೇ ಸ್ವಾಧೀನಮಾಡಿಕೊಡಬೇಕು. ನನ್ನ ಸೇವಕನಾದ ಮೋಶೆಯು ನಿನಗೆ ಬೋಧಿಸಿ ಆಜ್ಞಾಪಿಸಿದ ಧರ್ಮೋಪದೇಶವನ್ನೆಲ್ಲಾ ಕೈಕೊಂಡು ನಡೆಯುವುದರಲ್ಲಿ ಸ್ಥಿರಚಿತ್ತನಾಗಿರು, ಪೂರ್ಣಧೈರ್ಯದಿಂದಿರು. ಅದನ್ನು ಬಿಟ್ಟು ಎಡಕ್ಕಾಗಲಿ ಬಲಕ್ಕಾಗಲಿ ತಿರುಗಬೇಡ, ಆಗ ನೀನು ಸಫಲನಾಗುವಿ. ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವುದನ್ನೆಲ್ಲಾ ಕೈಕೊಂಡು ನಡೆ. ಆಗ ನಿನ್ನ ಕಾರ್ಯವೆಲ್ಲವೂ, ನೀನು ಹೋಗುವ ಮಾರ್ಗಗಳು ಸಫಲವಾಗುವುದು. ನೀನು ಚುರುಕು ಬುದ್ಧಿಯ ವ್ಯಕ್ತಿಯಾಗಿ ರೂಪಾಂತರ ಹೊಂದುವಿ. ನಾನು ನಿನಗೆ ಆಜ್ಞಾಪಿಸಿದಂತೆ ಸ್ಥಿರಚಿತ್ತನಾಗಿರು, ಧೈರ್ಯದಿಂದಿರು, ಅಂಜಬೇಡ, ಕಳವಳಗೊಳ್ಳಬೇಡ. ನೀನು ಹೋಗುವಲ್ಲೆಲ್ಲಾ ನಿನ್ನ ದೇವರಾದ ಯೆಹೋವನು ನಿನ್ನ ಸಂಗಡ ಇರುವನು" ಎಂದು ಹೇಳಿದನು."

ಯೆಹೋಶುವನು ಎರಡು ಗೂಢಾಚಾರರನ್ನು ಕಳುಹಿಸಿದನು, ಮತ್ತು ಯೆರಿಕೋ ದೇಶದ ರಾಜನಿಗೆ ಅವರು ಬಂದಿರುವುದು ಗೊತ್ತಾಯಿತು. ಆದರೆ ಆ ಪಟ್ಟಣದ ಪೌಳಿಗೋಡೆಯ ಮೇಲೆ ವಾಸವಾಗಿದ್ದ ವೇಶ್ಯೆಯಾದ ರಾಹಾಬಳು ಅವರನ್ನು ಬಚ್ಚಿಟ್ಟು ಕಿಟಕಿಯ ಮೂಲಕ ಹಗ್ಗದಿಂದ ಕೆಳಗಿಳಿಸಿ ತಪ್ಪಿಸಿಕೊಳ್ಳಲು ಬಿಟ್ಟಳು. ಆದರೆ ರಾಹಾಬಳು ಅವರಿಗೆ ಹೇಳಿದ ಕೆಲವು ಮಾತುಗಳನ್ನು ಗಮನಿಸಿರಿ.

**ಯೆಹೋಶುವ 2:9-11** "ಯೆಹೋವನು ಈ ದೇಶವನ್ನು ನಿಮಗೆ ಕೊಟ್ಟಿದ್ದಾನೆಂದು ನಾನು ಬಲ್ಲೆನು. ನಿಮ್ಮ ವಿಷಯದಲ್ಲಿ ನಮಗೆ ಮಹಾಭಯವುಂಟಾಗಿದೆ; ದೇಶದ ನಿವಾಸಿಗಳೆಲ್ಲರೂ ಕಂಗೆಟ್ಟುಹೋಗಿದ್ದಾರೆ. ನೀವು ಐಗುಪ್ತದಿಂದ ಹೊರಟು ಬಂದ ಮೇಲೆ ಯೆಹೋವನು ನಿಮ್ಮ ಮುಂದೆ ಕೆಂಪುಸಮುದ್ರವನ್ನು ಬತ್ತಿಸಿಬಿಟ್ಟಿದ್ದನ್ನೂ, ನೀವು ಯೊರ್ದನಿನ ಆಚೆಯಲ್ಲಿರುವ ಸೀಹೋನ್ ಮತ್ತು ಓಗ್ ಎಂಬ ಅಮೋರಿಯರ ಅರಸರಿಬ್ಬರನ್ನು ನಾಶಮಾಡಿದ್ದನ್ನೂ ಕೇಳಿ ನಮ್ಮ ಎದೆ ಒಡೆದು ಹೋಯಿತು; ನಿಮ್ಮನ್ನು ಎದುರಿಸುವ ಧೈರ್ಯವು ಯಾರಿಗೂ ಇಲ್ಲ. ನಿಮ್ಮ ದೇವರಾದ ಯೆಹೋವನೊಬ್ಬನೇ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ದೇವರು.

ಶತ್ರುವಿಗೆ ಅವರ ಶಕ್ತಿಯು ತಿಳಿದಿತ್ತು. ಅದು ಅವರ ಸೈನಿಕರ ಸಂಖ್ಯೆಯಲ್ಲಿ ಇರಲಿಲ್ಲ, ಅವರ ಯೆಹೋವನಲ್ಲಿತ್ತು. ದೇವರು ಅವರ ಪರವಾಗಿ ಈ ಹಿಂದೆ ಏನು ಮಾಡಿದ್ದರೆಂಬುದನ್ನು ಶತ್ರುಗಳು ತಿಳಿದಿದ್ದರು.

ಈ ಎರಡು ಗೂಢಾಚಾರರು ತಮ್ಮ ವರದಿಯನ್ನು ತಂದರು,

**ಯೆಹೋಶುವ 2:24** ಇದಲ್ಲದೆ ಅವರು "ಯೆಹೋಶುವನಿಗೆ ನಿಶ್ಚಯವಾಗಿ ಯೆಹೋವನು ಆ ದೇಶವನ್ನೆಲ್ಲಾ ನಮ್ಮ ಕೈಗೆ ಒಪ್ಪಿಸಿ ಕೊಟ್ಟಿದ್ದಾನೆ; ಅದರ ನಿವಾಸಿಗಳೆಲ್ಲಾ ನಮ್ಮ ನಿಮಿತ್ತ ನಡುಗುತ್ತಾ ಕಂಗೆಟ್ಟು ಹೋಗಿದ್ದಾರೆ" ಎಂದು ತಿಳಿಸಿದರು.''

## ಯೊರ್ದಾನ್ ನದಿಯನ್ನು ದಾಟಿದ್ದು

ಅದು ಸುಗ್ಗಿಯ ಕಾಲವಾಗಿತ್ತು ಮತ್ತು ಯೊರ್ದಾನ್ ನದಿಯು ದಡಮೀರಿ ಹರಿಯುತ್ತಿತ್ತು. ಆದರೆ ದೇವರ ಜನರಿಗೆ ಇದೊಂದು ಅಡ್ಡಿಯಾಗಿರಲಿಲ್ಲ. ಯೆಹೋಶುವನು ಅವರಿಗೆ ತಮ್ಮನ್ನು ಶುದ್ಧಪಡಿಸಿಕೊಳ್ಳಲು - ತಮ್ಮನ್ನು ಪವಿತ್ರರನ್ನಾಗಿ ಮಾಡಿಕೊಳ್ಳಲು - ಹೇಳಿದನು ಮತ್ತು ಮರುದಿನ ದೇವರು ಅದ್ಭುತಗಳನ್ನು ನಡೆಸುವುದನ್ನು ಅವರು ನೋಡುವರು ಎಂದು ಹೇಳಿದನು.

**ಯೆಹೋಶುವ 3:5 ಇದಲ್ಲದೆ ಯೆಹೋಶುವನು ಜನರಿಗೆ "ನಿಮ್ಮನ್ನು ಶುದ್ಧಮಾಡಿಕೊಳ್ಳಿರಿ; ಯೆಹೋವನು ನಾಳೆ ನಿಮ್ಮ ಮಧ್ಯದಲ್ಲಿ ಅದ್ಭುತಗಳನ್ನು ನಡಿಸುವನು" ಎಂದು ಹೇಳಿದನು."**

ಏನಾಯಿತು ? ಯಾಜಕರು ಮಂಜೂಷವನ್ನು ತೆಗೆದುಕೊಂಡರು ಮತ್ತು ಅವರ ಪಾದಗಳು ನದಿಯ ನೀರನ್ನು ಮುಟ್ಟದ ತಕ್ಷಣವೇ ನೀರು ಹಿಂದಕ್ಕೆ ಸರಿಯಿತು ಮತ್ತು ಜನರು ಒಣನೆಲದ ಮೇಲೆ ನಡೆದು ದಾಟಿದರು.

**ಯೆಹೋಶುವ 3:15,16a,17 ಮಂಜೂಷವನ್ನು ಹೊತ್ತ ಯಾಜಕರು ಯೊರ್ದನಿಗೆ ಬಂದು, ನೀರಿನಲ್ಲಿ ತಮ್ಮ ಕಾಲುಗಳನ್ನು ಇಡುತ್ತಲೇ ಸುಗ್ಗೀ ಕಾಲದಲ್ಲೆಲ್ಲಾ ದಡಮೀರಿ ಹರಿಯುತ್ತಿದ್ದ ಯೊರ್ದನ್ ನದಿಯ ನೀರು ನಿಂತುಹೋಯಿತು. ಮೇಲಿನಿಂದ ಹರಿದು ಬರುತ್ತಿದ್ದ ನೀರು ಬಹುದೂರದಲ್ಲಿದ್ದ ಚಾರೆತಾನಿನ ಹತ್ತಿರವಿರುವ ಆದಾಮ್ ಊರಿನ ತನಕ ರಾಶಿಯಾಗಿ ನಿಂತಿತು.**

**ಯೆಹೋವನ ಒಡಂಬಡಿಕೆಯ ಮಂಜೂಷವನ್ನು ಹೊತ್ತ ಯಾಜಕರು ಯೊರ್ದನಿನ ಮಧ್ಯದಲ್ಲಿ ಒಣನೆಲದ ಮೇಲೆ ನಿಂತಿದ್ದರು. ಅಷ್ಟರಲ್ಲಿ ಇಸ್ರಾಯೇಲ್ಯರೆಲ್ಲರೂ ಒಣನೆಲದ ಮೇಲೆ ನಡೆದು ಹೋದರು. ಈ ಪ್ರಕಾರ ಜನರೆಲ್ಲರೂ ಯೊರ್ದನಿನ ಆಚೆಗೆ ತಲುಪಿದರು.**

## ಬಾಧ್ಯತೆಯನ್ನು ಸ್ವಾಧೀನಪಡಿಸಿಕೊಳ್ಳಲು ಅರ್ಹತೆಗಳು

ಈ ಮಹತ್ತರವಾದ ಅದ್ಭುತಕ್ಕೆ ಅಡಿಪಾಯವೇನು ?

**ನಂಬಿಕೆಯು ಒಂದು ಕ್ರಿಯೆಯಾಗಿದೆ**

*ದೇವರು ನಮಗಾಗಿ ಅದ್ಭುತಗಳನ್ನು ಸಾಧಿಸುವುದನ್ನು ನೋಡಬೇಕಾದರೆ ನಾವು "ನಮ್ಮ ಪಾದಗಳನ್ನು ಒದ್ದೆಯಾಗಿಸಿಕೊಳ್ಳಲು" ಸಿದ್ಧರಿರಬೇಕು.*

* ಮೊದಲು, ಅವರು ದೇವರ ವಾಕ್ಯವನ್ನು ತಿಳಿದುಕೊಳ್ಳಬೇಕಾಗಿತ್ತು ಮತ್ತು ಧ್ಯಾನಿಸಬೇಕಾಗಿತ್ತು.

**ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವುದನ್ನೆಲ್ಲಾ ಕೈಕೊಂಡು ನಡೆ. ಆಗ ನಿನ್ನ ಕಾರ್ಯವೆಲ್ಲವೂ, ನೀನು ಹೋಗುವ ಮಾರ್ಗಗಳು ಸಫಲವಾಗುವುದು. ನೀನು ಚುರುಕು ಬುದ್ಧಿಯ ವ್ಯಕ್ತಿಯಾಗಿ ರೂಪಾಂತರ ಹೊಂದುವಿ. (ಯೆಹೋಶುವ 1:8).**

* ಎರಡನೆಯದಾಗಿ ಅವರು ನಂಬಿಕೆಯುಳ್ಳವರಾಗಬೇಕಿತ್ತು.

  **ನಾನು ನಿನಗೆ ಆಜ್ಞಾಪಿಸಿದಂತೆ ಸ್ಥಿರಚಿತ್ತನಾಗಿರು, ಧೈರ್ಯದಿಂದಿರು, ಅಂಜಬೇಡ, ಕಳವಳಗೊಳ್ಳಬೇಡ. ನೀನು ಹೋಗುವಲ್ಲೆಲ್ಲಾ ನಿನ್ನ ದೇವರಾದ ಯೆಹೋವನು ನಿನ್ನ ಸಂಗಡ ಇರುವನು" ಎಂದು ಹೇಳಿದನು. (ಯೆಹೋಶುವ 1:9).**

* ಮೂರನೆಯದಾಗಿ, ಅವರು ತಮ್ಮನ್ನು ಶುದ್ಧೀಕರಿಸಿಕೊಳ್ಳಬೇಕಾಗಿತ್ತು, ತಮ್ಮ ಜೀವಿತಗಳಿಂದ ಪಾಪವನ್ನು ತೆಗೆದುಹಾಕಬೇಕಾಗಿತ್ತು.
* ನಾಲ್ಕನೆಯದಾಗಿ, ಅವರು ನಂಬಿದಂತೆ ನಡೆಯಬೇಕಾಗಿತ್ತು.

ಇಂದಿಗೂ ಸಹ ಇವುಗಳು ನಾವು ನಮ್ಮ ಬಾಧ್ಯತೆಯನ್ನು ಸ್ವಾಧೀನಪಡಿಸಿಕೊಳ್ಳಲು ಇರುವ ಅರ್ಹತೆಗಳಾಗಿವೆ.

## ಯೆರಿಕೋವಿನ ಗೋಡೆಗಳು

ಇಸ್ರಾಯೇಲ್ ಜನರು ಹೋರಾಡಿ ಭೂಮಿಯನ್ನು ಭೌತಿಕವಾಗಿ ತೆಗೆದುಕೊಳ್ಳಬೇಕಾದರೂ, ದೇವರು ಯುದ್ಧಕ್ಕಾಗಿ ಒಂದು ಯೋಜನೆಯನ್ನು ಹೊಂದಿದ್ದನು. ಮಂಜೂಷವನ್ನು ಹೊತ್ತುಕೊಂಡ ಯಾಜಕರ ಹಿಂದೆ ಜನರು ಪ್ರತಿದಿನ ಆರು ದಿನಗಳ ಕಾಲ ಯೆರಿಕೊ ನಗರದ ಸುತ್ತಲೂ ಮೌನವಾಗಿ ಮೆರವಣಿಗೆ ನಡೆಸಬೇಕಾಗಿತ್ತು. ಏಳು ಯಾಜಕರು ಏಳು ಟಗರುಗಳ ಕೊಂಬುಗಳನ್ನು ಮಂಜೂಷದ ಮುಂದೆ ಊದಬೇಕಾಗಿತ್ತು. ಸೈನಿಕರು ಯಾಜಕರ ಮುಂದೆ ಮೆರವಣಿಗೆ ನಡೆಸಬೇಕಾಗಿತ್ತು.

ಏಳನೇ ದಿನ ಅವರು ಏಳು ಬಾರಿ ನಗರದ ಸುತ್ತಲೂ ಮೆರವಣಿಗೆ ನಡೆಸಬೇಕಿತ್ತು. ನಂತರ ಜೋರಾಗಿ ಕೊಂಬುಗಳನ್ನು ಊದುವರು, ಆಗ ಜನರು ಕೂಗಬೇಕಾಗಿತ್ತು, ಕೂಗಿದಾಗ ಗೋಡೆಗಳು ನೆಲಸಮವಾಗಲಿದ್ದವು.

ಜನರು ದೇವರು ಹೇಳಿದಂತೆಯೇ ಮಾಡಿದರು.

**ಯೆಹೋಶುವ 6:20b … ಪಟ್ಟಣದ ಗೋಡೆಯು ತಾನೇ ಬಿದ್ದುಹೋಯಿತು.**

## ಯುದ್ಧದ ತತ್ವಗಳು

ಆತ್ಮದಲ್ಲಿ ಯಶಸ್ವಿಯಾದ ಯುದ್ಧವನ್ನು ನಡೆಸಲು ಈ ಘಟನೆಯಿಂದ ಹಲವು ತತ್ವಗಳಿವೆ.

* ನಾವು ಶತ್ರುವಿನ ಬಲಹೀನತೆಗಳನ್ನು ಅರಿತುಕೊಳ್ಳಲು ಆತ್ಮಿಕವಾಗಿ ಪ್ರಬುದ್ಧರಾದ ಸ್ತ್ರೀ ಅಥವಾ ಪುರುಷರನ್ನು ಕಳುಹಿಸಿಕೊಡಬೇಕು.

* ನಾವು ದೇವರ ಯೋಜನೆಗಳಿಗಾಗಿ ಪ್ರಾರ್ಥಿಸಬೇಕು ಮತ್ತು ಕೇಳಿಸಿಕೊಳ್ಳಬೇಕು. (ಇತಿಹಾಸದಲ್ಲಿ ಇದೊಂದೇ ಬಾರಿ ಜನರ ಕೂಗಿಗೆ ಗೋಡೆಗಳು ನೆಲಸಮವಾದವು.)
* ಯಾಜಕರು ಪ್ರತಿದಿನ ಮಂಜೂಷವನ್ನು ಹೊತ್ತುಕೊಂಡು ಪಟ್ಟಣದ ಸುತ್ತಲೂ ನಡೆದಾಗ ಅವರು ದೇವರ ಪ್ರಸನ್ನತೆಯನ್ನು ಆ ಸನ್ನಿವೇಶದೊಳಗೆ ತಂದರು.
* ಯಾಜಕರು ಕೊಂಬುಗಳನ್ನು ಊದುವುದು ದೇವರು ಎಷ್ಟು ಶಕ್ತಿಶಾಲಿ ಎಂಬುದಕ್ಕೆ ಸಾಕ್ಷಿಯಾಗಿದೆ ಮತ್ತು ವಿಜಯ ಸಿಕ್ಕುವುದೆಂದು ಯಾಜಕರು ಪ್ರವಾದಿಸಿದ್ದಾಗಿದೆ.
* ಏಳನೆಯ ದಿನ ಏಳನೆಯ ಬಾರಿ ಸುತ್ತಿದಾಗ ಜನರು ಕೂಗಿದ್ದು ವಿಜಯದ ಒಂದು ಕೂಗಾಗಿತ್ತು - ನಂಬಿಕೆಯ ಒಂದು ಕೂಗಾಗಿತ್ತು.

## ಪಾಪವು ಸೋಲನ್ನು ತರುತ್ತದೆ

### ಆಯಿಯಲ್ಲಿ ಮೊದಲ ಯುದ್ಧ

ವಶಪಡಿಸಿಕೊಳ್ಳಬೇಕಾದ ಮುಂದಿನ ಪಟ್ಟಣವು ಆಯಿ ಆಗಿತ್ತು. ಮತ್ತೊಮ್ಮೆ ಯೆಹೋಶುವನು ಎರಡು ಗೂಢಾಚಾರರನ್ನು ಕಳುಹಿಸಿದನು. ಅವರು ತಮ್ಮ ವರದಿಗಳೊಂದಿಗೆ ಹಿಂದಿರುಗಿ ಬಂದರು.

**ಯೆಹೋಶುವ 7:3 ಹಿಂದಿರುಗಿ ಬಂದು ಯೆಹೋಶುವನಿಗೆ "ಎಲ್ಲಾ ಜನರು ಹೋಗುವುದು ಅವಶ್ಯವಿಲ್ಲ; ಎರಡು ಅಥವಾ ಮೂರು ಸಾವಿರ ಮಂದಿ ಹೋದರೆ ಸಾಕು. ಅವರೇ ಪಟ್ಟಣವನ್ನು ಜಯಿಸಬಹುದು. ಎಲ್ಲರನ್ನೂ ಕಳುಹಿಸಿ ಸುಮ್ಮನೆ ದಣಿಸುವುದೇತಕೆ? ಅವರು ಕಡಿಮೆ ಜನರಿದ್ದಾರೆ" ಎಂದು ಹೇಳಿದರು.**"

ಯೆಹೋಶುವನು ಮತ್ತು ಜನರು ಅದನ್ನು ಕೇಳಿಸಿಕೊಂಡು 3,000 ಪುರುಷರನ್ನು ಯುದ್ಧಕ್ಕೆ ಕಳುಹಿಸಿದರು.

**ಯೆಹೋಶುವ 7:4,5 ಅದರಂತೆ ಸುಮಾರು ಮೂರು ಸಾವಿರ ಮಂದಿ ಯುದ್ಧಕ್ಕೆ ಹೋದರು. ಆದರೆ ಅವರು ಆಯಿ ಊರಿನವರ ಎದುರಿನಿಂದ ಓಡಿ ಹೋಗಬೇಕಾಯಿತು. ಆಯಿ ಊರಿನವರು ಅವರನ್ನು ಊರ ಬಾಗಿಲಿನಿಂದ ಕಲ್ಲುಗಣಿಗಳವರೆಗೂ ಹಿಂದಟ್ಟಿ ಇಳಿನೆಲದಲ್ಲಿ ಅವರನ್ನು ಸೋಲಿಸಿ ಸುಮಾರು ಮೂವತ್ತಾರು ಮಂದಿಯನ್ನು ಕೊಂದುಹಾಕಿದರು. ಇದರಿಂದ ಇಸ್ರಾಯೇಲರ ಧೈರ್ಯ ಕುಂದಿಹೋಯಿತು.**

ಯೆಹೋಶುವನು ಮತ್ತು ಇಸ್ರಾಯೇಲಿನ ಹಿರಿಯರು ತಮ್ಮ ಬಟ್ಟೆಗಳನ್ನು ಹರಿದುಕೊಂಡು ಮಂಜೂಷದ ಮುಂದೆ ಅಡ್ಡಬಿದ್ದರು. "ದೇವರೇ, ಯಾಕೆ ನಮಗೆ ಹೀಗೆ ಆಗಲು ಬಿಟ್ಟೆ? (ಇದನ್ನು ಎಲ್ಲೋ ಕೇಳಿದ ಹಾಗಿದೆಯೇ?) ನಾವು ಯೊರ್ದಾನಿನ ಆಚೆ ದಡದಲ್ಲಿ ಇರಬೇಕಾಗಿತ್ತು. ನಾವು ಹೇಗೆ ಸೋಲಿಸಲ್ಪಟ್ಟಿದ್ದೇವೆಂದು ಈಗ ದೇಶದ ಜನರೆಲ್ಲರೂ ಕೇಳುತ್ತಾರೆ, ಮತ್ತು ಅವರು ನಮ್ಮನ್ನು ನಾಶಮಾಡುತ್ತಾರೆ! "

ದೇವರ ಉತ್ತರವೇನಾಗಿತ್ತು ?

**ಯೆಹೋಶುವ 7:10,11 ಆಗ ಯೆಹೋವನು ಯೆಹೋಶುವನಿಗೆ ಹೇಳಿದ್ದೇನೆಂದರೆ "ಏಳು, ನೀನು ಈ ಪ್ರಕಾರ ಬೋರಲು ಬಿದ್ದಿರುವುದೇಕೆ? ಇಸ್ರಾಯೇಲ್ಯರು ನನ್ನ ನಿಬಂಧನೆಯನ್ನು ಮೀರಿ ಪಾಪಿಷ್ಠರಾಗಿದ್ದಾರೆ. ಕೊಳ್ಳೆಯಲ್ಲಿ ಮೀಸಲಾದ ವಸ್ತುಗಳನ್ನು ಕದ್ದು ತಮ್ಮ ಸಾಮಾನುಗಳಲ್ಲಿ ಅಡಗಿಸಿಟ್ಟು ವಂಚಕರಾಗಿದ್ದಾರೆ.**

ಆಖಾನನು ಯೆಹೋವನಿಂದ ಕದ್ದುಕೊಂಡಿದ್ದನು (ನೋಡಿರಿ ಯೆಹೋಶುವ 6:19) ಮತ್ತು ಇಡೀ ಇಸ್ರಾಯೇಲ್ ದೇಶವು ಶಾಪದ ಅಡಿಯಲ್ಲಿ ಬಂದಿತು. ಇಡೀ ಜನಸಮೂಹವು ಹೊಣೆ ಹೊರುವುದರ ಒಂದು ಉದಾಹರಣೆ ಇದಾಗಿದೆ.

**ವ. 12 ಆದುದರಿಂದ ಇಸ್ರಾಯೇಲ್ಯರು ಶತ್ರುಗಳ ಮುಂದೆ ನಿಲ್ಲಲಾರದೆ ಅವರಿಗೆ ಬೆನ್ನು ತೋರಿಸಿದ್ದಾರೆ. ಅವರು ಶಾಪಗ್ರಸ್ತರೇ ಸರಿ. ಶಾಪಕ್ಕೆ ಕಾರಣವಾದವರನ್ನು ನಿಮ್ಮ ಮಧ್ಯದಿಂದ ತೆಗೆದುಹಾಕುವ ತನಕ ನಾನು ನಿಮ್ಮ ಸಂಗಡ ಬರುವುದಿಲ್ಲ."**

ನಾವು ದೇವರ ಮಾತುಗಳನ್ನು ಹೀಗೆ ಅನುವಾದಿಸಬಹುದು, "ಯೆಹೋಶುವನೇ ಎದ್ದು ನಿಲ್ಲು. ನಿನ್ನ ನಂಬಿಕೆ ಎಲ್ಲಿ ? ಇದನ್ನು ನಾನು ನಿನಗೆ ಮಾಡಲಿಲ್ಲ. ಪಾಪವಿದೆ ಮತ್ತು ಆ ಪಾಪದ ಕಾರಣದಿಂದ ಇಸ್ರಾಯೇಲ್ ಜನರು ತಮ್ಮ ಶತ್ರುಗಳ ಮುಂದೆ ಗೆಲ್ಲಲು ಆಗಲಿಲ್ಲ ! "

✳ *ನಕಾರಾತ್ಮಕ ತತ್ವಗಳು*

ಇಸ್ರಾಯೇಲರು ಆಯಿಯಲ್ಲಿ "ಕಡಿಮೆ ಜನರಿದ್ದಾರೆ" ಎಂದು ಖಚಿತವಾಗಿ ನಂಬಿದ್ದರು, ಅವರು ಯೆಹೋವನ ಯೋಜನೆಯನ್ನು ಹುಡುಕುವದರಲ್ಲಿ ಸಮಯ ಕಳೆಯಲಿಲ್ಲ. ಅವರು ಮುಂಚಿತವಾಗಿಯೇ ಆತನನ್ನು ಹುಡುಕಿದ್ದರೆ, ದೇವರು ಆ ಪಾಪವನ್ನು ತೋರಿಸಿ ಕೊಡುತ್ತಿದ್ದರು ಮತ್ತು ಈ ಸೋಲಿನಿಂದ ಅವರನ್ನು ರಕ್ಷಿಸುತ್ತಿದ್ದರು. ಅವರು ಒಂದು ರೀತಿಯಲ್ಲಿ, "ದೇವರನ್ನು ಕೇಳುವ ಅವಶ್ಯವಿಲ್ಲ, ನಾವು ಇದನ್ನು ನಿಭಾಯಿಸಬಹುದು" ಎಂದು ಹೇಳಿದಂತ್ತಿತ್ತು.

ಅವರು ತಮಗಿರುವ ಎಲ್ಲದರ ಬಗ್ಗೆ ಸಂಪೂರ್ಣ ಬದ್ಧತೆಯನ್ನು ಮಾಡಿರಲಿಲ್ಲ. ಅವರು ಕೆಲವೇ ಪುರುಷರನ್ನು ಮಾತ್ರ ಕಳುಹಿಸಿದರು, ಸೇನೆಯ ಒಂದು ಭಾಗ ಮಾತ್ರ ಯುದ್ಧಕ್ಕೆ ಹೋಗಿತ್ತು.

ಪಾಪವು ಯಾವಾಗಲೂ ಸೋಲನ್ನು ತರುತ್ತದೆ ಮತ್ತು ಪಾಪಕ್ಕೆ ಇರುವ ಏಕೈಕ ಪರಿಹಾರವೆಂದರೆ ಅದನ್ನು ಸಂಪೂರ್ಣವಾಗಿ ತೊಡೆದುಹಾಕುವುದು.

**ಆಯಿಯಲ್ಲಿ ಎರಡನೆಯ ಯುದ್ಧ**

ಪಾಳೆಯದಲ್ಲಿದ್ದ ಪಾಪವನ್ನು ತೊಡೆದುಹಾಕಿದ ನಂತರ ದೇವರು ಯೆಹೋಶುವನ ಬಳಿಗೆ ಬಂದರು.

**ಯೆಹೋಶುವ 8:1-5 ಅನಂತರ ಯೆಹೋವನು ಯೆಹೋಶುವನಿಗೆ "ಅಂಜಬೇಡ, ಕಳವಳಗೊಳ್ಳಬೇಡ; ಎದ್ದು ಭಟರೆಲ್ಲರನ್ನೂ ಕರೆದುಕೊಂಡು ಆಯಿ ಪಟ್ಟಣಕ್ಕೆ ಹೋಗು. ನೋಡು, ಆಯಿ ಎಂಬ ಊರಿನ ಅರಸ, ಪ್ರಜೆ, ನಗರ, ಸೀಮೆ ಇವುಗಳನ್ನೆಲ್ಲಾ ನಿನಗೆ ಕೊಟ್ಟಿದ್ದೇನೆ. ಯೆರಿಕೋವಿಗೂ ಅದರ ಅರಸನಿಗೂ ಮಾಡಿದಂತೆಯೇ ಆಯಿಗೂ ಅದರ ಅರಸನಿಗೂ ಮಾಡು. ಆದರೆ ಕೊಳ್ಳೆಯನ್ನೂ ಪಶುಪ್ರಾಣಿಗಳನ್ನೂ ನಿಮಗೋಸ್ಕರ ತೆಗೆದುಕೊಳ್ಳಬಹುದು. ನಿಮ್ಮಲ್ಲಿ ಕೆಲವರು ಆ ಊರಿನ ಹಿಂಬದಿಯಲ್ಲಿ ಹೊಂಚುಹಾಕಿಕೊಂಡಿರಲಿ" ಎಂದು ಆಜ್ಞಾಪಿಸಿದನು. ಅಂತೆಯೇ ಯೆಹೋಶುವನು ಎದ್ದು ಭಟರೆಲ್ಲರ ಸಹಿತವಾಗಿ ಆಯಿಗೆ ಹೋಗುವುದಕ್ಕೋಸ್ಕರ ಸಿದ್ಧನಾಗಿ ಮೂವತ್ತು ಸಾವಿರ ಯುದ್ಧವೀರರನ್ನು ಆರಿಸಿ ಅವರಿಗೆ "ನೀವು ಪಟ್ಟಣದ ಹಿಂಭಾಗದಲ್ಲಿ ಹೊಂಚುಹಾಕಿ ಕುಳಿತಿರಬೇಕು. ಪಟ್ಟಣಕ್ಕೆ ಬಹುದೂರವಾಗಿರಬೇಡಿರಿ; ಎಲ್ಲರೂ ಸಿದ್ಧವಾಗಿರಿ. ನಾನೂ ಮತ್ತು ನನ್ನ ಸಂಗಡ ಇರುವ ಜನರೆಲ್ಲರೂ ಪಟ್ಟಣದ ಸಮೀಪಕ್ಕೆ ಹೋಗುವೆವು. ಅವರು ಮೊದಲಿನಂತೆ ನಮ್ಮೊಡನೆ ಯುದ್ಧಕ್ಕೆ ಬಂದ ಕೂಡಲೆ ನಾವು ಓಡಿ ಹೋಗುವೆವು."**

ಯೆಹೋಶುವನು ಹೇಗೆ ಅವರ ಸೋಲನ್ನು ಜಯವನ್ನಾಗಿ ಮಾರ್ಪಡಿಸಿದನು ಎಂಬುದನ್ನು ಗಮನಿಸಿರಿ. "ಇವರು ಮೊದಲಿನಂತೆ ನಮಗೆ ಹೆದರಿ ಓಡಿಹೋಗುತ್ತಿದ್ದಾರೆಂದು ತಿಳಿದು ಅವರು ನಮ್ಮನ್ನು ಹಿಂದಟ್ಟುವರು."

**ಯೆಹೋಶುವ 8:6,7 "ಇವರು ಮೊದಲಿನಂತೆ ನಮಗೆ ಹೆದರಿ ಓಡಿಹೋಗುತ್ತಿದ್ದಾರೆಂದು ತಿಳಿದು ಅವರು ನಮ್ಮನ್ನು ಹಿಂದಟ್ಟುವರು; ನಾವು ಓಡುತ್ತಲೇ ಇರುವೆವು. ನಾವೂ ಅವರೂ ಪಟ್ಟಣದಿಂದ ದೂರವಾದ ಕೂಡಲೇ ನೀವು ಹೊಂಚಿ ಕುಳಿತ್ತಿದ್ದ ಸ್ಥಳದಿಂದ ಎದ್ದು ಪಟ್ಟಣದೊಳಗೆ ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳಿರಿ. ನಿಮ್ಮ ದೇವರಾದ ಯೆಹೋವನು ಅದನ್ನು ನಿಮ್ಮ ಕೈಗೆ ಒಪ್ಪಿಸುವನು."**

## ಗಿದ್ಯೋನ + ದೇವರು

ಯೆಹೋಶುವನು ತೀರಿಕೊಂಡಿದ್ದನು ಮತ್ತು ನ್ಯಾಯಸ್ಥಾಪಕರ ಪುಸ್ತಕದ ಆರನೆಯ ಅಧ್ಯಾಯವು ಬಹಳ ನಿರುತ್ಸಾಹಗೊಳಿಸುವ ವಚನಗಳಿಂದ ಪ್ರಾರಂಭಿಸುತ್ತದೆ. ದೇವರು ಆರಿಸಿಕೊಂಡ ಕುಲವು, ಇಡೀ ಲೋಕಕ್ಕೆ ಆತನನ್ನು ಪ್ರತಿನಿಧಿಸಬೇಕಾದ ಜನರು, ಆಹಾರವಿಲ್ಲದೆ ಗವಿಗಳಲ್ಲಿ ವಾಸವಾಗಿದ್ದರು.

**ನ್ಯಾಯಸ್ಥಾಪಕರು 6:1,2,6 ಇಸ್ರಾಯೇಲರು ತಿರುಗಿ ಯೆಹೋವನ ದೃಷ್ಟಿಯಲ್ಲಿ ದ್ರೋಹಿಗಳಾದ್ದರಿಂದ ಆತನು ಅವರನ್ನು ಏಳು ವರ್ಷಗಳ ಕಾಲ ಮಿದ್ಯಾನ್ಯರ ಕೈಗೆ ಒಪ್ಪಿಸಿದನು. ಮಿದ್ಯಾನ್ಯರ ಹಸ್ತವು ಬಲಗೊಂಡಿದ್ದರಿಂದ ಇಸ್ರಾಯೇಲರು ಅವರಿಗೆ ಹೆದರಿ ಪರ್ವತಗಳಲ್ಲಿ ಗುಹೆಗಳನ್ನು, ಕಂದರಗಳನ್ನು ಮಾಡಿಕೊಂಡು ಅದರಲ್ಲಿ ವಾಸಿಸುತ್ತಿದ್ದರು.**

**ಇಸ್ರಾಯೇಲರು ಮಿದ್ಯಾನ್ಯರ ದೆಸೆಯಿಂದ ಬಹಳವಾಗಿ ಕುಗ್ಗಿಹೋಗಿ ಯೆಹೋವನಿಗೆ ಮೊರೆಯಿಟ್ಟರು.**

ಸತ್ಯವೇದವು ಅವರು ಈ ರೀತಿಯ ಪರಿಸ್ಥಿತಿಯಲ್ಲಿರಲು ಕಾರಣವೇನು ಎಂಬುದರ ಬಗ್ಗೆ ನಾವು ಸ್ವಲ್ಪವೂ ಸಂದೇಹಪಡದಂತೆ ಉತ್ತರವನ್ನು ಕೊಡುತ್ತದೆ - *ಅವರು ಯೆಹೋವನ ದೃಷ್ಟಿಯಲ್ಲಿ ದ್ರೋಹಿಗಳಾಗಿದ್ದರು.*

ಅವರು ಸರಿಯಾದ ಒಂದು ವಿಷಯನ್ನೂ ಸಹ ಮಾಡಿದರು - ಅವರು *ಯೆಹೋವನಿಗೆ ಮೊರೆಯಿಟ್ಟರು.*

ಗಿದ್ಯೋನನ ಕರೆ

ಗಿದ್ಯೋನನು ನಮಗೆ ಎಂತಹ ಪ್ರೋತ್ಸಾಹಕರ ವ್ಯಕ್ತಿಯಾಗಿದ್ದಾನೆ! ಅವನು ತನ್ನ ಕುಟುಂಬದಲ್ಲಿ ಎಲ್ಲರಿಗಿಂತ ಕಿರಿಯವನಾಗಿದ್ದನು. ಅವನ ತಂದೆ ಬಾಳನನ್ನು ಪೂಜಿಸುತ್ತಿದ್ದನು. ಅವನು ಸೋಲಿನಲ್ಲಿ ಜೀವಿಸುತ್ತಿದ್ದ ದೇಶದವನು. ಆದರೂ, ತನ್ನ ಜನರನ್ನು ಬಿಡುಗಡೆಗೊಳಿಸಲು ದೇವರು ಅವನನ್ನು ಕರೆದರು.

ಗಿದ್ಯೋನನು ಮಿದ್ಯಾನ್ಯರಿಗೆ ಗೊತ್ತಾಗದ ಹಾಗೆ ಅಲ್ಲಿನ ದ್ರಾಕ್ಷಿಯ ಆಲೆಯ ಮರೆಯಲ್ಲಿ ಗೋದಿಯನ್ನು ಬಡಿಯುತ್ತಿದ್ದನು. ಆಗ ಯೆಹೋವನ ದೂತನು ಅವನ ಬಳಿಗೆ ಬಂದನು.

**ನ್ಯಾಯಸ್ಥಾಪಕರು 6:12 ಯೆಹೋವನ ದೂತನು ಗಿದ್ಯೋನನಿಗೆ ಪ್ರತ್ಯಕ್ಷನಾಗಿ ಅವನಿಗೆ, "ಪರಾಕ್ರಮಶಾಲಿಯೇ, ಯೆಹೋವನು ನಿನ್ನ ಸಂಗಡ ಇದ್ದಾನೆ" ಅಂದನು.**

ಯಜ್ಞವೇದಿಯು ವಿಗ್ರಹಸ್ತಂಭವು ನಾಶವಾದದ್ದು

ನಂತರ ಗಿದ್ಯೋನನು ಯೆಹೋವನ ಆಜ್ಞೆಗೆ ಅನುಸಾರವಾಗಿ ಹತ್ತು ಯೌವ್ವನಸ್ಥರ ಸಹಾಯದಿಂದ ಬಾಳನ ಯಜ್ಞವೇದಿಯನ್ನು ಕೆಡವಿ ಅದರ ಸಮೀಪದಲ್ಲಿದ್ದ ವಿಗ್ರಹಸ್ತಂಭವನ್ನು ಕಡಿದು ಹಾಕಿ ಹೊಸದಾಗಿ ಕಟ್ಟಿದ ಯಜ್ಞವೇದಿಯ ಮೇಲೆ ಎರಡನೆಯ ಹೋರಿಯನ್ನು ಯಜ್ಞ ಅರ್ಪಿಸಿದನು.

ಗಿದ್ಯೋನ ಮತ್ತು ಅವನ ಸಂಗಡಿಗರು ತಮ್ಮ ಜನರ ಪಾಪದ ಸಂಕೇತವನ್ನು ನಾಶಪಡಿಸಿದರು ಮತ್ತು ಯೆಹೋವನ ಬಳಿಗೆ ಬರಲು ಅವಕಾಶವಾಗುವಂತೆ ಯಜ್ಞವನ್ನು ಅರ್ಪಿಸಿದರು.

ನಂತರ ಏನಾಯಿತೆಂದು ಸತ್ಯವೇದವು ಹೇಳುತ್ತದೆ?

**ನ್ಯಾಯಸ್ಥಾಪಕರು 6:34,35 ಆಗ ಗಿದ್ಯೋನನ ಮೇಲೆ ಯೆಹೋವನ ಆತ್ಮವು ಬಂದಿತ್ತು. ಅವನು ಕೊಂಬನ್ನು ಊದಲು ಅಬೀಯೆಜೆರನ ಗೋತ್ರದವರು ಬಂದು ಅವನನ್ನು ಹಿಂಬಾಲಿಸಿದರು. ಅವನು ಉಳಿದ ಮನಸ್ಸೆಯವರ ಬಳಿಗೆ ದೂತರನ್ನು ಕಳುಹಿಸಲಾಗಿ ಅವರೂ ಕೂಡಿಬಂದರು. ಆಶೇರ್, ಜೆಬುಲೂನ್, ನಫ್ತಾಲಿ ಕುಲಗಳವರ ಬಳಿಗೆ ದೂತರನ್ನು ಕಳುಹಿಸಲು ಅವರೂ ಬಂದು ಯುದ್ಧಪ್ರಯಾಣಕ್ಕೋಸ್ಕರ ಸೇರಿಕೊಂಡರು.**

ಗಿದ್ಯೋನನ ಸೈನ್ಯ

ಗಿದ್ಯೋನನ ಜೊತೆ ಸೇರಿಕೊಳ್ಳಲು ಹಲವಾರು ಮಂದಿ ಬಂದರು ಮತ್ತು ದೇವರು ಹೀಗೆ ಹೇಳಿದರು,

**ನ್ಯಾಯಸ್ಥಾಪಕರು 7:2-4a,5-7** ಆಗ ಯೆಹೋವನು ಗಿದ್ಯೋನನಿಗೆ, "ನಿನ್ನ ಸಂಗಡ ಇರುವ ಜನರು ಹೆಚ್ಚಾಗಿದ್ದಾರೆ; ಇವರ ಕೈಗೆ ಮಿದ್ಯಾನ್ಯರನ್ನು ಒಪ್ಪಿಸುವುದು ನನಗೆ ಸರಿಯಾಗಿ ಕಾಣುವುದಿಲ್ಲ. ಒಪ್ಪಿಸಿಕೊಟ್ಟರೆ ಸ್ವಹಸ್ತದಿಂದಲೇ ನಮಗೆ ರಕ್ಷಣೆಯುಂಟಾಯಿತೆಂದು ಹೆಚ್ಚಳಪಟ್ಟು ನನ್ನನ್ನು ಅಲಕ್ಷ್ಯಮಾಡಾರು. ಆದುದರಿಂದ ಎಲ್ಲಾ ಜನರಿಗೆ ಕೇಳಿಸುವಂತೆ, 'ಧೈರ್ಯವಿಲ್ಲದವರೂ, ಅಂಜುವವರೂ ಈ ಗಿಲ್ಯಾದ್ ಪರ್ವತವನ್ನು ಬಿಟ್ಟು ಮನೆಗೆ ಹೋಗಲಿ ಎಂದು ಪ್ರಕಟಿಸು'" ಅಂದನು. ಹಾಗೆ ಮಾಡಲು ಇಪ್ಪತ್ತೆರಡು ಸಾವಿರ ಮಂದಿ ಹಿಂದಿರುಗಿ ಹೋದರು; ಹತ್ತು ಸಾವಿರ ಮಂದಿ ಉಳಿದರು.

**ಸಕಾರಾತ್ಮಕ ತತ್ವಗಳು**

*ತಮ್ಮ ರಣತಂತ್ರವನ್ನು ದೇವರಿಂದ ಪಡೆದರು*

*ಶತ್ರುಗಳ ಹಿಂದಿನ ಅನುಭವವನ್ನು ಅವರ ವಿರುದ್ಧವೇ ಬಳಸಿದನು*

**ಯೆಹೋವನು ತಿರುಗಿ ಗಿದ್ಯೋನನಿಗೆ, "ನಿನ್ನ ಬಳಿಯಲ್ಲಿರುವ ಜನರು ಇನ್ನೂ ಹೆಚ್ಚಾಗಿದ್ದಾರೆ; ನೀನು ಅವರನ್ನು ಹಳ್ಳಕ್ಕೆ ಕರೆದುಕೊಂಡು ಹೋಗು; ನಾನು, ಅಲ್ಲಿ ಈ ಜನರ ಸಂಖ್ಯೆಯನ್ನು ಕಡಿಮೆಮಾಡಿ ನಿನಗೆ ಕೊಡುವೆನು...**

**ಗಿದ್ಯೋನನು ಜನರನ್ನು ಹಳ್ಳಕ್ಕೆ ಕರೆದುಕೊಂಡು ಬಂದಾಗ ಯೆಹೋವನು ಅವನಿಗೆ, "ನಾಯಿಯಂತೆ ನೀರನ್ನು ನಾಲಿಗೆಯಿಂದ ನೆಕ್ಕುವವರನ್ನೂ, ಮೊಣಕಾಲೂರಿ ಕುಡಿಯುವವರನ್ನೂ ಬೇರೆ ಬೇರೆಯಾಗಿ ನಿಲ್ಲಿಸು" ಎಂದು ಹೇಳಿದನು. ಕೈಯಿಂದ ನೀರನ್ನು ಬಾಯಿಗೆ ತೆಗೆದುಕೊಂಡು ನೆಕ್ಕಿಕುಡಿದವರ ಸಂಖ್ಯೆ ಮುನ್ನೂರು. ಇತರ ಜನರು ಮೊಣಕಾಲೂರಿ ಕುಡಿದವರು. ಆಗ ಯೆಹೋವನು ಗಿದ್ಯೋನನಿಗೆ, "ನೀರನ್ನು ನೆಕ್ಕಿಕುಡಿದ ಆ ಮುನ್ನೂರು ಜನರಿಂದಲೇ ನಿಮಗೆ ಜಯವನ್ನುಂಟುಮಾಡಿ ಮಿದ್ಯಾನ್ಯರನ್ನು ನಿನ್ನ ಕೈಗೆ ಒಪ್ಪಿಸಿಕೊಡುವೆನು; ಉಳಿದವರು ತಮ್ಮ ತಮ್ಮ ಸ್ಥಳಗಳಿಗೆ ಹೋಗಲಿ" ಎಂದು ಆಜ್ಞಾಪಿಸಿದನು.**

ಮೊದಲು ದೇವರು ಭಯಭೀತರಾದ ಪುರುಷರನ್ನು ಸೈನ್ಯದಿಂದ ತೆಗೆದುಹಾಕಿದರು. ನಂತರ ಯುದ್ಧಕ್ಕಾಗಿ ಪೂರ್ಣ ಜಾಗ್ರತೆಯಿಂದ ಸಿದ್ಧರಿಲ್ಲದ ಜನರನ್ನು ತೆಗೆದುಹಾಕಿದರು.

## ದೇವರು ಅರ್ಥಮಾಡಿಕೊಂಡರು

ದೇವರು ಗಿದ್ಯೋನನ ಮಾನವಸಹಜ ಗುಣವನ್ನು ಅರ್ಥಮಾಡಿಕೊಂಡರು. ಅವನು ತಕ್ಷಣವೇ ಪಾಳೆಯದ ವಿರುದ್ಧ ಯುದ್ಧಕ್ಕೆ ಹೋಗಲು ದೇವರು ಹೇಳಿದರು ಆದರೆ ಒಂದು ವೇಳೆ ಅವನಿಗೆ ಭಯವಿದ್ದರೆ, ಇನ್ನೊಬ್ಬನನ್ನು ಕರೆದುಕೊಂಡು ಪಾಳೆಯದ ಹತ್ತಿರ ಬೇಹುಗಾರಿಕೆ ನಡೆಸಲು ಹೇಳಿದರು.

ಗಿದ್ಯೋನನ ಜೊತೆಗೆ ಮುನ್ನೂರು ಜನರಿದ್ದರು ಮತ್ತು ಶತ್ರು ಪಾಳೆಯದಲ್ಲಿ "ಸಮುದ್ರತೀರದ ಮರಳಿನಂತೆ" ಜನರಿದ್ದರು. ಗಿದ್ಯೋನನು ತನ್ನಲ್ಲಿಲ್ಲದ ಧೈರ್ಯವನ್ನು ಇದ್ದಂತೆ ತೋರಿಸಿಕೊಳ್ಳಲು ಹೋಗಲಿಲ್ಲ. ಅವನು ಶತ್ರುಪಾಳೆಯದ ಬಳಿ ಬೇಹುಗಾರಿಕೆ ನಡೆಸಲು ಆಯ್ಕೆ ಮಾಡಿದನು.

**ನ್ಯಾಯಸ್ಥಾಪಕರು 7:13,14 ಗಿದ್ಯೋನನು ಬಂದಾಗ ಅವರಲ್ಲೊಬ್ಬನು ತನ್ನ ಜೊತೆಗಾರನಿಗೆ ಒಂದು ಕನಸನ್ನು ತಿಳಿಸುತ್ತಿದ್ದನು. ಅವನು, "ಇಗೋ, ನಾನು ಒಂದು ಕನಸು ಕಂಡೆನು; ಅದರಲ್ಲಿ ಒಂದು ಜವೆಗೋದಿಯ ರೊಟ್ಟಿಯು ಉರುಳುತ್ತಾ ಮಿದ್ಯಾನ್ಯರ ಪಾಳೆಯದೊಳಗೆ ಬಂದು, ಒಂದು ಡೇರೆಗೆ ತಗಲಿ, ಅದನ್ನು ಬುಡಮೇಲು ಮಾಡಿ ಬೀಳಿಸಿಬಿಟ್ಟಿತು" ಎಂದು ಹೇಳಿದನು.**

**ಆಗ ಅವನ ಜೊತೆಗಾರನು, "ಇದು ಇಸ್ರಾಯೇಲನಾದ ಯೋವಾಷನ ಮಗ ಗಿದ್ಯೋನನ ಕತ್ತಿಯೇ ಹೊರತು ಮತ್ತೊಂದಲ್ಲ; ದೇವರು ಮಿದ್ಯಾನ್ಯರನ್ನೂ ಅವರ ಪಾಳೆಯಗಳನ್ನೂ ಅವನ ಕೈಗೆ ಒಪ್ಪಿಸಿಕೊಟ್ಟಿದ್ದಾನೆ" ಅಂದನು.**

## ಒಂದು ಕೊಂಬು, ಉರಿಯುವ ಪಂಜು ಇರುವ ಬರಿಕೊಡ

ದೇವರು ಹೇಳಿದಂತೆಯೇ ಗಿದ್ಯೋನನು ಪ್ರೋತ್ಸಾಹಗೊಂಡನು. ಅವನು ನಂಬಿಕೆಯಿಂದ ತುಂಬಿದ್ದ ತನ್ನ ಪುರುಷರ ಬಳಿಗೆ ಬಂದು ಹೀಗೆ ಹೇಳಿದನು,

**ನ್ಯಾಯಸ್ಥಾಪಕರು 7:15b "ಏಳಿರಿ, ಯೆಹೋವನು ಮಿದ್ಯಾನ್ಯರ ಪಾಳೆಯವನ್ನು ನಿಮ್ಮ ಕೈಗೆ ಒಪ್ಪಿಸಿದ್ದಾನೆ"**

**ನ್ಯಾಯಸ್ಥಾಪಕರು 7:16-18,20,21 ಅವನು ಆ ಮುನ್ನೂರು ಮಂದಿಯನ್ನು ಮೂರು ಗುಂಪು ಮಾಡಿ ಪ್ರತಿಯೊಬ್ಬನ ಕೈಯಲ್ಲಿ ಕೊಂಬನ್ನೂ, ಉರಿಯುವ ಪಂಜು ಇರುವ ಬರಿಕೊಡವನ್ನೂ ಕೊಟ್ಟು ಅವರಿಗೆ, "ನನ್ನನ್ನೇ ನೋಡುತ್ತಾ ನಾನು ಮಾಡುವ ಹಾಗೆ ಮಾಡಿರಿ. ನಾನು ಪಾಳೆಯದ ಅಂಚಿಗೆ ಬಂದಾಗ ಹೇಗೆ ಮಾಡುತ್ತೇನೋ ಹಾಗೆ ನೀವೂ ಮಾಡಬೇಕು. ನಾನೂ ನನ್ನ ಸಂಗಡ ಇದ್ದವರೂ ಕೊಂಬುಗಳನ್ನು ಊದಲು ನೀವೂ ಪಾಳೆಯದ ಸುತ್ತಲೂ ಕೊಂಬನ್ನು ಊದಿ, 'ಯೆಹೋವನಿಗೆ ಜಯ, ಗಿದ್ಯೋನನಿಗೆ ಜಯ ಎಂದು ಕೂಗಿರಿ'" ಎಂದು ಹೇಳಿದನು.**

**ಕೂಡಲೆ ಮೂರು ಗುಂಪಿನವರೂ ಕೊಂಬುಗಳನ್ನು ಊದಿ, ಕೊಡಗಳನ್ನು ಒಡೆದುಬಿಟ್ಟು, ಎಡಗೈಯಲ್ಲಿ ಪಂಜುಗಳನ್ನೂ ಬಲಗೈಯಲ್ಲಿ ಊದುವ ಕೊಂಬುಗಳನ್ನೂ ಹಿಡಿದು, "ಯೆಹೋವನ ಕತ್ತಿ, ಗಿದ್ಯೋನನ ಕತ್ತಿ ಆಗಿದೆ" ಎಂದು ಕೂಗಿ ಪಾಳೆಯದ ಸುತ್ತಲೂ ತಮ್ಮ ತಮ್ಮ ಸ್ಥಳದಲ್ಲಿ ನಿಂತರು. ಪಾಳೆಯದವರಾದರೋ ಕೂಗುತ್ತಾ ಓಡಿಹೋದರು.**

ಎಡಗೈಯಲ್ಲಿ ಅವರು ಪಂಜುಗಳನ್ನು ಹಿಡಿದಿದ್ದರು. ಬಲಗೈಯಲ್ಲಿ ಅವರು ಕೊಂಬುಗಳನ್ನು ಹಿಡಿದಿದ್ದರು. ಅವರು ಮಾನವ ಯುದ್ಧಶಸ್ತ್ರಾಸ್ತ್ರಗಳನ್ನು ಹಿಡಿದಿರಲಿಲ್ಲ. ಅವರು ನಂಬಿಕೆ ಮತ್ತು ವಿಧೇಯತೆಯೆಂಬ ತಮ್ಮ ಅಲೌಕಿಕ ಶಸ್ತ್ರಾಸ್ತ್ರಗಳ ಮೂಲಕ ಯುದ್ಧವನ್ನು ಗೆದ್ದರು.

## ದಾವೀದ ಮತ್ತು ಗೊಲ್ಯಾತ

ಒಬ್ಬ ಯೌವ್ವನಸ್ತ ಹುಡುಗನಾದ ದಾವೀದನು ದೈತ್ಯನಾದ ಗೊಲ್ಯಾತನ ವಿರುದ್ಧ ನಿಂತನು. ಅವನು ಆ ಯುದ್ಧವನ್ನು ಹೇಗೆ ಹೋರಾಡಿದನು ? ಅವನ ಮಾತುಗಳನ್ನು ಓದಿರಿ.

**1 ಸಮು 17:37a,40,43,45 ನನ್ನನ್ನು ಅಂಥ ಸಿಂಹದ ಮತ್ತು ಕರಡಿಯ ಉಗುರುಗಳಿಗೆ ತಪ್ಪಿಸಿದ ಯೆಹೋವನು ಈ ಫಿಲಿಷ್ಟಿಯನ ಕೈಯಿಂದಲೂ ತಪ್ಪಿಸುವನು" ಎಂದನು.**

**[ಅವನು] ತನ್ನ ಕೋಲನ್ನು ತೆಗೆದುಕೊಂಡು ಹೊರಟು, ಹಳ್ಳದಲ್ಲಿನ ಐದು ನುಣುಪುಕಲ್ಲುಗಳನ್ನು ಆರಿಸಿಕೊಂಡು, ಅವುಗಳನ್ನು ಕುರುಬರ ಪದ್ಧತಿಯಂತೆ ತನಗಿರುವ ಸೊಂಟದ ಚೀಲದಲ್ಲಿ ಹಾಕಿ ಕೈಯಲ್ಲಿ ಕವಣೆಯನ್ನು ಹಿಡಿದು ಫಿಲಿಷ್ಟಿಯನ ಬಳಿಗೆ ಹೋದನು.**

[ಗೊಲ್ಯಾತನು] ನೀನು ಕೋಲುಹಿಡಿದು ನನ್ನ ಬಳಿಗೆ ಬರುವುದೇನು? ನಾನು ನಾಯಿಯೋ" ಎಂದು ಹೇಳಿ ಅವನನ್ನು ತನ್ನ ದೇವರ ಹೆಸರಿನಲ್ಲಿ ಶಪಿಸಿದನು.

ಆಗ ದಾವೀದನು ಅವನಿಗೆ, "ನೀನು ಈಟಿ, ಕತ್ತಿ, ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ. ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ, ಇಸ್ರಾಯೇಲ್ಯರ ಯುದ್ಧಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬಂದಿದ್ದೇನೆ. ಆತನು ಈ ಹೊತ್ತು ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಡುವನು. ನಾನು ನಿನ್ನನ್ನು ಕೊಂದು ನಿನ್ನ ತಲೆಯನ್ನು ಕಡಿದು ಹಾಕಿ ಫಿಲಿಷ್ಟಿಯ ಸೈನ್ಯದ ಶವಗಳನ್ನು ಮೃಗ ಪಕ್ಷಿಗಳಿಗೆ ಹಂಚಿಕೊಡುವೆನು. ಇದರಿಂದ ಇಸ್ರಾಯೇಲರೊಳಗೆ ದೇವರಿದ್ದಾನೆಂಬುದು ಭೂಲೋಕದವರಿಗೆಲ್ಲಾ ತಿಳಿದುಬರುವುದು.

ವ. **48-51** ಯೆಹೋವನು ಈಟಿಕತ್ತಿಗಳಿಲ್ಲದೇ ರಕ್ಷಿಸಬಲ್ಲನೆಂಬುದು ಇಲ್ಲಿ ಕೂಡಿರುವವರಿಗೆಲ್ಲಾ ತಿಳಿದುಬರುವುದು. ಯಾಕೆಂದರೆ ಯುದ್ಧಫಲವು ಯೆಹೋವನ ಕೈಯಲ್ಲಿದೆ. ಆತನು ನಿಮ್ಮನ್ನು ನಮ್ಮ ಕೈಗೆ ಒಪ್ಪಿಸಿಕೊಡುವನು" ಅಂದನು. ಕೂಡಲೇ ಆ ಫಿಲಿಷ್ಟಿಯನು ಹೊರಟು ದಾವೀದನೊಡನೆ ಯುದ್ಧಮಾಡುವುದಕ್ಕೆ ಸಮೀಪಿಸಿದಾಗ ದಾವೀದನು ಫಿಲಿಷ್ಟಿಯರ ಸೈನ್ಯದ ಕಡೆಗೆ ಓಡಿಹೋಗಿ ಆ ಫಿಲಿಷ್ಟಿಯನನ್ನು ಸಂಧಿಸಿ, ಚೀಲದಲ್ಲಿ ಕೈ ಹಾಕಿ, ಒಂದು ಕಲ್ಲನ್ನು ತೆಗೆದು ಅವನ ಹಣೆಗೆ ಗುರಿಯಿಟ್ಟು ಕವಣೆಯನ್ನು ಬೀಸಿ ಹೊಡೆಯಲು ಕಲ್ಲು ಅವನ ಹಣೆಯೊಳಗೆ ಹೊಕ್ಕಿತು. ಅವನು ಬೋರಲುಬಿದ್ದನು ಕೂಡಲೇ ಅವನು ಓಡಿಹೋಗಿ ಆ ಫಿಲಿಷ್ಟಿಯನ ಮೇಲೆ ನಿಂತು ಅವನ ಕತ್ತಿಯನ್ನು ತೆಗೆದುಕೊಂಡು, ಅದರಿಂದಲೇ ಅವನ ತಲೆಯನ್ನು ಕತ್ತರಿಸಿ, ಅವನನ್ನು ಸಾಯಿಸಿದನು. ಈ ಪ್ರಕಾರ ದಾವೀದನು ಕತ್ತಿಯಿಂದಲ್ಲ ಬರೀ ಒಂದು ಕವಣೆಯ ಕಲ್ಲಿನಿಂದ ಫಿಲಿಷ್ಟಿಯನನ್ನು ಸೋಲಿಸಿ, ಕೊಂದು ಹಾಕಿದನು ಫಿಲಿಷ್ಟಿಯರು ತಮ್ಮ ರಣವೀರನು ಸತ್ತುಹೋದದ್ದನ್ನು ಕಂಡು ಓಡಿಹೋದರು.

ದಾವೀದನು ದೇವರ ಶಕ್ತಿಯನ್ನು ತಿಳಿದಿದ್ದನು ಮತ್ತು ಆ ಶಕ್ತಿಯಲ್ಲಿ ಅವನು ನಡೆದನು. ಅವನು ನಂಬಿಕೆಯಲ್ಲಿ ದೇವರು ಮಾಡಿದ ಹಾಗೂ ದೇವರು ಮಾಡಲಿದ್ದ ಕಾರ್ಯಗಳಿಗಾಗಿ ಸ್ತುತಿಯನ್ನು ಅರ್ಪಿಸಿದನು. ಅವನು ಹೊರಗಿನ ಪರಿಸ್ಥಿತಿಗಳನ್ನು ನೋಡಲಿಲ್ಲ.

**ಸಾರಾಂಶ**

ಹಳೆಯ ಒಡಂಬಡಿಕೆಯಲ್ಲಿ ನಾವು ಅಧ್ಯಯನ ಮಾಡಿದ ಯುದ್ಧಗಳಿಂದ ಇಂದಿನ ಯುದ್ಧದ ಬಗ್ಗೆ ನಾವು ಅನೇಕ ವಿಷಯಗಳನ್ನು ಕಲಿಯಬಹುದು.

* ದೇವರು ನಿರ್ದಿಷ್ಟ ಯುದ್ಧಗಳನ್ನು ನಡೆಸಲು ನಿರ್ದಿಷ್ಟ ವ್ಯಕ್ತಿಗಳನ್ನು ಕರೆದರು. ಕೆಲವೊಮ್ಮೆ ನಾವು ಸೋಲುತ್ತೇವೆ ಯಾಕೆಂದರೆ ನಾವು ಕೆಲವೊಂದು ನಿರ್ದಿಷ್ಟ ಯುದ್ಧಗಳಲ್ಲಿರುವುದು ನಮಗಾಗಿರುವ ದೇವರ ಯೋಜನೆಯಲ್ಲ.

* ನಾವು ದಾಳಿ ಮಾಡಲ್ಪಡುವಾಗ ಅಥವಾ ಒಂದು ಪರಿಸ್ಥಿತಿ ನಮ್ಮ ಗಮನಕ್ಕೆ ಬಂದಾಗ, ನಾವು ಮೊದಲು ಮಾಡಬೇಕಾಗಿರುವುದು ಪ್ರಾರ್ಥನೆಯಲ್ಲಿ ದೇವರ ಬಳಿಗೆ ಹೋಗುವುದು. ನಮ್ಮ ಪರಿಸ್ಥಿತಿಗಾಗಿ ಅವರ ಯೋಜನೆಯ ಬಗ್ಗೆ ನಾವು ತಿಳುವಳಿಕೆಯನ್ನು ಪಡೆಯಬೇಕು.
* ನಮ್ಮ ಜೀವನದಲ್ಲಿ ನಾವು ತೊಡೆದುಕೊಳ್ಳಬೇಕಾದ ಪಾಪವಿದೆಯೇ? ಸೈತಾನನೊಂದಿಗೆ ಅಥವಾ ಅವನ ಅನುಯಾಯಿಗಳೊಂದಿಗೆ ಯಾವುದೇ ರಾಜಿ ಮಾಡಿಕೊಳ್ಳಲು ಅವಕಾಶವಿಲ್ಲ. ನಾವು ದೇವರನ್ನು ಅನುಮತಿಸಿದರೆ ಆತನು ಸರಿಯಿಲ್ಲದ ವಿಷಯಗಳ ಬಗ್ಗೆ ನಮ್ಮೊಂದಿಗೆ ಮಾತನಾಡುವರು.
* ದೇವರು ಈ ಹಿಂದೆ ನಮಗಾಗಿ ಮಾಡಿದ ಎಲ್ಲಾ ಕಾರ್ಯಗಳಿಗಾಗಿ ಆತನನ್ನು ಸ್ತುತಿಸಲು ನಾವು ಸಮಯವನ್ನು ಕಳೆಯಬೇಕು. ನಾವು ದೇವರ ಗಮನವನ್ನು ಸೆಳೆಯುವುದಕ್ಕಾಗಲಿ ಅಥವಾ ಸಮ್ಮತಿಯನ್ನು ಪಡೆಯುವುದಕ್ಕಾಗಲಿ ಅದನ್ನು ಮಾಡುವುದಿಲ್ಲ, ಬದಲಾಗಿ ಆತನು ನಮಗಾಗಿ ಮಾಡಿದ ಅದ್ಭುತ ಕಾರ್ಯಗಳನ್ನು ನೆನಪಿಸಿಕೊಂಡು ನಮ್ಮ ಆತ್ಮವನ್ನು ಬೆಳೆಸಿಕೊಳ್ಳುವುದಕ್ಕಾಗಿದೆ.
* ನಂತರ ನಾವು ಶತ್ರುವನ್ನು ಜಯಿಸಲು ದೇವರ ವಾಕ್ಯದಲ್ಲಿರುವ ನಂಬಿಕೆಯೊಂದಿಗೆ ಮತ್ತು ಆತನ ಶಕ್ತಿಯಲ್ಲಿ ಚಲಿಸಬೇಕು !

**ವಿಮರ್ಷೆಗಾಗಿ ಪ್ರಶ್ನೆಗಳು**

---

1. ಕಾಲೇಬ ಮತ್ತು ಯೆಹೋಶುವರು ಸಹ ಆ ದೇಶದಲ್ಲಿ ಇತರರು ನೋಡಿದ ವಿಷಯಗಳನ್ನೇ ನೋಡಿದರೂ ಅವರ ವರದಿಗಳು ಇತರ ಹತ್ತು ಗೂಢಾಚಾರರಿಗಿಂತ ಏಕೆ ಭಿನ್ನವಾಗಿತ್ತು?

2. ಯೆಹೋಶುವ 2:9-11 ರ ಪ್ರಕಾರ, ಯೆರಿಕೋವಿನ ಜನರು ಇಸ್ರಾಯೇಲರಿಗೆ ಏಕೆ ಹೆದರುತ್ತಿದ್ದರು?

3. ಇಸ್ರಾಯೇಲರು ಹೇಗೆ ತಮ್ಮ ಬಾಧ್ಯತೆಯನ್ನು ಸ್ವಾಧೀನಪಡಿಸಿಕೊಂಡರು ಅಥವಾ ದೇವರ ಜ್ಞಾನ ಮತ್ತು ಶಕ್ತಿಯ ಒಂದು ಅಲೌಕಿಕವಾದ ಪ್ರಕಟನೆಯಿಂದ ಒಂದು ಮಹಾ ಆತ್ಮಿಕ ಯುದ್ಧವನ್ನು ಹೇಗೆ ಗೆದ್ದರು ಎಂಬುದಕ್ಕೆ ಹಳೆ ಒಡಂಬಡಿಕೆಯಿಂದ ಒಂದು ಉದಾಹರಣೆಯನ್ನು ಕೊಡಿರಿ.